ಸಂಪುಟ ೫
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೨

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋದಯ ಸಂಚಿಕೆ
೩. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ: ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿಸಂಚಿಕೆಯ ಬೆಲೆ: ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೫ ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೫, ಸಂಚಿಕೆ : ೧
ಅಗಸ್ಟ ೧೯೭೨

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪರಿವಿಡಿ

ಸತ್ಯದ ಸುತ್ತ

ಉತ್ಖನನದಲ್ಲಿ ಹೆಣ್ಣು ದೇವರ
ಸತ್ತೆಲುಬು ಸಿಕ್ಕಿವೆ ; ಬೇಕೆ ನಿಮಗೆ ಇವು ?
ಇದೊಂದು–
ಪ್ರಪ್ರಾಚೀನ ಹೆಣ್ಣು ದೇವತೆಯ
ಅಸ್ತಿಪಂಜರವೆಂಬುದಕ್ಕೆ ದಾಖಲೆ ಸಾಕಷ್ಟಿವೆ.
ಅಸ್ತಿಪಂಜರದ ಕೈಗಿರುವ ಬಳೆ, ಕೊರಳೊಳಗಿನ
ಚಿನ್ನದ ಸರ, ಹೆರಳಮಣಿ, ಮುತ್ತಿನ ಮೂಗುತಿ, ಡಾಬು
ಇತ್ಯಾದಿ ಇನ್ನೂ ಮಾಸದೆ ಹಾಗೇ ಇವೆ.
ವಜ್ರಬಿಗಿದ ಬೆರಳಿನುಂಗುರ – ಕುತೂಹಲ ಕೆರಳಿಸಿದ್ದು.
ಅಸ್ತಿತಜ್ಞರ ಅಭಿಮತವೂ ಇದು ಹೆಣ್ಣೆಂಬುದು.
ತಜ್ಞರ ಜಿಜ್ಞಾಸೆ ಕೆರಳಿಸಿ ಕೋಡು ಮೂಡಿಸುವ
ಪ್ರಾಗೈತಿಹಾಸಿಕತೆ– ಇದಕ್ಕಿದ್ದದ್ದನ್ನು
ಅಲ್ಲಗಳೆಯಲಾಗುವುದಿಲ್ಲ.
ಈ ಅಸ್ತಿಪಂಜರವನ್ನು ಒಂದಿಷ್ಟು ಸಿಂಗರಿಸಿಟ್ಟರೆ
ರೋಮ್ಯಾಂಟಿಕ್ ಹಾಗೂ ಹಿಸ್ಟಾರಿಕಲ್ ಪ್ರಜ್ಞೆಯುಳ್ಳವರನ್ನು
ಒಂದು ಹತ್ತಾಂಶದಷ್ಟಾದರೂ ಬುದ್ಧಿಯನ್ನು ಕೆದಕುತ್ತದೆ.
ಈ ಅಸ್ತಿಗೆ ತಾರುಣ್ಯವೆದ್ದು ಕಳಕಳಿಸಿದ ಸಂದರ್ಭ
ಇನ್ನೊಂದು ನಮೂನೆಯ ಕಾಳಜಿ ಹುಟ್ಟಿಸೀತು. ತನ್ನ ಸುತ್ತೊಂದು ಸುರಮ್ಯ
ಕಥೆಯನ್ನೂ ಸೃಷ್ಟಿಸೀತು.
ಇದಕ್ಕೆ ಹತ್ತಿರದಲ್ಲೊಂದು ಹರಕುಮುರುಕು
ಶಾಸನದಲ್ಲಿ ಟಿಂ ಟಿಂ ಎಂಬರಸು ಟಿಂ ಟಿಂ ಎಂಬ ಕುಲಟೆಯೊಬ್ಬಳನ್ನು
ಮೋಹಿಸಿದ್ದು, ಭರ್ತಿಪ್ರಾಯದಲ್ಲಿ ಮಡಿಯಲು ಅವಳ ಸ್ಮರಣೆಗೆಂದು
ರಾಜ ಗುಡಿಯೊಂದನ್ನು ಕಟ್ಟಿಸಿದ್ದು ಗುಡಿಯಾಗೆದ್ದು ಬಿದ್ದದ್ದಕ್ಕೆ
ಇಲ್ಲೆಲ್ಲಾ ಅವಶೇಷಗಳು ಸಾಕ್ಷಿ. ರಾಜ ಸತ್ತವಳನ್ನು
ಪುನಃ ಪ್ರತಿಷ್ಠಾಪಿಸಿದನಂತೆ : ಉತ್ಸವ, ತೇರೆಳೆದು
ಪತಿತೆಗೆ ದೇವತೆಯ ಸೀಟು
ಲಭ್ಯವಾಯಿತೆಂಬುದು ಶಾಸನೋಕ್ತ ಸತ್ಯ ;

★ ಬುದ್ದಣ್ಣ ಹಿಂಗಮಿರೆ

ಭಾನುಮತೀ ಕರ್ಣರು ನೆತ್ತವಾಡಿದರೇ ?

[ನಿವೇದನೆ]

[೧]

ಪಂಪಭಾರತದ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' (೯–೬೩) ಎಂಬ ಒಂದು ಪದ್ಯವೆತ್ತಿ, ಆದರ ಸರಿಯಾದ ಪಾಠದ ಹಾಗೂ ಅರ್ಥದ ಬಗೆಗೆ ಶ್ರೀ ಆರ್. ರಾಜಪ್ಪನವರು ವಿವರಿಸಿದುದು 'ಕರ್ನಾಟಕ ಭಾರತಿ'ಯಲ್ಲಿದೆ (೪–೨): ಕರ್ಣನೇ ಭಾನುಮತಿಯೊಡನೆ ನೆತ್ತವಾಡಿದುದೆಂಬ ನಿರ್ಧಾರಕ್ಕೆಳಸಿದುದು ಆ ಬಗೆಗೆ ಶ್ರೀಡಿ. ಎಲ್. ನರಸಿಂಹಾಚಾರ್ಯರು ಬರೆದ ಪತ್ರವೊಂದನ್ನು ಉಲ್ಲೇಖಿಸಿದುದು ಅಲ್ಲಿ ಕಾಣುತ್ತದೆ. ಇತರ ಮಹನೀಯ ವಿದ್ವಾಂಸರ ಕೆಲವು ಒಪ್ಪಿತಗಳೂ ಹೇಳಿವೆ. ಕೆಲವು ಚರ್ಚೆಗಳೂ ಬರೆದಿವೆ.

ಕರ್ನಾಟಕ ಭಾರತಿಯ ಆ ಲೇಖನದಲ್ಲಿ, ಶ್ರೀ ಮುಳಿಯ ತಿಮ್ಮಪ್ಪಯ್ಯನವರು 'ನಾಡೋಜ ಪಂಪ' ದಲ್ಲಿ ಹೇಳಿದುದನ್ನು ಎತ್ತಿಕೊಂಡು ವಿವೇಚಿಸಿದೆ. ಆದರೆ 'ನಾಡೋಜ ಪಂಪ' ಗ್ರಂಥವು ಮುದ್ರಣವಾಗುವ ಮೊದಲಿಗೆ, ಧಾರವಾಡದ 'ಜಯ ಕರ್ನಾಟಕ' ಮಾಸಪತ್ರಿಕೆಯಲ್ಲಿಯೂ (೧೪–೧, ೧೪–೫). ಮಂಗಳೂರಿನ 'ತ್ರಿವೇಣಿ' ಪತ್ರಿಕೆಯಲ್ಲಿಯೂ (೪–೮), ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಸುದೀರ್ಘವಾಗಿ ಬರೆದುದು ೧೯೬೫ರಲ್ಲಿ ಸಂಕಲಿತವಾದ 'ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು' ಎಂಬುದರಲ್ಲಿ ಕಾಣಬಹುದು (ಬೆಂಗಳೂರು ಶಾರದಾ ಪ್ರಕಟನಾಲಯದವರಲ್ಲಿ ಇದು ಪ್ರಕಾಶಿತವು). ಎಂದರೆ, ಈ ಮೊದಲೇ ಈ ಬಗೆಗೆ ಶ್ರೀ ಡಿ. ವಿ. ಎಸ್, ಶ್ರೀ ಮುಳಿಯ ತಿಮ್ಮಪ್ಪಯ್ಯನವರು, ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು, ಶ್ರೀ ಡಿ. ರೇಣುಕಾಚಾರ್ಯ, ಶ್ರೀ ಪಾರಿಶವಾಡರು ಲೇಖನಗಳನ್ನು ಬರೆದಿದ್ದಾರೆ. ಶ್ರೀ ಕೆ. ವಿ. ಕೃಷ್ಣಭಟ್ಟರು ಬರೆದ 'ಪಂಪಮಹಾಕವಿಯ ಕರ್ಣ ರಸಾಯನಂ' ಎಂಬುದರಲ್ಲಿಯೂ(೧೯೫೩ರಲ್ಲಿ) ಈ ಪದ್ಯದ ವಿವರಣವಿದೆ (ಕುಂಬಳೆಯ ಬೇಳದ ಶ್ರೀ ಎಂ. ಸುಬ್ರಾಯಭಟ್ಟರು ಇದನ್ನು ಪ್ರಕಟಿಸಿದವರು). ಕರ್ಣ ಭಾನುಮತಿಯರು ನೆತ್ತವಾಡಿದರೆಂದೋ ಇಲ್ಲವೆಂದೋ ಹಲವು ಚರ್ಚೆಗಳು ಪ್ರಕಟವಾಗಿವೆಯೆಂದು ಇಲ್ಲಿ ಮುಖ್ಯವಾಗಿ ವಾಚಕರು ಜ್ಞಾಪಿಸಿಕೊಳ್ಳಬೇಕು. ಶ್ರೀ ಮುಳಿಯ ತಿಮ್ಮಪ್ಪಯ್ಯನವರೂ 'ನಾಡೋಜ ಪಂಪ'ದಲ್ಲಿ ಆ ಹಿಂದಿನ ಲೇಖಗಳನ್ನು ಸೂಚಿಸಿಲ್ಲ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದು ಇದೀಗ (೧೯೭೧) ಪ್ರಕಟವಾದ 'ಪಂಪ ಭಾರತ ದೀಪಿಕೆ'ಯಲ್ಲಿ, (ಪುಟ ೩೨೮) "ಇದರ ವಿಚಾರವಾಗಿ ವಿದ್ವಾಂಸರಲ್ಲಿ ಕೊಂಚ ಚರ್ಚೆ ನಡೆದಿದೆ"ಯೆಂದಿದ್ದಾರೆ. (ಇದು ಮೈಸೂರ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿತವು.) ಆ ಹಿಂದಣ ವಿದ್ವಾಂಸರ ಚರ್ಚೆಗಳ ಸಾರ ಇವೆರಡು ಕೃತಿಗಳಲ್ಲೂ ಸೂಚಿಸಿಲ್ಲ. ಇದು ವಿಚಿಂತನೀಯವು!

"ಯಾವುದಾದರೂ ಸಮಸ್ಯೆಯನ್ನು ಕುರಿತು ವಿಚಾರ ಬೆಳೆಸುವ ಮುನ್ನ ಆ ವಿಷಯದಲ್ಲಿ ಇತರ ಸಂಶೋಧಕರು ಏನು ಮಾಡಿದ್ದಾರೆ, ಯಾವ ನಿಲುವಿಗೆ ಬಂದಿದ್ದಾರೆ, ಎಲ್ಲಿ ವಿರಮಿಸಿದ್ದಾರೆ ಎಂಬೀ ಅಂಶಗಳ ಅರಿವು ಸಾಕಷ್ಟಿರಬೇಕು. ಅವರು ನಿಂತಿರುವ ಎಡೆಯಿಂದ ಮುಂದಕ್ಕೆ ಒಂದು ಹೆಜ್ಜೆಯಷ್ಟಾದರೂ ಹೋಗುವ ಪ್ರಯತ್ನ ಅವರ ಅನಂತರ ಬರುವ ಸಂಶೋಧಕನದು. ಇದಕ್ಕಾಗಿ ಅವನು, ಹಿಂದಿನವರು ಒದಗಿಸಿರುವ ಸಾಧಕ ಬಾಧಕ ಸಾಮಗ್ರಿಗಳ ಜೊತೆಗೆ ತನ್ನವೇ ಆದ ನೂತನ ಆಧಾರಗಳನ್ನು ಕಾಣಿಸುವದೇ ಅಲ್ಲದೆ, ನೂತನ ದೃಷ್ಟಿಯನ್ನು ಕೂಡ ತೋರಬಹುದು. ಹತ್ತು ಅಂಶಗಳು ಇತರರ ಸಂಶೋಧನೆಯ ಫಲವಾಗಿ ಬಂದಿದ್ದರೂ ಹನ್ನೊಂದನೆಯದು ತನ್ನದೇ ಆಗಿರುವುದು ಮೇಲು" ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದುದುಂಟು. (ಶ್ರೀ ಕೆ. ವೆಂಕಟರಾಯಾಚಾರ್ಯರ 'ಸಾಹಿತ್ಯದ ಹಿನ್ನೆಲೆ'ಯ 'ಮುನ್ನುಡಿ' ಇದು ಹುಬ್ಬಳ್ಳಿಯ ಸಾಹಿತ್ಯ ಭಾಂಡಾರದವರಿಂದ ಪ್ರಕಟಿತ. ೧೯೫೭). ಅರ್ಥಾತ್, ಒಂದು ವಿಷಯದ ಚರ್ಚೆಗೆಳೆಸುವಲ್ಲಿ, ತತ್ಪೂರ್ವದಲ್ಲಿ ಬೇರೆಯುವರು ಏನೆಲ್ಲಾ ಬರೆದರೆಂದು ನೋಡಲೇಬೇಕು. ಅವುಗಳಿಗಿಂತ ಹೊಸತಾದ-ಸಾಧಾರವಾದ–ಆಶಯವೇನಾದರೂ ತಮಗೆ ಕಾಣುವಲ್ಲಿ–ತಮ್ಮದೇಕೆ ಸರಿಯೆಂದು ಹೇಳುವಲ್ಲಿ, ಆ ಮೊದಲಲ್ಲಿ ಬೇರೆಯವರು ಬರೆದುವೇಕೆ ಸರಿಯಲ್ಲೆಂದು ವಿವರಿಸಬೇಕಾಗಿದೆ. ಹಾಗಲ್ಲದೆ ಇದೀಗಲೇ ಒಂದು ಹೊಸತಾದ ಚರ್ಚೆಗೆಳಸುವಂತೆ ತೊಡಗಿ, ಹಿಂದಿನದೇನನ್ನೂ ನೋಡದೆಯೋ, ತಿಳಿಯದೆಯೋ, ಉಪೇಕ್ಷಿಸಿಯೋ ಸಾಗುವುದು ಆ ವಿಚಾರದ ವಿನಿಮಯಕ್ಕೆ-ನಿರ್ಧಾರಕ್ಕೆ ಅಷ್ಟೇನೂ ಸಮುಚಿತವಲ್ಲ!

ಇದೀಗ, ಶ್ರೀ ಡಿ. ಎಲ್. ನರಸಿಂಹಾಚಾರ್ಯರು 'ಪಂಪ ಭಾರತ ದೀಪಿಕೆ'ಯಲ್ಲಿ ಹೇಳಿದುದನ್ನು ಮೊದಲಲ್ಲಿ ಬರೆದು, ಅಂತಹ ಅರ್ಥವಿವರಣೆ ಸಹೃದಯ-ಆಸ್ತಿಕರಿಗೆ ಅದೇಕೆ ಸರಿಯಾಗದೆಂದು ಬರೆಯಲಿದ್ದೇನೆ. ಮತ್ತು ಶ್ರೀ ರಾಜಪ್ಪನವರ ಲೇಖನದ ನಿವೇದನೆಗೆ ತೊಡಗುತ್ತೇನೆ.

"ಕರ್ಣನ ಸ್ನೇಹದ, ಸ್ವಾಮಿಭಕ್ತಿಯ ಪರಾಕಾಷ್ಠತೆಯ ಚಿತ್ರ ಈ ಪದ್ಯದಲ್ಲಿದೆ. ಇದರಿಂದ ಸಹೃದಯ ಪ್ರತಿಭೆಗೆ ಒಂದು ಇಡೀ ದೃಶ್ಯವೇ ಕಾಣಿಸುತ್ತದೆ. ದುರ್ಯೋಧನನ ಅಂತಃಪುರದಲ್ಲಿ ಅವನ ರಾಣಿ ಭಾನುಮತಿ ಕರ್ಣನೊಡನೆ ಪಗಡೆಯಾಡುತ್ತಿದ್ದಾಳೆ. ದುರ್ಯೋಧನ ಅವರಿಬ್ಬರ ಆಟವನ್ನು ನೋಡುತ್ತಿದ್ದಾನೆ. ಭಾನುಮತಿ ತನ್ನ ಮುತ್ತಿನ ಹಾರವನ್ನು ಆಟಕ್ಕೆ ಪಣವಾಗಿ ಒಡ್ಡಿರುತ್ತಾಳೆ. ಅವಳು ಸೋತಳು. ಆಟದಲ್ಲಿ ಪಣವನ್ನು ಕೊಡದೆ ಅವಳು ಎದ್ದು ಹೋಗುವುದರಲ್ಲಿದ್ದಾಗ ಕರ್ಣ ಅವಳ ಮುತ್ತಿನ ಹಾರಕ್ಕೆ ಕೈಚಾಚಿದ. ಅದು ಹರಿದುಹೋಗಿ ಬಿಡಿಮುತ್ತುಗಳು ಸುರಿದು ದಿಕ್ಕಾಪಾಲಾಗಿ ಚೆದರಿ ಹೋದವು. ಆಗ ಕರ್ಣನಿಗೆ ತಾನೇನು ಮಾಡಿದನೆಂಬ ಅರಿವುಂಟಾಗಿ ಹೆದರಿಕೆಯಿಂದ ನಡುಗುತ್ತಿರುವಲ್ಲಿ, ಹತ್ತಿರಿದ್ದ ದುರ್ಯೋಧನ ಸ್ವಲ್ಪವೂ ಕೋಪಿಸಿಕೊಳ್ಳದೆ, 'ಕರ್ಣ ಮುತ್ತುಗಳನ್ನು ಆರಿಸಿ ಕೊಡಲೇ?' ಎಂದು ಹೇಳುವನು. ಇಂಥ ಸ್ವಾಮಿಯನ್ನು ನಾನು

ಬಿಟ್ಟುಬಂದರೆ, ನಾನು ಯಾರಿಗೂ ಬೇಡವಾದವನಾಗುತ್ತೇನೆ ಎಂದು ಕೃಷ್ಣನಿಗೆ ಕರ್ಣನು ಹೇಳುವನು.

ಭಾನುಮತಿ = ದುರ್ಯೋಧನನ ರಾಣಿ ಭಾನುಮತಿಯು, ನೆತ್ತಮನಾಡಿ = ಕರ್ಣನೊಡನೆ ಪಗಡೆಯನ್ನಾಡಿ, ಸೋಲ್ತೊಡೆ = ಸೋತರೆ, ಸೋಲಮಂ = ಸೋತುದನ್ನು ಎಂದರೆ ಪಣವನ್ನು, ಈವುದಂ = ಕೊಡುವುದು, ಎಂದು = ಎಂಬುದಾಗಿ, ಕಾಡುತ್ತಿರೆ = ಕಾಡುತ್ತ ಇರಲು, ಲಂಪಣಂ ಪರಿಯೆ = ಹಾರ ಹರಿದು ಹೋಗಲು, ಮುತ್ತಿನ ಕೇಡನೆ = ಮುತ್ತುಗಳ ಹಾನಿಯನ್ನೇ, ನೋಡಿ ನೋಡಿ = ನೋಡುತ್ತ ನೋಡುತ್ತ, ಬಳ್ಕುತ್ತಿರೆ = ಕರ್ಣ ನಡುಗುತ್ತಿರಲು, ಏವಮಿಲ್ಲದೆ = ಅಸಮಾಧಾನವಿಲ್ಲದೆ ಎಂದರೆ ಪ್ರಸನ್ನಚಿತ್ತೆನಾಗಿ, ಇವಂ = ಈ ಮುತ್ತುಗಳನ್ನು, ಆಯ್ವುದೋ = ಆರಿಸಿಕೊಡುವುದೋ, ತಪ್ಪದೆ = ತಪ್ಪಿಲ್ಲದೆ, ಪೇಳಿಂ = ಹೇಳಿರಿ, ಎಂಬ = ಎನ್ನುವ, ಭೂಪೋತ್ತಮನಂ = ರಾಜಶ್ರೇಷ್ಠನಾದ ದುರ್ಯೋಧನನನ್ನು, ಬಿಸುಟ್ಟು = ತೊರೆದು, ನಿಮ್ಮೊಳೆ ಪೊಕ್ಕೊಡೆ = ನಿಮ್ಮಲ್ಲಿಯೇ ನಾನು ಹೊಕ್ಕರೆ ಎಂದರೆ ಸೇರಿಕೊಂಡರೆ, ಬೇಡನಲ್ಲೆನೇ = ಯಾರಿಗೂ ಬೇಡವಾದವನಲ್ಲವೇ ಅಥವಾ ಕಿರಾತನಾಗುತ್ತೇನಲ್ಲವೇ ?

ಕರ್ಣನ ಸ್ನೇಹದ ಭವ್ಯತೆಯನ್ನು ಇದಕ್ಕಿಂತ ಮಿಗಿಲಾಗಿ ವರ್ಣಿಸುವುದು ಕಷ್ಟ. ಪಂಪನಿಗೆ ತನ್ನ ಪೋಷಕ ಅರಿಕೇಸರಿ ರಾಜನಲ್ಲಿದ್ದ ಆತ್ಮೀಯ ಸ್ನೇಹದ ಸ್ವಾನುಭವ ಇಲ್ಲಿ ಆದರ್ಶೀಕೃತವಾಗಿರುವಂತೆ ತೋರುತ್ತದೆ. ಇದು ಅಪೂರ್ವವೂ ಅದ್ಭುತ ರಮಣೀಯವೂ ಆಗಿರುವ ಪ್ರತಿಭಾ ವ್ಯಾಪಾರ, ಚಿಂತಿಸಿದಷ್ಟು ಬೆಳೆಯುತ್ತ ಹೋಗುತ್ತದೆ ಈ ಪದ್ಯದ ಭಾವವಲ್ಲರಿ. ಇದರ ವಿಚಾರವಾಗಿ ವಿದ್ವಾಂಸರಲ್ಲಿ ಕೊಂಚ ಚರ್ಚೆ ನಡೆದಿದೆ. ಪಂಪನ ಅನಂತರ ಬಂದ ತಮಿಳುಕವಿ ವಿಲ್ಲಿಪುತ್ತೂರನ ಭಾರತದಲ್ಲಿ [ಕಾಲ ಸಮಾರು ೧೩೨೫] ಈ ಪದ್ಯವನ್ನು ಹೋಲುವ ಪದ್ಯವೊಂದಿದೆಯೆಂದು ಬಲ್ಲವರು ಹೇಳುತ್ತಾರೆ" (ಪಂಪ ಭಾರತ ದೀಪಿಕೆ. ಪುಟ. ೩೨೮–೯)

ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಈ ಪದ್ಯದ ಬಗೆಗೆ ಅರ್ಥವಿಸುವಲ್ಲಿ ಮೊದಲೂ ಮತ್ತೆಯೂ, ತಾವೊಂದು ಬಗೆ ನಿರ್ಧರಿಸಿದಂತೆ ಸಾಗಿದ್ದಾರೆ. (ಹಿಂದಿನ ಲೇಖಕರ ಚರ್ಚೆಯ ಹೆಸರು–ಸಾರ ಸೂಚಿಸಿಲ್ಲ, ತಮಿಳುಕವಿಯ ಪದ್ಯಭಾಗ–ಸಾರ ಹೇಳಿಲ್ಲ). ಹೀಗೆಲ್ಲಾ ಅರ್ಥವಿಸುತ್ತಾ, ಆರೋಪಿಸಿ ಹೇಳುವುದು ಕೇವಲ ಸಾಮಾಜಿಕ ಕೃತಿಯಾಗಿದ್ದರೆ ಸಾಧ್ಯವೆಂದು–ವಾದಕ್ಕಾಗಿಯಾದರೂ, ಸೂಚಿಸಬಹುದಿತ್ತು. ವ್ಯಾಸ ಭಾರತ ಕೇವಲ ಸಾಮಾಜಿಕ–ಕವಿಕಲ್ಪಿತ–ಕೃತಿಯಲ್ಲವೆಂದು ಎಲ್ಲರೂ ಬಲ್ಲರು!

"ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿ"ಯೆಂದು ಪಂಪನೂ ಭಾರತವನ್ನು ಕುರಿತು ಹೇಳಿದ್ದಾನೆ. ಅಂತಹ ಬೃಹತ್ಕಥೆಯಲ್ಲಿ ಬರುವ ವ್ಯಕ್ತಿಗಳ ಘಟನೆಗಳ-ವಿಚಾರಗಳ ಬಗೆಗೆ ಅದಾವನೂ ಬೇರೆ ಬಗೆಯಲಾರನು. ಬೇರೆ ಬರೆಯಲಾರನೆಂಬುದು; ಅಲ್ಲಿಯವು ತನಗೆ ಮೆಚ್ಚವಾದರೆ ಕೈಬಿಟ್ಟು ಸಾಗುವದಿದೆಯೆಂದು ಈ ಪಂಪ ಭಾರತದಿಂದಲೇ ತಿಳಿಯಬರುತ್ತದೆ :

ಪಂಪಮಹಾಕವಿಯು ಈ ಸ್ವಕೃತಿಯಲ್ಲಿ ಹಲವೆಡೆಗಳಲ್ಲಿ ವ್ಯಾಸಕೃತ ಮಹಾಭಾರತಕ್ಕಿಂತ ಹೆಚ್ಚಿನವನ್ನು ಬೇರೆ ಕೃತಿಗಳ ಆಧಾರದಿಂದ ಬರೆದನು; ಕೆಲವನ್ನು ತನ್ನ ಅಭಿಮತಕ್ಕೆ ಬೇಡವಾದುವನ್ನು ಕೈಬಿಟ್ಟಿದ್ದಾನೆ. ಪಂಪಭಾರತದ ಉಪೋದ್ಘಾತದಲ್ಲಿ (ಬೆಂಗಳೂರು ಪ್ರತಿ) ಕಾಣಿಸಿದ ಕೆಲವು ಹೊಸ ವಿಚಾರಗಳನ್ನು, ಕಥಾಂತರಗಳನ್ನು ಪಂಪನು ಎಲ್ಲಿಂದ ಎರವಲು ತಂದಿರಬೇಕೆಂದು ನನ್ನ ಬೇರೆ ಲೇಖನದಲ್ಲಿ ವಿವರಿಸಲಾಗಿದೆ. (ಪಂಪಭಾರತದ ಕಥಾಂತರಗಳು : ಜಯಂತಿ' ನವಂಬರ ೧೯೫೨)

ಕರ್ಣನು ತನ್ನ ಹಾಗು ದುರ್ಯೋಧನನ ಸಂಬಂಧದ ಬಗೆಗೆ, ಅನ್ಯೋನ್ಯತೆಯ ಪರಾಕಾಷ್ಠತೆಯ ಬಗೆಗೆ ಕೃಷ್ಣನಲ್ಲಿ ಹೇಳುವಾಗಣ ಈ ಪದ್ಯವು ಮೂಲಕ್ಕೆ ಅವಿರೋಧವಾಗಿರಬೇಕೆಂಬುದು ಆಸ್ತಿಕರಾದ ಸಹೃದಯರು ತಿಳಿಯಬೇಕಾಗಿದೆಯಲ್ಲವೆ? ವ್ಯಾಸಭಾರತದಲ್ಲಿ ಹೇಳಿರದ–ಬೇರೆ ಕೃತಿಗಳಲ್ಲೂ ಹೇಳಿರದ–ಕರ್ಣ ಭಾನುಮತಿಯರ ಜೂಜಾಟದ ಘಟನೆಯಾಗಲೀ, ದುರ್ಯೋಧನಾಗಮವಾಗಲೀ, ಭಾನುಮತಿ ಸೋತುದರ ಹಣವನ್ನು ಪಡೆಯಲು ಆಕೆಯ ಕೊರಳಿಗೆ ಕರ್ಣನು ಕೈಯಿಕ್ಕಿ ಹಾರವನ್ನೆಳೆದ ಘಟನೆಯಾಗಲೀ, ಪಂಪನು ಸ್ವಕೃತಿಯಲ್ಲಿ ಹೇಳಬೇಕೆಂಬ ಆರೋಪ–ಅರ್ಥಕಾರಿಕೆಯು [illegible]–ಬೇಕಾಗಿರುವುದಿಲ್ಲ !

ವ್ಯಾಸಭಾರತದಲ್ಲಿ–ಪಂಪಭಾರತದಲ್ಲಿ ಕೂಡಾ–ಪ್ರಧಾನಾಂಗವಾಗಿರುವ ದುರ್ಯೋಧನ–ಪಾಂಡವರ ಜೂಜಾಟದ ಕೊನೆಗೆ ಅಣ್ಣನಂದಂತೆ ದುಶ್ಶಾಸನನು ದ್ರೌಪದಿಯ ಮುಡಿಗೆ ಕೈಯಿಕ್ಕಿ ಎಳೆದಂದು. 'ಉಟ್ಟುದು ಪರಂ' ಸೆಳೆದುದು ಸಂಬದ್ಧವೆಂದು (ಉಭಯತ್ರ) ಕಾಣಲಾಗಿದೆ. ಎಂದರೆ, ಸೋತವನು ಹಣವನ್ನು ಕೊಡುವವರೆಗೆ (ಕೊಡುವಂತೆ) ನಿರ್ಬಂಧಿಸಬೇಕಲ್ಲದೆ, ಸೋತವರ ಮೈಮೇಲೆ ಕೈಹಾಕಿ ಸ್ವೇಚ್ಛಾಚಾರದಿಂದ ಹಣವನ್ನು ವಶೀಕರಿಸುವುದು ನ್ಯಾಯವಲ್ಲೆಂದು ಈ ಘಟನೆಯಲ್ಲಿ ಹೊಳೆಯುತ್ತದೆ. ಪಾಂಡವರಲ್ಲಿ ಹಿರಿಯನಾದ ಧರ್ಮಜನು ದ್ರೌಪದಿಯನ್ನು ಪಣವಾಗಿಟ್ಟು ಸೋತುದರಿಂದಾಗಿ ಆಕೆ ಪಣದಂತೆ ದುರ್ಯೋಧನನ ಆಣತಿಯಂತೆ ತೊತ್ತಾಗಿರುವುದಕ್ಕೋ, ಆಕೆಯ 'ಉಟ್ಟುದು ಪರಂ' ಸೆಳೆಯುವುದಕ್ಕೋ ತೊಡಗಿರುವುದು ಅನ್ಯಾಯವೆಂದೇ ಕಾಣುವುದು. ರನ್ನ ಮಹಾಕವಿ ಈ ವಿಚಾರವನ್ನು ಕುರಿತು 'ದುರ್ನಯ' ವೆಂದಿದ್ದಾನೆ: "ಕೃಷ್ಣೆಯ ನಿರಿಯಂ ಪಿಡಿದುರ್ಚಿದೆಳ್ವ–ದುರ್ನಯ ಮಂಬಿಪದೆ ಕೌರವ ರಾಜ್ಯದಾಯದ ಕೇಡಂ" (ಗದಾಯುದ್ಧ ನೋಡಿ)

ಹಾಗೆಯೇ, ಈ ಮೇಲಿನ 'ನೆತ್ತಮಾಡಿ ಭಾನುಮತಿ ಸೋಲಿಸ್ತಿದೆ'ಯೆಂಬಲ್ಲಿಯೂ ಭಾನುಮತಿಯೊಡನೆ ಕರ್ಣ ನೆತ್ತವನ್ನಾಡಿದನೆಂದೂ, ಆಕೆ ಸೋತ ಹಣವನ್ನು ಕೊಡದಿರಲು ಆಕೆಯ ಕುತ್ತಿಗೆಯ 'ಉಬ್ಬಣಂ' ಹರಿಯುವಂತೆ ಕರ್ಣನೆಳೆದನೆಂದೂ, ಆಗ ಮುತ್ತಿನ ಕೇಡನ್ನು ನೋಡಿದ ಕರ್ಣ ಮತ್ತೆ ಬಳ್ಳುತ್ತಿದ್ದನೆಂದೂ, ಅವನನ್ನು ಕೌರವನು ಸಂತೈಸಿದನೆಂದೂ ಅರ್ಥವಿಸುವುದು (ಆರೋಪಿಸುವುದು) ಅನ್ಯಾಯವೆಂದು ಕಾಣುವುದು. ದುರ್ಯೋಧನನು ಕರ್ಣನಲ್ಲಿ ಅತ್ಯಂತ ದಾಕ್ಷಿಣ್ಯದಿಂದ ಕೂಡಿದ್ದನೆಂದೂ, ಅತ

ನಮರಲ್ಲಿ ಕರ್ಣನು ಭಾನುಮತಿಯೊಡನೆ ನೆತ್ತವಾಡಿದ್ದನೆಂದೂ, ಆಕೆ ಸೋತ ಮೇರೆಗೆ ಪಣವನ್ನು ಕೊಡಲಿಲ್ಲೆಂದೂ. ಕರ್ಣನು ಆ ಲಂಬಣವನ್ನು ಎಳೆಯಲು ಆಕೆಯ ಕೊರಳಿಗೆ ಕೈಯಿಕ್ಕಿದ್ದನೆಂದೂ, ಆಗ ನಡೆದ ಮುತ್ತಿನ ಕೇಡನ್ನು ನೋಡಿ ಕರ್ಣ ಬಿಕ್ಕುತ್ತಿದ್ದನೆಂದೂ, ಆಗಲೇ ಕೌರವ 'ವಿಷಮಿಲ್ಲದೆ–ಪ್ರಸನ್ನಚಿತ್ತನಾಗಿ, ಇವನ್ನು ಆಯ್ದು ಕೊಡಲೇ' ಎಂದು ಕೇಳಿದ್ದನೆಂದೂ ವಿವರಿಸುವುದು ನ್ಯಾಯವಾಗಲಾರದು! ಒಟ್ಟಿನಲ್ಲಿ. ಹೀಗೆನ್ನುವುದು. ದುಶ್ಶಾಸನನು 'ಉಟ್ಟುದುವರಂ' ಎಳೆಯಲುಜ್ಜುಗಿಸುವಂತೆ ಅಧರ್ಮವಾಗಿದೆಯೆಂದೇ ಕಾಣುತ್ತದೆ.

[೨]

ಶ್ರೀ ರಾಜಪ್ಪನವರು 'ಕರ್ನಾಟಕ ಭಾರತಿ'ಯ (೪–೩) ತಮ್ಮ ಲೇಖನದಲ್ಲಿ ನಿರ್ಧಾರವನ್ನು ತಲುಪುವ ಮೊದಲಲ್ಲಿ (ಪುಟ ೧೧) "ಕಾಟಕ್ಕೊಳಗಾದ ಕೂಡಲೇ ಲಂಬಣ ಹರಿಯುವುದಿಲ್ಲ. ಯಾರಾದರೂ ಹಿಡಿದೆಳೆದಿರಬೇಕು. ಬಹುಶಃ ಅದು ಕರ್ಣ. ಇಲ್ಲಿ ಬಿಕ್ಕಿದವನು ಕರ್ಣನೆ" ಎಂದಿದ್ದಾರೆ. ಎಂದರೆ, ಶ್ರೀಯುತರಿಗೆ ಈ ಬಗೆಗೆ ಪೂರ್ಣತಃ ನಿರ್ಧಾರವಿಲ್ಲೆಂದು ವೇದ್ಯವಾಗುತ್ತದೆ.

ಹಾಗೆ, "ದಂಪತಿಗಳಿಬ್ಬರ ಪ್ರೇಮಕಲಹದ ನಡುವೆ ತಮಗೆ ಹತ್ತಿರದವರೂ, ಆಪ್ತರಾದವರನ್ನು ಮಧ್ಯಸ್ಥಿಕೆಗೆ ಕರೆಯುವುದು ಸರ್ವೇಸಾಮಾನ್ಯವಾದುದು" ಎಂದಿದೆ (ಪುಟ ೧೨). ಇಲ್ಲಿ ಅಸಾಧಾರಣವಾದ ಅರ್ಥದ–ವಿಷಯದ–ಬಗೆಗೆ ಹಠಾತ್ತಾಗಿ ಮುಂದೆ ಸಾಗಿದಂತಿದೆ.

ಈ ಪದ್ಯಕ್ಕೆ ಶ್ರೀಯುತರದೇ ಅಭಿಪ್ರಾಯ ಸಹೃದಯರ ಮುಂದೆ ಇರಿಸಿದ್ದಾರೆ (ಪುಟ ೧೩): "ಭಾನುಮತಿ ಕರ್ಣ ಇಬ್ಬರೂ ಪಗಡೆಯಾಡುತ್ತಿದ್ದರು...ದುರ್ಯೋಧನ ಇವರಿಬ್ಬರ ಆಟಕ್ಕೆ ಸಾಕ್ಷಿಯಾಗಿ ಕುಳಿತಿದ್ದನು. ಭಾನುಮತಿ ಆಟದಲ್ಲಿ ಸೋತು ಪಣವನ್ನು ಕೊಡಲು ನಿರಾಕರಿಸಿದಳು. (ಈ ನಿರಾಕರಣೆ ಸ್ತ್ರೀ ಸಹಜವಾದ ಆಭರಣಗಳ ಮೇಲಿನ ಆಸೆಯಿರಬಹುದು. ಅಲ್ಲದೆ ಸೋದರ ಸಮಾನನಾದವನಲ್ಲಿ ಸಲುಗೆಯೂ ಇರಬಹುದು). ಕರ್ಣ ಕಾಡಿದನು. ಫಲಕಾರಿಯಾಗಲಿಲ್ಲ. ಆಗ ಕ್ಷತ್ರಿಯೋಚಿತವಾದ ವಿಜಯೋನ್ಮಾದಕ್ಕೆ ಒಳಗಾದ ಕರ್ಣ ಸರವನ್ನು ಹಿಡಿದೆಳೆದ. ಸರ ಹರಿದು ಮುತ್ತುಗಳು ಈಡಾಡಿದುವು. ಈಗ ಕರ್ಣನಿಗೆ ಅರಿವಾಗುತ್ತದೆ. ಆದುದರಿಂದ ತಾನು ಮಾಡಿದುದು ಅಕಾರ್ಯವೆಂಬ ಭಾವನೆಯಿಂದ ಬಿಕ್ಕುತ್ತಾನೆ (ಭಯದಿಂದ ತಲೆಬಾಗುತ್ತಾನೆ). ಇಲ್ಲಿ 'ತಪ್ಪದೆ ಪೇೞಂ' ಎಂಬ ಮಾತು ಬರಲು ಕರ್ಣನಿಗೆ ಮುತ್ತಿನ ಸರವೂ ಬೇಡ. ಮತ್ತೇನು ಮಾತೂ. ಬೇಡ, ಇಲ್ಲಿಂದ ಹೋದರೆ ಸಾಕು ಎನಿಸಿರಬೇಕು."

ಇಲ್ಲಿ. ಭಾನುಮತಿಯಲ್ಲಿ 'ಸ್ತ್ರೀ ಸಹಜವಾದ ಆಭರಣಗಳ ಮೇಲಿನ ಆಸೆಯೆಂದು' 'ಸೋದರ ಸಮಾನನಲ್ಲಿ ಸಲುಗೆ'ಯೆಂದು ಕಾರಣದ್ವಯದ ಆರೋಪವಿದೆ. ಆಟದಲ್ಲಿ ಸೋತಾಗ ಪಣಕ್ಕೊಡ್ಡಿದ ಮುತ್ತಿನ ಸರವನ್ನು ಕೊಡುವುದರಿಂದ ಆಕೆಗೆ ಮತ್ತೆ ಬೇರೆ

ಸರವನ್ನು ಮಾಡಿಸಲು ಬಾರದೇ ? ಸೋದರ ಸಮಾನನಲ್ಲಿ ಸಲುಗೆಯಿಂದ ಸರ ಕಡಿದು ದಾದರೆ ಕರ್ಣನಲ್ಲಿ 'ಅಸಂಯಮ'ವೆಂದೇಕೆ ? ಆಗ ಸರವೆಳೆದುದು ನ್ಯಾಯವಾದರೆ, ಕರ್ಣನಿಗೇಕೆ ಬಿಕ್ಕು? ಕರ್ಣನಿಗೆ 'ಸರವೂ ಬೇಡ, ಮಾತೂ ಬೇಡ. ಮೋದರೆ ಸಾಕೆನ್ನಿಸುವುದು' ಏಕೆ ? ಇವನ್ನೆಲ್ಲಾ ಹೇಳಿ, ಕರ್ಣನಿಗೆ ಮತ್ತು ಭಾನುಮತಿಗೆ ಅಧರ್ಮದ ಸೆಳೆತ–ಸೋಂಕು ತಗಲಿಸಿದರೆ ಮತ್ತೆ ಕರ್ಣನಿಗೇಕೆ ಹಿಗ್ಗು ? ಕರ್ಣನು ಕೌರವನೆದುರೇ ಭಾನುಮತಿಯಲ್ಲಿ ಪಗಡೆಯಾಡಿದುದು ಸಾಧಾರಣವಾಗಿ ಅಧರ್ಮವಲ್ಲವಾದರೂ, ಆಕೆಯ ಕೊರಳಿಗೆ ಕೈಯಿಕ್ಕಿ ಸರವೆಳೆದುದು ಏಕೆ ಅಧರ್ಮವಲ್ಲ ? ಸರ ಕಡಿದು ಮುತ್ತು ಚೆಲ್ಲಿದಾಗಲೂ ಕರ್ಣನಿಗೆ ಅದು ಏಕೆ ಅಧರ್ಮವೆಂದು ಕಂಡಿಲ್ಲ? ದುರ್ಯೋಧನನ ಮಾತು ಕೇಳಿ 'ಜೀವಚ್ಛವ' ನಾದನು ಕರ್ಣನೆಂಬುದು ಏಕೆ ಸರಿ? ಅಂಥವನಿಗೆ ಈ ಭೂಪನನ್ನು ಬಿಡುವುದು, ಪಾಂಡವರನ್ನು ಸೇರುವುದು ಅಧರ್ಮವೇಕೆ ಆಗಬೇಕು ?

ಪಗಡೆಯಾಟದಲ್ಲೂ, ಇತರತ್ರವೂ, ಸೋತವನು ಪಣವನ್ನು ಗೆದ್ದವನಿಗೆ ಕೊಡಲೇಬೇಕೆಂದು ಹಟಮಾಡಬೇಕಲ್ಲವೆ. ಸಾಕ್ಷಿ ಆ ಬಗೆಗೆ ಸೋತವನಲ್ಲಿ ವಿಚಾರಿಸಬೇಕಲ್ಲವೆ, ಸಾಕ್ಷಿಯಲ್ಲಿ, ಬಗೆಗೆ ಹೇಳಬೇಕಲ್ಲವೆ, ಸಾಕ್ಷಿಯನ್ನು ತಿರಸ್ಕರಿಸಿ ಬಿಟ್ಟು – ಮಾತಾಡದೇ 'ಸಹಸಾ' ಸೋತವನ ಮೈಮೇಲೇರುವುದೂ, ಆ ಪಣದ ವಸ್ತುವನ್ನು ವಶೀಕರಿಸುವುದೂ, ಅದು ತುಂಡಾದರೆ ಪರಿತಪಿಸುವುದೂ ಧರ್ಮವೇಕೆ ? ಇದು ನ್ಯಾಯವೇಕೆ ? ಇಂತಹ ಅರ್ಥದಲ್ಲಿ ಕರ್ಣನ ಮೇಲ್ಮೆ ಅಂತೆ ಕವಿಯ ವೈಶಿಷ್ಟ್ಯ–ಇವೆಯೆನ್ನಲೇಕೆ? ಎಂಬೀ ಪ್ರಶ್ನಾಂತರಗಳಿಗೆ ಇಲ್ಲಿಯ ಶ್ರೀಯುತರ ಮಾತು ಉತ್ತರವಾಗಲಾರದೆಂದೇ ಕಾಣುತ್ತದೆ. (ಆ ಲೇಖನದಲ್ಲಿ ಶ್ರೀಯುತರು ಹೆಸರಿಸದ ಹಲವಾರು ವಿದ್ವಾಂಸರ ಮಾತುಗಳ ಬಗೆಗೆ ಬೇರೇನೂ ಹೇಳುವುದಿಲ್ಲ; ಅವೆಲ್ಲವುಗಳ ಮೇಲೆ ಆ ಲೇಖದಲ್ಲೇ ಉತ್ತರಿಸಿದೆ, ಆಮೂಲಕ ಅಸಂಪೂರ್ಣವೆಂದು.)

ಈ ಪದ್ಯದ ಸಂಪಾತ ಹಾಗು ಅರ್ಥದ ಬಗೆಗೆ ಶ್ರೀ ರಾಜಣ್ಣನವರು ಏಳು ಸಮಸ್ಯೆಗಳನ್ನು ಕಾಣಿಸಿ. ಅವುಗಳ ಸಮಾಧಾನ (ಪರಿಹಾರ) ಹೇಳಿದುದೂ ಸರಿಯಾಗಿಲ್ಲೆಂದೇ ಕಾಣುತ್ತದೆ. ಅವು ಏಕೆ ಸರಿಯಾಗವೆಂದು ಅನುಕ್ರಮವಾಗಿ ಬರೆದಿದೆ.

೧. ಕರ್ಣನಿಗೆ ಕ್ಷಾತ್ರರೀತಿಯಲ್ಲಿ ವಿಜಯೋನ್ಮಾದವಾಗಿ, ಅವನೇನು ಮಾಡುವದೆಂದು ಅರಿಯದೆ. ಭಾನುಮತಿಯ ಕೊರಳಿಗೆ ಕೈಯಿಕ್ಕಿ ಸರವನ್ನು ಜಗ್ಗಾಡಿದನೆಂಬುದು–ಉದ್ವೇಗದಿಂದ ಅನೂಹ್ಯವಾಗಿ ಉತ್ತೇಜಿತನಾದನೆಂದು ಕಾರಣ ಕಲ್ಪಿಸುವುದು–ಸರಿಯಾಗದು. ಏಕೆಂದರೆ, ದುರ್ಯೋಧನನು ತನ್ನ ಪಾಂಡವರೊಳಗಾದ ಜೂಜಾಟದ ಪಣದ ಗೆಲವಿಂದ ಉತ್ತೇಜಿತನಾಗಿ, ದ್ರೌಪದಿಯನ್ನು ತಮ್ಮನಿಂದ ಸಭೆಗೆ ಹಿಡಿದೆಳೆಯಿಸಿ, ಮುಂದಿಗೆ ಕೈಯಿಕ್ಕಿಸಿ, ಹಾಗು ಆಕೆಯ 'ಉಟ್ಟುದ ಮರಂ' ಸೆಳೆಯಲು ಉದ್ಯುಗಿಸಿದುದು ಸರಿಯೆನ್ನಿಸುವದಿಲ್ಲ. ದುರ್ಯೋಧನನ ಸಭಾಸದರಲ್ಲಿ ಹಲವರು (ಭೀಷ್ಮಾದಿಗಳು) ಅದು ಅಧರ್ಮವೆಂದು ಹೇಳಿದಂತೆ. ಇಲ್ಲಿ ಕರ್ಣನು ಭಾನುಮತಿಯ ಕೊರಳಿಗೆ ಕೈಯಿಕ್ಕಿ ಸರವನ್ನು ಎಳೆದುದೆಂದರೆ ಅಧರ್ಮವೇ ಆದೀತು. ಮಾನವ ಧರ್ಮವೂ ಇದಲ್ಲ. ರಾಜ

ಧರ್ಮವೂ ಇಲ್ಲ. ಕ್ರೀಡಾಧರ್ಮವೂ ಇಲ್ಲ !

೨. ದುರ್ಯೋಧನ ಆ ಆಟದ ಹೊತ್ತಿನಲ್ಲಿ ಮೊದಲಿಂದಲೂ ಅಲ್ಲಿದ್ದನೆಂಬುದು ಅರ್ಥ ಪುಷ್ಟಿಕರವೆಂಬುದು ಸರಿ. ಆದರೆ, ಕೌರವನು ತನ್ನೆದುರಲ್ಲಿ ಕರ್ಣನು ಸೋತ ಭಾನುಮತಿಯ ಸರ ಹಿಡಿದೆಳೆದರೂ ಲೆಕ್ಕಕ್ಕೆ ತಾರದೆ, ಸಂಶಯಿಸದೆ, ಕರ್ಣನನ್ನು ಹುರಿದುಂಬಿಸುವಂತಿದ್ದನೆಂದುದು ಸರಿಯಲ್ಲ!

ಏಕೆಂದರೆ, ದುರ್ಯೋಧನನು ತೀರ್ಪುಗಾರನಾಗಿ, ನೋಟಕನಾಗಿ, ಕುಳಿತಿದ್ದರೆ ಅಡ್ಡಿಯಿಲ್ಲೆಂಬುದಕ್ಕಿಂತ, ಭಾನುಮತಿಯೊಡನೆ ದುರ್ಯೋಧನನೇ ಆಡಿದನೆಂಬುದು ಸಾಧು. ಎಂದರೆ, ತೀರ್ಪುಗಾರನು ಇಬ್ಬರು ಜಗಳಾಡುವಾಗಲೂ (ಕಾದುವಾಗಲೂ) ಸುಮ್ಮನಿದ್ದು, ಮತ್ತೆ ಆ ಸರವನ್ನು ಸೆಳೆದವನನ್ನು ಹುರಿದುಂಬಿಸುವಂತೆ ಹೇಳುವುದೇ ಇಲ್ಲಿಯ ಅರ್ಥವೆಂಬುದು ಅಧರ್ಮವಾಗಿದೆ. ಆಟದಲ್ಲಿ ಒಬ್ಬನು ಸೋತಾಗ, ತೀರ್ಪುಗಾರನು ತಕ್ಕ ನಿರ್ಣಯ ಹಾಗು ಸೋತ ಪಣವನ್ನು ಗೆದ್ದವನಿಗೆ ಕೊಡಿಸುವ ವ್ಯವಹಾರಗಳಿಗೆಳಸುವನು. ಇಲ್ಲಿ ಹಾಗೇನೂ ಮೊದಲು ಕೌರವ ಮಾಡದೆ ಸುಮ್ಮನಿದ್ದನೆಂಬುದು ಚೆನ್ನಾಗಿಲ್ಲ. (ಕೌರವನು ಕರ್ಣನೊಡನೆಯೆ ಪಗಡೆ ಆಡಿದ್ದನೆಂದೂ, ಭಾನುಮತಿಯನ್ನು ಪಣವಾಗಿಟ್ಟನೆಂದೂ, ಕರ್ಣ ಗೆದ್ದು ಆ ಪಣವನ್ನು–ಭಾನುಮತಿಯನ್ನು ಕೊಳ್ಳಲು ಕಾಡಲೆಳಸಿದ್ದನೆಂದೂ ಹೇಳಲು ಈ ವರೆಗೆ ವಿವೇಚಕರು ಯಾರೂ ಮುಂದೆ ಬಂದಿಲ್ಲ !)

೩. ' ಆಯ್ವುದೋ ' ಎಂದು ಮುದ್ರಿತ ಪ್ರತಿಯಲ್ಲಿರುವುದು ಸಂಪಾದಕೀಯವಾಗಿದೆ. ನಾಲ್ಕು ಹಸ್ತಪ್ರತಿಗಳಲ್ಲೂ ಇರುವಂತೆ ' ಆವುದೊ ' ಎಂದರೇನೇ ಕೌರವನು ಕಡುನ್ಯಾಯವಾದಿಯೆಂದು ಸರಿಪಾತವೆಂದು ನಮಗೆ ಅರಿವಾಗುತ್ತದೆ (ಈ ಬಗ್ಗೆ ಮುಂದೆ ವಿವರಿಸಲಾಗಿದೆ).

ಇಲ್ಲಿ 'ಏವಂ' ಎಂಬುದಕ್ಕೆ ಅಸಮಾಧಾನವೆಂದು (ಪಂಪಭಾರತ ದೀಪಿಕೆ : ೭–೨೮). ದುಃಖವೆಂದು (೭–೧೪), ವಗೆತನವೆಂದು (೮-೫೫), ಅರ್ಥವಿರುವವನ್ನು ಕಾಣುತ್ತೇವೆ.. ಈ ನುಡಿಯು ಮುಂದಿನ 'ತಪ್ಪದೆ'ಯೆಂಬುದಕ್ಕೆ ಜತೆಗೂಡಬೇಕು; ತಪ್ಪಿಲ್ಲದೆ, ನ್ಯಾಯಾ–ನ್ಯಾಯವನ್ನು ಕುರಿತು ಹೇಳುವಲ್ಲಿ ತಪ್ಪದಂತೆ ಎಂದೇ ಅರ್ಥವಿಸಬೇಕು. ಒಟ್ಟಿಗೆ, ಯಾವೊಂದು ಅಸಮಾಧಾನವಿಲ್ಲದೆ-ದುಃಖವಿಲ್ಲದೆ–ವಗೆತನವಿಲ್ಲದೆ ಇದ್ದರೆ. 'ತಪ್ಪದೆ' ತೀರ್ಮಾನವನ್ನು ಹೇಳಲಾಗುತ್ತದೆ. ಹಾಗಿದ್ದರೆ 'ಇವನ್' ಆಯ್ವುದೋ (ಈ ಮುತ್ತುಗಳನ್ನು ಆರಿಸಿಕೊಡುವುದೋ ಪಂ. ಭಾ. ದೀ.)' ಎಂದು ಇಲ್ಲಿ ಹೇಳಬೇಕಾಗಿಲ್ಲ. ಇಬ್ಬರು ಪಗಡೆಯಾಡಿದಾಗ–ಕರ್ಣ ಭಾನುಮತಿಯರು ಆಡಿದಾಗ, ಸೋತವನು ಸೋಲನ್ನು–ಪಣವನ್ನು–ಗೆದ್ದವನಿಗೆ ಕೊಡಿಸುವಂತೇನೂ ಸಾಕ್ಷಿಯಲ್ಲಿ ದೂರಿದವ; ಜಗಳಾಡುವಲ್ಲಿಯೂ. ಆ ವೇಳೆಗೆ ಕುತ್ತಿಗೆಗೆ ಕೈಯಿಕ್ಕಿ ಸರವನ್ನೆಳೆಯುವಲ್ಲಿಯೂ ಸಾಕ್ಷಿ ಸುಮ್ಮನಿದ್ದು: ಮತ್ತೆ ' ಇವನಾಯ್ವುದೋ)' ಎಂದು ಮಧ್ಯಸ್ಥ ಹೇಳುವುದೇಕೆ ? ಆ ಬದಲು. ' ಇವನ್ ಆವುದೋ ಪೇಳಿಂ ' ಎಂದರೆ, ' ಇವನ್ನು ಲಂಪಣದ ಪರಿದ ಮುತ್ತುಗಳನ್ನು ಆರಿಸುವುದೋಣಂತ ' ಎಂಬ ಉದ್ಗಾರವೇ ಇಲ್ಲಿ ಲೇಸಾದೀತು ! ಕೌರವ. ಭಾನುಮತಿ

ಯರು ಪಗಡೆಯಾಡಿದರು, ಆಕೆಯನ್ನು ಆತ ಕಾಡುವಾಗ ಉಡಿಗೆ ಹರಿದುದು ಮುತ್ತುಗಳ ಕೇಡನ್ನು ನೋಡಿ ಆಕೆ ಬಳ್ಕಿದಳು. ಆಗ ಕೌರವನು ತನ್ನಲ್ಲಿ ತಾನು ಈ ಉದ್ಗಾರಮಾಡುವನು. ಕರ್ಣ ಸಾಕ್ಷಿಯೂ ಅಲ್ಲ; ಕೇವಲ ನೋಟಕನೆಂದೇ ತಿಳಿಯ ಬೇಕು. (ಈ 'ಪೇಳಿಂ' ಎಂಬುದು ಸ್ವಗತವಾದ ಉದ್ಗಾರದಲ್ಲಿ ಬಂದಿದೆ).

(ಪಂಪಭಾರತದ ನಾಲ್ಕು ಹಸ್ತಪ್ರತಿಗಳಲ್ಲಿರುವಂತೆ 'ಅಪ್ಪುದೋ' ಎಂಬ ನುಡಿಯ ರೂಪ, ಬಳಿಕೆ ಸಾಧುವಾಗಿದೆಯೆನ್ನಬರುತ್ತದೆ: ಹವೀಕರ ಮಾತಿನಲ್ಲಿ 'ಅಪ್ಪೊದೊ' ಎಂದು ಇಂದಿಗೂ ರೂಢಿಯಲ್ಲಿದೆ. ಪಂಪನಲ್ಲಿ ಹವೀಕರ ಮಾತಿನ ಪ್ರಯೋಗಗಳು ಅನೇಕತ: ಇವೆ. ಈ 'ಅಪ್ಪೊದೊ' ಎಂಬುದಕ್ಕೆ 'ಆಯ್ದುಕೊಳ್ಳ-ವುದೋ' ಎಂಬರ್ಥವಾಗುತ್ತದೆಯೆಂದು ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಮಂಗಳೂರು, ಇವರು ಸೂಚಿಸಿದರು.)

೪. 'ಪೇಳಿಂ' ಎಂಬುದು ಬಹುವಚನ; ಕರ್ಣನು ಸರವೆಳೆದ ವರ್ತನೆ ಸರಿ-ಯೆಂದು ಪುಷ್ಟೀಕರಿಸುವಂತೆ, ಕರ್ಣನಿಂದ ಅಚಾತುರ್ಯವೇನೂ ನಡೆದಿಲ್ಲೆಂದು ಭಾವಿಸುವಂತೆ, ಗೌರವಸೂಚಕ ಬಹುವಚನ ರೀತಿಯಲ್ಲಿ ಕವಿಪ್ರಯೋಗವಾಗಿ ಉಚಿತವೆಂದಿರುವುದು ಸತ್ಯವಾಗದು. ಏಕೆಂದರೆ, 'ಪೇಳಿಂ' ಎಂಬುದು ಕರ್ಣನಿಗೆಂದ-ಬಹುವಚನದ ರೂಪವೇ ಆಗಬೇಕಾಗಿಲ್ಲ. ಇದು ಸ್ವಗತೋದ್ಗಾರದಲ್ಲಿದೆ: ಭೀಮನು ಹಿಡಿಂಬೆಯನ್ನು ಕಂಡು, ಸ್ವಯಂ ಏಕಾಕಿಯಾಗಿ ಉದ್ಗರಿಸುವನು- "ಕೋಟರಿಯೋ. ಭೂತರಿಯೋ. ನಾಗ-ರಿಯೋ. ರೂಪು ಬಲ್ ಸಲ್ಲಾಗದುದಾಗಲ್ …ರಿಯಿಂ ಕಾನನ ದುರ್ಗದೊಳ್… **ಇವಳಿಲ್ಲಿಗೇಕೆ ಬಂದಳೊ, ಪೇಳಿಂ"** (ಪಂ. ಭಾರತ : ೩-೧೪) ಭೀಮನು ತಾನಾಗಿ ತನ್ನೊಳಗೆ ಹೇಳುವ ಮಾತಿದು. ಉಳಿದ ಪಾಂಡವರು ಮತ್ತು ಕುಂತಿ ಅಲ್ಲಿ ನಿದ್ರೆಯಿಂದ ಒರಗಿದ್ದಾರೆ. ಇದಿರಿಗಿರುವ-ಬರುತ್ತಿರುವ-ಹಿಡಿಂಬೆಯನ್ನು ಭೀಮನು ಆಗ ಮಾತಾಡಿಸಲೂ ತೊಡಗಿಲ್ಲ. ಅವಳನ್ನು ಕಂಡೊಡನೆ, - "....ಇವಳಿಲ್ಲಿಗೇಕೆ ಬಂದಳೊ-ಪೇಳಿಂ" ಎಂದುದು ಬೇರೆ ಯಾರೊಡನೆಯೂ ಅಲ್ಲ. ಅದಾಗ್ರೋಚರವಾದ. ಬುದ್ಧಿಗೋಚರವಲ್ಲದ ಅಪ್ರೂಪದ ವಿಶೇಷ ರೂಪನ್ನೋ, ಸದ್ದನ್ನೋ, ಮಾತನ್ನೋ ಕೇಳಿದಾಗ, ತಿಳಿದಾಗ, ಏಕಾಕಿಯಾಗಿ ಒಡಗೂಟ್ಟವಲ್ಲಿ 'ಇದೇನೊಂತ ಹೇಳ(ಬಿ)" ಎಂದು ತಾನಾಗಿ ಹೇಳುತ್ತೇವೆ. ಈ ಮೇರೆಗೆ, ಕೌರವನು ಇಲ್ಲಿ 'ಪೇಳಿಂ' ಎಂದು ಉದ್ಗಾರವಾಡಿರುವುದು ಕಾಣುತ್ತದೆ. (ಹವೀಕರಲ್ಲಿ ಇಂದೂ, 'ಹೇಳಿ' ಎಂಬುದು ಇನ್ನೊಬ್ಬರಿಗೆ ಸಂಬೋಧಿಸುವಂತಿರದೆ, ಆತ್ಮಗತ ಮಾತಾಡುವಾಗಲೂ ಇರುತ್ತದೆ. 'ಇದು ಇಲ್ಲಿಗೆ ಎಂತಗೆ ಬಂತು ಹೇಳಿ.' (ಇವಳು ಇಲ್ಲಿಗೆ ಯಾಕೆ ಬಂದಳೊಂತ) ಎಂದು ಈ ನುಡಿಯ ಅರ್ಥವೆಂದು ಮಂಗಳೂರಿನ ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಸೂಚಿಸಿದರು).

೫) 'ಬಳ್ಕಿ'ದುದು ಕರ್ಣನೆಂದೇ ಹೇಳಬೇಕಾಗುತ್ತದೆ. ಭಾನುಮತಿ ನಡುಗಿದಳೆಂಬುದಕ್ಕೆ ಆಧಾರ ಕಡಿಮೆ. ಕ್ಷತ್ರಿಯನಾದ ಕರ್ಣ ಸಂಯಮವನ್ನು ಕಳೆದು ಸರವೆಳೆದನು. ಮುತ್ತಿನ ಕೇಡನ್ನು ನೋಡಿ. ಮತ್ತೆ ತಪ್ಪಿನರಿವಾಗಿ. ತನ್ನ ವರ್ತನೆಗೆ ಭಯ

ವಿಹ್ವಲನಾಗಿ ಕರ್ಣ ತಲೆಬಾಗುತ್ತಾನೆ, ನಡುಗುತ್ತಾನೆ. ಇಲ್ಲಿ 'ಬಳ್ಕು' ಎಂದರೆ ವೈಯಾರವಲ್ಲ, ಭಯಗೂಡಿದ ತಲೆಬಾಗುವಿಕೆಯೆಂಬುದು—ಸರಿಯಾಗದು.

ಕರ್ಣ ಭಾನುಮತಿಯರೇ ಆಡಿದರೆಂಬ ಮೊದಲಾದ ನಿರ್ಧಾರವೇ ಈ ಅರ್ಥಕಾರಿಕೆಗೆ ಹಿನ್ನೆಲೆಯಾಗಿದೆ. ಕರ್ಣನಲ್ಲಿ ಮೊದಲಾಗಿ ಅಸಂಯಮವನ್ನು ಹೊರಿಸುವುದು ಮುತ್ತಿನ ಕೇಡಾದಾಗ 'ತಪ್ಪರಿಯಿತೆಂ'ಬ ಮತ್ತೊಮ್ಮೆ ಆರೋಪಿಸುವುದು (ಇದರಿಂದ ಅಸಂಯಮ ಪರಿಮಾರ್ಜನೆಗೊಳ್ಳುವಂತಿದೆಯೆಂದು); ಇವೆರಡು ದುರ್ಗುಣಗಳನ್ನೆ ಕರ್ಣನಲ್ಲಿ ಹೊರಿಸಿದಂತಾಗುತ್ತದೆ.

'ಬಳ್ಕಿ'ದುದು ಭಾನುಮತಿಯೆಂದು ಅರ್ಥವಿಸಬೇಕು. ಏಕೆಂದರೆ, 'ಸತ್ತ್ವಮನಾಡಿ ಭಾನುಮತಿ ಸೋತೊಡೆ,' ಸೋಲಮನೀವುದೆಂದು ಕೌರವ ಜಗಳಾಡುವನು. ಆಗ ಆಕೆ ಕೊಡದಿರಲು ಆಕೆಯನ್ನು ಕೌರವ ಕಾಡುವನು. ಆಗ ಲಂಬಣ ಹರಿಯುವುದು. ಆಗ ಭಾನುಮತಿ 'ಮುತ್ತಿನ ಕೇಡನೆ ನೋಡಿ ನೋಡಿ' ಬಳ್ಕುವುದು ಸಾಜವಾಗಿದೆ. ಆಕೆ ಸೋಲನ್ನು ಕೊಡೆನೆಂದು ಒಮ್ಮೆ ಜಲಗಟ್ಟಿದಳು. ಕೌರವ ಕಾಡಿದನು. ಆಗ—ಕಾಡುವಾಗ ಸರವನ್ನು ಹಿಡಿದೆಳೆದನು. ಆಗ ಆಕೆಗೆ ತನ್ನ ಮಾತು–ರೀತಿ ನಿರರ್ಥಕವಾಯಿತೆಂಬ, ಮುತ್ತಿನ ಸರ ತನ್ನಿಂದಾಗಿ ಸುಮ್ಮನೆ ಹರಿಯಿತೆಂಬ ಅಪಮಾನ, ಕುಗ್ಗು ಹಾಗೂ ನಾಚಿಕೆಗಳೊಂದಿಗೆ ಭಯವೂ (ಬಳುಕು) ಆವರಿಸಿತು. ಆಕೆ 'ಬಳ್ಕಿ'ದಳೆಂದೇ ಹೇಳಬೇಕು, ಇದೇ ಸಾಜವಾಗಿದೆ.

೬) 'ಬೇಡನಲ್ಲನೇ'? ಎಂಬಲ್ಲಿ ಪ್ರಾಣಿವಧಕಾರನಾದ ತುಚ್ಛವ್ಯಕ್ತಿ ಎಂದರ್ಥ. ಆದರೂ 'ಧರ್ಮಬಾಹಿರ'ನಾಗಿರುವ ಭಾವನೆ ಸರಿಯೆಂಬುದು–ಚೆನ್ನಾಗದು.

ಬೇಡನು ತುಚ್ಛವ್ಯಕ್ತಿಯೆಂಬಾಶಯ ಕರ್ಣನಿಗಿರಲಾರದು. 'ಕುಲಮೆಂಬುದುಂಟೆ, ಬೀರಮೆ ಕುಲಮಲ್ಲದೆ'ಯೆಂದು ಮುಂತಾಗಿ ಕರ್ಣನು ಹೇಳುವನು. ಬೇಡನು ಪ್ರಾಣಿವಧಕಾರ, ಅಯೋಗ್ಯನೆಂಬ ಆಶಯದಿಂದ ಕರ್ಣ ಹೇಳಿರಲಾರನು. 'ಬೇಡನ್' ಎಂದರೆ ಬೇಡವಾದ ವ್ಯಕ್ತಿಯೆಂದೇ ಸಾಧು. ಇದುವರೆಗೆ ಬೇಕಾಗಿದ್ದ ಕೌರವನನ್ನು ಬಿಟ್ಟು ಇಲ್ಲಿರದೆ, ನಿಮ್ಮಲ್ಲಿ (ಪಾಂಡವರಲ್ಲಿ) ಹೊಕ್ಕರೆ ಈ ಕರ್ಣ ಯಾರಿಗೂ ಬೇಡವಾದವನಾಗುವನೆಂದೇ ಆಶಯವಿಲ್ಲಿದೆ.

೭) ಕರ್ಣನೆ ಭಾನುಮತಿಯಲ್ಲಿ ಪಗಡೆಯಾಡಿದನೆಂದರೆ, 'ಕರ್ಣನ 'ಶೀಲ' ಚ್ಯುತಿಯಾಗದೇ'? ಎಂಬ ಪ್ರಶ್ನೆ ಕೇಳಿ, ಸಲುಗೆಯಿದ್ದರೂ, ಸಂಯಮವನ್ನು ಕಳೆದುಕೊಂಡರೂ ಶೀಲಕ್ಕೆ ಚ್ಯುತಿ ತರುವ ವ್ಯಕ್ತಿತ್ವ ಕರ್ಣನದಲ್ಲೆಂದು ಹೇಳಿದುದು-ಸಮಂಜಸವಲ್ಲ.

ಕರ್ಣನಲ್ಲಿ ಅಂತಹ ಅಸಂಯಮವಿದೆಯೆಂದರೆ, ಅದು ಅವನ ಶೀಲದಲ್ಲಿ ಒಂದು ಕೊರತೆಯೆಂದೇ ಆದೀತು. ಮತ್ತೆ ಅತ ತನ್ನ ತಪ್ಪನ್ನು ತಿಳಿದನೆಂಬ ಪರಿಹಾರ–ಸಮಾಧಾನ–ಪರಿಮಾರ್ಜನ ಹೇಳುವುದೂ ಸರಿಯಲ್ಲ. ಕರ್ಣ ಕೇವಲ ನೋಟಕನಾಗಿದ್ದನೆಂಬುವರಿಂದ, ಕರ್ಣನ ಪಾತ್ರಕ್ಕೆ ಅನೇಕರು ಆರೋಪಿಸುವ ಯಾವ ಬಗೆಯ ಉತ್ಕರ್ಷ

ಯೊಪಗದಿದ್ದರೂ. ಆ ಸ್ಥಳದಲ್ಲಿದ್ದ ಆತನಿಗೆ ಮೇಲ್ಮೆಯುಂಟೆ. ಕರ್ಣ ಕೌರವನಲ್ಲಿ ಕಂಡುದೆಂದರೆ, ಕೌರವನು 'ಭೂಪೋತ್ತಮ'ನೆಂಬುದನ್ನು 'ಏನಮಿಲ್ಲದೆ ತಪ್ಪದೆ ಇವನಾವುದೊ ಪೇಳಿಂ' ಎಂಬುದೇ ಭೂಪೋತ್ತಮನ ಉತ್ತಮ ಲಕ್ಷಣವೆಂದು ಇಲ್ಲಿ ತಿಳಿಯಬೇಕಾದುದು.

ಶ್ರೀ ರಾಜಪ್ಪನವರು ತಮ್ಮ ಲೇಖನದ ಕೊನೆಯಲ್ಲಿ ಹೇಳಿದುದು—ಹೀಗಲ್ಲಾದರೆ ಆ ನವನವೋನ್ಮೇಷ ಶಾಲಿನಿ ಪ್ರತಿಭೆಗೆ ಅಪಚಾರವಾದಂತೆ ಸರಿಯೆಂದುದು ಉಚಿತವಲ್ಲ!

ತಾವು ಸೂಚಿಸಿದ ಅರ್ಥವಿವರಣ ಸರಿಯೋ ಅಲ್ಲವೋ ಎಂದು ಸಹೃದಯ-ಆಸ್ತಿಕರ ಮುಂದೆ ಲೇಖಕರು ಇರಿಸಬೇಕು. ಹಾಗಲ್ಲದೆ, ಕಾವ್ಯಕರ್ತೃವಿನ ಪ್ರತಿಭೆಗೆ, ಕಾವ್ಯಕ್ಕೆ (ವಸ್ತುವಿಗೆ) ಎಲ್ಲರೂ ಕೊಡುವ ಗೌರವ ಇದರಿಂದಲೇ ಒದಗುವುದು ಎನ್ನುವುದು; ಹೀಗಲ್ಲವಾದರೆ 'ಅಪಚಾರ'ವೆನ್ನುವುದು ಸಾಧುವಾಗದು. ಇದುವರೆಗೆ ಈ ಪದ್ಯದ ಬಗೆಗೆ ಹಲವರಲ್ಲಿ ಹಲತರ ಬಗೆತಗಳಿವೆ. ಇನ್ನಾದರೂ ಒಂದು ತನಕ್ಕೆಳಸಬೇಕೆಂದೇ—ವಿವೇಚಿಸಬೇಕೆಂದೇ ವಾಚಕಮಹೋದಯರಲ್ಲಿ ನಿವೇದಿಸುವುದು ಅಷ್ಟೇ ಲೇಖನದ ಧರ್ಮ. ಅವುದು ಸರಿ, ಯಾವುದು ತಪ್ಪೆಂಬುದು ಇನ್ನು ಮುಂದಿನ ಚರ್ಚೆಗೆ ಹಿನ್ನೆಲೆಯಾಗಿ ಮೀಸಲಾಗಿ ಇರುತ್ತದೆ. ಒಮ್ಮೆ ನಿರ್ಣಯಿಸಿದ ಅರ್ಥವನ್ನು ಮುಂದೆ ಯಾರೂ ಬೇರೆ ತಿಳಿಯಲಾರರೆಂದು—ತಿಳಿಯಬಾರದೆಂದು ಯಾರ ಹಟವೂ ಸಲ್ಲದು! ಇಂತಹ ಪ್ರಸಂಗದಲ್ಲಿ ಕವಿಗೆ, ಕಾವ್ಯಕ್ಕೆ, ಧರ್ಮಕ್ಕೆ 'ಅಪಚಾರ' ಆಗದಂತೆಳಸುವುದು ಸಹೃದಯ ಲೇಖಕರ, ಆಸ್ತಿಕ ವಾಚಕ ಮಹಾನುಭಾವರ ಕರ್ತವ್ಯವಾಗಿದೆ. ಕಾವ್ಯಧರ್ಮ ಧರ್ಮಗಳು ಹಾಸುಹೊಕ್ಕಾಗಿ ಜತೆಯಾಗಿ ತಾನೇ ಕಾವ್ಯದಲ್ಲಿ ಹೊಸೆದಿರಬೇಕಲ್ಲವೇ ? ಸಹೃದಯ ವಿಮರ್ಶಕನು ಕವಿ ವಾಚಕರ ಮಧ್ಯಸ್ಥನಾಗಿರಬೇಕಲ್ಲವೇ ? ವಿಮರ್ಶೆಯ ತಪ್ಪುತಡೆಗಳು ಕವಿಗೂ ವಾಚಕರಿಗೂ ಅಪಚಾರಗಳಾಗಬಾರದಲ್ಲವೇ ?

[೩]

ಇನ್ನು, 'ನೆತ್ತಮನಾಡಿ' ಎಂಬುದರ ಬಗೆಗೆ ಹೀಗೆನ್ನುವುದು ಸಾಧುವಾಗಿದೆ.

೧. ಭಾನುಮತಿ (ಕೌರವನಲ್ಲಿ) ನೆತ್ತಮನಾಡಿ ಸೋತಳು.

೨. ಸೋಲಮನೀವುದೆಂದು (ಕೌರವ) ಕಾಡುತ್ತಿರೆ ಲಂಬಣವು ಹರಿಯಿತು.

೩. ಮುತ್ತಿನ ಕೇಡನೆ ನೋಡಿ ನೋಡಿ (ಭಾನುಮತಿ) ಬೆಕ್ಕಿದಳು.

೪. "ಏನಮಿಲ್ಲದೆ ತಪ್ಪದೆ, ಇವನಾವುದೊ, ಪೇಳಿಂ" ಎಂದು ಸ್ವಗತವಾಗಿ ದುರ್ಯೋಧನ ಪೇಳಿದನು.

೫. ಹೀಗೆಂದ—ಇಂತಹ ಭೂಪೋತ್ತಮನನ್ನು ಬಿಸುಟ್ಟು, (ಇಲ್ಲಿ) ಇರದೆ, ನಿಮ್ಮಲ್ಲಿ ಹೊಕ್ಕರೆ, (ಈ ಕರ್ಣನು) 'ಬೇಡನಲ್ಲನೆ ?' ಎಂದು, ಹೀಗೆ ಕರ್ಣ ಕೃಷ್ಣನಿಗೆಂದನು. ತನ್ನಲ್ಲಿ ಭೂಪನು ಇರಿಸಿದ ಅಸಾಧಾರಣ ಪ್ರೀತ್ಯಾದರಗಳಿಗಿಂತಲೂ, ಭೂಪನ

'ಉತ್ತಮಿಕೆ'ಯನ್ನು ತಾನು ಗುರುತಿಸಿದ್ದೇನೆ; ಆ ಮೇರೆಗೆ ಆತನನ್ನು ತಾನು ಬಿಟ್ಟು ಬಾರೆನೆಂದು ಇಲ್ಲಿಯ ಸಹಜವಾದ ಅರ್ಥವಾಗಿದೆಯೆಂದು ವಿದ್ವಜ್ಜನರಲ್ಲಿ ನಿವೇದಿಸುವೆನು. (ಈ ಲೇಖನದ ವಿಷಯ ವಿವರಣೆಗೆ, ವಿಚಾರ ವಿನಿಮಯಕ್ಕೆ ಸಹಕರಿಸಿದವರು ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ತೆಕ್ಕುಂಜ ಗೋಪಾಲಕೃಷ್ಣಭಟ್ಟರು.)

★ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲ,

ನಿಜಗುಣರ ಎರಡು ಹಾಡುಗಳು

ನಿಜಗುಣರ ಒಂದು ಪ್ರಾರ್ಥನೆ ಹೀಗಿದೆ:

"ಬೇಡುವೆನಭವ ನಿಮ್ಮನು ಭವ ಭವದೊಳು
ಮಾಡೆನಗೊಲಿದು ಸುಗುಣ ಸಂತತಿಯನು"

ಜನ್ಮಜನ್ಮಾಂತರಗಳಲ್ಲಿ ನಿಮ್ಮನ್ನು ಬೇಡುವುದು ಸುಗುಣಗಳು. ಪರಮಾತ್ಮ ಕೃಪೆಯಿಟ್ಟು ದಯಪಾಲಿಸು! ಯಾರಿಗೂ ದೇಹಿ ಎನ್ನದ ಸಾಹಸ. ಎಂದೂ ಸುಳ್ಳಾಡದಂಥ ಸತ್ಯ ನಿಷ್ಠೆ. ಶಾಶ್ವತ ಕಾರ್ಯ ಮಾಡುವ ಪ್ರಾಮಾಣಿಕತೆ, ಶಾಂತ ಸ್ವಭಾವಗಳನ್ನು ಕರುಣಿಸು. ಇರುವ ಸಂಪತ್ತನ್ನು ಹಂಚಿಕೊಂಡು ಉಣ್ಣುವ ಉದಾರ ಹೃದಯ, ಹಿತಭಾವದಿಂದ ಮಾಡುವ ದಾನಗುಣ, ಅರಿವಿನಲ್ಲಿ ನಂಬುಗೆ. ಹೃದಯವಿಕಾಸಗಳನ್ನು ಕೃಪೆಗೈ. ಕೋಪ ವಿರದ ತಪೋಬುದ್ಧಿ. ಪರಸ್ತ್ರೀ ವ್ಯಾಮೋಹಕ್ಕೆ ಸಿಲುಕದ ಸಂಯಮ. ಎದೆಗುದಿಯನ್ನು ಉಂಟು ಮಾಡದ ವಂಚನೆಯಿಲ್ಲದ ಸಂಸಾರ ಸುಖ, ಶಾಂತಿಪ್ರದ ಧರ್ಮ. ಚ್ಯುತಿ ಯಿರದ ಭಕ್ತಿ, ಗುರುಚರಣ ಸೇವೆ ಮೊದಲಾದ ಸದ್ಗುಣಗಳನ್ನು ನೀಡು.

ಈ ಲೋಕದ ನಡವಳಿಕೆಗೆ ಒಂದು ಕೈಪಿಡಿಯಾಂತಿರುವ ಮೇಲಿನ ಪ್ರಾರ್ಥನೆ ನಿಜ ಗುಣರು ಸಾಧಿಸಬಯಸಿದ ಲೌಕಿಕಧರ್ಮಕ್ಕೆ ಅಥವಾ ಸಹಜಧರ್ಮಕ್ಕೆ ಸಾಕ್ಷಿ ಯಾಗಿದೆ. ಎಂದೂ ಚ್ಯುತಿಯಿರದ ಭಕ್ತಿಯಿಂದ ಬದುಕಿಗೆ ಶಾಂತಿಪ್ರದವಾದ ಧರ್ಮ ಸ್ವರೂಪವನ್ನು ಅಳವಡಿಸುವುದು ಅವರ ದೃಷ್ಟಿಯಾಗಿತ್ತು. ಹಾಗೆಂದೇ ಅವರು ಶ್ರೇಷ್ಠಗುಣ ಸಂಪಾದನೆಯನ್ನು ಪರಮಾರ್ಥ ಸಾಧನೆಯ ಹಾದಿಯೆಂದು ಸೂಚಿಸು ತ್ತಾರೆ. ಲೌಕಿಕವನ್ನು ಬಿಟ್ಟು ಪರಮಾರ್ಥಪಥ ಮುಂದುವರೆಯುವುದಿಲ್ಲ. ಎರಡೂ ಒಡನೊಡನೆ ಒಡವೆರೆದು ಮುನ್ನಡೆಯಬೇಕು. ಹಾಗೆ ಯಾರು ತಮ್ಮ ಜೀವನ ರೂಪಿಸಿಕೊಳ್ಳುತ್ತಾರೆ ಅವರು ಜಾಣರು.

"ಜಾಣನು ಲೌಕಿಕ ಪರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹನಿಂತು"
ಅದು ಹೇಗೆ?

ಕೊಳನ ಪೊಕ್ಕರೆ ಒಡಲಿನ ತಂಪು, ಬಿಸಿಲಿನ
ಜಳನು ಮಿಕ್ಕ ಮೈಯೊಳು ಕಾಣ್ಬಂತೆ
ತಿಳಿವಿನ ಸುಖವನು ವಿಷಯಾಭಿರತಿಯ ಸಂ!
ಗೊಳಿಸುತ ಸಮಯಕ್ಕೊಂದರೊಳಿಯುತಿಹನು"

ಕೊಳದಲ್ಲಿ ಪೊಕ್ಕರೆ ಶರೀರದ ನೀರಲ್ಲಿರುವ ಭಾಗದಿಂದ ತಂಪು ಮಿಕ್ಕ ಭಾಗ ದಿಂದ ಬಿಸಿಲಿನ ಜಳ ಸಮನಿಸಿ ಅನುಭವಕ್ಕೆ ಬರುವಂತೆ, ಅರಿವಿನ ಸವಿ, ಅರಿವಿನ

ಸುಖಗಳು ಧರ್ಮಾಚರಣೆಯಲ್ಲಿ ಅಳವಟ್ಟು, ಪರಮಾರ್ಥದ ಅನುಭಾವ ತನ್ನಲ್ಲಿ ಹೊಮ್ಮಬೇಕು. ಸಾಕ್ಷಾತ್ಕಾರಕ್ಕೆ. ಸ್ವಸ್ವರೂಪಜ್ಞಾನಕ್ಕೆ ಪ್ರಚೋದಕ ಆತ್ಮ. ಆತ್ಮ, 'ಕರುಣರಸದ ಕೋಡಿ,' 'ನಿಜಾನಂದ'ದ ನೆಲೆ. ಈ ನೆಲೆಯಲ್ಲಿ ನಿಂದ ನಿಜಗುಣರಿಗೆ ಜೀವನ ಒಂದು ವೀಣೆಯಂತೆ ಕಂಡಿತೋ ಏನೋ! ಯೋಗದ ನಿಜಾನಂದದಲ್ಲಿ ನಿಂದು ಅವರು ಮಿಡಿದ ಈ ಬದುಕಿನ ವೀಣೆಯಿಂದ ಹೊಮ್ಮಿದ ಅಗಣಿತ ರಸತರಂಗಗಳೇ ಅವರ ಹಾಡುಗಳು.

'ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸದ ತರಂಗಿಣಿ'. ಹತ್ತನೆಯ ಶತಮಾನದಿಂದಲೇ ವಚನಗಳನ್ನು ಸಂಗೀತಶಾಸ್ತ್ರಕ್ಕನುಗುಣವಾಗಿ ಹಾಡುತ್ತ ಬಂದಿದ್ದ ಕನ್ನಡ ನಾಡಿನ ಹಾಡುಗಬ್ಬಗಳ ಪರಂಪರೆಗೆ ನಿಜಗುಣರ ಹಾಡುಗಳಿಂದ ಒಂದು ಹೊಸ ಪ್ರವಾಹ ಬಂದು ಸೇರಿಕೊಂಡು, ಅವು ಕನ್ನಡ ಸಾಹಿತ್ಯದ ಚಿರಂತನ ಕಾಣಿಕೆಯಾಗಿ ಉಳಿದುವು.

ಪರಮಾರ್ಥ ಪ್ರಜ್ಞೆಯಿಂದ ರೂಪುಗೊಂಡ ಅವರ ಹಾಡುಗಳು ಕೇವಲ ಹಾಡುಗಳಾಗಲಿಲ್ಲ; ಅವು ಸಂಗೀತರಚನಾಕಾರರಿಗೆ ಮಾದರಿಯಾದುವು : ಸಾಹಿತ್ಯ ಪ್ರಿಯರಿಗೆ ರಸಪರಿಪಾಕವಾದವು; ಅದು ಅಭಿವ್ಯಕ್ತವಾದದ್ದು ಶಾಸ್ತ್ರೋಕ್ತವಾದ ನಾದ ಲಯಗಳ ಮುಖಾಂತರವಾಗಿ. ಸಪ್ತಸ್ವರಗಳ ಸಾಕ್ಷಾತ್ಕಾರ ಪಡೆದುಕೊಂಡಿದ್ದ ಈ ನಾದಯೋಗಿ ಸಂಗೀತಶಾಸ್ತ್ರವನ್ನು ಕುರಿತು ವಿವೇಕಚಿಂತಾಮಣಿಯಲ್ಲಿ ಒಂದು ಅಧ್ಯಾಯವನ್ನೇ ರಚಿಸಿದ್ದಾರೆ.

ಪರಮಾನುಭವ ಮತ್ತು ದಿವ್ಯ ಸಂಗೀತ ಜ್ಞಾನಗಳ ಜೊತೆಗೆ, ನಿಜಗುಣರ ಹಾಡುಗಳಲ್ಲಿ ಅತಿ ಸುಲಲಿತವಾದ ಮತ್ತು ಅಷ್ಟೇ ಪ್ರೌಢ ರೀತಿಯ ಭಾಷೆಯ ಬಳಕೆಯನ್ನು ನಾವು ಕಾಣುತ್ತೇವೆ. ಅವರ ಹಾಡುಗಳು ಬದುಕಿನ ಇಡಿಯಾದ ದೃಷ್ಟಿಯನ್ನು ಒಳಗೊಂಡಿವೆ. ಅವುಗಳಲ್ಲಿ ಹೆಪ್ಪುಗಟ್ಟಿದ ದಿವ್ಯಾನುಭಾವದ ಒಂದೊಂದೇ ಪದರನ್ನು ಎತ್ತುತ್ತ ಹೋದಂತೆ ಅರ್ಥವ್ಯಾಪ್ತಿಯ ನಿಸ್ಸೀಮದ್ರವ್ಯ ಅನುಭವಕ್ಕೆ ಬರುತ್ತದೆ. ಅಂತಹ ಒಂದು ಅಖಂಡ ದೃಷ್ಟಿ, ಪೂರ್ಣದೃಷ್ಟಿ ಕೇವಲ ಸೀಮಿತ ವಲಯದಲ್ಲಿ ಜೀವಿಸುವ ಮಾನವನಿಗೆ ಹೇಗೆ ಸಾಧ್ಯ ಎನ್ನುವ ಸೋಜಿಗ ನಮಗಾಗುತ್ತದೆ. ಅಂತಹ ದಿವ್ಯಚೈತನ್ಯದ ಆಳದಿಂದ ಸ್ಪಂದಿಸಿದ ಅವರ ಹಾಡುಗಳ ಘನತೆಯನ್ನು ಪೃಥಕ್ಕರಿಸುವುದು ಒಂದು ಜಟಿಲವಾದ ಕ್ರಿಯೆ. ಏಕೆಂದರೆ ನಿಜಗುಣರ ದೃಷ್ಟಿಯಲ್ಲಿ ಕಾವ್ಯರಚನೆ ಆತ್ಮ ಸಾಕ್ಷಾತ್ಕಾರ ಸಾಧನೆಗೆ ಒಳಗು. ಅಂಥ ಸಾಧನೆಯಲ್ಲಿ ನಿರತರಾದ ಅವರು ದಿವ್ಯಾನುಭಾವವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅಭಿವ್ಯಕ್ತಗೊಳಿಸುವ ಪರಿಭಾವನೆ ಉಳ್ಳವರು. ಕಾವ್ಯಕ್ಕೆ ಆಧ್ಯಾತ್ಮಿಕ ಅನುಭೂತಿ ಪ್ರತಿಮೆಯಾದಾಗ ಅದು ಸಾಂಕೇತಿಕವಾಗಿ ತತ್ತ್ವಜ್ಞಾನವನ್ನು ನಿರೂಪಿಸಬಹುದು. ವ್ಯಕ್ತಿಗತವಾದ ಅನುಭವ ಇಂದ್ರಿಯ

ಜ್ಞಾನಕ್ಕೆ ಪರಿಮಿತವಾದುದು. ಅವುಗಳನ್ನು ಇಂದ್ರಿಯಾನುಭವದ ತುಯ್ತಕ್ಕೆ ಅನುಗುಣವಾಗಿ ಮನುಷ್ಯನಲ್ಲಿ ಉಂಟಾಗುವ ಪ್ರಾಥಮಿಕಾನುಭವಗಳು ಎಂದು ಇಟ್ಟುಕೊಳ್ಳಬಹುದು. ಈ ಅನುಭವಗಳ ಪ್ರೇರಣೆ ಸಹಜವಾಗಿ—ಈ ಪ್ರೇರಣೆ ಉತ್ಕಟಗೊಂಡಾಗ ಬುದ್ಧಿ ಅದರಲ್ಲಿ ಬೆರೆತು ಈ ಉತ್ಕಟತೆ ಇಂದ್ರಿಯಾತೀತ ಜ್ಞಾನವನ್ನೊಳಗೊಂಡ ಸಂವೇದನೆಯಾಗಬಹುದು. ಈ ಸಂವೇದನೆ ವ್ಯಕ್ತಿತ್ವ ಪ್ರಜ್ಞೆಯ ಚಿರಂತನವಾದ ಅಂಶ. ತನ್ನಲ್ಲಿ ಹೊಳೆದ ತತ್ತ್ವವನ್ನು ವ್ಯಕ್ತಿ, ಅನುಭವ ಪರಿವರ್ತಿತವಾದ ಸತ್ಯವನ್ನಾಗಿ ಆವಿಷ್ಕಾರಗೊಳಿಸಬೇಕಾಗುತ್ತದೆ. ಈ ಸತ್ಯ ಕೇವಲ ಬುದ್ಧಿಯ, ತರ್ಕದ ಕೈಗೂಸಲ್ಲ: ಅನುಭಾವದ ಸುಗಂಧ, ಅಂತಃಕರಣದ ಸ್ಪಂದನ; ಇದೇ ಕಾವ್ಯ ಕ್ರಿಯೆಗೆ ಪ್ರೇರಕ. ಇಂಥ ಕಾವ್ಯ, ಆಧ್ಯಾತ್ಮಿಕ ಅನುಭೂತಿಯನ್ನು ಅನುಭವೀಕೃತ ಸ್ವರೂಪದಲ್ಲಿ ಒಪ್ಪಿಕೊಂಡು ಅಖಂಡಜೀವನವನ್ನು ಪ್ರತಿಮಿಸುವ ಹೊಂಚು ಹಾಕುತ್ತದೆ. ಅದು ಕಾವ್ಯಕಾರನ ಪಾರದರ್ಶಕ ದೃಷ್ಟಿಯಿಂದ ಸ್ಫುರಿಸುವ ಪ್ರತಿಸೃಷ್ಟಿ.

ನಿಜಗುಣರ ಆಧ್ಯಾತ್ಮಿಕ ಅನುಭವ ಪಾರಮಾರ್ಥಿಕ ಹಂಬಲ. ಸಮಸ್ತ ಅಸ್ತಿತ್ವದಲ್ಲಿ ಪ್ರತಿಸ್ಪಂದಿಸಿ ಅದರಲ್ಲಿ ನೆಲೆ ನಿಲ್ಲುತ್ತದೆ; ಅಲ್ಲಿ ನೆಲೆನಿಂದರೂ ಅದರಾಚೆಯೂ ಚಾಚಿಕೊಳ್ಳುತ್ತದೆ—ನಿಸ್ಸೀಮವನ್ನು ಚಾಚಿಕೊಳ್ಳುತ್ತದೆ.

ಆಧ್ಯಾತ್ಮಿಕ ಅನುಭೂತಿಯು ಕಾವ್ಯಾನುಭವವಾಗಿ ಆವಿಷ್ಕಾರಗೊಳ್ಳುವುದು ವ್ಯಷ್ಟಿಪ್ರಜ್ಞೆಯ ಒಂದು ನಿಸ್ಸೀಮ ಸ್ತರದಲ್ಲಿಯೇ. ಅದು ವ್ಯಕ್ತಿಯ ಜ್ಞಾನ ಸಾಧನವಾದ ಮನಸ್ಸಿನ ಮುಖಾಂತರ—ಈ ಮನದಿಂದ ರೂಪುಗೊಂಡ 'ನಾನು' ಇದಕ್ಕೆ ಮೂಲ. ಆದರೆ ಈ 'ನಾನು' ಎನ್ನುವುದು ಕೇವಲ ಹಮ್ಮು ಅಲ್ಲ. ಆತ್ಮಜ್ಞಾನದಿಂದ ಪ್ರೇರಿತವಾದ ಎಚ್ಚರ: ಅದು 'ನಾನು' ಎನ್ನುವುದರಲ್ಲಿಯ ಅಹಂಕಾರ ನಿರಸನಗೊಂಡ ನಿರುಮ್ಮಳದ ನಿಲುವು. ಅದ್ಭುತ ಸೃಷ್ಟಿಯಲ್ಲಿ ಹಿಗ್ಗಿ, ಅಂತರಂಗದ ಅನಂತ ಜಟಿಲ ಕ್ರಿಯೆಗಳಲ್ಲಿ ಹಬ್ಬಿ, ಆತ್ಮದ ಮೂಲವಾದ ಪರಮೈಕ್ಯತತ್ತ್ವದಲ್ಲಿ ಒಡನೆರೆದು, ತನ್ನಲ್ಲಿ ತಾನೇ ತಾನಾಗಿ ಸಹಜವಾಗಿ ಇಂಬುಗೊಂಡ ಸಮಷ್ಟಿಪ್ರಜ್ಞೆಯ ಅತೀಂದ್ರಿಯ ಸ್ತರದಲ್ಲಿ ನಿಂದು ಮತ್ತೆ ಈ ಲೋಕವನ್ನು ನಿರುಕಿಸುವ ಒಂದು ಸಾಕ್ಷಿ ಭಾವ. ಇದನ್ನು 'ಸಾಕ್ಷಿಪ್ರಜ್ಞೆ' ಎಂದು ಕರೆಯಬಹುದು.

ನಿಜಗುಣರ ಒಂದು ಹಾಡನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು.

ಬಾಧೆ ತನ್ನೊಳು ತೋರದು । ಪರಮಾರ್ಥ
ಬೋಧೆ ನೆಲೆಗೊಂಡು ನಿಂದಮೇಲೆ

ಜೀವನದ ಪರಮ ಅರ್ಥವಾದ ಆತ್ಮಸಾಕ್ಷಾತ್ಕಾರದ ಅಂಶ ಇರುವಲ್ಲಿ ಇಂಬುಗೊಳ್ಳಬೇಕು. ಆಗ ಬಾಧೆ ತನ್ನಲ್ಲಿ ತೋರದು. ಈ ಲೋಕ ಯಾತನೆಗಳ ಬೀಡು ಎಂದು ಅನ್ನಿಸದು.

ಆನಂದಮಯನೆ ಜಗವ ರಚಿಸಿ, ವಿ
ಜ್ಞಾನಮಯನೆನಿಸಿ ಕರ್ಮವಿಡಿದು
ಹಾನಿಗೊಳಗಹನಲ್ಲದೆ ಪರಿಸಾಕ್ಷಿ
ತಾನೆಂಬ ನಿಜವನರಿದ ಮೇಲೆ| ಬಾಧೆ ತನ್ನೊಳು ತೋರದು

ಪರಮಚೈತನ್ಯ. ಪರಮಾನಂದ ಸ್ವರೂಪನಾದ ಪರಮಾತ್ಮನ ಅಭಿವ್ಯಕ್ತಿರೂಪ ಈ ಜಗತ್ತು. ಈ ಜಗತ್ತಿನಲ್ಲಿ ಜನ್ಮವೆತ್ತಿ ಬಂದ ವ್ಯಕ್ತಿಯು ಆತ್ಮ. ಪರಮಾತ್ಮ ಚೈತನ್ಯದ ಜೊತೆಗೆ ಒಂದು ಅವಿನಾಭಾವ ಸಂಬಂಧ ಹೊಂದಿದೆ. ಆದರೆ ಈ ಲೋಕದ ಜಟಿಲ ಕ್ರಿಯೆಗಳಲ್ಲಿ ಮತ್ತು ಅವುಗಳನ್ನು ಅರಿತುಕೊಳ್ಳುವ ವಿಶೇಷ ಜ್ಞಾನ ಪ್ರಾಪ್ತಿಯಲ್ಲಿ ತೊಡಗಿದ ವ್ಯಕ್ತಿ–ಅಥವಾ 'ನಾನು'–ಆತ್ಮದ ಮೂಲ ಸ್ವರೂಪವನ್ನು ಮರೆತು ಸೀಮಿತ ಮತ್ತು ಸಂಕುಚಿತ ದೃಷ್ಟಿಯಲ್ಲಿ ಜೀವನವನ್ನು ಪರೀಕ್ಷಿಸುತ್ತಾನೆ ಮತ್ತು ಈ ಮರವೆಯಲ್ಲಿಯೇ ಎಲ್ಲ ಕರ್ಮಗಳನ್ನು ಕೃತ್ಯಗಳನ್ನು ಗ್ರಹಿಸುತ್ತಾನೆ. ಆತನ ಎಲ್ಲ ಕ್ರಿಯೆಗಳು 'ಹಮ್ಮಿ'ನ, 'ಅಹಂಕಾರ'ದ ನೆಲೆಯಿಂದಲೇ ನಿರ್ದೇಶಿತಗೊಳ್ಳುವುದರಿಂದ ಆತ ಹಾನಿಗೆ ಒಳಗಾಗುತ್ತಾನೆ. ಕೇಡಿಗೆ ವಶಗತನಾಗುತ್ತಾನೆ, ದುಃಖಿಯಾಗುತ್ತಾನೆ. ಆತನಿಗೆ ಜಗತ್ತು ದುಃಖಮಯವಾಗಿ ಕಾಣುತ್ತದೆ. ಆದರೆ ತನ್ನೊಳಗಿನ 'ನಾನು' ಪರಮಾರ್ಥದ ನಿಜದ ನೆಲೆಯಾಗಬೇಕು— ತನ್ನ ಮೂಲ ಚೈತನ್ಯಾಂಶದ ಸಮಷ್ಟಿಪ್ರಜ್ಞೆಯ ಅಖಂಡ ಬಿಂದುವಾಗಬೇಕು. ತಾನು ಆ ನಿಸ್ಸೀಮಚೈತನ್ಯ ಎನ್ನುವ ವಸ್ತುಸ್ಥಿತಿ, ಯಥಾರ್ಥ ಜ್ಞಾನ ತನ್ನಲ್ಲಿ ಮೂಡಬೇಕು. ಆ ಪರಮಾರ್ಥ ಜ್ಞಾನ ದೃಷ್ಟಿಯಿಂದ ಜೀವನವನ್ನು— ತಾನು ಸಂಬಂಧಪಟ್ಟ ಮತ್ತು ತನಗೆ ಸಂಬಂಧಿತವಾದ ಜೀವನವನ್ನು– ನಿರುಕಿಸಬೇಕು. ತಾನು ಅವರಲ್ಲಿ ತೊಡಗಿದ್ದು ಅವಕ್ಕೆ ಸಾಕ್ಷಿರೂಪನು.

ಈ ಹಂತದಲ್ಲಿ ಅಮೂರ್ತರೂಪದ ಸಾಕ್ಷಿಪ್ರಜ್ಞೆ ತನ್ನ ಸ್ವರೂಪವಾಗುತ್ತದೆ.

ಪರಮ ಜೀವರುಗಳೆಂಬ | ಚೈತನ್ಯ
ಎರಡನತಿಗಳೆದು ಬೇರೆ ಬ್ರಹ್ಮ
ತುರೀಯನೆಂಬುಭಯವಳಿದು ಚಿನ್ಮಾತ್ರ
ದಿರವೆ ತಾನೆಂದು ತಿಳಿದ ಮೇಲೆ | ಬಾಧೆ ತನ್ನೊಳು ತೋರದು

ಜೀವಾತ್ಮ ಬೇರೆ, ಪರಮಾತ್ಮ ಬೇರೆ ಎನ್ನುವುದು ಅಜ್ಞಾನ. ಅದನ್ನು ಕ್ರಿಯಾತ್ಮಕವಾಗಿ ಅತಿಗಳೆಯಬೇಕು. ಭವ. ಶಿವ ಎನ್ನುವ ದ್ವಂದ್ವವನ್ನು ಭಿನ್ನಾತ್ಮಕ ತಿಳುವಳಿಕೆಯನ್ನು ನಷ್ಟಗೊಳಿಸಿ ಅಭಿನ್ನಾತ್ಮಕ ಜ್ಞಾನವನ್ನು ಸಾಧಿಸಬೇಕು. ಆಗ ಆ ಚಿತ್‌ಸ್ವರೂಪಿನ ಇಂಗಿತವೇ 'ಸ್ವಯ' ಎನ್ನುವುದು ಹೊಳೆಯುತ್ತದೆ.

ಮರೆದು ಮೊದಲರಿದ ಬಳಿಕಾ ಸಹಜದೊಳು
ನಿರುಗೆ ನೆಲೆಯಾದುಂದೆಬ | ಮತಿಗೆ
ಪೆರತೆನಿಪ ಶಂಭುಲಿಂಗವಾಗಿ ತಾ
ನುರೆ ಮಾನವನು ಮೀರಿದ ಮೇಲೆ

ಈ ಪ್ರಪಂಚದಲ್ಲಿ ಹುಟ್ಟಿಬಂದಾಗ ಮನುಷ್ಯನಿಗೆ ಸ್ವಸ್ವರೂಪದ ವಿಸ್ಮೃತಿಯುಂಟಾಗುತ್ತದೆ. ಗುರುವಿನ ಉಪದೇಶದಿಂದ ಆ ವಿಸ್ಮೃತಿ ಅಳಿಯುತ್ತದೆ. ಗುರುವು ಆತ್ಮಸ್ವರೂಪವನ್ನು ಸ್ವಸ್ವರೂಪ ಜ್ಞಾನವನ್ನು ಉಂಟು ಮಾಡುತ್ತಾನೆ. ನೀನು ನೀನಲ್ಲ. ಆ ನಿರಾಳ ಸಹಜದ ವ್ಯವಸ್ಥಿತ ವಿನ್ಯಾಸ; ಸಹಜದ ನಿರುಗೆ. ಅರಿವಿನಲ್ಲಿ ಹಮ್ಮು ಬೆರೆತು ಈ ಸಹಜ ಜ್ಞಾನಕ್ಕೆ ಮರವೆ ಅಂಟಿತು; ಬುದ್ಧಿಗೆ ಬೇರೆಯಾಗಿ ಕಂಡಿತು. ನಾನು ಎನ್ನುವುದರಲ್ಲಿಯ ಅಭಿಮಾನ ಅಹಂಕಾರಗಳ ವಲಯವನ್ನು ಅತಿಕ್ರಮಿಸಿದ ಮುಕ್ತಚಿತ್ತ ಆತ್ಮವು ಶಂಭುಲಿಂಗ ರೂಪ— ಪರಮಚೈತನ್ಯದ ಸ್ವರೂಪ. ಆದುದರಿಂದ ಈ ಅಪರೋಕ್ಷವಾದ ನಿಜದ ಅನುಭೂತಿ, ದರ್ಶನ, ಆತ್ಮಗತವಾಗಿ ಪ್ರಪಂಚದಲ್ಲಿ ತಾನಿದ್ದು ಕೇವಲ ಸಾಕ್ಷಿ ಎನ್ನುವ ದಿವ್ಯ ಅನುಭವ ಸ್ಫುರಿಸಿ ನೆಲೆಗೊಂಡಲ್ಲಿ— 'ಸಲೆಸಾಕ್ಷಿ ತಾನೆಂಬ ನಿಜವನರಿದ ಮೇಲೆ ಬಾಧೆ ತನ್ನೊಳು ತೋರದು'.

ಈ ಹಾಡಿನಲ್ಲಿ ಅನುಭಾವ ಹೇಗೆ ಹಂತಹಂತವಾಗಿ ವಿಸ್ತಾರಗೊಂಡಿದೆ ಮತ್ತು ಅದಕ್ಕನುಗುಣವಾದ ಭಾಷೆ ಎಷ್ಟು ಸಹಜವಾಗಿ ರೂಪುಗೊಳ್ಳುತ್ತ ಬಂದಿದೆ ಎನ್ನುವುದನ್ನು ನೋಡಬಹುದು.

ಕನ್ನಡ ನುಡಿ ಮಾನವನ ಯಾವುದೇ ಹಂತದ ದಿವ್ಯಾನುಭವವನ್ನೂ ಸಮರ್ಥವಾಗಿ ವ್ಯಕ್ತಗೊಳಿಸಬಲ್ಲುದು ಎನ್ನುವುದಕ್ಕೆ ನಿಜಗುಣರ ಇಂತಹವೇ ಕೆಲ ಹಾಡುಗಳನ್ನು ಉದಾಹರಿಸಬಹುದು. ಇಲ್ಲಿ ವ್ಯಕ್ತಿನಿಷ್ಠವಾದ ಅನುಭವ ವಸ್ತುನಿಷ್ಠೆಗೆ ಉನ್ಮುಖವಾಗಿದ್ದು ಅಖಂಡ-ದೃಷ್ಟಿಯಿಂದ ಜೀವನವನ್ನು ಪರಿವೀಕ್ಷಿಸುವ ಅಧ್ಯಾತ್ಮಿಕ ಅನುಭೂತಿ ಇದು. ಬಹುಶಃ ಇದಕ್ಕೆ ಯೋಗದ ಪರಿಭಾಷೆಯಲ್ಲಿ ಪೂರ್ಣದೃಷ್ಟಿ ಎಂದು ಕರೆಯಬಹುದು. ಇಂಥ ಪೂರ್ಣದೃಷ್ಟಿಯನ್ನು ಒಳಗೊಂಡ ಸಾಕ್ಷಿ ಪ್ರಜ್ಞೆಯ ಪ್ರಕಾಶದಲ್ಲಿ ಮೈದಾಳಿರುವ ಇನ್ನೊಂದು ಹಾಡನ್ನು ಎತ್ತಿಕೊಳ್ಳೋಣ.

ಆತ್ಮಜ್ಞಾನದ ಎಚ್ಚರದಲ್ಲಿ ಬದುಕಬೇಕು ನಿಜ. ಆದರೆ ವಾಸ್ತವ ಜೀವನದಲ್ಲಿ ತತ್ವಾಚರಣೆ ಅಷ್ಟು ಸುಲಭವಾಗಿ ಸಾಧ್ಯವಾಗುತ್ತದೆಯೆ? ಅದು ಬಲು ಕಠಿಣತರವಾದುದು.

ಮನುಷ್ಯ ತನ್ನ ಸಾಧನೆಗಳಲ್ಲಿ ವಿಫಲವಾಗಿ ಒದ್ದಾಡುವುದನ್ನು ಚಡಪಡಿಸುವುದನ್ನು ನಿಜಗುಣರು ಕಂಡಿದ್ದಾರೆ. ಲೌಕಿಕ ಜೀವನದಲ್ಲಿ ಮಾನವನ ವಿಫಲತೆಯನ್ನು, ಅವನು ನಗೆಗೀಡಾಗಿರುವುದನ್ನು ತಿಳಿಸಿದ್ದಾರೆ. ಇಂತಹ ಒಂದು ಅನುಭವ ಅವರ ಈ ಹಾಡಿನ ವಸ್ತು. ವಿಡಂಬನೆಗೆ ಇದೊಂದು ಉತ್ತಮ ಮಾದರಿ. ಈ ಹಾಡಿನಲ್ಲಿ

ಅವರು ಕೊಡುವ ಉಪಮೆ— ಬಳಸುವ ಭಾಷೆ, ಒಡಮೂಡಿಸುವ ಕಲ್ಪನೆ ಎಲ್ಲವೂ ಇದರ ಒಟ್ಟಂದದ ಶಿಲ್ಪಕ್ಕೆ ಸಹಾಯಕಾರಿಯಾದ ಅಂಶಗಳಾಗಿವೆ.

ಆಡುತ್ತಿದಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿ ಬಲ್ಲವರು ಸಂಸಾರ ನಾಟಕವ || ಪ ||

ಶಿವಶಕ್ತಿಯೆಂಬ ರಂಗದೊಳು ನರನಾಗ ದಾ
ನವ ದೇವತಾದಿ ಪೆಸರಿನ ತನುಗಳೆಂಬ
ವಿವಿಧ ರೂಪಿನ ಬೊಂಬೆಗಳಾತ್ಮರೆಂಬ ಸೂ
ತ್ರವನು ಪವಣಿಸಿ ಮೋಹದೊಡನೆ ಮೇಳೈಸಿ || ೧ ||

ಮೂರವಸ್ಥೆಯು ಮರೆಯೊಳಿರ್ದು ತಾನಲ್ಲಲ್ಲಿ
ಆರು ವಿಕೃತಿಗಳು ನವಗುಣೋನ್ನತಿಗಳೆಂಬ
ಬೇರುವಡೆದಿಹ ಭಾವರಸ ಚಿತ್ರರಚನೆ ಕೆಲ
ಜಾರದಂತಭಿನಯಿಸಿ ತೋರಿ ನಿಯತದೊಳು || ೨ ||

ಪರಮುಕ್ತರೆಂಬ ಕೋವಿದರೊಂದುಗೂಡಿ ಪರ
ತರ ಶಂಭುಲಿಂಗವೆಂಬ ತುಳ ಭೂಭುಜನು
ಪರಿವಿಡಿದು ತನ್ನ ಸನ್ನಿಧಿಯೊಳಿಂತೆಸೆವವರ
ಪರಿಯನವಿಕಾರದಿಂ ದೀಕ್ಷಿಸುತ್ತಿರಲು || ೩ ||

ಜಟಿಲ ಜೀವನದ ಸಂಕೀರ್ಣಾನುಭವದಿಂದ ಈ ಹಾಡು ಆರಂಭಗೊಳ್ಳುತ್ತದೆ. ಸಂಸಾರ ನಾಟಕ ಜಟಿಲ. ಅದರ ಅನೇಕ ಮುಖಗಳು ಈ ನಾಟಕವನ್ನು ಸಂಕೀರ್ಣಗೊಳಿಸುತ್ತವೆ. ಜಟಿಲವಾದ ಸಂಕೀರ್ಣ ಕ್ರಿಯೆಯನ್ನು ಅನುಭವಕ್ಕೆ ವಸ್ತುರೂಪವಾಗಿ ಆಯ್ದುಕೊಳ್ಳಲಾಗಿದೆ. ಸಂಸಾರ ಎನ್ನುವ ನಾಟ್ಯ. ಮಾಯೆ ಎನ್ನುವ ಕಾಮಿನಿ. ಅವಳೇ ಇದನ್ನು ಆಡುತ್ತಿದ್ದಾಳೆ. ಇದು ಎಡೆಬಿಡದ ನರ್ತನ. ಬಲ್ಲವರು ಇದನ್ನು ಅರಿತು ನಿರೀಕ್ಷಿಸಬೇಕು. ಶಿವಶಕ್ತಿಯರ ಅಭಿವ್ಯಕ್ತಿರೂಪವಾದ ಈ ಸೃಷ್ಟಿ ರಂಗ ಮಂಟಪ. ಹಾಡು ಸಹಜವಾದ ಪ್ರತಿಮೆಯಾಗಿ ರೂಪುಗೊಳ್ಳುವುದನ್ನು ಗಮನಿಸಬೇಕು. ಮನುಷ್ಯರು, ನಾಗರು, ರಾಕ್ಷಸರು, ದೇವತೆಗಳು ಈ ಮೊದಲಾದ ಶರೀರಿಗಳು— ಅನೇಕ ಪ್ರಕಾರದ ಸ್ವರೂಪಿನ ಬೊಂಬೆಗಳು. ಈ ಬೊಂಬೆಗಳಿಗೆ— ತಲೆಗಳಿಗೆ— ಜೀವಾತ್ಮರೆಂಬ ದಾರವನ್ನು—ಸೂತ್ರವನ್ನು—ಕಟ್ಟಿ ಮಮಕಾರ ಜೊತೆಗೆ ಮಾಡಿ ಎಲ್ಲವನ್ನೂ ಸಂಗತಗೊಳಿಸಿ ಮೇಳೈಸಿ ಈ ನಾಟ್ಯವನ್ನು ಆಡುತ್ತಿದ್ದಾಳೆ.

ಜಾಗ್ರತ್ ಆದಿ ಅವಸ್ಥೆಗಳಲ್ಲಿ ತಾನು ಮರೆಯಾಗಿದ್ದಾಳೆ. ಎಲ್ಲ ಅವಸ್ಥೆಗಳಲ್ಲೂ ಸಮಯಾನುಸಾರವಾಗಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿಗಳನ್ನು ಉಂಟುಮಾಡಿ ಭಿನ್ನತೆಯನ್ನು ಬಿತ್ತಿ, ಅದಕ್ಕನುಗುಣವಾದ ಹಾವ ಭಾವಗಳನ್ನು

ಅನುಗೊಳಿಸಿ ಆಶ್ಚರ್ಯ, ಅದ್ಭುತ, ರಂಜನೆಗಳನ್ನು ನವರಸಗಳ ಮಯಾಂತರ ಹೊಮ್ಮಿಸಿ. ನಾಟ್ಯದ ಕಳೆಗೆ ಕುಂದು ಬಾರದ ಹಾಗೆ, ಒಂದು ನಿಯತ ಗತಿಯಲ್ಲಿ ಅಭಿನಯಿಸಿ ತೋರಿಸುತ್ತಾಳೆ.

ಇಲ್ಲಿಂದ ಮುಂದಿನ ಮತ್ತು ಕೊನೆಯ ನುಡಿಯಲ್ಲಿ ಈ ಹಾಡು ತನ್ನ ಶಿಲ್ಪದ ಪೂರ್ಣರೂಪಕ್ಕೆ ತಿರುಗುತ್ತದೆ. ಈ ನಾಟ್ಯವನ್ನು ಸೂತ್ರದ ಬೊಂಬೆಯ ಆಟವನ್ನು ಒಬ್ಬ ದೊರೆ ನೋಡುತ್ತಿದ್ದಾನೆ. ಅವರ ಜೊತೆಗೆ ಮುಕ್ತರೆಂಬ ಕುಶಲರು ಏಕಪ್ರಕಾರ ವಾಗಿ ಸಮರಸಗೊಂಡು ಕುಳಿತಿದ್ದಾರೆ. ತನ್ನ ಸನ್ನಿಧಿಯಲ್ಲಿ, ಹತ್ತಿರದಲ್ಲಿ ತಮ್ಮನ್ನು ಅರಿಯದೆ, ಸ್ವಸ್ವರೂಪ ಜ್ಞಾನವಿಲ್ಲದೆ. ಕೇವಲ ಮಾಯೆಯೆಂಬ ಕಾಮಿನಿಯ ಸೂತ್ರ ಚಲನೆಯ ಪರಿಕ್ರಮಕ್ಕೆ ಅನುಗುಣವಾಗಿ ಕುಣಿಯುವ ಗೊಂಬೆಗಳನ್ನು ವಿಕಾರ ರಹಿತತ್ವ ದಿಂದ ನಿರ್ವಿಕಾರ ಮನೋಭಾವನೆಯಿಂದ ನಿರೀಕ್ಷಿಸುತ್ತಿದ್ದಾನೆ.

ಈ ಆಟವನ್ನು ನೋಡಬೇಕು. ಅದಕ್ಕೆ ಬಲ್ಲವರಾಗಬೇಕು. ಅಂತರಂಗದಲ್ಲಿ ಇಂಬು ಗೊಂಡಿರುವ ಶಂಭುಲಿಂಗದ ಅರಿವು— ಆ ಶಂಭುಲಿಂಗವೇ ದೊರೆ. ಅವನನ್ನು ಅರಿಯ ಬೇಕು ; ಪ್ರಜ್ಞಾವಂತರಾಗಬೇಕು.

ಆತ್ಮದ ವಿಸ್ತಾರ ಅಖಂಡವಾಗಿದ್ದರೆ ಅದು ಸಮಷ್ಟಿ ಪ್ರಜ್ಞೆಯಾದೀತು. ಮಾನವ ಚೈತನ್ಯ ಪರಿಪೂರ್ಣವೆನಿಸುವ ಹಾಗೆ ಉದಾತ್ತ ರೀತಿಯ ನಡೆನುಡಿಯ ಮೂಲಕ ಅಭಿವ್ಯಕ್ತಗೊಳ್ಳುವುದು ಈ ಪ್ರಜ್ಞಾವಿಕಾಸದಿಂದಾಗಿ. ಪ್ರಜ್ಞೆ ಎನ್ನುವುದು ವಿಸ್ತಾರ. ಯಾವ ಗುಂಜೂ, ಯಾವ ಸಿಕ್ಕೂ ಅದಕ್ಕಿಲ್ಲ. ಅರಿವಿನ ಮೆದುವಾದ ಮಿಂಚಿನೆಳೆಗಳ ಸಾಂದ್ರತರ ಹಾಸು ಹೊಕ್ಕು ಪ್ರಜ್ಞೆ.

ಆತ್ಮದ ಮೂಲ ದ್ರವ್ಯವಾದ ಸಮಷ್ಟಿ ಚೇತನದ ಅರಿವಿನಿಂದ ತಾನು ಸಾಕ್ಷಿ ಎನ್ನುವ ಪರಮಜ್ಞಾನದ ಸಾಕ್ಷಾತ್ಕಾರವೇ ಇಂತಹ ಹಾಡಿನ ರಚನೆಗೆ ಸಾಮಗ್ರಿ ಎನ್ನುವ ಮಾತನ್ನು ವಿಮರ್ಶಕ ಮರೆಯುವಂತಿಲ್ಲ. ಆದುದರಿಂದ ಜೀವನದ ಸಂಕೀರ್ಣಾನುಭವ, ಕಾವ್ಯಕ್ರಿಯೆಗೆ ಒಳಪಟ್ಟು, ಆಧ್ಯಾತ್ಮಿಕ ಅನುಭೂತಿಯ ಆನಂದಾನುಭವಕ್ಕೆ, ರಸಾವಿಷ್ಕಾ ರಕ್ಕೆ ತಕ್ಕ ಸಾವಯವ ಸಮಗ್ರತೆಯನ್ನು ಪಡೆಯುವುದರಲ್ಲಿ ಸಫಲವಾಗಿದೆ. ನಿಜಗುಣರ ಈ ಹಾಡುಗಳು ಹಾಡಿನ ಸಾಮಾನ್ಯವಾದ ಸೀಮಿತ ಸ್ತರವನ್ನು ಮೀರಿ, ಅರ್ಥವ್ಯಾಪ್ತಿ, ಅಪರಿಮಿತ ವಸ್ತು ಪ್ರತಿರೂಪಗಳನ್ನು ಒಳಗೊಂಡು, ವ್ಯಕ್ತಿನಿಷ್ಠವಾದ ಕಾವ್ಯ ಹೇಗೆ ವಸ್ತುನಿಷ್ಠವಾಗಬಹುದು ಎನ್ನುವುದಕ್ಕೆ ಮಾದರಿಯಾಗಿದೆ.

★ ದೇವೇಂದ್ರಕುಮಾರ ಹಕಾರಿ

ಎರಡು ಕವನಗಳು

೧. ಋಷಿಯ ಮೂಲ

ಅಂವ ಹೊಲಾ ಕೊಂಡು
ತನ್ನದಂತ ಮುಂದ್ರು ಒತ್ತಿ
ಬೇಕಾದ ರೀತೀಲಿ ಸಾಗೋಳಿ ಮಾಡಿದ
ಹದಾ ಮಾಡಿ ಬೀಜಾ ಬಿತ್ತಿದ.
ಆದರ—
ಕಾಳ ಆಗೂವಾಗ
ಜಿಗೀ ರೋಗ ಬಿದ್ದು
ಏನ ಫಲಾ ಪಡೀದನsು ಹೋದ.

ಫಲಕ್ಕ ಮತ್ತ ಮತ್ತ ಪ್ರಯತ್ನ ಮಾಡಿದ
ಫಲಾ ಸಿಗದಕ್ಕ ಹತಾಶನಾದ
ತನ್ನ ಹೊಲಕ್ಕ ತಾ ಜಿಗಂಪ್ಸೆಪಟ್ಟು
ಭೂಮೀನ ಬಂಜೆ ಅಂತ ಆರೋಪಮಾಡಿದ.

ಸುಮ್ಮನ ಇಟ್ಟು ಕೂಡ್ರುದಕ್ಕಿಂತ
ಯಾರಿಗಿ ಕೊಟ್ಟಾದರೂ
ಫಲಾ ಪಡೆವ ಆಶೆಮಾಡಿ
ಹೊಲಾ ಕೊಟ್ಟೇಬಿಟ್ಟ

ತಕ್ಕೊಂಡವ ಬಿಡತಾನ!
ಹದಾನೋಡಿ ಬೀಜಾ ಬಿತ್ತಿದ
ಸರಿಯಾಗಿ ಆರೈಕೆ ಮಾಡಿದ
ಭೂಮಿ ಬೆಸಲಾಯ್ತು
ಫಲ ಕೈಗೆ ಬಂತು

೨. ನರ್ಸ

ಅವರ ಮನೀ ಹೆಣ್ಣ ನಾಯಿ
ವೇಶೀ ಆದರೂ ಭಾಳ ಜಾಬಾದೈತಿ.
ಬಿಳೀ ಬಣ್ಣ ಚಂಚಲ ಕಣ್ಣ
ಸಣ್ಣ ನಡ

ನಡಾ ಬಳಸಿಕೊಂಡ ಅಲ್ಲಾಡು ಬಾಲ್ನ
ನೋಡಿದವರ ಮನಕ್ಕ ಖುಷಿ ಆಗತದ.

ಹೊಟ್ಟಿಗೆ ಹಾಕಿ ಸಾಕಿದವನ ಸುತ್ತ
ಬಾಲಾ ಅಲ್ಲಾಡಸ್ತನ ಇರತದ
ಒಮ್ಮೊಮ್ಮೆ ಭಾಳ ಅವಧಿಮ್ಯಾಗ
ಒಡೆಯನ ಕಂಡಾಗ
ನೆಲದ ಮ್ಯಾಲ ಅಂಗಾತ ಬಿದ್ದು
ಮೈ ನೆಲಕ್ಕ ತಿಕ್ಕತತಿ ಒಡೆಯನ ಕಾಲ ಸವರತೈತಿ.
ಮತ್ತ ಮ್ಯಾಲಕ್ಕ ಎದ್ದ ಅಂಟರಗಾಲ ಕೊಟ್ಟು
ಅವನ ಮುಖಾ ನೆಕ್ಕತೈತಿ.
ಅವನ ಬೆನ್ನ ಹಿತ್ತೀನ ಒಳಗ ಹೋಗತೈತಿ.

ಧನೀ ಮನ್ಯಾಗ ಇಲ್ಲದಾಗ
ಮನೀಗಿ ಸಂಬಂಧಿಸಿದವರು
ಯಾರ ಯಾವಾಗ ಬಂದರೂ
ವಾಸನಾದ ಮ್ಯಾಗ ಗೊತ್ತ ಹಿಡದ
ಕಂಯ್ ಕುಂಯ್ ಅಂತ ರಾಗ ಎಳದ
ಬರಮಾಡಿಕೊಳ್ಳತೈತಿ
ಯಾರಾದರೂ ಹೊರಗಿನವರು
ಇವರ ಗತ್ತ ತಿಳದ
ಚೂರೂ ಚೂರು ಮುಂದ ಒಗದ ಹತ್ತು ಬಂದರ
ಮನೀ ಒಳಗೆ ಇದ್ದವರನ ಮರತ
ಆಗಟ ಬಾಲಾ ಅಲ್ಲಾಡಿಸತೈತಿ.
ಅದಮ್ಯಾಗ ಮತ್ತ ಗುರ್ರಽ ಅಂತೈತಿ.

ಹೊಟ್ಟಿಗಿ ಹಾಕೂ ಧನೀ ಮನೀ ಸೇವಾಕಂತ.
ಅವರ ಮನೀ ಅಂಗಳದಾಗ ಬಿದ್ದಕೊಂಡರೂ
ಅದಕ್ಕ ಬಿಡಾಡಿ ಗಂಡ ನಾಯಿ ಕಾಟ ಜಾಸ್ತಿ.

— ಬಿ. ವ್ಹಿ. ಗುಂಜೆಟ್ಟಿ

ಕನ್ನಡದಲ್ಲಿ ಪ್ರತ್ಯಯಗಳು

ಭಾಷೆಯಲ್ಲಿ ಬಳಸುವ ರೂಪಗಳನ್ನು ಮುಕ್ತಾಕೃತಿಮಾಗಳೆಂದೂ ಬದ್ಧಾಕೃತಿಮಾಗಳೆಂದೂ ಭಾಷಾ ವಿಜ್ಞಾನಿಗಳು ವಿಭಜಿಸುತ್ತಾರೆ. ಯಾವ ಬದ್ಧಾಕೃತಿಮಾಗಳು ಮುಕ್ತ ಇಲ್ಲವೆ ಬದ್ಧಾಕೃತಿಮಾಗಳೊಡನೆ ಸೇರಿಕೊಂಡು ಅರ್ಥ[1] ಬದಲಾವಣೆಗೆ ಕಾರಣವಾಗುತ್ತವೆಯೋ ಅವೇ ಪ್ರತ್ಯಯಗಳು (affixes) ಪ್ರತ್ಯಯಗಳೆಲ್ಲವೂ ಬದ್ಧಾಕೃತಿಮಾಗಳೇ. ಇತರ ಆಕೃತಿಮಾಗಳೊಡನೆ ಸೇರಿಕೊಂಡು ಅರ್ಥಭಿನ್ನತೆಯನ್ನುಂಟು ಮಾಡುವುದೇ ಅವುಗಳ ಕಾರ್ಯ. ಪ್ರಕೃತಿ[2]ಯ ಆದಿಯಲ್ಲಿ ಬರುವ ಪ್ರತ್ಯಯಗಳೇ ಆದಿಪ್ರತ್ಯಯಗಳು (Pre-fixes); ಮಧ್ಯದಲ್ಲಿ ಬರುವುವುಗಳೇ ಮಧ್ಯ ಪ್ರತ್ಯಯಗಳು (In-fixes); ಅಂತ್ಯದಲ್ಲಿ ಬರುವುವುಗಳೇ ಅಂತ್ಯ ಪ್ರತ್ಯಯಗಳು (Suffixes).

ಕನ್ನಡದಲ್ಲಿ ಎರವಲು ರೂಪ[3]ಗಳನ್ನು ಬಿಟ್ಟರೆ ಆದಿ ಹಾಗೂ ಮಧ್ಯ ಪ್ರತ್ಯಯಗಳಿಲ್ಲ. ಇರುವ ಅಂತ್ಯ ಪ್ರತ್ಯಯಗಳು[4] ಕ್ರಿಯೆಯನ್ನು (function) ಅನುಸರಿಸಿ ದ್ವಿವಿಧವಾಗಿವೆ.

೧) ಆಖ್ಯಾತ ಪ್ರತ್ಯಯಗಳು

೨) ತದ್ಧಿತ ಪ್ರತ್ಯಯಗಳು

ವ್ಯಾಖ್ಯೆ:

ವಾಕ್ಯದಲ್ಲಿರುವ ಯಾವುದಾದರೊಂದು ಪ್ರಕೃತಿಗೆ ಸೇರಿ ಉಳಿದ ಘಟಕಗಳೊಡನೆ ಅದರ ವ್ಯಾಕರಣ ಸಂಬಂಧವನ್ನು ವ್ಯಕ್ತಗೊಳಿಸುವ ಪ್ರತ್ಯಯವೇ **ಆಖ್ಯಾತ ಪ್ರತ್ಯಯ.**

ಭಿನ್ನ ರೂಪಗಳನ್ನು ಸಾಧಿಸಲು ಪ್ರಕೃತಿಗೆ ಸೇರುವ ಪ್ರತ್ಯಯವೇ **ತದ್ಧಿತ ಪ್ರತ್ಯಯ.**

ಉದಾಹರಣೆಗೆ {ಹೊಸ} ಎಂಬ ರೂಪಕ್ಕೆ /–ತನ/ ಎಂಬ ಪ್ರತ್ಯಯವನ್ನು ಕೂಡಿಸಿ {ಹೊಸತನ} ಎಂಬ ಭಾವ ನಾಮರೂಪವನ್ನು ಸಾಧಿಸಬಹುದು. ಕಾರಣ /–ತನ/ ಎಂಬುದು ತದ್ಧಿತ ಪ್ರತ್ಯಯ; {ಹೊಸ} ಎಂಬುದು **ತದ್ಧಿತ ಪ್ರಕೃತಿ** (Base).

---

೧. ವಿಲ್ಯಮ್ ಮಾಡ್ತಾ, "ಕನ್ನಡದಲ್ಲಿ ಸಮಾಸ", ಕರ್ನಾಟಕ ಭಾರತಿ, ೪:೪ (೧೯೭೨), ಪು. ೧೧೭. ಅ.ಟಿ. ೮.

೨. ಪ್ರತ್ಯಯವನ್ನು ಸ್ವೀಕರಿಸಬಹುದಾದ ರೂಪಗಳೇ ಪ್ರಕೃತಿಗಳು (Roots) ಅವು ಆಖ್ಯಾತ ಪ್ರತ್ಯಯ (Inflectional affix) ಗಳನ್ನು ಸ್ವೀಕರಿಸುವುದಾದರೆ ಅವುಗಳಿಗೆ ಆಖ್ಯಾತ ಪ್ರಕೃತಿ (Stem) ಎಂದೂ ತದ್ಧಿತ ಪ್ರತ್ಯಯ (Derivational affix) ಗಳನ್ನು ಸ್ವೀಕರಿಸುವುದಾದರೆ ತದ್ಧಿತ ಪಕೃತಿ (Base) ಎಂದೂ ಹೆಸರು.

೩. ಉದಾಹರಣೆಗೆ: ಸತ್-ಭಕ್ತಿ, ಅ-ಶಾಂತಿ, ಸು-ದೈವ, ಕು-ಕವಿ......

೪. ಇನ್ನು ಮುಂದೆ ಅಂತ್ಯಪ್ರತ್ಯಯವನ್ನು ಪ್ರತ್ಯಯವೆಂದೇ ಕರೆಯಲಾಗುವುದು.

{ಹೊಸತನ} ಎಂಬ ರೂಪಕ್ಕೆ /-ಅನ್ನು/ ಎಂಬ ಪ್ರತ್ಯಯವನ್ನು ಹಚ್ಚಿದರೆ ಅದು ವಾಕ್ಯದಲ್ಲಿ ಕರ್ಮಸಂಬಂಧವನ್ನು ಸೂಚಿಸುತ್ತದೆ ವಿನಾ ಬೇರೊಂದು ಹೊಸ ರೂಪವನ್ನು ಸಾಧಿಸುವುದಿಲ್ಲ. ಕಾರಣ /-ಅನ್ನು/ ಎಂಬುದು ಆಖ್ಯಾತ ಪ್ರತ್ಯಯ. ಇದನ್ನು ಸ್ವೀಕರಿಸುವ /ಹೊಸತನ-/ ಎಂಬುದು **ಆಖ್ಯಾತ ಪ್ರಕೃತಿ** (Stem).

ಕನ್ನಡದಲ್ಲಿ ಆಖ್ಯಾತ ಪ್ರತ್ಯಯಗಳು:

೧. ಸಂಭವರೂಪ **(Indicative)** ಪ್ರತ್ಯಯ
೨. ವಿಧಿರೂಪ **(Hortative)** ಪ್ರತ್ಯಯ
೩. ಸಂಯೋಜನಾತ್ಮಕ ಕ್ರಿಯಾ (Verbal Conjunctive) ಪ್ರತ್ಯಯ.
೪. ಸಂಭವನಾ **(Conditional)** ಪ್ರತ್ಯಯ
೫. ವಿಭಕ್ತಿ **(Case)** ಪ್ರತ್ಯಯ
೬. ಬಹುವಚನ **(Plural)** ಪ್ರತ್ಯಯ
೭. ಕಾಲ **(Tense)** ಪ್ರತ್ಯಯ.

೧. ಸಂಭವ ರೂಪ ಪ್ರತ್ಯಯ

ಕ್ರಿಯೆಯ ಇರುವಿಕೆಯನ್ನು ಆಖ್ಯಾತದಲ್ಲಿರುವ ನಾಮರೂಪವನ್ನು ಹೊಂದಿಕೊಂಡು ಆಖ್ಯಾತದಲ್ಲಿ ಸೂಚಿಸುವ ಪ್ರತ್ಯಯವೇ ಸಂಭವರೂಪ ಪ್ರತ್ಯಯ. ಇದು ವರ್ತಮಾನ, ಭೂತ ಮತ್ತು ಭವಿಷ್ಯತ್ತುಗಳಲ್ಲಿ ರೂಪ ವ್ಯತ್ಯಾಸಗೊಳ್ಳುತ್ತದೆ.

ಸಂಭವರೂಪ ಪ್ರತ್ಯಯವು ಕ್ರಿಯೆಯ ಇರುವಿಕೆಯನ್ನು ಸೂಚಿಸುತ್ತಿರುವಲ್ಲಿಯೇ ಲಿಂಗ,[೫] ವಚನ, ಪುರುಷಗಳನ್ನೂ ಸೂಚಿಸುತ್ತದೆಯಾದುದರಿಂದ ಅದು **ಅನೇಕಾರ್ಥಕೃತಿಮಾ** (**Portmanteau morpheme**) ಆಗಿದೆ.

---

೫. "ವಸ್ತುವಿನ ಜ್ಞಾನದ ಅಥವಾ ಅಜ್ಞಾನದ ಕುರುಹಿಗೆ ಲಿಂಗವೆನ್ನುವರು." [ಧೋಂಡೋ ನರಸಿಂಹ ಮುಳಬಾಗಲ, ನುಡಿಗಟ್ಟು, (೧೯೨೪). ಪು. ೩೭].
ಜ್ಞಾನವುಳ್ಳದ್ದು ಮಹತ್‌ಲಿಂಗ, ಜ್ಞಾನವಿಲ್ಲದ್ದು ಅಮಹತ್, ಅಥವಾ ನಪುಂಸಕ ಲಿಂಗ. ಮಹತ್‌ಲಿಂಗದಲ್ಲಿ ಗಂಡನ್ನು ಸೂಚಿಸುವುದೇ ಪುಲ್ಲಿಂಗ; ಹೆಣ್ಣನ್ನು ಸೂಚಿಸುವುದೇ ಸ್ತ್ರೀಲಿಂಗ. ವಸ್ತುಗಳ ಸಂಖ್ಯೆಯೇ ವಚನ, ಏಕವಚನವು ಒಂದೇ ವಸ್ತುವನ್ನು ಹೇಳುತ್ತದೆ. ಬಹುವಚನವು ಅನೇಕ ವಸ್ತುಗಳನ್ನು ಹೇಳುತ್ತದೆ; ಅಥವಾ ಗೌರವವನ್ನು ಸೂಚಿಸುತ್ತದೆ.
ಸರ್ವನಾಮದ ರೂಪವಿಶೇಷವೇ ಪುರುಷ. ಮಾತನಾಡುವ ವ್ಯಕ್ತಿಯನ್ನು ಸೂಚಿಸುವ ರೂಪವೇ ಪ್ರಥಮ ಪುರುಷ (First Person); ಸಂಬೋಧಿತ ವ್ಯಕ್ತಿಯನ್ನು ಸೂಚಿಸುವ ರೂಪವೇ ದ್ವಿತೀಯಾ ಪುರುಷ (Second Person); ಅನ್ಯ ವ್ಯಕ್ತಿಯನ್ನು ಸೂಚಿಸುವ ರೂಪವೇ ತೃತೀಯಾ ಪುರುಷ (Third Person).
ಸಾಂಪ್ರದಾಯಿಕ ವ್ಯಾಕರಣಗಾರರ ಪಾರಿಭಾಷಿಕ ಪ್ರಕಾರ:
First Person 'ಉತ್ತಮ ಪುರುಷ'
Second Person 'ಮಧ್ಯಮ ಪುರುಷ'
Third Person 'ಪ್ರಥಮಾ ಪುರುಷ'

ಸಂಭವರೂಪ ಪ್ರತ್ಯಯಗಳು

ಪುರುಷ	ವರ್ತಮಾನಕಾಲ	ಭೂತಕಾಲ	ಭವಿಷ್ಯತ್ತು
	ಏಕವಚನ		
೧.	ಏನೆ	ಎ(ನು)	ಎ (ನು)
೨.	ಈ	ಎ, ಇ	ಎ, ಇ
೩. ಪು.	ಆನೆ	ಅ (ನು)	ಅನು
ಸ್ತ್ರೀ.	ಆಳೆ	ಅಳು	ಅಳು
ನಪ್.	ಅದೆ	ಇತು	ಉದು ಅದು
	ಬಹುವಚನ		
೧.	ಏವೆ	ಎವು	
೨.	ಈರಿ	ಇರಿ	
೩. ಪು. ಸ್ತ್ರೀ.	ಆರೆ	ಅರು	
ನಪ್	ಅವೆ	ಉವು ಅವು	

ಉದಾಹರಣೆ :

ವರ್ತಮಾನ	ಭೂತ	ಭವಿಷ್ಯತ್ತು
ಮಾಡುತ್ತೇನೆ	ಮಾಡಿದೆ(ನು)	ಮಾಡುವೆ(ನು)
ಮಾಡುತ್ತೀ	ಮಾಡಿದೆ/ದಿ	ಮಾಡುವೆ/ವಿ
ಮಾಡುತ್ತಾನೆ	ಮಾಡಿದ(ನು)	ಮಾಡುವನು
ಮಾಡುತ್ತಾಳೆ	ಮಾಡಿದಳು	ಮಾಡುವಳು
ಮಾಡುತ್ತದೆ	ಮಾಡಿತು	ಮಾಡುವುದು ಮಾಡುವದು
ಮಾಡುತ್ತೇವೆ	ಮಾಡಿದೆವು	ಮಾಡುವೆವು
ಮಾಡುತ್ತೀರಿ	ಮಾಡಿದಿರಿ	ಮಾಡುವಿರಿ
ಮಾಡುತ್ತಾರೆ	ಮಾಡಿದರು	ಮಾಡುವರು
ಮಾಡುತ್ತವೆ	ಮಾಡಿದುವು ಮಾಡಿದವು	ಮಾಡುವುವು ಮಾಡುವವು

೨. ವಿಧಿರೂಪ ಪ್ರತ್ಯಯ :

ಅಪ್ಪಣೆ, ಪ್ರೇರಣೆ, ಹರಕೆ, ಬಯ್ಗಳು, ಕಟ್ಟಳೆ ಮುಂತಾದುವುಗಳನ್ನು ಅಭ್ಯರ್ಥನ ದಲ್ಲಿರುವ ನಾಮರೂಪಕ್ಕೆ ಹೊಂದಿಕೊಂಡು ಆಖ್ಯಾತದಲ್ಲಿ ಸೂಚಿಸುವ ಪ್ರತ್ಯಯವೇ ವಿಧಿರೂಪ ಪ್ರತ್ಯಯ.

ಪ್ರತ್ಯಯ ರೂಪಗಳು :

ಪುರುಷ	ಏಕವಚನ	ಬಹುವಚನ
೧.	–ಅಲೆ ∼ ಅಲಿ[೬]	–ಉವ ಓಣ
೨.	– φ[೭]	–ಇ (ರಿ)
೩.	–ಅಲಿ	–ಅಲಿ

ಉದಾಹರಣೆ :

	ಏಕವಚನ	ಬಹುವಚನ
೧.	ಮಾಡಲೆ, ಮಾಡಲಿ.	ಮಾಡುವ, ಮಾಡೋಣ.
೨.	ಮಾಡು	ಮಾಡಿ, ಮಾಡಿರಿ.
೩.	ಮಾಡಲಿ	ಮಾಡಲಿ.

೩. ಸಂಯೋಜನಾತ್ಮಕ ಕ್ರಿಯಾ ಪ್ರತ್ಯಯ :

ಭಾಷಾಘಟಕಗಳನ್ನು ಸಂಯೋಜಿಸಲು ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯವೇ ಸಂಯೋಜನಾತ್ಮಕ ಕ್ರಿಯಾ ಪ್ರತ್ಯಯ.

೬,೭. ಕೆಲವು ವ್ಯಾಕರಣಗಾರರು /ಉವೆ/ ಪ್ರತ್ಯಯವನ್ನು [illegible] ನೋಡಿ: (ಮುಳಿಯ [illegible] ಅದೇ ಪು. [illegible]). ಆದರೆ ಅದು ಭವಿಷ್ಯತ್ಕಾಲ ಪ್ರತ್ಯಯ + [illegible] ರೂಪ ಪ್ರತ್ಯಯ ಎಂದೆನಿಸುತ್ತದೆ: ಉವ್ + ಎ(ಮ). ಉದಾ:- ಮಾಡ್ + ಉವ್ + ಎ(ಮ) ಮಾಡುವೆ(ಮ). ನೋಡಿ: Spencer, Herold. A Kanarese Grammar (1950)p. 287.

ಸ್ಪೆನ್ಸರನು /–ಅಲಿ/ ಎಂಬ ರೂಪವನ್ನು ಸೂಚಿಸಿ ಅದು ಪ್ರಶ್ನೆಯ ರೂಪದಲ್ಲಿ ಮಾತ್ರ ಬಳಕೆಯಲ್ಲಿದೆಂದು ಹೇಳುತ್ತಾನೆ. ನೋಡಿ: ಅಲ್ಲೇ.

"First person singular imperative is always used in the interrogative sense. Second person singular is having no sufix, expressed by the verb itsself with its enuntiative vowel". H. M. Nayak, Kannada Literal and Colloquial (1967). p 88.

೮ ಇದನ್ನು ಭಾವರೂಪವೆಂದು ವ್ಯಾಕರಣಗಾರರು ಕರೆದಿದ್ದಾರೆ. ನೋಡಿ: ಮುಳಿಯ[illegible], op. cit. ಪು. 103.

ಈ ಪ್ರತ್ಯಯವು ಬಹಳ ಸಂಕೀರ್ಣ (Complex) [illegible]. [illegible] ೧) ಹಲವು ವಾಕ್ಯಗಳನ್ನು ಒಂದೇ ವಾಕ್ಯವನ್ನಾಗಿ ರೂಪಾಂತರಿಸಬಲ್ಲುದು (ನಾಳೆ ಬರುತ್ತೇನೆ [illegible] ==> ನಾಳೆ ಬರಲು [illegible]); ೨) ಕಾಲಸೂಚಕ ಕ್ರಿಯಾ ವಿಶೇಷಣ (Adverb of time) ಆಗಬಲ್ಲುದು (ನಾಳೆ ಬರಲು [illegible] ಅದ್ದಾಗ ನಾಳೆ ಬಂದಾಗ [illegible]); ಉದ್ದೇಶವನ್ನು ಸೂಚಿಸಬಲ್ಲುದು ([illegible] ಮಾಡಲು ನಿಮ್ಮ ಮನೆಗೆ ಬರುವೆ) ಇತ್ಯಾದಿ.

ವಿವಿಧಾರ್ಥದ ಈ ಹಂತಗಳು ವಾಕ್ಯಶಾಸ್ತ್ರ ವಿಶ್ಲೇಷಣೆ (Syntactic analysis) ಮಾತ್ರ [illegible]ಸಿಗಬಲ್ಲವು. ಮೇಲ್ನೋಟಕ್ಕೆ [Surface structure] ಮಾತ್ರ ಈ ಪ್ರತ್ಯಯ ಸಂಯೋಜನ ಕಾರ್ಯ ಜರುಗಿಸುವುದು. ಆದರೂ [illegible] ಅವನ್ನೇ ಪ್ರಸ್ತುತ ವ್ಯಾಖ್ಯೆಯಲ್ಲಿ ಗಮನಿಸಲಾಗಿದೆ.

ಈ ಪ್ರತ್ಯಯಕ್ಕೆ ಮೂರು ರೂಪಗಳಿವೆ: /ಅ,–ಅಲ್, –ಅಲಿಕ್ಕೆ/. **ಉದಾಹರಣೆ:** ೧) ನೀನು ಉಡುಪಿಗೆ **ಹೋಗಬೇಕು.** ೨) ಶಾಂತಕ್ಕನಿಗೆ ಧರ್ಮಸ್ಥಳಕ್ಕೆ **ಹೋಗಲಿದೆ.** ೩) ನಾಳೆ ನನಗೆ ಕಾರಂತರ ಮನೆಗೆ **ಹೋಗಲಿಕ್ಕಾ**ಗುವುದಿಲ್ಲ.

೪) ಸಂಭವನಾ ಪ್ರತ್ಯಯ :

ಕ್ರಿಯೆ ಸಂಭವಿಸಬಹುದೆಂದು ಸೂಚಿಸಲು ಭೂತ ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯವೇ ಸಂಭವನಾ ಪ್ರತ್ಯಯ: /–ಅರೆ/.

ಉದಾಹರಣೆ :

ಮಾಡಿದ್ + ಅರೆ —> ಮಾಡಿದರೆ
ಕುಡಿದ್ + ಅರೆ —> ಕುಡಿದರೆ

೫. ವಿಭಕ್ತಿ ಪ್ರತ್ಯಯ :

ವಾಕ್ಯದಲ್ಲಿ ನಾಮರೂಪಕ್ಕೆ ಕ್ರಿಯಾದಿರೂಪಗಳೊಡನೆ ಇರುವ ವ್ಯಾಕರಣ ಸಂಬಂಧವನ್ನು ಸೂಚಿಸಲು ನಾಮ ಪ್ರಕೃತಿಗೆ ಸೇರುವ ಪ್ರಕೃತಿಯೇ ವಿಭಕ್ತಿಪ್ರತ್ಯಯ. ಇದು ಏಕವಚನದಲ್ಲಿ ನೇರವಾಗಿ ನಾಮ ಪ್ರಕೃತಿಯೊಡನೆಯೂ ಬಹುವಚನದಲ್ಲಿ ವಚನ ಪ್ರತ್ಯಯದ ಬಳಿಕವೂ ಸೇರುತ್ತದೆ.

ವಿಭಕ್ತಿ ಪ್ರತ್ಯಯಗಳು ನಾಲ್ಕು[೯] :

ಕನ್ನಡ ಹೆಸರು	ಆಂಗ್ಲ ಹೆಸರು	ಪ್ರತ್ಯಯ	ಪರಿಸರ
ಕರ್ಮ	Objective	–[ϕ / ಅನ್ನು]	/ [ನಪ್. ಪ್ರಕೃತಿ / ಇತರೆಡೆ]–
ಕರಣ	Instrumental	–ಇಂದ	

---

೯. ವ್ಯಂಜನಾಂತ ಪ್ರಕೃತಿಗಳು ಉಕಾರಾಂತವಾಗುವುದು ಇಂದಿನ ಕನ್ನಡದ ರೂಪ ವೈಶಿಷ್ಟ್ಯವೇ ಹೊರತು ಅದು ಕರ್ತೃ (ಪ್ರಥಮ) ವಿಭಕ್ತಿ ಪ್ರತ್ಯಯವಲ್ಲ. ಹೆಚ್ಚಿನ ವಿವರಕ್ಕೆ ನೋಡಿ: i) ಕನ್ನಡ ಕೈಪಿಡಿ–೧ (೧೯೫೫). ಪು ೩೩೯–೪೦, ii) Herold spencer, **Op cit,** p. 55. f. n. l and **P. 9l. (l).**

ಕೇಶಿರಾಜನಿಗೂ ಕರ್ತೃ ವಿಭಕ್ತಿಯ ಬಗ್ಗೆ ಅನುಮಾನವಿದ್ದಿರಬೇಕು. ಆತನ ೧೨೧ನೆಯ ಸೂತ್ರ ಹಾಗೂ ಅದರ ವೃತ್ತಿಯನ್ನು ಓದಿದರೆ ಕರ್ತೃ ವಿಭಕ್ತಿಯ ವಿಷಯದಲ್ಲಿರುವ ಹೊರಳಾಟವನ್ನು ತಿಳಿದುಕೊಳ್ಳಬಹುದು. **ನೋಡಿ:** ಡಿ. ಎಲ್. ಎನ್. **ಶಬ್ದಮಣಿದರ್ಪಣ.**

ಕನ್ನಡದಲ್ಲಿ ಅಪಾದಾನ (ಪಂಚಮಿ) ವಿಭಕ್ತಿಯ ಪ್ರಯೋಗವೂ ಪ್ರತ್ಯಯವೂ ಕಂಡು ಬರುವುದಿಲ್ಲ. ವಿವರಕ್ಕೆ **ನೋಡಿ:** i) ಕ. ಕೈಪಿಡಿ. ಅದೇ. ಪುಟ ೩೮ ಹಾಗೂ ೩೩೫ ii) Spencer, **Op.** cit. pp. 36-7.

ಸಂಬೋಧನಾ ವಿಭಕ್ತಿಯಲ್ಲಿಯೂ ಕರ್ತೃವಿನಲ್ಲಿರುವಂತೆ ಪ್ರಕೃತಿಯನ್ನೇ ಬಳಸುವುದರಿಂದ ಅದಕ್ಕೆ ಪ್ರತ್ಯೇಕ ಪ್ರತ್ಯಯವನ್ನು ಸೂಚಿಸಬೇಕಾಗಿಲ್ಲ. ವಿವರಕ್ಕೆ ನೋಡಿ: **ಕ. ಕೈಪಿಡಿ, ಅದೇ.** ಪು. ೪೧.

ಸಂಪ್ರದಾನ	Dative	– [ಕ್ಕೆ ಗೆ ಇಗೆ]	/	[ಮಧ್ಯಸ್ವರ ಪೂರ್ವಸ್ವರ { ಇತರ ಸ್ವರ ವ್ಯಂಜನ }] ಅತ್ಯ ಪ್ರಕೃತಿ[೧೦]—
ಸಂಬಂಧ	genitive	–ಅ		

೬. ಬಹುವಚನ ಪ್ರತ್ಯಯ :

ಆಖ್ಯಾತದಲ್ಲಿರುವ ಕ್ರಿಯಾಪದದೊಡನೆ ಬಹುವಚನ ಸಂಬಂಧವನ್ನು ಸೂಚಿಸಲು ನಾಮಪ್ರಕೃತಿಗೆ ಸೇರುವ ಪ್ರತ್ಯಯವೇ ಬಹು ವಚನ ಪ್ರತ್ಯಯ. ಬಹುವಚನ ಪ್ರತ್ಯಯದ ರೂಪಗಳ ಪರಸರ ಇಂತಿದೆ :

[ಕಳ್ ದಿರ್ ಅಂದಿರ್ ಅರ್]	/	[ಅಮಹತ್‌ಲಿಂಗಿ ಹಾಗೂ ವಿಶಿಷ್ಟ ನಾಮಗಣ[೧೧] ಮಹತ್ ನಾಂತ್ಯ } ಬಂಧು ಮಹತ್ ನಾಂತ್ಯವಲ್ಲದ } ವಾಚಕ ಇತರ ನಾಮ]	ಪ್ರಕೃತಿ——

ಉದಾಹರಣೆಗಳು :

ಆನೆ + ಕಳ್ –> ಆನೆಗಳು[೧೨]
ಮಂತ್ರಿ + ಕಳ್ —> ಮಂತ್ರಿಗಳು
ಅಕ್ಕನ್ + ದಿರ್ —> ಅಕ್ಕಂದಿರು
ತಂಗಿ + ಅಂದಿರ್ —> ತಂಗಿಯಂದಿರು
ಹುಡುಗಿ + ಅರ್ —> ಹುಡುಗಿಯರು

೭. ಕಾಲಪ್ರತ್ಯಯ :

ಕ್ರಿಯೆಯ ಇರುವಿಕೆಗೂ ಅದು ಸಂಭವಿಸುವ ಕಾಲಕ್ಕೂ ಇರುವ ಸಂಬಂಧವನ್ನು ಸೂಚಿಸಲು ಕ್ರಿಯಾಪ್ರಕೃತಿಗೆ ಸೇರುವ ಪ್ರತ್ಯಯವೇ ಕಾಲಪ್ರತ್ಯಯ. ಕಾಲಪ್ರತ್ಯಯದಲ್ಲಿ ಮೂರು ವಿಧ :

---

೧೦. ಕನ್ನಡ ನಾಮ-ಪ್ರಕೃತಿ (Root, ಬೇರು)ಗಳ ವರ್ಗೀಕರಣಕ್ಕೂ ಅವುಗಳೊಡನೆ ವಿಭಕ್ತಿ ಪ್ರತ್ಯಯಗಳು ಕೂಡುವಲ್ಲಾಗುವ ಸಂಧಿಗಳ ವಿವೇಚನೆಗೂ ನೋಡಿ: ವಿಲ್ಯಮ್ ಮಾಡ್ತಾ, "ಗ್ರಂಥಸ್ಥ ಕನ್ನಡದ ಸಂಧಿ ನಿಯಮಗಳು" Op. cit. ೩:೪ (೧೯೭೧), ೧೨೪.

೧೧. ವಿಶಿಷ್ಟ ನಾಮಗಣ : ಸ್ವಾಮಿ, ಗುರು ವಿದ್ಯಾರ್ಥಿ, ಕವಿ, ಸೆಟ್ಟಿ, ಮಂತ್ರಿ, ರಾಜಕಾರಣಿ, ಅಧಿಪತಿ....

೧೨. ಇಲ್ಲಿ ಆಗುವ ಸಂಧಿಯ ಬಗ್ಗೆ ನೋಡಿ : ವಿಲ್ಯಮ್ ಮಾಡ್ತಾ, ಅದೇ, ೧.೨೬, ೧.

i) ವರ್ತಮಾನ-ಭವಿಷ್ಯತ್ಕಾಲ ಪ್ರತ್ಯಯ : / —ಉತ್ತ್ / ನಡೆಯುವ ಕಾಲ ಹಾಗೂ ನಡೆಯುತ್ತಿರುವ ಕಾಲ-ಸಂಬಂಧವನ್ನು ಸೂಚಿಸುವ ಪ್ರತ್ಯಯ: ಹಾಡ್ + ಉತ್ತ್ + ಆಳೆ —> ಹಾಡುತ್ತಾಳೆ.

ii) ಭವಿಷ್ಯತ್ಕಾಲ ಪ್ರತ್ಯಯ : /- ಉವ್ / ನಡೆಯಲಿರುವ ಕಾಲ ಸಂಬಂಧವನ್ನು ಮಾತ್ರ ಸೂಚಿಸುವ ಪ್ರತ್ಯಯ ಹಾಡ್+ಉವ್+ಆಳು —> ಹಾಡುವಳು.

iii) ಭೂತಕಾಲ ಪ್ರತ್ಯಯ : / - ದ್ / ನಡೆದು ಹೋದ ಕಾಲ-ಸಂಬಂಧವನ್ನು ಸೂಚಿಸುವ ಪ್ರತ್ಯಯ. ಇದಕ್ಕೆ ಮೂರು ರೂಪಗಳಿವೆ. / ~ ಇದ್ ~ ದ್ ~ ತ್ /. ಅವುಗಳ ಪರಿಸರ[೧೨] ಇಂತಿದೆ.

೧. —ಇದ್ / { (c) $\bar{V}$ c ; c V c v c ; (c) v { ಟ್ಟ್ ; //N//c } }[೧೩] ರೂಪದ ಕ್ರಿಯಾ ಪ್ರಕೃತಿ —

ಉದಾಹರಣೆಗಳು

ಹೋಗ್ (i, ii)		ಹೋದನು
ಆಗ್ (i, ii)		ಆದನು
ನೋಡ್		ನೋಡಿದನು
ಓಡ್		ಓಡಿದನು
ಮಲಗ್	+ ಇದ್ + ಅನ್ —>	ಮಲಗಿದನು
ಅಟ್ಟ್		ಅಟ್ಟಿದನು
ಕಟ್ಟ್		ಕಟ್ಟಿದನು
ನಂಬ್		ನಂಬಿದನು
ಕುಂಟ್		ಕುಂಟಿದನು

[೧೪]

೧೨. ಇಷ್ಟರವರೆಗೆ ಕನ್ನಡ ಭೂತಕಾಲ ಪ್ರತ್ಯಯಗಳ ಧ್ವನಿ ಮಾತ್ರಕ ಪರಿಸರ (Phonological conditioning) ಕೊಡುವಲ್ಲಿ ಮಾಡಿದ ಪ್ರಯತ್ನ ನನ್ನ ಗಮನಕ್ಕೆ ಬಂದಿಲ್ಲ. ಅಷ್ಟೇ ಅಲ್ಲ, "The distribution of these allamorphs is mainly ditermined byindividual items" ಎಂದು H. M. Nayak ಕನ್ನಡ ಭೂತಕಾಲ ಪ್ರತ್ಯಯದ ರೂಪಗಳ ಬಗ್ಗೆ ಹೇಳಿದ್ದಾರೆ. ನೋಡಿ Op. cit. P. 8 ಈ ಪ್ರತ್ಯಯಗಳ ಪರಿಸರದ ಜೊತೆ [illegible] ಕ್ರಿಯಾ-ಪ್ರಕೃತಿಗಳ ವರ್ಗೀಕರಣವನ್ನು ಇಲ್ಲಿ [illegible] ಕ್ರಿಯಾ-ಪ್ರಕೃತಿಗಳ ವರ್ಗೀಕರಣಕ್ಕೆ ನೋಡಿ: ವಿಲ್ಯಮ್ ಮಾಡ್ತಾ, ಅದೇ.

೧೩. c = ವ್ಯಂಜನ, V = ಸ್ವರ, f non-front = ಹಿಂದಿನೇತರ, //N// = ಅನುನಾಸಿಕಗಳು.

೧೪. ಕಂಸದಲ್ಲಿರುವ [illegible] ಅಂಕೆ [illegible] ಕನ್ನಡ ಅಂಕೆ ಸಂಧಿ ನಿಯಮಗಳನ್ನೂ ಸೂಚಿಸುತ್ತದೆ.

೨. — ದ್ / { (c) V c V ; (c) V̆ ಯ್ ; (c) V̄ {ಣ್, ಳ್} ; (c) V {ನ್ಗ್, ರ್, ಲ್} } ರೂಪದ ಕ್ರಿಯಾ ಪ್ರಕೃತಿ —

ಉದಾಹರಣೆಗಳು :

ಇಳಿ		ಇಳಿದನು
ತಿಳಿ		ತಿಳಿದನು
ಆಯ್		ಆಯ್ದನು
ಕಾಯ್		ಕಾಯ್ದನು
ಬಯ್		ಬಯ್ದನು
ಕಾಣ್ (೨)		ಕಂಡನು
ಬೀಳ್ (೨, ೪)		ಬಿದ್ದನು
ಅನ್ನ್ (೨)	+ ದ್ + ಅನ್ —>	ಅಂದನು
ಕೊನ್ನ್ (")		ಕೊಂದನು
ಬನ್ನ್ (")		ಬಂದನು
ನೊನ್ನ್ (")		ನೊಂದನು
ಬೆನ್ನ್ (")		ಬೆಂದನು
ಮಿನ್ನ್ (")		ಮಿಂದನು
ಇರ್ರ್ (೨,೫)		ಇದ್ದನು
ಗೆಲ್ಲ್ (೨,೫)		ಗೆದ್ದನು

೩. —ತ್ / { [illegible] ; (c) V̄ {ಲ್, ನ್} ; (c) V̄ c V, (c) V̄ c {//X//[೧೬]} } ರೂಪದ ಕ್ರಿಯಾಪ್ರಕೃತಿ—

೧೬. //X// ಇದು [illegible] (Morpho-Phoneme) [illegible] (Item-Focus) ಬಗ್ಗೆ ನೋಡಿ: Robert Hall, *Introductory Linguistics*, P. 123.

ಉದಾಹರಣೆಗಳು

ಉಡ್ (೩,೪)		ಉಟ್ಟನು
ಹೊಗ್ (೪)		ಹೊಕ್ಕನು
ಅಳ್ (೪)		ಅತ್ತನು
ಉಣ್ಣ್ (೨,೩,೪)		ಉಂಡನು
ಹೆರ್ (೪)		ಹೆತ್ತನು
ಸೋಲ್ (೧)		ಸೋತನು
ಆನ್ (೨)	+ ತ್ + ಅನ್ –>	ಆಂತನು
ನೋನ್ (೨)		ನೋಂತನು
ಸೀನ್ (೨)		ಸೀಂತನು
ಅವಿ//X// (೧)		ಅವಿತನು
ಕಲಿ//X// (೧)		ಕಲಿತನು
ಸಾಯ್//X//(೧,೩,೪)		ಸತ್ತನು
ಕೀಳ್ //X// (೧,೩.೪)		ಕಿತ್ತನು

ಕನ್ನಡದಲ್ಲಿ ತದ್ಧಿತ ಪ್ರತ್ಯಯಗಳು :

೧. –ಇಸು ಪ್ರತ್ಯಯ

೨. ನಾಮ (nominal) ಪ್ರತ್ಯಯ

೩. ನಿಷ್ಕ್ರಿಯಾ ನಾಮ (Deverbative nominal) ಪ್ರತ್ಯಯ

೪. ನಿಷ್ಕ್ರಿಯಾ ನಾಮ ವಿಶೇಷಣ(Deverbative adjectival)ಪ್ರತ್ಯಯ

೫. ನಿಷ್ಕ್ರಿಯಾ ನಿಷೇಧನಾಮ ವಿಶೇಷಣ (Deverbative negative adjectival) ಪ್ರತ್ಯಯ

೬. ನಿಷೇಧ ಕ್ರಿಯಾ ವಿಶೇಷಣ (Negative adverbial) ಪ್ರತ್ಯಯ

೧. / –ಇಸು / ಪ್ರತ್ಯಯ

–ಇಸು ಪ್ರತ್ಯಯವು ಬೇರೆ ಬೇರೆ ರೂಪಗಣಗಳಿಗೆ ಸೇರಬಹುದು. ಆ ರೂಪಗಣಗಳನ್ನು ಹೊಂದಿಕೊಂಡು ಭಿನ್ನಭಿನ್ನ ಗಣಗಳ ರೂಪಗಳನ್ನು ಅದು ಸಾಧಿಸುತ್ತದೆ. ಕ್ರಿಯಾ-ಪ್ರಕೃತಿಗಳೊಡನೆ ಸೇರಿಕೊಂಡು ಪ್ರೇರಕ ರೂಪಗಳನ್ನೂ (Causatives) ನಾಮ ಪ್ರಕೃತಿ ಹಾಗೂ ಅವ್ಯಯಗಳೊಡನೆ (Indeclinables) ಸೇರಿಕೊಂಡು ಕ್ರಿಯಾ ರೂಪಗಳನ್ನೂ ಸಾಧಿಸುತ್ತದೆ.

ಉದಾಹರಣೆ :

ಓಡ್	+ ಇಸು =>	ಓಡಿಸು	ಪ್ರೇರಕ	ರೂಪ
ತಿಳಿ		ತಿಳಿಸು		
ಪೂಜೆ		ಪೂಜಿಸು	ಕ್ರಿಯಾ	
ಕನ್ನಡ		ಕನ್ನಡಿಸು		
ಥಳಥಳ		ಥಳಥಳಿಸು		

೨. ನಾಮ ಪ್ರತ್ಯಯ

ಒಂದು ನಾಮ ಅಥವಾ ವಿಶೇಷಣದಿಂದ ಇನ್ನೊಂದು ನಾಮರೂಪವನ್ನು ಸಾಧಿಸಲು ಹಚ್ಚುವ ಪ್ರತ್ಯಯವೇ ನಾಮ ಪ್ರತ್ಯಯ.

ಉದಾಹರಣೆ :

ಹುಡುಗ	+	ಇ	——>	ಹುಡುಗಿ
ಜಾಣ		ಎ		ಜಾಣೆ
ಬೀಗ		ಇತಿ		ಬೀಗಿತಿ
ಗಾಣಿಗ		ಇತ್ತಿ		ಗಾಣಿಗಿತ್ತಿ
ಉಪಾಧ್ಯಾಯ		ಇನಿ		ಉಪಾಧ್ಯಾಯಿನಿ
ಪಟೇಲ		ಇಕೆ		ಪಟೇಲಿಕೆ
ಕನ್ನಡ		ಇಗ		ಕನ್ನಡಿಗ
ಅ		ಅನ್		ಅವನು
ಈ		ಅಳ್		ಇವಳು
ಅ		ದು		ಅದು
ತೆಂಕು		ಅಣ		ತೆಂಕಣ
ಒಂದು		ಅನೆಯ		ಒಂದನೆಯ

ಕುಂಬ	+	ಆರ	==>	ಕುಂಬಾರ
ತೋಟ		ಗಾರ		ತೋಟಗಾರ
ಮಾತು		ಆಳಿ		ಮಾತಾಳಿ
ಹಾವು		ಆಡಿಗ		ಹಾವಾಡಿಗ
ಕೆನ್		ಪು		ಕೆಂಪು
ಧನ		ಇಕ		ಧನಿಕ
ಮನೆ		ತನ		ಮನೆತನ
ಹಣ		ವಂತ		ಹಣವಂತ
ಅಗಸ		ಗಿತ್ತಿ		ಅಗಸಗಿತ್ತಿ
ಅ		ನ್ನಹ		ಅನ್ನಹ
ಅ		ಷ್ಟು		ಅಷ್ಟು
		...		

೩). **ನಿಷ್ಕ್ರಿಯಾನಾಮ ಪ್ರತ್ಯಯ ;**

ಕ್ರಿಯಾ ರೂಪಗಳಿಂದ ನಾಮರೂಪಗಳನ್ನು ಸಾಧಿಸಲು ಕ್ರಿಯಾ ಪ್ರಕೃತಿಗೆ ಹಚ್ಚುವ ಪ್ರತ್ಯಯವೇ ನಿಷ್ಕ್ರಿಯಾನಾಮ ಪ್ರತ್ಯಯ.

ಉದಾಹರಣೆ :

ನಂಬ್	+	ಇಕೆ	==>	ನಂಬಿಕೆ
ಹೊಲಿ		ಗೆ		ಹೊಲಿಗೆ
ತೊಡ್		ಇಗೆ		ತೊಡಿಗೆ
ನಗ್		ಎ		ನಗೆ
ಕುಂಟ್		ಅ		ಕುಂಟ
ನಡ್		ಅತೆ		ನಡತೆ
ಕಟ್ಟ್		ಅಡ		ಕಟ್ಟಡ
ಬರೆ		ಅಹ		ಬರಹ
ನೆನೆ		ಅಪು		ನೆನಪು
ಕುಡಿ		ಉಕ		ಕುಡುಕ
ಕಟ್ಟ್		ಓಣ		ಕಟ್ಟೋಣ
ಕಾಣ್		ಕೆ		ಕಾಣ್ಕೆ
ಕುಣಿ		ತ		ಕುಣಿತ
ಅರಿ		ವು		ಅರಿವು
ಹುಟ್ಟ್		ಉವಳಿ		ಹುಟ್ಟುವಳಿ
ಬಿಡ್		ಉಗಡೆ		ಬಿಡುಗಡೆ
ತೇಗ್		ф		ತೇಗು
		...		

ಕನ್ನಡದಲ್ಲಿ ಆಂತರಿಕ ಬದಲಾವಣೆ (Internal change) ಎಂಬ ವ್ಯಾಕರಣ ಪ್ರಕ್ರಿಯೆ (grammatical process) ಯಿಂದಾಗಿ ಕೆಲವು ಕ್ರಿಯಾರೂಪಗಳು ನಾಮಗಳಾಗಿ ರೂಪಾಂತರಗೊಳ್ಳುತ್ತವೆ.

ಉದಾಹರಣೆಗೆ :

[ಕೆಡ್ / ಬಿಡ್] + ನಿಷ್ಕ್ರಿಯಾನಾಮ ಪ್ರತ್ಯಯ = = > [ಕೇಡು / ಬೀಡು] = >

೪) ನಿಷ್ಕ್ರಿಯಾ ನಾಮವಿಶೇಷಣ ಪ್ರತ್ಯಯ :

ಕ್ರಿಯಾರೂಪವನ್ನು ನಾಮವಿಶೇಷಣವನ್ನಾಗಿ ರೂಪಾಂತರಿಸಲು ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯವೇ ನಿಷ್ಕ್ರಿಯ ನಾಮ ವಿಶೇಷಣ ಪ್ರತ್ಯಯ : / – ಅ /. ಇದು ಭೂತ ಮತ್ತು ಭವಿಷ್ಯತ್ ಕ್ರಿಯಾ ಪ್ರಕೃತಿಗೆ ಸೇರುತ್ತದೆ.

ಉದಾಹರಣೆ :

ಮಾಡ್ + [ಇದ್ / ಉವ್] + ಅವ = = > [ಮಾಡಿದ / ಮಾಡುವ] = >

೫) ನಿಷ್ಕ್ರಿಯಾ ನಿಷೇಧ ನಾಮ ವಿಶೇಷಣ ಪ್ರತ್ಯಯ :

ಕ್ರಿಯಾಪದವನ್ನು ನಿಷೇಧ ನಾಮ ವಿಶೇಷಣವನ್ನಾಗಿ ರೂಪಾಂತರಿಸಲು ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯವೇ ನಿಷ್ಕ್ರಿಯಾ ನಿಷೇಧನಾಮ ವಿಶೇಷಣ ಪ್ರತ್ಯಯ : /— ಅದ /

ಉದಾಹರಣೆ :

[ಮಾಡ್ / ತಿನ್ನ್] + ಅದ = = > [ಮಾಡದ / ತಿನ್ನದ]

೬) ನಿಷೇಧ ಕ್ರಿಯಾ ವಿಶೇಷಣ ಪ್ರತ್ಯಯ :

ಕ್ರಿಯಾ ರೂಪವನ್ನು ನಿಷೇಧ ಕ್ರಿಯಾ ವಿಶೇಷಣವನ್ನಾಗಿ ರೂಪಾಂತರಿಸಲು ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯವೇ ನಿಷೇಧ ಕ್ರಿಯಾ ವಿಶೇಷಣ ಪ್ರತ್ಯಯ.

ಉದಾಹರಣೆ :

$$\begin{bmatrix} \text{ಕುಡಿ} \\ \text{ತಿನ್} \end{bmatrix} + \text{ಅದೆ} = = > \begin{bmatrix} \text{ಕುಡಿಯದೆ} \\ \text{ತಿನ್ನದೆ} \end{bmatrix}$$

ಸಂಧಿ ನಿಯಮಗಳು

೧. $$\begin{bmatrix} \left\{\begin{matrix} \text{ಲ್} \\ //x// \end{matrix}\right. \\ s \left\{\begin{matrix} \text{ಇದ್} \\ \text{ದ್} \end{matrix}\right. \end{bmatrix} \;\&\; \longrightarrow \phi \;/\; — \begin{bmatrix} \text{ಭೂತ ಪ್ರತ್ಯಯ} \\ \\ \&\ \text{ಇತು} \end{bmatrix}$$

೨. $$\begin{bmatrix} c_1 \; c_1 \\ (c)\ \breve{V}\ \text{ನ್} \end{bmatrix} \longrightarrow \begin{bmatrix} c_1 \\ (c)\ \breve{V} \end{bmatrix} \;/\; — \ \text{ಭೂತ. ಪ್ರ.}$$

೩. $$\begin{bmatrix} \bar{V} \\ c \end{bmatrix} \longrightarrow \begin{bmatrix} v \\ \underset{\cdot}{c} \end{bmatrix} \;/\; \begin{bmatrix} -c\ c \\ \underset{\cdot}{c}\ — \end{bmatrix}$$

೪. $$\begin{bmatrix} c\,+ \\ c\,- \\ c_1 \\ c_2 \end{bmatrix} \longrightarrow \begin{bmatrix} c\,- \\ c\,+ \\ c_2 \\ c_1 \end{bmatrix} \;/\; \begin{bmatrix} c\,- \\ c\,+ \\ c_2 \\ c_1 \end{bmatrix}$$

೫, $—\text{ಇದ್} \longrightarrow \&\ \text{ದ್} \;/\; (c)\ \bar{V}\ \&\ —$

ರೂಪಾಂತರ ನಿಯಮಗಳು :

i	ಹೋಗ್ ಆಗ್		ಹೋ ಆ		& ಇದ್
ii	ಹೋ ಆ ಬನ್ನ್ ತನ್ನ್ ಕೊನ್ನ್ ಮಿನ್ನ್ ನೊನ್ನ್ ಬೆನ್ನ್	& = >	ಹೋಗ್ ಆಗ್ ಬರ್ ತರ್ ಕೊಲ್ಲ್ ಮಿಯ್ಯ್ ನೋಯ್ಯ್ ಬೇಯ್ಯ್	& /—	{ # { V
iii	ಆ ಈ		ಅ ಇ		ಅಕ್ಷರ
iv	ಉತ್ತ್ ಇವ್		{ ಉತ್ತ { ಉತ್ತಾ ಇ		ಕ್ರಿಯಾರೂಪ

ಬಳಸಿಕೊಂಡ ಕೃತಿಗಳ ಸೂಚಿ

ಮುಳಬಾಗಿಲ, ವೈ. ವಾ. ಘೋಂಡೋ ನರಸಿಂಹ

೧೯೨೪ **ನುಡಿಗಟ್ಟು,** ಧಾರವಾಡ: ವೈ. ವಾ. ಘೋಂ. ನ. ಮುಳಬಾಗಿಲ.

೧೯೫೫ **ಕನ್ನಡ ಕೈಪಿಡಿ** – ೧. ಮೈಸೂರು: ವಿಶ್ವವಿದ್ಯಾಲಯ.

ಮಾಡ್ತಾ, ವಿಲ್ಯಮ್,

"ಗ್ರಂಥಸ್ಥ ಕನ್ನಡದ ಸಂಧಿ ನಿಯಮಗಳು" **ಕರ್ನಾಟಕ ಭಾರತಿ,** ೩ : ೪, ೧೯೬೧.

——— "ಕನ್ನಡದಲ್ಲಿ ಸಮಾಸ", **ಕರ್ನಾಟಕ ಭಾರತಿ,** ೪ : ೪, ೧೯೭೨.

Andronov, M. S.

1969 The Kannada Language, Moscow : 'NAUKA' Publishing House.

Krishnaswamy, N.

1971 **An Introduction to Linguistics for Language Teachers** Bombay : Somaiya Publications Pvt. Ltd.

Hall Robert A. (Jr.)

1969 **Introductory Linguistics,** Delhi : Motilal Banarsidass.

Nayak, H. M.

1967 **Kannada Literary and Colloquial,** Mysore : Rao and Raghavan.

Spencer, Herold,

1950 **A Kanarese Grammar,** Mysore : Wesley Press.

★ ವಿಲ್ಯಮ್ ಮಾಡ್ತಾ

ಸುತ್ತಲೂ ಬೇಲಿ!

ಹಾಯಾಗಿ ಒರಗಿ ಎದೆಯೆಲ್ಲ ಗರ್ಜಿಸುವಂತೆಯೆ ತಲೆಯಲ್ಲಿ ನೂರೆಂಟು ಅಲೆಗಳು: ಆ ಅಲೆ ಅಲೆಗಳನ್ನು ಎ.ವಿಯ ಗೋಪುರ ಗಂಟೆಯ ಮರ್‌ಕ್ಯೂರಿ ಕಣ್ಣುಗಳು ಇಣಿಕಿಕ್ಕುತ್ತವೆ. ಆ ಕಣ್ಣಿನ ಹಿಂದುಹಿಂದೆಯೇ ಸಾಗಿ ಹೋಗುತ್ತೇನೆ.

ಮೊದಲು ಇಲ್ಲಿ ಬಂದಾಗ ಸುಮಾರು ರಾತ್ರಿಯ ಹತ್ತು ಗಂಟೆ. ಸುತ್ತಲೂ ಮೌನ; ಮಸಣ ನಿದ್ರೆ. ಗೂಗೆ ಕಣ್ಣಿನ ಹತ್ತಾರು ಮನೆಗಳ ಮಿಣುಕು; ಅದೊಂದೆ, ಇಲ್ಲಿ ಜೀವವಿದೆ ಎಂಬುದಕ್ಕೆ ಆಧಾರ. ಹಾಗೆಯೇ ದಾರಿಯುದ್ದ ಸಾಗಿದ್ದು: ಹೆಗಲೇರಿದ ಹೋಲ್ಡಾಲು; ಕೈಯಲ್ಲೊಂದು ಭಾರದ ಚೀಲ. ಏಕೋ ಎನ್ನುವ ಮನಸ್ಸು; ಸುತ್ತಲಿನ ಸೂಸು ಗಾಳಿಯಲ್ಲೂ ಮೈಯಲ್ಲಿ ಬೆವರು–ಗಾಳಿಯ ಸಂಪರ್ಕ ಬಯಸಿ ಹೊರಗಿಣುಕುವದು. ದಾರಿಯರಿಯದೆ ಹೊರಳಿದ್ದು. ಹೊರಳಿದಾಗ—ಅದೇ ಆ ಮಳಿ ಕಣ್ಣುಗಳ ಮಿಣುಕು ಅಣಕಿಸಿದ್ದು; ಮೈಯ ನೀರೆಲ್ಲ ಪಾದಮುಟ್ಟಿನ ಅನುಭವದ ನೆನಪು ತೂಗುತ್ತದೆ.

ಸಾಗುತ್ತೇನೆ ಹಾಗೆಯೇ ಮುಂದು ಮುಂದು. ಎಡಗಡೆಯ ಬೇಲಿಯ ಮೇಲಿ ನೀಲಿಯ ಹೂಗಳ ವಾಸು ಕಣ್ಣಿಗೆ ಮಂಪರು ತರುತ್ತದೆ. ಅಳುಕಿದ ಎದೆ.

“ಹಲ್ಲೋ, ಮಿಸ್ಟರ್...”
ಎಂದ ಗೆಳೆಯರ ಗುಂಪಿನ ಪರಿವೆ ಇಲ್ಲದೆ ಆ ಕಣ್ಣುಗಳು ಎಳೆದೊಯ್ಯುತ್ತವೆ.

ಸ್ವಲ್ಪ ಎಡಕ್ಕೆ ಹೊರಳಿ ವಿದ್ಯಾರ್ಥಿ ನಿಲಯದ ಎಡದ ಹರವಾದ ಬಯಲಿನಲ್ಲಿಯ ಕಾಲುದಾರಿಯಲ್ಲಿ ಸಾಗುತ್ತೇನೆ. ಸಾಗುತ್ತಿದ್ದಂತೆ ಮಗ್ಗುಲ ಹೊಲಗಳಲ್ಲಿಯ ಕಿರಿ ಎತ್ತರದ ಹುಣಸೆಯ ಜೊಂಗೆ ಬಡಿದು ನನ್ನ ಮೌನವನ್ನು, ಧ್ಯಾನವನ್ನು ಕಡಿದೆಸೆಯುತ್ತದೆ.

ಮನಸ್ಸು ಚುರುಕ್ಕೆನಿಸುವಂತೆಯೆ ಅರಿಯದ ಕೈ ಮಗೆಯನ್ನು ಸವರುತ್ತದೆ. (ಯಾರಿಗೆ ಯಾರು ನಂಟೋ) ಜಗದ ನಿಯಮ ಅರಿಯದ ಅಳಿದ್ದು. ತಕ್ಷಣ “ನಾನೆಷ್ಟು ಎತ್ತರ ಬೆಳೆದೆ?” ಪ್ರಶ್ನೆ ಮನದ ಹುತ್ತದಲ್ಲಿ ಹೆಡೆಯಾಡುತ್ತದೆ.

ಸ್ನಾತಕೋತ್ತರದ ನೆನಪಿನ ಬಣ್ಣಗುಮಿಕೆಯ ಬಿಸ್ತರ ಬಿಚ್ಚಿದಾಗ ಮನ ನಗುತ್ತದೆ; ಅನುಭವದ ಹುಚ್ಚಿದ್ದು ಕುಣಿಯುತ್ತದೆ: ನೂರಾರು ನವಿರಾದ ಭಾವಗಳೆಲ್ಲ ಚಿಗುರಿ ಅದೇ ಆಗ ಬಡಿದ ಹುಣಸೆ ಮರದೆತ್ತರವನ್ನೂ ದಾಟಿ ಅದನ್ನೇ ಅಣಕಿಸುತ್ತದೆ.

> “ನೀನು ಎತ್ತರದ ಮನುಷ್ಯ ಕಣೋ, ನೀನಿನ್ನೂ
> ಬೆಳೆಯಬೇಕು; ಸಸ್ಯದಂತೆ ಹಾಗೆ ಉರಿಯಲು ಹ
> ಹಾಯು ಬೇಕು ನಿನ್ನಿಂದ”

ಎಂದು ಬರೆದ ಕಾವೇರಿಯ ಪತ್ರ ಲಿಪಿಯ ಸಿಹಿ ಅಂಟು ಬಾಳಾ ರಸವಾಗಿ ಜಿನುಗುತ್ತದೆ. ಅದರ ಸವಿ. ಮಾರ್ದವತೆ–ಮಧುರತೆ, ರಸವು ಬೇರೆಲ್ಲಿ ಸಾಧ್ಯ?

ಈ ಎಲ್ಲ ನೆನಪು ಅವಳ ನಗೆಯನ್ನು ಹೊತ್ತು ತರುತ್ತದೆ. ನಗು ಹೊತ್ತ ಶಾಂತ ಮೊಗ; ನಿಷ್ಕಲ್ಮಷ ಕಣ್ಣು; ಮೀನು ನಡೆಯಲ್ಲಿ ಎದೆಯಲ್ಲೆಲ್ಲ ಚಲಿಸುತ್ತವೆ.

ಏನನ್ನೋ ಅರಸುತ್ತವೆ—ಒಳಗಿನ ರಕ್ತವನ್ನೊ. ಮಾಂಸವನ್ನೊ, ನರ-ನಾಡಿಗಳನ್ನೊ? ಇಲ್ಲ, ಇಲ್ಲ; ಅಲ್ಲಿ ಅಡಗಿದ ನನ್ನನ್ನು ಎನ್ನಿಸುತ್ತದೆ ಮನಕ್ಕೆ; ಭಾರವೆಲ್ಲ ಜರ್ರನೆ ಇಳಿಯುತ್ತದೆ; ಉಕ್ಕೇರಿದ ಹೊಳೆ ಇಳಿದಂತೆ.

ಮತ್ತೆ ಕಣ-ಕಣವಾದ ಮಿರಗುವ ಶುಭ್ರಮಳಲು ಎಲ್ಲೆಡೆಗೂ ಹರಡಿಕೊಳ್ಳುತ್ತದೆ. ಎದೆಯು ಏರಿಳಿವು ಸ್ತಬ್ಧವಾಗುತ್ತಿದ್ದಂತೆಯೇ ಲೈಬ್ರರಿಯ ಮೆಟ್ಟಿಲುಗಳು ನಮ್ರವಾಗಿ ಬಾಗಿ ದಾರಿತೋರುತ್ತವೆ; ಒಳಸೇರುತ್ತೇನೆ. ಪುಸ್ತಕಗಳ ಮಧ್ಯೆ ನಾನು: ನನ್ನೊಳಗೆ ನಾನಾಗುತ್ತೇನೆ.

ಮೌನ ಸಮಾಧಿಯಿಂದೆದ್ದು ಕತ್ತೆತ್ತಿದಾಗ ಎದುರಿಗಿನ ಗಡಿಯಾರ ಸಂಜೆಯ ನಾಲ್ಕನ್ನು ತೋರಿಸುತ್ತದೆ. ಕಣ್ಣುಜ್ಜಿಕೊಂಡ ಚಪಲ; ಅತ್ತಿತ್ತ ಕುಳಿತಲ್ಲಿಯೇ ಸುತ್ತಲೂ ಹೊರಳುತ್ತೇನೆ. ಎದುರಿನಲ್ಲಿ ಎದೆ ತೆರೆದು ಬಿದ್ದುಕೊಂಡ ಎಷ್ಟೋ ಹೊತ್ತಗೆಗಳು: ಒಂದರಲ್ಲಿ ವಿರಹ; ಇನ್ನೊಂದರಲ್ಲಿ ವಿರಸ; ಹರುಷ; ಮತ್ತೊಂದರಲ್ಲಿ ತುಮುಲ. ತಮ್ಮೆದೆಯ ಆಳಗಲವನ್ನು ಎಲ್ಲರಿಗೂ ತೋಡಿಕೊಳ್ಳುತ್ತಿರುವ ಭಂಗಿ ಅವುಗಳದು.

ಬಲಬದಿಯ ವಿದ್ಯಾರ್ಥಿನಿ ವಿಭಾಗದಲ್ಲಿ ಏಕೋ ಕಿಲ-ಕಿಲ ಬಳೆಗಳ ನಾದ. ಪಾಪ ತಾಸುಗಟ್ಟಲೆ ಕುಳಿತು ಬೇಜಾರು. ಸ್ವಲ್ಪ ಹೊರಳಿರಬಹುದು; ಇಲ್ಲ ಓದು ಮುಗಿಸಿ ತೆರಳುತ್ತಿರಬಹುದು ಲಲನೆಯರು—ಎನ್ನುವ ತೀರ್ಮಾನದ ಮನ. ಆದರೂ ಮುಗುಲಲ್ಲಿಯೇ ಸಾಗಿ ಹೋದ ಅವರು, ಅವರ ಸೆರಗಿನ ಉಯ್ಯಾಲೆ. ಉಯ್ಯಾಲೆ ಸೂಸಿ ಬೀಸಿದ ಗಾಳಿಯಲ್ಲಿ ಸಿಲುಕುತ್ತದೆ ಮನಸ್ಸು.

“ಇವರಿಗೆರಡು ಪಿನ್ನುಗಳನ್ನಾದರೂ ದಯಪಾಲಿಸಬಾರದೇ ಆ ದೇವರು” ಎನ್ನುತ್ತೇನೆ. ಮರುಕ್ಷಣ ನನ್ನಲ್ಲಿ ನಾನಾಗಬಯಸುತ್ತೇನೆ. ಹಿಂದೆ ಒಟ್ಟಿ ನಿಂತ ಓದು ಬೆನ್ನು ಬಾರಿಸುತ್ತದೆ. ಐದು-ಹತ್ತು ನಿಮಿಷದ ಓದು; ಅಲ್ಪಸ್ವಲ್ಪ ಬಾಯಾರಿಕೆ. ನನ್ನನ್ನು ಸಮೀಪಿಸಿದ ಗೆಳೆಯ ರಾಜುವಿನ “ಚಹಕ್ಕೆ ಬರುವಿಯಾ?” ಎಂಬ ಕೈಸನ್ನೆ; ನನಗೋ ಆ ಆಹ್ವಾನ ರೋಗಿ ಬಯಸಿದ ಹಾಲು. ಗೆಳೆಯನೊಂದಿಗೆ ಅಲ್ಲಿಯೇ ಸಮೀಪದ ಕ್ಯಾಂಟೀನ್‌ಗೆ ಕಾಲುಗಳು ಸಾಗಿ ಹೋಗುತ್ತವೆ.

ಇಲ್ಲಿಯ ವರೆಗಿನ ಓದು ಅಜ್ಜಿ ನೆಯ್ದ ನೂಲು ಎನಿಸುತ್ತದೆ. ಎಲ್ಲ ವ್ಯರ್ಥ. ಏನೋ ಪಾತ್ರೆ ಬರಿದೆಂದು ನೀರುತುಂಬಿದಂತೆ.

ಕ್ಯಾಂಟೀನ್ ಮಾಲಕನ ಮಗ್ಗುಲಲ್ಲಿ ರೇಡಿಯೋಗ್ರಾಮ್; ‘ಏ ಜೋ ಮುಹಬ್ಬತ್ ಹೈ’ ಎಂದು ಧ್ವನಿಸುತ್ತದೆ. ಅದನ್ನು ಕೇಳಿದಾಗ ಲೇಡಿಸ್ ರೂಮ್ ಫುಲ್ ಬೋರ್ಡನ್ನು ಹಣೆಗೆ ಬಡಿದುಕೊಂಡಿರಲೇಬೇಕು. ಆತನೂ ಅಷ್ಟೇ ರಸಿಕನೆನ್ನಿಸುತ್ತದೆ. ಇಲ್ಲವೆ ಕೆಲ ವಿದ್ಯಾರ್ಥಿಗಳು ಬೇಕೆಂದೇ ಹಚ್ಚಿಸಿರಲು ಬೇಕು; ತಮ್ಮ ಅಭಿರುಚಿಗಾಗಿ ತಮ್ಮ ಅಭಿರುಚಿ ಒಳಗಿನ ಲಲನೆಯರಿಗೆ ತಿಳಿಯಲಿ ಎಂದಾಗಿಯೂ. ಇವೆಲ್ಲ ಒನ್ ವೇ

ಟ್ರಾಫಿಕ್ ಎಂಬ ಅನಿಸಿಕೆ; ಆದರೆ ಈ ನಂಬಿಕೆ ನೂರಕ್ಕೆ ನೂರೂ ಅಲ್ಲವೆಂಬುದಕ್ಕೆ ಚಿತ್ರ ನಿದರ್ಶನಗಳೂ ಉಂಟು.

ಕೊನೆಗೊಮ್ಮೆ ಬಾಗಿಲು ಪರದೆ ತೆರೆಯುತ್ತದೆ; ಅದಕ್ಕೂ ಮೊದಲು ಪರದೆಯ ಆಚೆ ನಾಲ್ಕಾರು ನೆರಳುಗಳು; ತೇಲುತ್ತವೆ. ಮಸುಕು ಮಸುಕಾದ ಗೋದಿ ಬಣ್ಣದಲ್ಲಿ ರಜತಪರದೆಯಲ್ಲಿ ಮೂಡಿದಂತೆ. ನನ್ನ ಮತ್ತು ರಾಜುವಿನ ಎದೆಯಲ್ಲಿ ಊಹೆಯ ಕಪ್ಪೆ ಗುಟುಕರಿಸುವಂತೆಯೆ ರೀಟಾ–ರೆಜಿಯಾ, ದೀಪ್ತಿ–ಸುಮಿತಾ ರೂಮಿನಿಂದ ಹೊರಗೆ ನುಸುಳುತ್ತಾರೆ: ನಗೆ ತೇಲುತ್ತದೆ: ಗೆಲುವಿನ ಮೋಡದಿಂದ ಒಂದರ್ಥ, ಹಾವ-ಭಾವ ಅವರ ಮುದುರುವಿಕೆ ಮತ್ತೆ ಗಂಭೀರತೆಯನ್ನು ನೆನೆದು ಇನ್ನರ್ಥ. ಸಂಪತ್ತನ್ನೇ ಗಳಿಸಿದ ಮನ. ರಾಜುವನ್ನು ನೆಟ್ಟದೃಷ್ಟಿಯಿಂದ, ಪ್ರಶ್ನಾರ್ಥಕ ಭಾವದಲ್ಲಿ ನೋಡುತ್ತೇನೆ: ಆತನದೂ ನಗೆ; ನನ್ನ ದುರ್ಬಲತೆಗಾಗಿಯೋ ಇಲ್ಲವೆ ಆತನಿಗಾದ ಆನಂದಕ್ಕೋ.

"ಏನೇ ತಿಳಿದುಕೋ. ನಿನ್ನ ರೀತಿಯೇ ಬೇರೆ; ಯಾರಿಗೂ ತಿಳಿಯದ್ದು; ಕುದುರೆಯ ಮತ್ತು ಹೆಣ್ಣಿನ ನೆಲೆ ತಿಳಿಯದಂತೆ" ಎಂದು ರಾಜು ಬೆನ್ನು ಬಡಿಯುತ್ತಾನೆ.

"ಹಾಗೇನೂ ಇಲ್ಲ ಮಾರಾಯಾ" ಎಂದು ನುಸುಳ ಬಯಸುತ್ತೇನೆ; ಒಳಗೊಳಗೇ ಆನಂದ. ಏಕೆ ಇಷ್ಟೆಲ್ಲ ಎಂದು ನನ್ನನ್ನೇ ಪ್ರಶ್ನಿಸುತ್ತೇನೆ; ಉತ್ತರ ದೊರೆಯದು. ಪ್ರಶ್ನೆಯ ಮುಸುಕಿನ ಹಿಂದೆ ಕಾವೇರಿ ಮೂಡುತ್ತಾಳೆ; ನಗುತ್ತಾಳೆ: ನಗಿಸುತ್ತಾಳೆ; ಮರೆಯಾಗುತ್ತಾಳೆ; ಎದೆಯ ಒಳಗೆ ಇನ್ನೂ ಒಳಗೆ ಕಾವೇರಿ ಕರಗುತ್ತಾಳೆ: ಮೊಗ್ಗು ಬೀರಿದ ನಗು; ಬಿಲ್ಲು ತೆತ್ತು ರಾಜುವಿನೊಂದಿಗೆ ಹೊರಬೀಳುತ್ತೇನೆ.

ಹೊರಬಂದು ಸುತ್ತಲಿನ ಹಸಿರಿನಲ್ಲಿ ಲೀನವಾಗಬಯಸುತ್ತದೆ ಮನಸ್ಸು. ಅರಿಯದ ತುಟಿ ಬಿರುಕಿನಲ್ಲಿ- ' ಇಂಥ ಹಸುರಿಂದೆಂತು ಹೊಮ್ಮಿತು ಬೆಳಗೆ ' ಹಾಡು. "ಇಂಥ ಸಮಯದಲೆಂತು ಬಂದೆಯೆ ಮೆಲ್ಲಗೆ ಎದಿರುಬರುವುದು ಕಣೋ" ಎಂದಾಗ ರಾಜು ನನ್ನನ್ನು ಛೇಡಿಸುತ್ತಾನೆ.

ಮತ್ತೆ ಅದೇ ತಿರುವಿನಲ್ಲಿ ನನ್ನನ್ನು ಕೊಂಡೊಯ್ಯುವ ತವಕ ಅವನಿಗೆ. ಅವನನ್ನು ಬಿಟ್ಟಿರುವುದೇ ಲೇಸು; ಒಂದೆರಡು ಸಲ ಪ್ರಯತ್ನಿಸುತ್ತೇನೆ; ವಿಫಲದಲ್ಲಿ ಮುಕ್ತಾಯವಾಗುತ್ತದೆ. ನನಗೆ ಅವನೂ ಬೇಕು, ಮತ್ತೆ... ?

ಇದೆಲ್ಲವೂ ಎಷ್ಟೋ ಕಣ್ಣುಗಳಿಗೆ ಕುತ್ತಾಮದರಿವೂ ಸಮಗ್ರವೆಯೆ ವೃತ್ತದ ವರೆಗೂ ಸಾಗಿ ನಡೆಯುತ್ತೇವೆ. ಮಗ್ಗುಲಿನ ಹಾಸುಗಲ್ಲು ಆಧಾರವಾಗುತ್ತದೆ; ಹಾಗೆಯೇ ಒರಗಿಬಿಡಬೇಕೆನ್ನಿಸುತ್ತದೆ: ಒರಗುತ್ತೇನೆ.

ಮುಗಿಲು ಬೆಸಲಾಗುವ ಸಮಯ; ಗಿಡ-ಮರಗಳಲ್ಲಿ ಹಕ್ಕಿ ಕಲರವ ಸೂಚನೆ. ತೋರಣಗಟ್ಟಿ ಬರುವ ಹಕ್ಕಿಯ ಸಾಲು ಸ್ವಯಂವರದ ಕನ್ಯೆಯ ಕೈಯ ಹಾರದಂತೆ. ಈ ಮೊದಲಿನ ಪೀತಾಂಬರ ಕಾಂತಿಯ ರೂಪಕ್ಕೆ, ಬಾನಿಂತಿಯ ನೆನಪಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಈ ಅಂಬರೆ ಬೆಸಲಾಗುವಳೆ? ಇವಳ ಗಂಡನಾರು? ತಾಳಿಮೋಳವಿಲ್ಲದ

ಪ್ರಶ್ನೆಗಳು : ಗೂಡು ಬಡಿದು ಗುಂಪಾಗಿ ಹಾರುವ ಜೇನಿನಂತೆ. ಮತ್ತೆಲ್ಲೋ ಗೂಡು ಗಟ್ಟುವ ತವಕ; ಅಲ್ಲೂ ಮಧು ಸಂಗ್ರಹಿಸುವ ಹಂಬಲು. ನನ್ನನ್ನೇ ನಾನು ಹಳಿದು ಕೊಳ್ಳುತ್ತೇನೆ– ಇಂಥ ವಿಚಾರಧಾರೆಗೆ ವಿಚಾರ ರಭಸಗೊಳ್ಳುತ್ತದೆ; ಧುಮ್ಮಿಕ್ಕುತ್ತದೆ; ಆಳಪ್ರಪಾತಕ್ಕಿಳಿಯುತ್ತದೆ; ಏಳಲಾರದ ಆಳಕ್ಕೆ.

'ಬುರ್ರ್' ಎಂದು ಓಡಿ ಬಂದ ಬಸ್ಸು ಗಕ್ಕನೆ ನಿಲ್ಲುತ್ತದೆ. ತಿದಿಯಲ್ಲಿಯ ಹವೆಯಂತೆ ಹರಡಿದ ಕೆಂಪುಧೂಳಿ. ಸುತ್ತ ಮಸುಕು. ನಿಮಿಷವೊಮ್ಮೆ ಸುತ್ತಲೆಲ್ಲ ಏನಿಲ್ಲದ ಭಾಸ. ಮತ್ತೊಂದು ನಿಮಿಷದಲ್ಲಿ ಅದೇ ವೃತ್ತ. ಅದೇ ದೀಪಕಂಬ, ಅದೇ ನೀಲಗಿರಿ ವೃಕ್ಷಗಳ ಎತ್ತರದ ಸುತ್ತಲ ಬಳಗ, ಇಳುವಿನಲ್ಲಿ ಹಾವಿನಂತೆ ಸಾಗಿಹೋದ ರೇಲು ಕಂಬಿಗಳು. ಅದನ್ನು ಸಾಗಿ ನಡೆವ ತಾರು ತಂತಿ; ವಿಶೇಷವೇನಿಲ್ಲದಿದ್ದರೂ ಮಾಸದ ಜೀವನ ಅನುಭವ ಎದೆಪಟಲವನ್ನು ತಬ್ಬುತ್ತದೆ.

ಬಳುಕಿ ಸಾಗಿದ ರೇಲುಕಂಬಿ 'ಆರಾಧನಾ' ಚಿತ್ರವನ್ನು ನೆನಪಿಸುತ್ತದೆ ಒಮ್ಮೆ; ಇನ್ನೊಮ್ಮೆ ಕಾವೇರಿಯ ನೀಳಜಡೆಯನ್ನು. ಮಗ್ಗುಲಲ್ಲಿ ಒತ್ತಿ ಬೆಳೆದ ಹಸಿರು—ಅಲ್ಲಲ್ಲಿ ಹಸಿರನ್ನಲಂಕರಿಸಿದ ಹಳದಿ–ನೀಲ ಹೂಗಳು ಕಾವೇರಿ ಮುಡಿದ ಸುಮವನ್ನು ಕಣ್ಣಿಗೆರಚುತ್ತವೆ; ಸೌರಭ ಸೂಸುತ್ತದೆ.

ಎದ್ದು ನಿಲ್ಲುತ್ತೇನೆ. ನಿರ್ಧಾರರಹಿತ ಮನ. ಹಿಂದೆ ಕಾಣುವ ಹಳದಿ ಕಣ್ಣುಗಳನ್ನು ನೋಡುತ್ತೇನೆ. ಸಮಯ ಸಂಜೆಯ ಸೆರಗನ್ನು ಹೊತ್ತಿದೆ.

ಅಂತಿಮ ವರ್ಗದ ವಿದ್ಯಾರ್ಥಿ ಗೆಳೆಯ ವಿನಯ ಮೃದುವಾಗಿ ನಡೆದು ಬರುತ್ತಾನೆ; ಅವನು ನನಗೆ ಪರಿಚಯಸ್ಥನಲ್ಲ; ಬಹಳ ಹತ್ತಿರದ, ಆರದ ಗೆಳೆತನವು ಇಲ್ಲ; ಆದರೂ ಆತನನ್ನು ಕಂಡಾಗ ನನ್ನಲ್ಲಿ ನಮ್ರಭಾವ ಮೂಡುತ್ತದೆ : ನಮ್ರತೆ ಎನ್ನುವದೂ ತಪ್ಪು ; ಏನೋ ಒಂದು ತೆರನ ಹೆದರಿಕೆ ; ಕಾರಣ : ಆತನ ರೂಪು ನನ್ನ ಸೋದರನನ್ನು ಹೋಲುತ್ತದೆ. ಅಂತಹದೇ ನಗೆ, ನಡೆ, ಗಾಂಭೀರ್ಯ ; ಆಗಾಗೆ ತೇಲಿಬರುವ ತುಟ್ಟಿಯ ಮಾತುಗಳು : ಮಾತಿನ ನಿಲುವೂ ಮಾತಿನ ಚುರುಕೂ ಚಾಕಚಕ್ಯತೆಗಳೂ ನನ್ನ ಸಹೋದರನಂತೆಯೆ ; ಕುಡುಗೋಲು–ಕುಂಬಳಕಾಯಿಯಂತೆ.

ಆತನಿಂದ ದೂರವಾಗಬಯಸುತ್ತೇನೆ ; ಆತನು ಕಣ್ಣಂಚಿನಲ್ಲಿ ಕಾಣದಿರಲೆಂದೆನ್ನುತ್ತದೆ ಮನಸ್ಸು ; ಇಲ್ಲವಾದರೆ ಇಲ್ಲದ ಕಲಕು ; ತಿಳಿಯಲ್ಲಿ ತೇಲುವ ಕಸ್ಮಲ.

ವಿನಯ ಕಾಣಿಸಿದಾಗೆಲ್ಲ ಕರ್ತವ್ಯದ ಕರೆ ಎದೆಯಲ್ಲಿ ಚಿಗುರುತ್ತದೆ ; ನಾ ಬಂದುದೇಕೆ ? ಹಣ ವ್ಯಯ ಮಾಡುತ್ತಿರುವುದೇಕೆ ? ನಾನು ನಿಜವಾಗಿಯೂ ಓದುತ್ತಿದ್ದೇನೆಯೇ ? ಇಲ್ಲವೆ ಇದು ಬರಿಯ ಸೋಗೆ ? ಎಂಬೆಲ್ಲ ಸಮಸ್ಯೆಗಳಿಗೆ ಉತ್ತರ ದೊರೆಯುತ್ತದೆ. ನಿಟ್ಟುಸಿರು : ಅದರ ಹಿಂದೆಯೇ ಸಮಾಧಾನದ ರಾಗ ; ರಾಗದ ಹಿಂದೇ ಅನುರಾಗ ; ಸಮುದ್ರದ ಅಲೆ–ಅಲೆಯಾಗಿ ತೆಪ್ಪಗೊಂಡು ತೇಲಿಬರುತ್ತವೆ; ದಡವನ್ನು ಅಪ್ಪುತ್ತವೆ ; ಎದೆಯನ್ನು ಚುಂಬಿಸುತ್ತವೆ ; ಇಲ್ಲದಾಗುತ್ತವೆ ; ನಾನು ನಾನಾಗುತ್ತೇನೆ.

ಮರಳಿ ಸಿಟಿಗೆ ಹೊರಡುವ ಬಸ್ಸು : ವಿದ್ಯಾರ್ಥಿನಿ ನಿಲಯದೆದುರು ಖುಷಿಯಿಂದ ಬುಸುಗುಡುತ್ತ ಇಳಿದು ಬರುತ್ತದೆ. ಕಿಟಕಿಯ ಕಣ್ಣಿನಲ್ಲಿ ಹತ್ತೆಂಟು ಕಂಡರಿವ ಕಣ್ಣುಗಳು ; ಕಣ್ಣುಗಳ ಗೋಲದಲ್ಲಿ ಕನಸಿನ ಮೆರವಣಿಯ ಪ್ರತಿಬಿಂಬ ಸಾಲು.

ಬಲೂನಿನಲ್ಲಿ ಸೇರುವ ಹವೆಯಂತೆ ನಾನೂ ಬಸ್ಸಿನ ಒಳನುಗ್ಗುತ್ತೇನೆ. ನನ್ನೊಡನೆ ಬಾರದ ರಾಜು ; 'ಟಾ ಟಾ' ಎಂದು ಕೈ ಮಾಡುತ್ತಾನೆ. ಹೊರಳಿ–ಹೊರಳಿ ಆತ ನನ್ನು ನೋಡುತ್ತ Seat ನೆಡೆಗೆ ಸಾಗುತ್ತೇನೆ. ಬಸ್ಸಿನಗಂಟೆ 'ಎರಡು' ಬಾರಿಸುತ್ತದೆ ; ಗಾಲಿಗಳುರುಳುತ್ತವೆ.

ಒಳಗೆ ಯುವಕ–ಯುವತಿಯರದೇ ಸಂಸಾರ ; ಒಬ್ಬರ ಕಣ್ಣು ಇನ್ನೊಬ್ಬರನ್ನು ಇನ್ನೊಬ್ಬರ ಕಣ್ಣು ಮಗುದೊಬ್ಬರನ್ನು ಅರಿಯ ಬಯಸುತ್ತದೆ ; ಕೆಲೆಯ ಬಯಸುತ್ತದೆ; ನಲಿದು ನೆಗೆಯುತ್ತದೆ. ಹರುಷದ ಬುಗ್ಗೆ ಚಿಮ್ಮುಕ್ಕುತ್ತದೆ. ಭಾವ–ಭಾವನೆಗಳ, ಅಭ್ಯಾಸ–ಆರೋಗ್ಯದ, ಆಟ–ಪಾಟಗಳ ಕೊಡು–ಕೊಳ್ಳಿ ಸಾಗುತ್ತದೆ.

ಎದುರಿನ ಸೀಟಿನಲ್ಲಿಯ ಯುವತಿಯೋರ್ವಳು 'ನಾಳೆ poetry competition ಕಣೆ' ಎಂದು ಅಗಲಗಣ್ಣುಗಳಲ್ಲಿ ಗೆಳತಿಯೋರ್ವಳಿಗೆ ಹೇಳುತ್ತಾಳೆ.

'ನನ್ನನ್ನು ನೋಡಿ; ನನ್ನನ್ನು ಕುರಿತೇ ಇರಬಹುದು ; ಇರಬಹುದೇ ? ಮನಸ್ಸು ಪ್ರಶ್ನಿಸುತ್ತದೆ. 'ಯಾರಿರಬಹುದು ಅವಳು' ಎಂದು ಪ್ರಶ್ನೆ ಹಂಬಲಿಸುತ್ತದೆ ; ಹಂಬಲು ಕಾತರವಾಗುತ್ತದೆ.

ಹಿಂಭಾಗದ ಎಡಗಡೆಯ ಮೂಲೆಯಿಂದ "ಏನ್ರೀ ಕವಿಗಳು ? ಎಲ್ಲಿಗೆ ? ಸಿನಿಮಾಕ್ಕೋ ? ಇಲ್ಲ. ಯಾವುದಾದರೂ function ಇದೆಯೋ ? " ಪ್ರಶ್ನೆಗಳ ಮಳೆಯನ್ನು ಕರೆಯುತ್ತದೆ– ಒಂದು ಧ್ವನಿ. ಆತ ಬೇರೆ ಯಾರೂ ಅಲ್ಲ; ನನ್ನ ರೂಮ್‌ಮೇಟ್ ಜಯ !

ಜಯದೇವ— ತುಂಟ, ಕಿಲಾಡಿ. ಆತ ಹಾಕಿದ ಮತಾಪ್ಪು ಇದು ಎಂದು ನೆಮ್ಮದಿಯಿಂದಿರಬಯಸುತ್ತೇನೆ.

ಮರುಕ್ಷಣ ಮತ್ತೆ ಛೇಡಿಸುತ್ತಾನೆ.

'ನಾಳೆ ನಿಮಗೆ ಬಹುಮಾನ ಅಲ್ಲವೇನ್ರೀ ?' ಎಂಬ ಜಯನ ಧ್ವನಿಗೆ ಮುಂದಿನ ಹತ್ತೊ ಹರದೆಯರ ಮಯೂರಾಕ್ಷಿ ನನ್ನ ಮೊಗೆ ಕುಕ್ಕುತ್ತವೆ; ಎದೆಯನ್ನು ಕಲಕುತ್ತವೆ.

"ಇದೊಳ್ಳೇ ಪೀಡೆ"

...ಬೇಸರದ ಮನ ಮಿಡಿಯುತ್ತದೆ; ಹಾಯಾಗಿ ಇರಗೊಡದ ಜಗ ಸುತ್ತಲೂ—ಎಸ್ಸಿನಿ, ಸಿಟಿಯ ದೂರವನ್ನು ಅಳೆಯುತ್ತವೆ, ಕಣ್ಣುಗಳು.

ಬಸ್ಸಿಳಿದಾಗ : ಅದೇ ಜಾಗ ; ಅದೇ ಧೂಳಿ ; ದಿನದಂತೆ ಕಿಕ್ಕಿರಿದ ಜನ ; ಇರುವೆ ತೆರ. ಶೋ ಕೇಸಿನಲ್ಲಿಯ ಬೊಂಬೆಗಳನ್ನು ಹೋಲಿಸುವ. ನಾಚಿಸುವ ಭಂಗಿ ; ಕಾಲುಹಾದಿ ಭ್ರಮಣೆಯಲ್ಲಿ ಮೊದಲ ಸಂಸ್ಕೃತಿಯ ಸಾಮೀಪ್ಯದ ಸಂಕೇತ ಅಲ್ಲಲ್ಲಿ ಹಣಕಿಕ್ಕುತ್ತದೆ.

ಸಮತಾವಾದದ ಬೀಜದ ಮೊಳಕೆಗೆ ಎಷ್ಟೊಂದು ಬೆಳಗೆ! ಗಂಡು-ಹೆಣ್ಣಿನ ಆಕಾರ-ಸಾಕಾರ. ಉಡುಪು-ವಿನ್ಯಾಸಗಳಲ್ಲಿ ತೋರುವ ಹೊಂದು—ಒಂದು ; ಒಮ್ಮೊಮ್ಮೆ ಆನಂದದ ತುದಿಯನ್ನು ಏರಿಸಿ, ಹೆದರಿಕೆಯ ದಡಕ್ಕೆ ಅಪ್ಪಳಿಸುತ್ತವೆ. ಸಂಸ್ಕಾರ-ಸಂಸ್ಕೃತಿಗಳು ಶೂನ್ಯವಾದಂತೆ ; ಶೂನ್ಯ ವೃತ್ತಗೊಂಡು, ಹವೆತುಂಬಿ ಗೋಲಗೊಂಡು, ತೇಲಿ-ತೇಲಿ ಅವ್ಯಕ್ತದೆಡೆಗೆ ಸಾಗುತ್ತದೆ.

ಹೊಸ ಸಂಸ್ಕೃತಿಯ ಅಶಕ್ತ ಹವೆಯನ್ನು ಉಸಿರಾಡಿಸುತ್ತ ಅತ್ತಿತ್ತ ತೇಲುತ್ತೇನೆ; ತಲೆ ತುಂಬ ಇಂದು ನಾಳೆಯನ್ನು ಗುನು-ಗುನಿಸುತ್ತೇನೆ. ಅದೇ ಬಸ್ಸು ಹೊತ್ತೊಯ್ಯುತ್ತದೆ-ನನ್ನನ್ನು. ನನ್ನ ಮನಸ್ಸನ್ನು; ಸ್ವಲ್ಪ ಸಮಾಧಾನ.

ಸುತ್ತಲೂ ಅಂಗಡಿಗಳ ಹಣೆಗೆ ಬೆಂಕಿಯ ಬಿಂಬ; ಒಳಗೆಲ್ಲ ಬಿಸಿಲು ಹರಹಿದಂತೆ ಬೆಳಕು; ಒಳ ಬಂದವರನ್ನೆಲ್ಲ ಬಿಂಬಿಸುತ್ತದೆ. ನನ್ನನ್ನು ಬಿಟ್ಟು ಮನಸ್ಸು ಎಲ್ಲೆಲ್ಲೋ ಸಂಚಲಿಸುತ್ತದೆ; ಸುಳಿಗಾಳಿಯಾಗಿ; ತಿಳಿಝರಿಯಾಗಿ; ಬೆಂಕಿಯ ಅಲೆಯಾಗಿ: ವಿದ್ಯುತ್ತಿನ ಹೊಳೆಯಾಗಿ. ಹೊಳೆ ನೆಲಸಮವಾಗಿ ನಾನು ನಾನಾಗುತ್ತೇನೆ.

ಬಂದು ಮಲಗಿದಾಗ ಎದೆಯ ಮಣ್ಣಲ್ಲಿ ವಿಚಾರಗಳ ನೇಗಿಲು ಹೆಜ್ಜೆ ಇಡುತ್ತವೆ. ಹಸಿ-ಹಸಿಯ ಚಿಂತನೆ ಮಳೆಯಾಗಿ ಜಿನಿಯುತ್ತದೆ; ಬೀಜ ಬೀಳುತ್ತವೆ; ಮೊಳೆಯುತ್ತವೆ; ಬೆಳೆಯುತ್ತವೆ; ಕೈ-ಕಾಲು-ಕಣ್ಣು ಮೂಡಿದ ಅನುಭವ !

ಸುತ್ತಲೂ ಬೇಲಿ; ಬೇಲಿಯ ತುಂಬ ಪಾಪಾಸುಕಳ್ಳಿ ಕುರುಚಲಾಗುತ್ತದೆ. ಪ್ರೇಮ-ಕಾಮ. ಮಮತೆ-ವಾತ್ಸಲ್ಯ, ಸ್ನೇಹ-ಸಿಗ್ಧ; ಅದರ ಹಿಂದೆಯೇ ಮುಳ್ಳುಗಳು: ರೀಟಾ-ರೆಝಿಯಾ. ರಾಜು-ವಿಜಯ-ವಿನಯ, ದೀಪ್ತಿ-ಸುಮಿತಾ. ಹಂಬಲು-ಆಶೆ-ಆಮಿಷದ ಎತ್ತರವನ್ನೂ ದಾಟಿದ ಬೆಳಗೆ ಅವುಗಳಿಗೆ. ನಾಲ್ಕಾರು ತಾಸಿನ ಅಂತರದಲ್ಲಿ ಈ ಬೇಲಿ ಇನ್ನೂ ಚಿಗುರಬಹುದು : ಹಸಿರಾಗಿ; ಕುಸುರಾಗಿ; ಸಮವಾಗಿ.

'ಢಣ್'

ಗಂಟೆಯ ದನಿ. ರಾತ್ರಿಯ ಹನ್ನೆರಡೂವರೆ; ಇಲ್ಲವೆ ಒಂದು; ಇಲ್ಲ ಒಂದೂವರೆ.

ಬೇಲಿ ಗೋಪುರದ ಎತ್ತರವನ್ನೂ ದಾಟಿದಂತೆ ಏನೋ ಅನಿಸಿಕೆ—ಹಳದಿಯ ಕಣ್ಣುಗಳನ್ನು ಎದೆಯಲ್ಲಿ ಅರಳಿಸುತ್ತದೆ.

★ ಉಮೇಶ ಅಂಗಡಿ

ಅವಳೊಡನಾಡಿದ ಗಾಳಿ

ಅವಳೊಡನಾಡಿದ ಗಾಳಿ
ನನ್ನೊಡನಾಡಿದಾಗಲೆಲ್ಲಾ
ನನಗೆ
ಅವಳದೇ ನೆನಪು. ನೆನಪ ಸರಪಳಿ ಹಿಡಿದು
ಜಾರಿದಂತೆಲ್ಲಾ ಅವಳಮ್ಮ ಬತ್ತಲಾಗಿ
ಊರು ತುಂಬಾ ಮಲಗಿದ ದೃಶ್ಯ
ಕಣ್ಕಟ್ಟ
ನನ್ನದೆ ತುಂಬಾ ಕಚಿಪಿಚಿ ತುಳಿದು
ಕಟ್ಟಿದ ಗೋಪುರಗಳನ್ನು ಮಹಲುಗಳನ್ನು
ಮನೆಗಳನ್ನು
ಕೆಡವಿ ಕುಟ್ಟಿ ಪುಡಿಪುಡಿಮಾಡಿ
ಭುವಿ ತುಂಬಾ ಬಾಸನ್ನು ತುಂಬಿಬಿಡುತ್ತಾವೆ.

ಅವಳಮ್ಮ ಸತ್ತು
ವರ್ಷ ಹತ್ತಾಗಿದ್ದರೂ
ಬದುಕಿದ್ದಾಳೆಂದೇ
ಮನಸ್ಸಿನಲ್ಲಿ ಅನಿಸಿಕೆಗಳು ಲಂಗಳಿಸುತ್ತಾವೆ.
ಆಕ್ಷಣ
ದಿಢಿಲ್ಲೆಂದು
ಅವಳು ನಗುವುದು
ಅಳುವುದು
ಭವಿಷ್ಯಕ್ಕೆ ರಂಗೋಲಿ ಹಾಕುವದು
ಎಲ್ಲಾ
ಎಲ್ಲಾ
ಕಣ್ಕಟ್ಟ

ಯಾಕೋ
ಎಲ್ಲಾ ಬೇಡವೆನಿಸಿ
ಗಡ್ಡ ಬಿಟ್ಟು ಕಾವಿ ಧರಿಸಿ
ಬತ್ತಲಾಗಿ ಬಿಡಲೇ ಎಂದು
ಗೋಡೆಗೆ
ಕಿಟಕಿಗೆ ಢೀ ಎಂದು
ಡಿಕ್ಕಿಕೊಟ್ಟು ಕ್ಷಣ-ಅರೆಕ್ಷಣ
ಕತ್ತಲಲ್ಲಿ ಮುಳುಗುತ್ತೇನೆ

ಅವಳಮ್ಮ ನನ್ನಲ್ಲಿ ಬದುಕಿದಂತೆಲ್ಲಾ
ಅವಳು ಸಾಯುವುದು ನೋಡಲಾಗದೇ
ಅಯ್ಯೋ ಎನಿಸಿ
ನಿರ್ಧರಿಸಿ
ತಾ ಎಂದು
ಕೈಕೊಂಡು
ಹಿಡಿದಾಗ ಬಹಳಾ ತಣ್ಣಗೆನಿಸಿ
ತಣ್ಣಗಾದಾಗ
ಬತ್ತಲಾದ ಆನಂದ.

★ ಶ್ರೀನಾಥ್ ರಾಯಸಂ.

ಕೊಟ್ಟಿತ್ತೊಣೆ*

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಬಳ್ಳಾರಿ ಜಿಲ್ಲೆಯ ಕುಡುತಿನಿ, ಕುರುಗೋಡು, ಕುರುವತ್ತಿ, ಕೋಗಳಿ, ಬ್ಯಾಗಳಿ, ನೀಲಗುಂದ, ಸೋಗಿ, ಹಿರೇಮಂಗಳಗಳಂಥ ಮುಂತಾದ ಪಟ್ಟಣಗಳ ಪಾತ್ರ ಅನುಪಮವಾದುದು. ಪ್ರಸ್ತುತ ಲೇಖನದಲ್ಲಿ ಕುಡುತಿನಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪಾತ್ರವನ್ನು ಅಲ್ಲಿಯ ಶಾಸನಗಳ ಮುಖಾಂತರವಾಗಿ ಪ್ರತಿಪಾದಿಸಲಾಗಿದೆ.

ಕುಡುತಿನಿ ಬಳ್ಳಾರಿಯ ಪಾಯವ್ಯಕ್ಕೆ ಸುಮಾರು ಹನ್ನೆರಡು ಮೈಲು ಅಂತರದಲ್ಲಿದೆ. ಇದನ್ನು ಶಾಸನಗಳಲ್ಲಿ ಕೊಟ್ಟಿತ್ತೊಣೆ,[೧] ಕೊಟಿತೊಣೆ,[೨] ಕೊಟ್ಟಿತ್ತಣೆ,[೩] ಕೊಟ್ಟಿತಣೆ[೪] ಮತ್ತು ಕುಡುತಣೆ[೫] ಎಂದು ಉಲ್ಲೇಖಿಸಲಾಗಿದೆ. ಇದು ಶ್ರೀ ಸ್ವಾಮಿದೇವರ ಪಟ್ಟಣವೆಂದು ಪ್ರಸಿದ್ಧವಾಗಿತ್ತು.[೬] ಸುಸಮೃದ್ಧವಾದ ಈ ಪಟ್ಟಣವನ್ನು ಶಾಸನವೊಂದರಲ್ಲಿ ರಾಜಧಾನಿ ಕೊಟ್ಟಿತೊಣೆ[೭] ಎಂದು ಹೆಸರಿಸಲಾಗಿದೆ.

ರಾಷ್ಟ್ರಕೂಟ ಅರಸರುಗಳ ಕಾಲದಿಂದ ವಿಜಯನಗರದ ನರೇಶರ ವರೆಗಿನ ಇದರ ಇತಿಹಾಸ ನಮಗೆ ಸಿಕ್ಕುತ್ತದೆ. ರಾಷ್ಟ್ರಕೂಟ ಅರಸನಾದ ಅಕಾಲ ವರ್ಷದೇವ (ಕೃಷ್ಣIII)ನ ಕ್ರಿ. ಶ. ೯೪೭ ರ ಶಾಸನವು ಇಲ್ಲಿಯ ಅತ್ಯಂತ ಪ್ರಾಚೀನ ಶಾಸನ.[೮] ಕ್ರಿ. ಶ. ೯೪೭ ರಲ್ಲಿ ಅವನು ದೇಕಮ್ಮನ ದೇಗುಲಕ್ಕೆ ಕೆಲವೊಂದು ಭೂಮಿಗಳನ್ನು "ಮರುದತ್ತಿ"ಯಾಗಿ ಕೊಟ್ಟನು. ಇದು ಕ್ರಿ. ಶ. ೯೪೭ ರಲ್ಲಿಯೇ ಈ ಪಟ್ಟಣ ಮತ್ತು ಈ ದೇವಸ್ಥಾನಗಳು ವಿಶೇಷವಾಗಿ ಅಭಿವೃದ್ಧಿ ಹೊಂದಿದ್ದವೆಂಬುದನ್ನು ವ್ಯಕ್ತಪಡಿಸುತ್ತದೆ. ಇನ್ನೊಬ್ಬ ರಾಷ್ಟ್ರಕೂಟ ಅರಸನಾದ ಖೊಟ್ಟಿಗನು ಕ್ರಿ. ಶ. ೯೭೧ ರಲ್ಲಿ ಗದಾಧರನೆಂಬವನಿಂದ ಪ್ರತಿಷ್ಠಾಪಿಸಲ್ಪಟ್ಟ ಸ್ಕಂದ ದೇವರ ಪೂಜೆಗೆಂದು ಕೆಲವು ಭೂಮಿಗಳನ್ನು ದತ್ತಿಯಾಗಿ ಬಿಟ್ಟುದುದು ತಿಳಿಯುತ್ತದೆ.[೯] ರಾಷ್ಟ್ರಕೂಟ ಅರಸರ ಪತನದ

---

* ಈ ಲೇಖನ ಬರೆಯುವಲ್ಲಿ ಮಾರ್ಗದರ್ಶನ ನೀಡಿದ ಡಾ. ಎಸ್. ಶೆಟ್ಟರ್, ಇತಿಹಾಸ ವಿಭಾಗದ ಮುಖ್ಯಸ್ಥರು, ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಋಣಿಯಾಗಿದ್ದೇನೆ

೧. S. I. I. Vol IX-PtI No. 165

೨. ಅದೆ 164

೩. ಅದೇ 164

೪. Ep. Cars Vol XII Ck. 43

೫. S.I.I- Vol XI-Pt No. 553

೬. S. I. I. Vol IX-PtI No. 166

೭. ಅದೇ 73

೮. ಅದೇ 65

೯. ಅದೇ 70

ಪತನವಾದ ನಂತರ ಕಲ್ಯಾಣಿಯ ಚಾಳುಕ್ಯರು ಕೊಟ್ಟಿತ್ತೊಣೆಯ ಅಭಿವೃದ್ಧಿಯಲ್ಲಿ ಭಾಗಿಯಾದುದು ವಿದಿತವಾಗುತ್ತದೆ. ಆಹವಮಲ್ಲನು (ಎರಡನೆಯ ತೈಲಪ) ಭೈರವದೇವನಿಗೆ ಕ್ರಿ. ಶ. ೯೭೬ ರಲ್ಲಿ ಭೂದತ್ತಿಯನ್ನು ಕೊಟ್ಟ ಬಗ್ಗೆ ಉಲ್ಲೇಖಿವಿದೆ.[೧೦] ಕ್ರಿ. ಶ. ೧೧೯೪ ರ ತ್ರಿಭುವನಮಲ್ಲ ದೇವನ ಆಳ್ವಿಕೆಯ ಶಾಸನವೊಂದರಲ್ಲಿ[೧೧] ಸ್ವಾಮಿ ದೇವನಿಗೆ ದತ್ತುಬಿಟ್ಟುದು ಮತ್ತು ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಕೊಟ್ಟಿ-ತ್ತೊಣೆಗೆ ಬರುತ್ತಿದ್ದ ಯಾತ್ರಿಕರ ಅನುಕೂಲಕ್ಕಾಗಿ ಸತ್ರವೊಂದಕ್ಕೆ ದತ್ತಿಬಿಟ್ಟಿರುವುದು ತಿಳಿದುಬರುವದು.[೧೨] ಹೊಯ್ಸಳ[೧೩] ಮತ್ತು ವಿಜಯನಗರ[೧೪] ಅರಸರಿಂದಲೂ, ಈ ಪರಂಪರೆಯು ಮುಂದುವರೆಯಿತು. ವಿಜಯನಗರ ಅರಸರ ಕಾಲದಲ್ಲಿ ವೀರಭದ್ರ ದೇವಾಲಯಕ್ಕೆ ದತ್ತಿ ಕೊಡಲಾಯಿತು.

ಇವೆಲ್ಲ ದಾಖಲೆಗಳು ಕೊಟ್ಟಿತ್ತೊಣೆ ರಾಷ್ಟ್ರಕೂಟ, ಕಲ್ಯಾಣಿಚಾಳುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸರುಗಳ ಆಳ್ವಿಕೆಯಲ್ಲಿ ಸಮೃದ್ಧ ಮತ್ತು ಸುಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

ಕೊಟ್ಟಿತ್ತೊಣೆ ಅನೇಕ ಪ್ರಮುಖ ಧರ್ಮಗಳ ಕೇಂದ್ರವಾಗಿತ್ತು. ಇಲ್ಲಿ ದೇಕಮ್ಮ, ಸ್ಕಂದ, ಭೈರವದೇವ, ತೆಲ್ಲಿಗೇಶ್ವರ, ಸರಸ್ವತೀ ವಿನಾಯಕ ಮುಂತಾದ ದೇವಾಲಯ ಗಳನ್ನು ಕಟ್ಟಿದ್ದು ನಮಗೆ ಶಾಸನಗಳ ಮೂಲಕ ತಿಳಿದು ಬರುತ್ತದೆ. ಅಲ್ಲದೆ ಮಠಗಳು ಮತ್ತು ಛತ್ರಗಳು ಕೂಡ ಅಲ್ಲಿ ಅಸ್ತಿತ್ವದಲ್ಲಿದ್ದುದೂ ತಿಳಿದು ಬರುತ್ತದೆ.

ಇಲ್ಲಿರುವ ದೇವಾಲಯಗಳಲ್ಲಿ ಪ್ರಾಚೀನವಾದದ್ದು ದೇಕಮ್ಮನ ದೇಗುಲ. ಇದು ಶಕ್ತಿಯ ದೇವಾಲಯ. ಇಲ್ಲಿಯ ಶಾಸನವೊಂದರ ಪ್ರಕಾರ ಮೊದಲೊಂದು ದತ್ತಿಯನ್ನು ಕುಱುಂಗೋಡಿನ (ಈಗಿನ ಕುರುಗೋಡು) ಮೂರುನೂರು ಮಹಾ ಜನರು ದೇಕಮ್ಮ ನಿಗೆ ಕೊಟ್ಟಿದ್ದು, ಅದನ್ನು ಕ್ರಿ. ಶ. ೯೪೭ ರಲ್ಲಿ ರಾಷ್ಟ್ರಕೂಟ ಅರಸನಾದ ಮುಮ್ಮಡಿ ಕೃಷ್ಣನು ಪುನರುತ್ಥಾನಗೊಳಿಸಿದನು.[೧೫] ಆದ್ದರಿಂದ ದೇಕಮ್ಮನ ದೇಗುಲ ಹತ್ತನೇ ಶತಮಾನಕ್ಕಿಂತ ಹಿಂದಿನದಾಗಿರಬೇಕು. ಈ ದೇವಿಯ ಪ್ರಸಿದ್ಧಿ ಸುತ್ತು ಮುತ್ತಲೆಲ್ಲ ಹರಡಿರಬೇಕು. ಆದ್ದರಿಂದಲೇ ದೂರದ ಕುಱುಂಗೋಡಿನ ಮಹಾಜನರು ದತ್ತಿಯನ್ನು ಬಿಟ್ಟುದು ಕಂಡುಬರುತ್ತದೆ. ಪ್ರಸ್ತುತ ಶಾಸನವು ಕಾರ್ತಿಕೇಯ ತಪೋವನದ ಮುಖ್ಯಸ್ಥ ನಿಂದ ಲೋಕಯ್ಯ ಗಾವುಂಡನು ಎಣ್ಣೆಯ ಗಾಣವೊಂದನ್ನು ದತ್ತಿಯಾಗಿತ್ತನೆಂದು ಉಲ್ಲೇಖಿಸುತ್ತದೆ. ಈ ದೇಗುಲವನ್ನು ದೇಕಮ್ಮ ಎನ್ನುವವಳು ಕಟ್ಟಿರಬೇಕು ಅಥವಾ ದೇಕಮ್ಮ ಎನ್ನುವವಳ ಹೆಸರಿನಲ್ಲಿ ಬೇರೊಬ್ಬರು ಕಟ್ಟಿಸಿರಬೇಕು.

---

೧೦. ಅದೇ 73
೧೧. ಅದೇ 164
೧೨: ಅದೇ 252
೧೩. ಅದೇ 336
೧೪. S. I. I. vol IX-Pt II 553
೧೫. S. I. I. vol IX-Pt I 65

ಕ್ರಿ. ಶ. ೯೭೧ [೧೬] ರಲ್ಲಿ ಸ್ಕಂದ ದೇವನ ವಿಗ್ರಹವನ್ನು ಈ ಪಟ್ಟಣದಲ್ಲಿ ಭಟತಜಿಾ ಗ್ರಾಮದ ಗದಾಧರನೆನ್ನುವವನು ಪ್ರತಿಷ್ಠೆ ಮಾಡಿದನು. ಅದೇ ಸಮಯಕ್ಕೆ ರಾಜ್ಯವಾಳುತ್ತಿದ್ದ ರಾಷ್ಟ್ರಕೂಟ ಖೊಟ್ಟಿಗನು ಈ ದೇವರ ಸೇವೆಗಾಗಿ ದತ್ತಿಯೊಂದನ್ನು ಬಿಟ್ಟ. ಕೊಟ್ಟಿತ್ತೊಣೆಯಲ್ಲಿ ಕಾರ್ತಿಕೇಯ ಅಥವಾ ಸ್ಕಂದನ ದೇವಾಲಯದ ಬಗ್ಗೆ ನಮಗೆ ಸಿಗುವ ಮೊದಲ ಉಲ್ಲೇಖ ಈ ಶಾಸನದಲ್ಲಿದೆ.

ಸ್ಕಂದನ ವಿಗ್ರಹ ಸ್ಥಾಪಿಸಿದ ಗದಾಧರನ ಬಗ್ಗೆ ನಮಗೆ ಕೊಳ್ಗಲ್ಲು ಶಾಸನದಲ್ಲಿ ಸಾಕಷ್ಟು ವಿವರಗಳು ಸಿಕ್ಕುತ್ತವೆ.[೧೭] ಕೊಟ್ಟಿತ್ತೊಣೆಯಲ್ಲಿ ಸ್ಕಂದನನ್ನು ಸ್ಥಾಪಿಸುವ ಮೊದಲು ಗದಾಧರನು ಕೋಳಗಲ್ಲಿನಲ್ಲಿ ಕಾರ್ತಿಕೇಯನ ವಿಗ್ರಹದ ಸ್ಥಾಪನೆ ಮಾಡಿದ್ದನು. ಶಕ ೮೮೯ ರಲ್ಲಿ ಖೊಟ್ಟಿಗನು ರಾಜ್ಯವಾಳುತ್ತಿದ್ದಾಗ ಬ್ರಹ್ಮಚಾರಿ ಗದಾಧರನು ಕಾರ್ತಿಕೇಯ, ಸೂರ್ಯ, ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತೀ ಮತ್ತು ವಿನಾಯಕರುಗಳ ವಿಗ್ರಹಗಳನ್ನು ಕೋಳಗಲುನಲ್ಲಿ ಪ್ರತಿಷ್ಠೆ ಮಾಡಿದನು. ಅಲ್ಲದೆ ಇವನು ಕೆರೆಯೊಂದನ್ನು, ಕೆಲವು ಬಾವಿಗಳನ್ನು ಮತ್ತು ಮಠವೊಂದನ್ನು ಕೂಡ ಕಟ್ಟಿಸಿದನು. ಗದಾಧರನು ಶಾಂಡಿಲ್ಯ ಗೋತ್ರದವನಾಗಿದ್ದು, ಗೌಡ ದೇಶದಿಂದ ಬಂದವನು. ಇವನು ತಡಾ ಎನ್ನುವ ಗ್ರಾಮದಲ್ಲಿ ಜನಿಸಿದವನು. ಹೀಗಾಗಿ ಗದಾಧರನು ಉತ್ತರದ ಕಡೆಯವನಾಗಿದ್ದು ದಕ್ಷಿಣದ ಕೋಳಗಲ್ಲಿಗೆ ಬಂದು ನೆಲೆಸಿದ್ದನೆಂದು ತಿಳಿಯುತ್ತದೆ. ಇವನು ಕಾರ್ತಿಕೇಯ ತಪೋವನದ ಮುಖ್ಯಸ್ಥನಾಗಿದ್ದನು. ಕಾರ್ತಿಕೇಯನ ಭಕ್ತನಾಗಿದ್ದಾಗ್ಯೂ ಇತರ ದೇವರುಗಳ ಬಗ್ಗೆ ಸಾಕಷ್ಟು ಗೌರವವನ್ನು ತಳೆದವನಾಗಿದ್ದನೆಂಬುದಕ್ಕೆ ಅವನು ಸ್ಥಾಪಿಸಿದ ಇನ್ನುಳಿದ ದೇವರುಗಳೇ ಸಾಕ್ಷಿ.

ಕೋಳಗಲ್ಲಿನಲ್ಲಿ ಕಾರ್ತಿಕೇಯನ ಸ್ಥಾಪನೆಯನ್ನು ಮಾಡಿದ ನಂತರ ಗದಾಧರನು ಕ್ರಿ. ಶ. ೯೭೧ ರಲ್ಲಿ ಕುಡುತಿನಿಯಲ್ಲಿ ಕೂಡ ಸ್ಕಂದನ ವಿಗ್ರಹ ಸ್ಥಾಪಿಸಿದನು. ಆದ್ದರಿಂದ ಕೋಳಗಲ್ಲಿನಲ್ಲಿ ಕಾರ್ತಿಕೇಯನ ವಿಗ್ರಹದ ಸ್ಥಾಪನೆಯಾದ ತರುವಾಯ ಅದರ ಸುತ್ತಮುತ್ತಲಿನ ಪ್ರದೇಶವು ಕಾರ್ತಿಕೇಯ ಭಕ್ತರ ಕೇಂದ್ರವಾದಂತೆ ಕಂಡುಬರುತ್ತದೆ. ಅಂತಹ ಕೇಂದ್ರಗಳಲ್ಲಿ ಕೊಟ್ಟಿತ್ತೊಣೆ ಮತ್ತು ಸಂಡೂರುಗಳು ಮುಖ್ಯ. ಕುಡುತಿನಿ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶದ ಕೆಲ ಶಾಸನಗಳಲ್ಲಿ ಕಾರ್ತಿಕೇಯ ತಪೋವನದ ಉಲ್ಲೇಖ ಬರುತ್ತದೆ. ಕೊಟ್ಟಿತ್ತೊಣೆಯು "ಶ್ರೀ ಸ್ವಾಮಿ ದೇವರ ಪಟ್ಟಣ [೧೮]" ಎಂದು ಮತ್ತು "ಕಾರ್ತಿಕೇಯನಪುರ....ಕೊಟ್ಟಿತ್ತೊಣೆ [೧೯] ಎಂದು ಪ್ರಸಿದ್ಧಿ ಹೊಂದಿತ್ತು. ಶಾಸನವೊಂದರಲ್ಲಿ ಕೊಟ್ಟಿತ್ತೊಣೆಯು ಸ್ವಾಮಿ ಕಾರ್ತಿಕ ದೇವರ ಮೊದಲ ಹಳ್ಳಿಯಾಗಿತ್ತೆಂಬ ಉಲ್ಲೇಖವಿದೆ.[೨೦]

---

೧೬. ಅದೇ 70
೧೭. Ep. Indica, vol XXI, p. 40 ff
೧೮. S. I. I. vol IX-Pt I 166
೧೯. Ep. Car Vol XII, Pg 43
೨೦. ಅದೇ Ck. 40

ಕಾರ್ತಿಕೇಯ ತಪೋವನ ಹೆಸರೇ ಸೂಚಿಸುವಂತೆ ಕಾರ್ತಿಕೇಯ ಭಕ್ತರ ಮುಖ್ಯ ಕೇಂದ್ರವಾಗಿತ್ತೆನ್ನಬಹುದು. ತಪೋವನದ ಮುಖ್ಯಸ್ಥರು ಬ್ರಹ್ಮಚರ್ಯ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅನೇಕ ಸಲ ಬೇರೆಯವರು ದತ್ತಿಗಳನ್ನು ಬಿಡುವಾಗ ತಪೋವನದ ಮುಖ್ಯಸ್ಥನು ಉಪಸ್ಥಿತನಿರುತ್ತಿದ್ದನು. ಅಲ್ಲದೇ ತಪೋವನದ ಮುಖ್ಯಸ್ಥನೂ ಕೆಲವು ಸಲ ದೇವಾಲಯಗಳಿಗೆ ದತ್ತಿ ಕೊಡುತ್ತಿದ್ದುದು ತಿಳಿದುಬರುತ್ತದೆ.

ಉದಾಹರಣೆಗೆ ಕ್ರಿ. ಶ. ೯೪೭ ರಲ್ಲಿ[೨೦] ದೇಕಬ್ಬೆಯ ದೇಗುಲಕ್ಕೆ ಗಾಣವೊಂದನ್ನು ದತ್ತಿಯಾಗಿ ತಪೋವನದ ಮುಖ್ಯಸ್ಥನು ಕೊಟ್ಟುದು ತಿಳಿಯುತ್ತದೆ. ಈ ತಪೋವನದ ಮುಖ್ಯಸ್ಥನು ಕೊಟ್ಟೂರಿನ ಚಟುವಟಿಕೆಗಳಲ್ಲಿ ಮುಖ್ಯವಾದ ಪಾತ್ರ ನಿರ್ವಹಿಸಿದಂತೆ ಕಾಣುವುದು. ಕ್ರಿ. ಶ. ೧೨೦೭ ರಲ್ಲಿ ಐದು ವರ್ಗದವರು, ಮುಮ್ಮುರಿ ದಂಡರು ಮುಂತಾದವರು ತಪೋವನದ ವಿಷ್ಣುಕರ ಬ್ರಹ್ಮಚಾರಿಯ ಮುಂದೆ ಯಾವುದಾದರೂ ನಿಯಮವನ್ನು ಊರ ಜನರು ಉಲ್ಲಂಘಿಸಿದಲ್ಲಿ ಅಥವಾ ಯಾವುದೇ ಅಪರಾಧವನ್ನು ಮಾಡಿದಲ್ಲಿ ಅಂತಹ ವಿಷಯವನ್ನು ತಪೋವನದ ಮುಖ್ಯಸ್ಥನ ಕಡೆ ಒಯ್ಯಬೇಕೆಂದು ಒಪ್ಪಿಕೊಂಡರು.[೨೧] ತಪೋವನದ ಮುಖ್ಯಸ್ಥನು ಬಹುಶಃ ನ್ಯಾಯಾಧಿಕಾರಗಳನ್ನು ಹೊಂದಿದ್ದು ಶಾಂತಿ, ಶಿಸ್ತು ಕಾಯ್ದುಕೊಳ್ಳಲು ನೆರವಾಗುತ್ತಿದ್ದ. ಅಲ್ಲದೆ ಅವನ ಕಾರ್ಯಕ್ಷೇತ್ರ ಬರೀ ಕೊಟ್ಟೂರಿಗೆ ಸೀಮಿತವಾಗಿರದೆ ಅದರ ಸುತ್ತುಮುತ್ತಲೂ ಹರಡಿತ್ತು. ಕೋಳಗಲ್ಲಿನ ಶಾಸನವೊಂದರ ಪ್ರಕಾರ ತಪೋವನದ ಗದಾಧರಯ್ಯನು ಕೊಳ್ಗಲ್ಲನ್ನು ಆಳುತ್ತಿದ್ದ.[೨೨]

ಸುತ್ತಮುತ್ತಲಿನ ಪ್ರದೇಶದಲ್ಲಿ ಕಾರ್ತಿಕೇಯನ ಅನೇಕ ಗುಡಿಗಳು ಅಸ್ತಿತ್ವದಲ್ಲಿದ್ದವು. ಈ ಪ್ರದೇಶದಲ್ಲಿಯೇ ಪ್ರಾಚೀನವಾದ ಕಾರ್ತಿಕೇಯ ದೇವರ ವಿಗ್ರಹವನ್ನು ಕೊಳ್ಗಲ್ಲಿನಲ್ಲಿ ಸ್ಥಾಪಿಸಲಾಗಿತ್ತೆಂಬುದನ್ನು ಹಿಂದೆ ಪ್ರಸ್ತಾಪಿಸಲಾಗಿದೆ. ಸಂಡೂರಿಗೆ ಹತ್ತಿರದಲ್ಲಿರುವ ಕುಮಾರಸ್ವಾಮಿಯ ಗುಡ್ಡದ ಮೇಲೆ ಕಾರ್ತಿಕೇಯ ದೇವಾಲಯವೊಂದಿದೆ. ಆ ದೇವಾಲಯದ ಶಾಸನದ ಪ್ರಕಾರ[೨೩] ಪೂರ್ವದಲ್ಲಿ ರಾಷ್ಟ್ರಕೂಟ ಅರಸನಾದ ಕೃಷ್ಣರಾಜನು ಸ್ವಾಮಿದೇವನಿಗೆ ದತ್ತಿಯಾಗಿತ್ತಿದ್ದ ಕೆಜಿಯ ಪಳ್ಳಿ ಎನ್ನುವ ಹಳ್ಳಿಯನ್ನು ಮತ್ತೆ ಅದೇ ದೇವಾಲಯಕ್ಕೆ ದತ್ತಿಯಾಗಿ ಹೊಯ್ಸಳ ಎರಡನೇ ವೀರ ಬಲ್ಲಾಳನ ಆಜ್ಞೆಯ ಮೇರೆಗೆ ಪುನಃ ಕೊಡಲಾಯಿತು. ಈ ದತ್ತಿಯನ್ನು ಕಾರ್ತಿಕೇಯ ತಪೋವನದ ಮುಖ್ಯಸ್ಥನಾದ ವಿಷ್ಣುಕರ ಬ್ರಹ್ಮಚಾರಿಯ ಆಡಳಿತಕ್ಕೆ ಕೊಡಲಾಗಿತ್ತು.

ಆಗ ಪ್ರಚಾರದಲ್ಲಿದ್ದ ಲೊಕ್ಕಿಗದ್ಯಾಣವನ್ನು ನವಿಲು ನಾಣ್ಯಗಳಾಗಿ ಪರಿವರ್ತಿಸಲು ಕೊಟ್ಟೂರಿನಲ್ಲಿ ಟಂಕ ಶಾಲೆಯೊಂದಿತ್ತು.[೨೪] ನವಿಲು ಕಾರ್ತಿಕೇಯನ ವಾಹನ

---

೨೦. S. I. I. Vol IX–PtI 65
೨೧. ಅದೇ 327
೨೨. ಅದೇ 67
೨೩. ಅದೇ 326
೨೪. ಅದೇ 161

ವಾಗಿದ್ದು, ಆ ಕಾರ್ತಿಕೇಯನ ಪ್ರಭಾವ, ಕೊಟ್ಟಿತೊಣ್ಣೆಯಲ್ಲಿ ಎಷ್ಟು ಬಲವಾಗಿ ತ್ತೆಂಬುದಕ್ಕೆ ಇದೊಂದು ನಿದರ್ಶನ.

ಕುಣುಂಗೋಡಿನಲ್ಲಿ ನವಿಲ ಪೊನ್ನನ್ನು[೧೬] ಉಪಯೋಗಿಸುತ್ತಿದ್ದರು. ಕೊಟ್ಟಿತೊಣ್ಣೆಯಲ್ಲಿ ನವಿಲ ಕೋಲು[೧೭] ಎನ್ನುವ ಅಳತೆ ಬಳಕೆಯಲ್ಲಿತ್ತು. ಕ್ರಿ. ಶ. ೧೧೨೮ ರಲ್ಲಿ ಕೊಟ್ಟಿತೊಣ್ಣೆಯ ಅಕ್ಕಸಾಲಿಗರಿಗೆ ಲೊಕ್ಕಿ ನಾಣ್ಯಗಳನ್ನು ನವಿಲಚ್ಚಿನ್ನಾಗಿ ಪರಿವರ್ತಿಸುವ ಕೆಲಸವನ್ನು ವಹಿಸಿಕೊಡಲಾಯಿತು. ಇವರು ಹನ್ನೆರಡು ಗದ್ಯಾಣಗಳನ್ನು ಕಾರ್ತಿಕೇಯನಿಗೆ ದತ್ತಿಯಾಗಿ ಕೊಟ್ಟರು.[೧೮] ಅಲ್ಲದೆ ಮಹಾವಿಷ್ಣುವರಸನು ಕೆಲವು ಸುಂಕ ತೆರಿಗೆಯನ್ನು ಇದೇ ದೇವರಿಗೆ ದತ್ತಿಯಾಗಿಬಿಟ್ಟನು. ಬಹುಶಃ ಕ್ರಿ.ಶ. ೯೭೧ರಲ್ಲಿ ಗದಾಧರನು ಪ್ರತಿಷ್ಠೆ ಮಾಡಿದ ಸ್ಕಂದನೇ[೧೯] ಈ ಶಾಸನದಲ್ಲಿ ಬರುವ ಸ್ವಾಮಿದೇವನಾಗಿರಬೇಕು. ಸ್ಕಂದನ ದೇವಸ್ಥಾನವು ಊರಿನ ಮುಖ್ಯ ಕೇಂದ್ರವಾಗಿದ್ದು ಊರಿನವರು ಇಲ್ಲಿ ಸಭೆ ಸೇರಿ ಧಾರ್ಮಿಕ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದರೆಂಬುದನ್ನು ಒಂದೆರಡು ಶಾಸನಗಳು ಸ್ಪಷ್ಟೀಕರಿಸುತ್ತವೆ.

ಅ) ಕ್ರಿ. ಶ. ೯೭೭ ರಲ್ಲಿ[೨೦] ಕಾರ್ತಿಕೇಯ ತಪೋವನದ ಮುಖ್ಯಸ್ಥನಾದ ಗದಾಧರ ಬ್ರಹ್ಮಚಾರಿ, ಐದು ವರ್ಗದವರು, ಮತ್ತು ಹಂಪಣ್ಣ ಚಟ್ಟೋಪಾಧ್ಯಾಯರು. ಸ್ವಾಮಿದೇವರ ಸಮ್ಮುಖದಲ್ಲಿ ಭೂದತ್ತಿಯನ್ನು ಭೈರವ ದೇವರಿಗೆ ಕೊಡ ಮಾಡಿದರು.

ಆ) ಕ್ರಿ. ಶ. ೧೧೪೮ ರಲ್ಲಿ[೨೧] ಸ್ವಾಮಿ ದೇವರ ಸನ್ನಿಧಾನದಲ್ಲಿ ಕಾರ್ತಿಕೇಯ ತಪೋವನದ ಮಾಧವ ಬ್ರಹ್ಮಚಾರಿಯರಸ. ಕೊಟ್ಟಿತೊಣ್ಣೆಯ ಐದುವರ್ಗದವರ ಸಮುಖದಲ್ಲಿ. ಮಲ್ಲರಸನು ಸತ್ರವೊಂದಕ್ಕೆ ದತ್ತಿಯನ್ನು ಕೊಟ್ಟನು.

ಶಾಸನವೊಂದರಲ್ಲಿ ಆ ಶಾಸನದಲ್ಲಿಯ ಧರ್ಮವನ್ನು ಪ್ರತಿಪಾಲಿಸುವವರಿಗೆ ಶ್ರೀ ಸ್ವಾಮಿಯಕೋಟಿ ತೀರ್ತ್ಥದಲ್ಲಿ ದಾನಮಾಡಿದ ಫಲ ಸಿಗುವುದೆಂದಿದೆ.[೨೨] ಕ್ರಿ. ಶ. ೧೧೪೮ ರ[೨೩] ಶಾಸನವೊಂದರಲ್ಲಿ ಈ ದೇವರನ್ನು ಶತಕೋಟಿತೀರ್ತ್ಥದ ಶ್ರೀ ಸ್ವಾಮಿ ದೇವನೆಂದು ವರ್ಣಿಸಲಾಗಿದ್ದು ಅಲ್ಲಿಗೆ ಯಾತ್ರಿಕರು ಬರುತ್ತಿದ್ದುದನ್ನು ಉಲ್ಲೇಖಿಸಲಾಗಿದೆ. ದೇಶರಸನ ಮಗ ಮಲ್ಲರಸನು ಶತಕೋಟಿತೀರ್ತ್ಥಕ್ಕೆ ಬರುತ್ತಿದ್ದ ಕಪ್ಪಡಿಯಾತ್ರಿಕರ ಸೌಲಭ್ಯಕ್ಕಾಗಿ ಛತ್ರಕ್ಕೆ ಭೂಮಿಯನ್ನು ದತ್ತಿಯಾಗಿ ಕೊಟ್ಟಿದ್ದನು. ಆದ್ದರಿಂದ ಈ ದೇವಸ್ಥಾನ ಹನ್ನೆರಡನೇ ಶತಮಾನದಲ್ಲಿ ಸಾಕಷ್ಟು ಪ್ರಸಿದ್ಧಿ ಹೊಂದಿದ್ದು

೧೬. ಅದೇ 53
೧೭. ಅದೇ 166
೧೮. ಅದೇ 164
೧೯. ಅದೇ 70
೨೦. ಅದೇ 73
೨೧. ಅದೇ 252
೨೨. ಅದೇ 199
೨೩. ಅದೇ 252

ಕೊಟ್ಟಿತ್ತೊಣೆಯು ಒಂದು ಯಾತ್ರಾ ಸ್ಥಳವಾಗಿತ್ತು. ಮೇಲಾಗಿ ಕೊಟ್ಟಿತ್ತೊಣೆಯ ಐದು ವರ್ಗದವರು ತಮ್ಮನ್ನು "ಶ್ರೀ ಸ್ವಾಮಿ ಕಾರ್ತಿಕೇಯ ದೇವ ಶ್ರೀಪಾದ ಪದ್ಮೋಪ ಜೀವಿಗಳು" ಎಂದು ಕರೆದುಕೊಳ್ಳುತ್ತಿದ್ದರು.[೩೪]

ಶಾಸನಗಳಲ್ಲಿ ಭೈರವದೇವ, ದುರ್ಗೇಶ್ವರ, ತಿಲ್ಲಿಗೇಶ್ವರ, ಮಾರ್ತಂಡೇಶ್ವರ, ವೀರಭದ್ರ, ನಾಗೇಶ್ವರ, ತ್ರೈ ಪುರುಷದೇವ, ಋಣ ಮೋಚನದೇವ, ಸೋಮೇಶ್ವರ ದೇವ, ಸರಸ್ವತೀ ಮತ್ತು ವಿನಾಯಕ ಮೊದಲಾದ ದೇವಾಲಯಗಳ ಉಲ್ಲೇಖ ಬಂದಿದೆ.

ಭೈರವದೇವರಗುಡಿ ಒಂದು...ಕೇರಿ (ಹೆಸರು ಒಡೆದು ಹೋಗಿದೆ) ಯಲ್ಲಿದ್ದುದು ಕ್ರಿ. ಶ. ೯೭೬ ರ ಶಾಸನವೊಂದರಲ್ಲಿ ತಿಳಿದುಬರುತ್ತದೆ.[೩೫] ಕ್ರಿ. ಶ. ೧೦೫೦ ರಲ್ಲಿ[೩೬] ಜಸಕಬೆಯು ಸೋಮೇಶ್ವರನಿಗೆ ೧೫೯ ಮತ್ತರು, ೪೫೦ ಕಮ್ಮ ಭೂಮಿಯನ್ನು ದಾನವಾಗಿ ಕೊಟ್ಟಳು. ಬಹುಶಃ ಸೋಮೇಶ್ವರ ದೇವಸ್ಥಾನ ಹನ್ನೊಂದನೆ ಶತಮಾನದ ಆದಿಭಾಗದಲ್ಲಿ ಕಟ್ಟಿರಬೇಕು. ಮಳಪ ನಾಯಕನ ಮಗ ಮಾರ್ತಂಡನಾಯಕನು ಶಿವನಭಕ್ತ. ಕ್ರಿ. ಶ. ೧೧೧೯ ರಲ್ಲಿ[೩೭] ಶಿವಗೃಹವೊಂದನ್ನು ಕಟ್ಟಿ ಮಾರ್ತಂಡೇಶ್ವರನನ್ನು ಪ್ರತಿಷ್ಠೆಮಾಡಿದ. ಮಾರ್ತಂಡೆ ನಾಯಕನು ಇತರ ಎರಡು ದೇವಾಲಯಗಳನ್ನು ಕೂಡ ಕಟ್ಟಿಸಿದ. ಅದೇ ವಿನಾಯಕ ಮತ್ತು ಸರಸ್ವತೀ ದೇವಾಲಯಗಳು. ಅಲ್ಲದೆ ಒಂದು ಸುಂದರವಾದ ಸಭಾಮಂಟಪವನ್ನು ಕೂಡ ರಚಿಸಿದ. ಇವನು ಕೆಲವು ಭೂ ದತ್ತಿಗಳನ್ನು ಈ ದೇವರಿಗೆ ಮತ್ತು ದೇವಾಲಯಕ್ಕೆ ಸಂಬಂಧಿಸಿದ ಸನ್ಯಾಸಿಗಳ ಸೌಲಭ್ಯಕ್ಕಾಗಿ ಬಿಟ್ಟುಕೊಟ್ಟನು.

ಕ್ರಿ. ಶ. ೧೧೨೦ ರ[೩೮] ಶಾಸನವು ದುರ್ಗೇಶ್ವರ ದೇವನನ್ನು ಉಲ್ಲೇಖಿಸುತ್ತದೆ. ಈ ದೇವರಿಗೆ ದುರ್ಗರಾಜ ಮತ್ತು ಗೌರಕಬ್ಬರಸಿಯರ ಪುತ್ರಿಯಾದ ಅಪ್ರತಿಸೂಜೆ ಚಂಗಣಬ್ಬರಸಿಯು ದತ್ತಿಯೊಂದನ್ನು ಕೊಟ್ಟಳು. ದುರ್ಗರಾಜನೊಬ್ಬ ದಂಡನಾಯಕ. ಈ ಶಾಸನ ಬಹಳಷ್ಟು ನಷ್ಟವಾಗಿದೆ. ಬಹುಶಃ ಶಿವಭಕ್ತನಾಗಿದ್ದ ದುರ್ಗರಾಜನೇ, ಶಿವನಿಗಾಗಿ ತನ್ನ ಹೆಸರಿನಲ್ಲಿ ಈ ದುರ್ಗೇಶ್ವರನನ್ನು ಪ್ರತಿಷ್ಠಾಪಿಸಿರಬಹುದೆಂದು ಊಹಿಸಬಹುದು.

ಕ್ರಿ. ಶ. ೧೧೬೮ ರಲ್ಲಿ ಕೊಂಕಣಗೇರಿಯ ಗಾವುಂಡನೊಬ್ಬನ ಮಗ (ಹೆಸರು ನಶಿಸಿ ಹೋಗಿದೆ) ಋಣಮೋಚನ ದೇವರ ಗುಡಿಯನ್ನು ಕಟ್ಟಿಸಿ ದೇವರನ್ನು ಪ್ರತಿಷ್ಠಿಸಿ ದತ್ತಿಯೊಂದನ್ನು ಬಿಟ್ಟ.[೩೯]

---

೩೪. ಅದೇ 2521

೩೫. ಅದೇ 73

೩೬. S. I. I. Vol XVII No.56

೩೭. S. I. I. Vol IX-Pt I No. 197

೩೮. ಅದೇ I 99

೩೯. S. I. I. vol XVII No. 50

ಕ್ರಿ. ಶ. ೧೨೧೦ ರ ಶಾಸನವೊಂದರಲ್ಲಿ ನಾಗೇಶ್ವರ ದೇವರ ಉಲ್ಲೇಖವಿದೆ.[೪೦] ವಿನಯನಿಧಿ ವಿಷ್ಣುಕರದೇವ, ಐದು ವರ್ಗದವರು ಮತ್ತು ಇತರರು ಭೂಮಿಯನ್ನು ಮನೆಯ ನಿವೇಶನಗಳನ್ನು ಮತ್ತು ಗಾಣವೊಂದನ್ನು ನಾಗೇಶ್ವರ ದೇವರಿಗೆ ದತ್ತಿಯಾಗಿ ಕೊಟ್ಟರು. ವಿಷ್ಣುಕರದೇವನು ಕಾರ್ತಿಕೇಯ ತಪೋವನದ ಮುಖ್ಯಸ್ಥ. ದತ್ತಿ ಬಿಟ್ಟ ಇತರರಲ್ಲಿ ಸುಂಕವೆಗ್ಗಡೆ ನಾಗರಸನೊಬ್ಬ.

ಕ್ರಿ. ಶ. ೧೨೯೯ ರಲ್ಲಿ ಕೊಟ್ಟಿತೊಣೆಯ ತೆಲ್ಲಿಗರು ತೆಲ್ಲಿಗೇಶ್ವರನನ್ನು ಪ್ರತಿಷ್ಠೆ ಮಾಡಿದರು.[೪೧] ಈ ಅರವತ್ತೊಕ್ಕಲು ತೆಲ್ಲಿಗರು ದೇವರ ಸೇವೆಗಾಗಿ, ಸ್ವಾಮಿ ಕಾರ್ತಿಕೇಯ ದೇವ ತಪೋವನದ ಉದಯಕರ ಬ್ರಹ್ಮಚಾರಿಯರಸರು ಮತ್ತು ಇತರರ ಸಮ್ಮುಖದಲ್ಲಿ ದತ್ತಿಯೊಂದನ್ನು ಬಿಟ್ಟರು.

ದೇವಾಲಯಗಳೊಂದಿಗೆ ಕೊಟ್ಟಿತೊಣೆಯಲ್ಲಿ ಕೆಲವು ಛತ್ರ ಮತ್ತು ಮಠಗಳು ಅಸ್ತಿತ್ವದಲ್ಲಿದ್ದವು. ಕೆಲವು ಶಾಸನಗಳಲ್ಲಿ ಮಠಗಳ ಉಲ್ಲೇಖವಿದೆ. ಕ್ರಿ. ಶ. ೧೨೯೯(?)ರ ಶಾಸನವೊಂದು ಪಂಚಮಠಸ್ಥಾನದ ತಪೋಧನರನ್ನು ಉಲ್ಲೇಖಿಸುತ್ತದೆ.[೪೨] ಹೊಯ್ಸಳರ ಶಾಸನವೊಂದರಲ್ಲಿ ಕಲ್ಲಿಮಟ (ಕಲ್ಮಠ ?)ವೆಂಬ ಮಠವನ್ನು ಹೆಸರಿಸಲಾಗಿದೆ.[೪೩] ಈ ಕಲ್ಮಠ ಒಂದು ಪ್ರಸಿದ್ಧಿಹೊಂದಿದೆ ಶೈವ ಮಠವಾಗಿದ್ದು ಅದು ಮಲ್ಲಿಕಾರ್ಜುನ ಪಂಡಿತನ ಆಡಳಿತದಲ್ಲಿತ್ತು. ಮಲ್ಲಿಕಾರ್ಜುನ ಪಂಡಿತನು ಪಂಚ ಪ್ರತಿಷ್ಠಾನಗಳಾದ ಮಾಯ, ಭೂಪಾಲ, ಯೋಗಪಾರಾಯಣ, ಪ್ರತಿಷ್ಠೆ ಮತ್ತು ಪ್ರತಿಷ್ಠಾರ್ಣವಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ತರ್ಕ, ವ್ಯಾಕರಣ, ವೃತ್ತಿ ಮತ್ತು ಪಂಜಿಗಳಲ್ಲಿ ನುರಿತವನು. ಬ್ರಾಹ್ಮದೀಕ್ಷ ಮತ್ತು ದುಗ್ಗ ಟೀಕು ಶಾಸ್ತ್ರಗಳ ಪಾರಂಗತ ಅಲ್ಲದೆ ಬ್ರಹ್ಮವಿಷ್ಣು ಮಹೇಶ್ವರ ಪಾದಾರಾಧಕ. ಕೊಟ್ಟಿತೊಣೆಯಲ್ಲಿ ಶೈವ ಮತ ಪ್ರಸಿದ್ಧಿಯಾಗಿದ್ದುದಕ್ಕೆ ಅಲ್ಲಿಯ ಶೈವ ದೇವಾಲಯಗಳು ಮತ್ತು ಮಠಗಳೇ ಸಾಕ್ಷಿ. ಕ್ರಿ. ಶ. ೧೦೫೦ರ ಶಾಸನದಲ್ಲಿ ಆನೆಯಮಠದ ಉಲ್ಲೇಖವಿದೆ.[೪೪]

ಕೊಟ್ಟಿತೊಣೆ ಸಂಪದ್ಭರಿತ ಕೇಂದ್ರವಾಗಿತ್ತು. ಶಾಸನಗಳು, ಅನೇಕ ಕೆರೆಗಳನ್ನು ಹೆಸರಿಸುತ್ತವೆ: ಚಂಪನ ಕೆಱೆ[೪೫], ಗಂಜಿಕೆಱೆ[೪೬]......ಮಯ್ಯನ ಕೆಱೆ[೪೭] ಸೆಟ್ಟಿಯ ಕೆರೆ[೪೮] ಮತ್ತು ಕಾಟಿಮ ಕೆಱೆ.[೪೯]. ಈ ಕೆರೆಗಳು ಸುತ್ತಮುತ್ತಲಿನ ಹೊಲಗಳಿಗೆ

---

೪೦. ಅದೇ 45

೪೧. S. I. I. Vol IX- Pt I No. 336

೪೨. ಅದೇ 336

೪೩. EP. Car Vol XII Ck 40 ಮತ್ತು 93

೪೪. S. I. I. Vol XVII No. 56

೪೫. S. I. I. Vol IX-Pt I No. 166

೪೬. ಅದೇ 166

೪೭. ಅದೇ 199

೪೮. S I, I. Vol XVII No. 45

೪೯. ಅದೇ 45

ನೀರನ್ನು ಒದಗಿಸುತ್ತಿದ್ದವು. ಹೀಗಾಗಿ ವ್ಯವಸಾಯ ಕಾರ್ಯಗಳು ಬಹಳ ಫಲಪ್ರದ ವಾಗಿರಬೇಕು. ವ್ಯವಸಾಯಗಾರರಲ್ಲದೇ ಕೊಟ್ಟೂರಿನ ಇತರ ಕಸುಬುದಾರರೆಂದರೆ ತೊಲ್ಲಿಗರು, ಅಕ್ಕಸಾಲಿಗರು, ಕಲ್ಲು ಕೆಲಸದವರು, ಲಿಪಿಕಾರರು, ರೂವಾರಿಗಳು ಮತ್ತಿತರರು. ಶಾಸನವೊಂದು ಕೆಲವು ಅಕ್ಕಸಾಲಿಗರನ್ನು ಹೆಸರಿಸುತ್ತದೆ. ಇವರಾರೆಂದರೆ ಮಾದೋಜನ ಮಗ ಸಾವಿಮೋಜ ಮತ್ತು ಜೇಜೋಜನ ಮಗ ಚಿಕ್ಕಮಾದೋಜ.೫೦ ಈ ಪಟ್ಟಣದಲ್ಲಿಯ ಲಿಪಿಕಾರರಲ್ಲಿ ಸಾವಿಮಯ್ಯನ ಮಗ ದುಗ್ಗಿಮಯ್ಯನು ಒಬ್ಬ. ಇವನು ಕ್ರಿ. ಶ. ೧೧೫೮ರ ಶಾಸನವನ್ನು ಕೊರೆದ.೫೧ ಇಲ್ಲಿರುವ ಕೆಲ ದೇವಾಲಯಗಳು ಮತ್ತು ಮೂರ್ತಿಗಳು ಅಲ್ಲಿಯ ರೂವಾರಿ ಮತ್ತು ವಾಸ್ತುಶಿಲ್ಪ ನಿಪುಣರ ನೈಪುಣ್ಯತೆಗೆ ಸಾಕ್ಷಿ.

ಈ ಪಟ್ಟಣವು ಸುತ್ತುಮುತ್ತಲಿನ ಊರುಗಳಾದ ಬಿಯನ ಹಟ್ಟಿ, ಕೋಳೂರು, ಕುರುಗೋಡು, ಕೋಳಗಲ್ಲು ಮತ್ತು ದೋರವಾಡೆಗಳಿಗೆ ರಸ್ತೆಗಳ ಮೂಲಕ ಸಂಪರ್ಕ ಹೊಂದಿತ್ತು. ಈ ಮಾರ್ಗಗಳು ವ್ಯಾಪಾರಿಗಳಿಗೆ ಮತ್ತು ಯಾತ್ರಿಕರಿಗೆ ಅನುಕೂಲ ವಾಗಿದ್ದುವು.

ಕೊಟ್ಟೂರಿನಲ್ಲಿ ಅನೇಕ ಶಾಸನಗಳಿದ್ದು ಅವುಗಳನ್ನು ಅವಲೋಕಿಸಿದಾಗ ಕೆಲವು ಮಹತ್ವದ ಸಂಗತಿಗಳು ನಿದರ್ಶನಕ್ಕೆ ಬರುವುವು. ಶೈವ, ಶಕ್ತಿ ಮತ್ತು ಕಾರ್ತಿ ಕೇಯನ ದೇವಾಲಯಗಳ ಬಗ್ಗೆ ಅಗ್ರ ಪಂಕ್ತಿಯ ವಿವರಣೆ ದೊರೆಯುವುದು. ಆದರೆ ಶಾಸನಗಳಲ್ಲಿ ಉಲ್ಲೇಖವಾಗದ ದೇವಾಲಯವೊಂದರ ಅವಶೇಷಗಳು ಕುಡು ತಿನಿಯಲ್ಲಿ ಸಿಗುತ್ತದೆ. ಇದು ಜಿನಾಲಯದ ಅವಶೇಷವಾಗಿದೆ. ಈಗ ರಾಮಲಿಂಗನ ಗುಡಿಯೆಂದು ಕರೆಯಲ್ಪಡುತ್ತಿದೆ. ಗರ್ಭಗುಡಿಯಲ್ಲಿ ಶಿವಲಿಂಗವೊಂದಿದೆ. ಆದರೆ ಈ ದೇವಾಲಯ ಮೊದಲು ಜೈನರ ಬಸದಿಯಾಗಿದ್ದುದರಲ್ಲಿ ಯಾವುದೇ ಸಂಶಯವಿಲ್ಲ. ಏಕೆಂದರೆ, ರಾಮಲಿಂಗನ ಗುಡಿಯ ಆವರಣದಲ್ಲಿ ರುಂಡ ಹೋದ ಯೋಗಾಸನದಲ್ಲಿ ರುವ ತೀರ್ಥಂಕರನ ದೊಡ್ಡ ಲಿಂಗವೊಂದಿದೆ. ಬದಿಯಲ್ಲೇ ಭಗ್ನವಾದ ಜೈನಯಕ್ಷಿಯ ಮೂರ್ತಿಯೊಂದಿದೆ. ಅಲ್ಲದೆ ಅನಂತರ ಕಟ್ಟಲ್ಪಟ್ಟ ಮುಂಭಾಗದ ಗೋಡೆಯಲ್ಲಿ ತೀರ್ಥಂಕರನ ಸಿಂಹ ಪೀಠವನ್ನು ಕಟ್ಟಡದ ಕಲ್ಲನ್ನಾಗಿ ಬಳಸಿದ್ದಾರೆ. ಈ ಸಿಂಹಪೀಠ ಮೊದಲು ಗರ್ಭಗುಡಿಯಲ್ಲಿರಬೇಕು. ಮೇಲಾಗಿ ಈ ಗುಡಿ ಜೈನ ಬಸದಿ ಎಂದು ಇನ್ನೊಂದು ಬಲವಾದ ಆಧಾರವೆಂದರೆ : ಗರ್ಭಗುಡಿಯ ಹೊರ ಗೋಡೆಗಳ ಮೇಲೆ ಖಡ್ಗಾಸನದಲ್ಲಿರುವ ಜಿನನ ಮೂರ್ತಿಗಳನ್ನು ಕೆತ್ತಲಾಗಿದೆ. ಈ ಬಸದಿ ಯಾವ ತೀರ್ಥಂಕರನಿಗೆ ಕಟ್ಟಲಾಗಿತ್ತೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಸಿಂಹ ಪೀಠದ ಮೇಲೆ ಯಾವುದೇ ಲಾಂಛನವಿಲ್ಲ.

★ ಎಸ್. ರಾಜಶೇಖರ

---

೫೦. S. I. I. Vol IX- Pt No- 164

೫೧. ಅದೇ No. 164

ವಿಮರ್ಶೆಯ ವ್ಯಾಪ್ತಿ

ವಿಮರ್ಶೆ ಮತ್ತು ಪರಾಮರ್ಶೆ ಎಂಬ ಪದಗಳು ಸಂಸ್ಕೃತದಲ್ಲಿ ಬಳಕೆಯಲ್ಲಿದ್ದುವಾದರೂ, ಇಂದು ಈ ಪದಗಳು ಪಡೆದುಕೊಂಡ ಅರ್ಥವ್ಯಾಪ್ತಿಯನ್ನು ಅವು ಆಗ ಪಡೆದಿರಲಿಲ್ಲ. ಈ ಪದಗಳಿಗೆ "ಹಿಡಿದು ಎಳೆ, ಬಗ್ಗಿಸು, ಎರಿಹೋಗುವಿಕೆ, ಹಿಂಸೆ, ಅತೃಪ್ತಿ, ನ್ಯಾಯನಿರ್ಣಯ" ಈ ಮೊದಲಾದ ಅರ್ಥಗಳ ಜೊತೆಗೆ "ವಿಚಾರ, ಪರಿಶೀಲನೆ" ಎಂಬ ಅರ್ಥವಿದ್ದುದೂ ನಿಜ. ಆದರೆ ಇಂದು ಕನ್ನಡದಲ್ಲಿ ಈ ಪದಗಳನ್ನು ನಾವು Criticism ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ಪ್ರಯೋಗಿಸುತ್ತಿರುವೆವು. ಹೆಚ್ಚು ಕಡಿಮೆ ಇದೇ ಅರ್ಥದಲ್ಲಿ ಮೊದಲು ಟೀಕೆ, ಟಿಪ್ಪಣಿ, ಭಾಷ್ಯ ಮೊದಲಾದ ಪದಗಳನ್ನು ಬಳಸಲಾಗುತ್ತಿತ್ತು. ಈ ಪದಗಳನ್ನು ತತ್ತ್ವ, ಶಾಸ್ತ್ರ ಮೊದಲಾದವುಗಳಂತೆ ಕಾವ್ಯದ ವಿವರಣೆಗೂ ಬಳಸಲಾಗುತ್ತಿತ್ತು. ಹಾಗೆ ಕವಿಗಳಂತೆ ಸುಪ್ರಸಿದ್ಧ ಟೀಕಾಕಾರರೂ ನಮ್ಮಲ್ಲಿ ಆಗಿಹೋದರು.[೧]

ಆದರೆ ಈ ಪ್ರಾಚೀನ ಟೀಕಾಕಾರರ ಅಥವಾ ಭಾಷ್ಯಕಾರರ ದೃಷ್ಟಿ ಹಾಗೂ ಆಧುನಿಕ ವಿಮರ್ಶಕರ ದೃಷ್ಟಿ ಇವುಗಳಲ್ಲಿ ವ್ಯತ್ಯಾಸವಿದೆ. ಮುಖ್ಯವಾಗಿ ವಿಷಯಗ್ರಹಣಕ್ಕೆ ಸಹಾಯ ಮಾಡುವುದೇ ಅವರ ಉದ್ದೇಶವಾಗಿತ್ತು. ಆದರೆ ಆಧುನಿಕ ವಿಮರ್ಶಕ ವಿಷಯಗ್ರಹಣದ ಜೊತೆಗೇ ಕಾವ್ಯದ ರಸಾಸ್ವಾದಕ್ಕೂ ದಾರಿಮಾಡಿಕೊಡುತ್ತಾನೆ. ಈ ಆಧುನಿಕ ವಿಮರ್ಶೆಯ ಅರ್ಥವ್ಯಾಪ್ತಿಯನ್ನು ಕುರಿತು ವಿವೇಚಿಸುವುದೇ ಈ ಲೇಖನದ ಉದ್ದೇಶ.

ಕವಿ, ವಾಚಕ ಮತ್ತು ವಿಮರ್ಶಕ ಇವರು ಒಂದೇ ಸ್ವಭಾವದವರೆಂದು ಹೇಳಬಹುದು. ಈ ಮೂವರಲ್ಲೂ ಮುಖ್ಯವಾಗಿ ಇರುವ ಗುಣಧರ್ಮವೆಂದರೆ ಸಹೃದಯತೆ. ಆದರೂ ಇವರ ಪ್ರವೃತ್ತಿ ಬೇರೆ ಬೇರೆಯಾಗಿದೆ. ಕವಿ ಕಾವ್ಯವನ್ನು ರಚಿಸುವನು. ವಾಚಕ ಅದನ್ನು ಓದಿ ಸಂತೋಷಪಡುವನು; ವಿಮರ್ಶಕ ಓದಿ, ಅರಿತು, ಸಂತೋಷಪಟ್ಟು ಅಲ್ಲಿಯ ಗುಣದೋಷಗಳನ್ನು ಎತ್ತಿ ತೋರುವನು. ಈ ಮೂವರಿಗೂ ಆನಂದಾನುಭೂತಿ ಇದೆ. ಆದರೆ ವಿಮರ್ಶಕ ತಾನು ಪಡೆದ ಆನಂದಾನುಭೂತಿಯ ಕಾರಣ, ಸ್ವರೂಪ ಮೊದಲಾದವುಗಳನ್ನು ವಿಶ್ಲೇಷಿಸಿ ಹೇಳಬಲ್ಲನು. ಸಾಮಾನ್ಯ ವಾಚಕನಿಗೆ ಆ ಶಕ್ತಿಯಿಲ್ಲ. ಅವನ ಆನಂದಾನುಭೂತಿ ಮೂಕನ ಕನಸಿನಂತೆ. ಆಗ ವಿಮರ್ಶಕ ಅವನ ಸಹಾಯಕ.

"By thé critic of poetry I understand the complete reader; the ideal critic is the ideal reader." ಎಂದು ಒಂದೆಡೆ ಪ್ರೊ. ಲೀವಿಸ್ ಹೇಳಿರುವುದು ಅರ್ಥಪೂರ್ಣವಾಗಿದೆ. ಸಾಮಾನ್ಯ ವಾಚಕ ಕಾವ್ಯವನ್ನು (ಯಾವುದೇ

---

೧. ಆದರೂ ಪ್ರಾಚೀನ ಕಾಲದಲ್ಲಿ ಕಾವ್ಯಶಾಸ್ತ್ರದ ಮೂಲಭೂತ ಚರ್ಚೆಯೇ ಹೆಚ್ಚಾಗಿ ನಡೆಯಿತು. ಅಂದರೆ ಆನ್ವಯಿಕ ಕಾವ್ಯ ವಿಮರ್ಶೆಗಿಂತ ತಾತ್ತ್ವಿಕ ಕಾವ್ಯ ಮೀಮಾಂಸೆ ಹೆಚ್ಚಾಗಿ ನಡೆಯಿತು.

ಸಾಹಿತ್ಯ ಕೃತಿಯನ್ನು) ಸಂಪೂರ್ಣವಾಗಿ ಅರಿತುಕೊಳ್ಳಲು, ಆಸ್ವಾದಿಸಲು ಅಸಮರ್ಥನಾಗಬಹುದು. ಹಾಗಾದರೆ ಅವನು ಆದರ್ಶ ವಾಚಕನಾಗಲಾರ. ಕವಿಯ ಮನೋಧರ್ಮವನ್ನು ಸರಿಯಾಗಿ ತಿಳಿಯದೇ ಇರುವುದೇ ಆತನ ವಿಫಲತೆಗೆ ಮುಖ್ಯ ಕಾರಣ. ಅಂದರೆ ಅಂಥ ಸಹೃದಯತೆ ಅವನಲ್ಲಿ ಇಲ್ಲದಿರುವುದು. ನಮ್ಮಲ್ಲಿ ಸಹೃದಯತೆ ಇಲ್ಲವಾದರೆ ನಾವು ಎಂಥ ಶ್ರೇಷ್ಠ ಸಾಹಿತ್ಯವನ್ನೂ ಮೆಚ್ಚಲಾರೆವು. ವಿಮರ್ಶಕ ಅಂಥ ಸಹೃದಯವುಳ್ಳವನು. ಆತ ತಾನು ಆ ಸಾಹಿತ್ಯದಲ್ಲಿ ಅರಿತುದನ್ನು ಆಸ್ವಾದಿಸಿದುದನ್ನು ನಮ್ಮ ಅನುಭವಕ್ಕೂ ತಂದುಕೊಡುವನು. ಆತನ ಹೃದಯದಂತೆ ಆತನ ಕಣ್ಣೂ ಬಹು ಚುರುಕು. ರವಿ ಕಾಣದ್ದನ್ನು ಕವಿ ಕಂಡ ಎಂಬ ಮಾತು ರೂಢಿಯಲ್ಲಿದೆ. ಅದರಂತೆ ವಾಚಕ ಕಾಣದ್ದನ್ನು ವಿಮರ್ಶಕ ಕಾಣಬಲ್ಲ; ಅಷ್ಟೇ ಏಕೆ, ಸ್ವತಃ ಕವಿಗೂ ಹೊಳೆಯದೆ ಇದ್ದ ಅರ್ಥವನ್ನೂ ವಿಮರ್ಶಕ ಕಾಣಬಹುದಾಗಿದೆ. ಕವಿಯು ಪ್ರತಿಭೆ ಮಿಂಚಿದಾಗ ರಚಿಸಿದ ತನ್ನ ಕಾವ್ಯದ ಅರ್ಥವನ್ನು ತಾನೇ ಗ್ರಹಿಸಿಕೊಂಡು ಇನ್ನೊಬ್ಬರಿಗೆ ವಿವರಿಸಿ ಹೇಳಲಾಗದ ಸಂಭವವೂ ಉಂಟು.[೧] ಆದರೆ ಸಹೃದಯ ವಾಚಕನಿಗೆ ಅಥವಾ ಒಳ್ಳೆಯ ವಿಮರ್ಶಕನಿಗೆ ಆ ಕಾವ್ಯ ಸೌಂದರ್ಯದ ವಿವಿಧ ಪದರುಗಳನ್ನು ಬಿಡಿಸಿ ನೋಡಲು ಸಾಧ್ಯವಾದರೆ ಆಶ್ಚರ್ಯವೇನಲ್ಲ. ಅದು ಕಾರಣವೇ ಪಂಪ ಮಹಾಕವಿಯು ಕಾವ್ಯವನ್ನು ಸಮುದ್ರದಂತೆ ನಿತ್ಯ ನೂತನ ಎಂದು ಕರೆದನು. ಕಾವ್ಯರತ್ನಾಕರದಲ್ಲಿ ಹುದುಗಿದ ಅಮೂಲ್ಯ ರತ್ನಗಳನ್ನು ಆಯ್ದು ತೋರಿಸುವ ಕೆಲಸ ವಿಮರ್ಶಕನದು.

ಒಂದು ಕೃತಿಯ ಬೆಲೆ ಕಟ್ಟುವುದೂ ಕೂಡ ವಿಮರ್ಶೆಯ ಕೆಲಸವೇ. ಆದರೂ ಆ ಕೃತಿಯನ್ನು ಅರಿತುಕೊಳ್ಳಲು ಮತ್ತು ಅದನ್ನು ಆಸ್ವಾದಿಸಲು ಸಹಾಯ ಮಾಡುವುದೇ ಅದಕ್ಕಿಂತ ಮುಖ್ಯವಾದ ಕಾರ್ಯ. ವಿಮರ್ಶೆಯ ಕಾವ್ಯವನ್ನು ಕುರಿತು ಬರೆಯುತ್ತ ಟಿ. ಎಸ್. ಎಲಿಯಟ್‌ನು "..to pomote the understanding and enjoyment of literature"[೨] ಎಂದಿರುವನು. ಹಾಗೆ ನೋಡಿದರೆ ಕೃತಿಯನ್ನು ಅರಿಯುವುದು ಮತ್ತು ಅದನ್ನು ಆಸ್ವಾದಿಸುವುದು. ಇವೆರಡೂ ಬೇರೆ ಬೇರೆ ಕ್ರಿಯೆಗಳಲ್ಲ. ಅರಿಯದೆ ಆಸ್ವಾದನೆಯಿಲ್ಲ. ಆಸ್ವಾದಿಸದೆ ನಿಜವಾದ ಅರಿವಿಲ್ಲ. ಕಾವ್ಯವನ್ನು ತಿಳಿಯುವುದು ಎಂದರೆ. ಕೇವಲ ಕಠಿಣ ಶಬ್ದಗಳ ಅರ್ಥವನ್ನು ತಿಳಿಯುವುದಲ್ಲ; ಅದು ಪದಗಳ ಅರ್ಥವಿವರಣೆಯೂ ಅಲ್ಲ. ಶಿಕ್ಷಕನು ಕಾವ್ಯದಲ್ಲಿಯ ಕಠಿಣ ಪದ

---

೧. T. S. Eliot : English Critical Essays, Second Series (1958). "....the chief part of the letters I receive from persons unknown to me, concerning my own poems, consists of requests for a kind of explanation that I cannot possibly give.." Page 46.

ಅದರಂತೆ, ಸಾಕ್ರೆಟಿಸನು ಒಮ್ಮೆ ಕೆಲವು ಕವಿಗಳಿಗೆ ಅವರವರ ಕೃತಿಗಳ ಅರ್ಥ ವಿವರಿಸಲು ಕೇಳಿದಾಗ, ಅವರಿಗೆ ಸಾಧ್ಯವಾಗಲಿಲ್ಲವಂತೆ.... ಅಲ್ಲದೆ ಇದು ಅನೇಕ ಕವಿಗಳ ಅನುಭವದ ಮಾತೂ ಅಹುದು.

೨. ಅದೇ – ಪುಟ – ೪೯.

ಗಳ ಅರ್ಥ, ಸಂಧಿ, ಸಮಾಸ, ಅನ್ವಯ, ಅಲಂಕಾರ ಮೊದಲಾದವುಗಳ ಬಗ್ಗೆ ವಿವರಣೆ ಕೊಡುತ್ತಾನೆ. ಆದರೆ ಅಷ್ಟರಿಂದ ವಿದ್ಯಾರ್ಥಿಗಳು ಕಾವ್ಯವನ್ನು ಅರಿಯಬಲ್ಲರೇ ?—ಎಂಬುದು ಸಂದೇಹಾಸ್ಪದ. ಪ್ರಾಚೀನ ಭಾಷ್ಯಕಾರರು ಸ್ಥೂಲವಾಗಿ ಕಾವ್ಯವನ್ನು ಶಿಕ್ಷಕರಂತೆ ವಿವರಿಸಲು ಯತ್ನಿಸಿದರು ಎನ್ನಬಹುದಾದರೆ. ಇಂದಿನ ವಿಮರ್ಶಕ ಕಾವ್ಯರಸಾಸ್ವಾದನೆಯ ಮಾರ್ಗಕ್ಕೆ ದಾರಿದೀಪವಾಗುತ್ತಾನೆ ಎನ್ನಬಹುದು.

ಕೆಲವರು ಕಾವ್ಯವನ್ನು ತಪ್ಪಾಗಿ ಗ್ರಹಿಸಿಯೂ ಕೂಡ ಆನಂದ ಪಡೆವ ಸಂಭವವಿದೆ. ಆದರೆ ವಿಮರ್ಶೆ ಕಾವ್ಯದ ಸರಿಯಾದ ಅರ್ಥವನ್ನು ತಿಳಿಸಿ ಆಸ್ವಾದಿಸಲು ಮಾರ್ಗವಾಡಿ ಕೊಡುತ್ತದೆ. ಅದಕ್ಕೇ "To understand a poem comes to the same thing as to enjoy it for the right reason"[೪] ಎಂದು ಹೇಳುವುದು. ಮುಖ್ಯವಾಗಿ ವಿಮರ್ಶೆ ಕಾವ್ಯವನ್ನು ಸರಿಯಾಗಿ ಗ್ರಹಿಸಿ ರಸಾನಂದವನ್ನು ಪಡೆಯಲು ನಮಗೆ ನೆರವಾಗುತ್ತದೆ; ಸಾಮಾನ್ಯ ವಾಚಕರು ಕಾವ್ಯದಲ್ಲಿ ಗಮನಿಸದೆ ಇರಬಹುದಾದ ಸ್ವಾರಸ್ಯದ ಕಡೆಗೆ ಬೆರಳು ಮಾಡಿ ತೋರುತ್ತದೆ. ನಮ್ಮ ಹೃದಯವು ಪೂರ್ವಗ್ರಹಗಳಿಂದ ದೂಷಿತವಾಗಿದ್ದರೆ ವಿಮರ್ಶೆ ಅದನ್ನು ದೂರೀಕರಿಸುತ್ತದೆ. ಕವಿಯ ಅನುಭವವನ್ನು ನಮ್ಮದಾಗಿಸುವಂತೆ ವಿಮರ್ಶೆ ನಮ್ಮ ರಸಪ್ರಜ್ಞೆಯಲ್ಲಿಯ ದೋಷವನ್ನು ನಿವಾರಿಸಿ ನಮಗೆ ಸರಿಯಾದ ಅಭಿರುಚಿಯನ್ನು ಒದಗಿಸಿ ಕೊಡುತ್ತದೆ. "ಪಾಪಮಿದು ಪುಣ್ಯಮಿದು ಹಿತಮಿದು ಅಹಿತಪ್ರಕಾರಮಿದು" ಎಂದು ಮೊದಲಾಗಿ ಕಾವ್ಯ ನಮಗೆ ತಿಳಿಸುವುದು ಎಂದು ಕವಿರಾಜ ಮಾರ್ಗಕಾರ ಹೇಳಿರುವನಷ್ಟೇ. ಅದರಂತೆ ವಿಮರ್ಶೆ ಕಾವ್ಯದಲ್ಲಿ ಹಿತ ಅಹಿತಗಳನ್ನು ಎತ್ತಿ ತೋರಿ, ನಮ್ಮ ಅಭಿರುಚಿ ಉತ್ತಮಗೊಳ್ಳುವಂತೆ ಪ್ರೇರೇಪಿಸುತ್ತದೆ. "A true and zealous literary critic, one may affirm, is one who wants to improve life through literary criticism, one who intendents, by showing the excellences of life as represented in literature, to point them out as an ideal of good life"[೫] ಎಂಬ ವಿಮರ್ಶಕರೊಬ್ಬರ ಮಾತು ಸರಿಯಾಗಿದೆ. ಈ ವಿಷಯದಲ್ಲಿ ಪ್ರಸಿದ್ಧ ಆಂಗ್ಲ ವಿಮರ್ಶಕ ಐ. ಎ. ರಿಚರ್ಡ್ಸ್ ಹೇಳುವ ಮಾತೂ ವಿಚಾರಾರ್ಹವಾಗಿದೆ. ವೈದ್ಯನು ರೋಗಿಯ ಆರೋಗ್ಯದ ವಿಷಯವಾಗಿ ಚಿಂತಿಸುವಂತೆ ವಿಮರ್ಶಕನು ಮನಸ್ಸಿನ ಆರೋಗ್ಯದ ಬಗ್ಗೆ ಚಿಂತಿತನಾಗಿರುವನು. ಅದ್ದರಿಂದ "To set up as a critic is to set up as a judge of values"[೬] ಎಂದು ಅವರು ಹೇಳಿರುವರು. ಜೀವನ ಮೌಲ್ಯಗಳನ್ನು ಒಂದು ಕೃತಿ ಹೇಗೆ ಪರಿಗಣಿಸಿದೆಯೆಂಬುದನ್ನು ವಿವೇಚಿಸುತ್ತ, ಒಳ್ಳೆಯ

---

೪. ಅದೇ ಪುಟ ೫೦.

೫. C Visweswar : Journal of the Karnatak University Humanities, Vol. VIII (1964), Page 62.

೬. I. A. Richards : Principles of Literary Criticism, Page 61,

ವಿಮರ್ಶೆ ನಮಗೆ ಸರಿಯಾದ ಜೀವನ ಮೌಲ್ಯಗಳನ್ನು ಎತ್ತಿ ತೋರುತ್ತದೆ. ಒಳ್ಳೆಯ ಕಾವ್ಯದಂತೆ ವಿಮರ್ಶೆ ಕೂಡ ನಮ್ಮ ಅಭಿರುಚಿಯನ್ನು ತಿದ್ದಿ ನಮ್ಮ ಮೇಲೆ ಒಳ್ಳೆಯ ಸಂಸ್ಕಾರವನ್ನು ಮಾಡಬಲ್ಲುದು.

ಈಗ. ವಿಮರ್ಶೆ ಇವನ್ನು ಹೇಗೆ ಸಾಧಿಸುತ್ತದೆ ಎಂಬ ಪ್ರಶ್ನೆ ಸಹಜವಾದುದು. ವಿಮರ್ಶೆಗೆ ಏನಾದರೂ ತತ್ತ್ವ, ನಿಯಮಗಳು ಇವೆಯೆ? ಅಥವಾ ವಿಮರ್ಶಕನ ಅಂತಃಸ್ಫುರಣವೇ ಅದನ್ನು ಸಾಧಿಸುವುದೇ ?

ಕಾವ್ಯದ ತತ್ತ್ವಗಳಂತೆ ವಿಮರ್ಶೆಗೂ ಕೆಲವು ತತ್ತ್ವಗಳಿವೆ. ಅನೇಕ ಪಂಡಿತರು ಅವುಗಳನ್ನು ಕಾಲಕಾಲಕ್ಕೆ ಪರಿಪೂರ್ಣಗೊಳಿಸಲು ಯತ್ನಿಸುತ್ತಲೇ ಬಂದಿರುವರು. ಆದರೆ ಸಾಹಿತ್ಯ ವಿಮರ್ಶೆಯ ತತ್ತ್ವಗಳನ್ನು ವಿಜ್ಞಾನದ ನಿಯಮಗಳಂತೆ ರಚಿಸುವುದು ಕಠಿಣವೇ ಸರಿ. ಹಾಗೆ ಸರ್ವಕಾಲಿಕ ಸತ್ಯವಾದ ನಿಯಮಗಳನ್ನು ರಚಿಸಲು ಸಾಧ್ಯವಾದರೂ, ವಿಮರ್ಶಕ ಅವುಗಳನ್ನು ಚಾಚೂ ತಪ್ಪದಂತೆ ಅನುಷ್ಠಾನಕ್ಕೆ ತರುವುದು ಅಸಾಧ್ಯವೆಂದೇ ಹೇಳಬೇಕು. ಯಾಕೆಂದರೆ ವಿಮರ್ಶಕನೂ ಮಾನವ; ಯಂತ್ರವಲ್ಲ.[೬] ಕಾವ್ಯದಂತೆ ವಿಮರ್ಶೆಯೂ ಮುಖ್ಯವಾಗಿ, ಹೃದಯದ ವ್ಯಾಪಾರವೆಂಬುದನ್ನು ಮರೆಯಲಾಗದು. ಹೀಗಿದ್ದರೂ ಕಾವ್ಯಶಾಸ್ತ್ರಪಂಡಿತರು ವಿಮರ್ಶೆಯ ಕೆಲವು ಸ್ಥೂಲ ತತ್ತ್ವಗಳನ್ನು ರಚಿಸದೆ ಬಿಟ್ಟಿಲ್ಲ. ಅವು ಒಂದು ದೃಷ್ಟಿಯಿಂದ ವಿಮರ್ಶಕನಿಗೆ ಮಾರ್ಗದರ್ಶಕ ಸೂತ್ರಗಳು ಅಷ್ಟೆ. ಅತ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇ ಬೇಕೆಂದೇನೂ ಇಲ್ಲ. ಭಾಸನು ನಾಟ್ಯಶಾಸ್ತ್ರದ ನಿಯಮಗಳನ್ನೂ ಕೂಡ ಗಾಳಿಗೆ ತೂರಿ ಶ್ರೇಷ್ಠ ನಾಟಕಗಳನ್ನು ಬರೆದ. ಹಾಗೆ ನೋಡಿದರೆ ನಿಯಮಗಳು ಸಾಮಾನ್ಯರಿಗೆ. ಅಸಾಮಾನ್ಯರು ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳುವರು. ಆನೆ ನಡೆದುದೇ ಮಾರ್ಗ.

ಆದರೂ ವಿಮರ್ಶೆಯ ತತ್ತ್ವಗಳೆಲ್ಲ ಸಂಪೂರ್ಣ ವ್ಯರ್ಥ ಎನ್ನಲಾಗದು. ಜೀವನವು ಮಾನವನಿಗೆ ಕಲಿಸಿದ ಪಾಠವನ್ನೇ ತತ್ತ್ವಜ್ಞಾನ ಎಂದು ಕರೆದಂತೆ. ಸಾಹಿತ್ಯಾನುಭವದಿಂದ ಕಲಿತ ಪಾಠಗಳನ್ನೇ ಸಾಹಿತ್ಯವಿಮರ್ಶೆಯ ತತ್ವಗಳೆಂದು ಕರೆಯಲಾಯಿತು.

ಕಾವ್ಯವನ್ನು ಅರ್ಥ ಮಾಡಿಕೊಂಡು ರಸಾನಂದವನ್ನು ಪಡೆಯುವುದೇ ವಿಮರ್ಶೆಯ ಮುಖ್ಯ ಕಾರ್ಯವೆಂದು ಒಪ್ಪಿಕೊಂಡ ಮೇಲೆ, ವಿಮರ್ಶೆಯ ಮೊದಲನೆಯ ವಿಧಾನ ಕಾವ್ಯದ ವಿವರಣ ಮತ್ತು ಗುಣಗ್ರಹಣವೆಂಬುದು ಸ್ಪಷ್ಟ. ಗುಣಗ್ರಹಣವೆಂದರೆ ಕಾವ್ಯದಲ್ಲಿ ಆಸ್ವಾದ್ಯವಾದ ಗುಣವನ್ನು ಎತ್ತಿ ತೋರಿಸುವುದು. "ಕವಿಃ ಕರೋತಿ ಕಾವ್ಯಂ ರಸಂ ಜಾನಾತಿ ಪಂಡಿತಃ" ಎಂಬ ಉಕ್ತಿಯಲ್ಲಿ ಇದೇ ಮಾತು ಅಡಕವಾಗಿದೆ. ಆದರೆ ಇಲ್ಲಿ ಪಂಡಿತನೆಂದರೆ ಸಹೃದಯ ವಾಚಕ ಎಂದು ಅರ್ಥವಲ್ಲದೆ.

---

೬. E. X. Wilson : Cassell's Encyclopaedia of Literature–"For whatever the ultimate principles of literary criticism may be, the literary critic remains a man, not a testing apparatus" Page 136.

ವಿಮರ್ಶಕ ಎಂದು ಅರ್ಥವಿರಲಿಲ್ಲ. ಅದರಂತೆ "Criticism at its best is hearty appreciation" ಎಂಬುದೂ ಈ ವಿಧಾನವನ್ನೇ ಪ್ರಮುಖವೆಂದು ಪ್ರತಿಪಾದಿಸುತ್ತದೆ. ಆದರೆ ಗುಣಗ್ರಹಣವೆಂದರೆ ಕಾವ್ಯದಲ್ಲಿ ಇಲ್ಲದ ಗುಣಗಳನ್ನೂ ಅದಕ್ಕೆ ಆರೋಪಿಸಿ, ಅದನ್ನು ಅತಿಯಾಗಿ ಹೊಗಳಿ ದೋಷಗಳಿಗೆ ಕಣ್ಣು ಮುಚ್ಚಿಕೊಳ್ಳುವುದಲ್ಲ. ಈ ವಿಷಯವಾಗಿ ಡಾ. ಕುವೆಂಪು ಅವರ "ಉತ್ತಮವಾದುದನ್ನು ಬೆರಳಿಟ್ಟು ತೋರುವುದು ಹೇಗೆ ವಿಮರ್ಶೆಯೋ ಹಾಗೆಯೇ ಅನುತ್ತಮವಾದುದನ್ನು ಮುಚ್ಚುವುದೂ ಒಂದು ತೆರನಾದ ವಿಮರ್ಶೆಯೇ"[೮] ಎಂಬ ಮಾತು ಸಮಂಜಸವೆಂದು ತೋರುವುದಿಲ್ಲ. ಹಾಗಾದರೆ ಅದು ಕೇವಲ ರಸಗ್ರಹಣ ಮಾತ್ರ ಆಗುತ್ತದೆಯಲ್ಲದೆ, ವಿಮರ್ಶೆಯಾಗುವುದಿಲ್ಲ.

ವಿಮರ್ಶಕ ಕವಿಯ ಆಶಯವೇನೆಂಬುದನ್ನು ಪ್ರಶ್ನಿಸಿ. ಅದಕ್ಕೆ ಉತ್ತರವನ್ನು ಕಂಡುಕೊಂಡು ಅದನ್ನು ಬಿಚ್ಚಿ ತೋರಿಸುವ ವಿಮರ್ಶಾ ಪದ್ಧತಿಯನ್ನು ಉನ್ಮೀಲನಾತ್ಮಕ ರೀತಿಯೆಂದು ಕರೆಯಲಾಗುತ್ತದೆ. ಇದೂ ಕೂಡ ಒಂದು ರೀತಿಯ ರಸಗ್ರಹಣದ ದಾರಿಯಲ್ಲಿಯೇ ಸಾಗುತ್ತದೆ.

ವಿಮರ್ಶೆಯ ಬೇರೆ ಪ್ರಮುಖ ಮಾರ್ಗವೆಂದರೆ ತುಲನೆ ಮತ್ತು ವಿಶ್ಲೇಷಣೆ. ಈ ರೀತಿಗಳಿಗೆ ಎಲಿಯಟ್‌ನು ಬಹು ಪ್ರಾಧಾನ್ಯವನ್ನು ಕೊಟ್ಟಿರುವನು. "Comparison and analysis are the chief tooes of the critic"[೯] ಎಂದು ಆತ ಹೇಳಿರುವನು. ತುಲನೆ ಮತ್ತು ವಿಶ್ಲೇಷಣೆಯಿಂದ ವಿಮರ್ಶೆಯ ತೂಕ ಹೆಚ್ಚುತ್ತದೆ. ಈ ರೀತಿಯ ವಿಮರ್ಶೆ ಬರೆಯುವವನಿಗೆ ಹೆಚ್ಚಿನ ಅರ್ಹತೆ, ಅನುಭವ ಬೇಕು. ಅದೇ ವಸ್ತುವನ್ನು ಕುರಿತು ಬರೆದ ಬೇರೆ ಬೇರೆ ಕೃತಿಗಳೊಂದಿಗೆ ತುಲನೆ ಅಥವಾ ಒಬ್ಬನೇ ಲೇಖಕನ ಬೇರೆ ಬೇರೆ ಕೃತಿಗಳ ತುಲನೆ. ಈ ಮೊದಲಾದ ವಿಧಾನಗಳಿಂದ ವಿಮರ್ಶೆ ಹೆಚ್ಚು ಸತ್ತ್ವಯುತವಾಗಬಲ್ಲುದಲ್ಲದೆ. ಒಂದು ಕೃತಿಯ ನಿಜವಾದ ಬೆಲೆಯೇನು ಎಂಬುದನ್ನು ತಿಳಿಯಲೂ ಸಹಾಯಕವಾಗುತ್ತದೆ. ಆದರೆ ವಿಮರ್ಶೆಯಲ್ಲಿ ತುಲನೆಗಾಗಿ ತುಲನೆ ಇರಬೇಕಾಗಿಲ್ಲ. ಅದು ಅನಾವಶ್ಯಕವಲ್ಲದೆ, ಅದರಿಂದ ವಿಮರ್ಶಕ ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ ಇಳಿಯುವ ಭೀತಿಯೂ ಇದೆ. ಅದಕ್ಕೇ, ಎಲಿಯಟ್‌ನು ಈ ಬಗ್ಗೆ ಎಚ್ಚರಿಕೆಯ ಮಾತನ್ನೂ ಹೇಳದೆ ಬಿಟ್ಟಿಲ್ಲ. "It is obvious indeed that they are tools, to be handled with care....you must know what to compare and what to analyse"[೧೦] ಶರಣರ ವಚನಗಳನ್ನು ದಾಸರ ಕೀರ್ತನೆಗಳನ್ನೂ ಹೋಲಿಸಿ ಪರೀಕ್ಷಿಸುವುದು ಸರಿಯೇ ಆಗಿದೆ. ಪಂಪನನ್ನು ವ್ಯಾಸನಿಗೂ ಕುಮಾರವ್ಯಾಸನಿಗೂ ಹೋಲಿಸಿ ವಿಶ್ಲೇಷಿಸುವುದು ಉಚಿತವೇ ಆಗಿದೆ. ಆದರೆ ಪಂಪನನ್ನು

---

೮. ಕುವೆಂಪು : ಕಾವ್ಯವಿಹಾರ, ಪುಟ ೮೩.

೯. T. S. Eliot : Selected Prose, Page 19.

೧೦. ಅದೇ, ಪುಟ ೧೯.

ಕಾಲಿದಾಸನಿಗೂ, ಕಾಲಿದಾಸನನ್ನು ಶೇಕ್ಸಪಿಯರನಿಗೂ ವಿನಾಕಾರಣ ಹೋಲಿಸಿ, ಅವರಲ್ಲಿ ಇಲ್ಲದ ಸಾಮ್ಯವನ್ನು ಕಲ್ಪಿಸಿ ಅತಿರೇಕಿಸಿ ಹೇಳುವಲ್ಲಿಯ ಔಚಿತ್ಯವನ್ನು ಪ್ರಶ್ನಿಸಬೇಕಾಗುತ್ತದೆ.[೧೧] ಮುಖ್ಯವಾಗಿ ತುಲನೆಯಿಂದ ಕೃತಿಯ ಅರ್ಥ ಮತ್ತು ರಸಾನುಭವ ಹೆಚ್ಚಾಗುವಂತಿದ್ದರೆ ಮಾತ್ರ ಅದು ಗ್ರಾಹ್ಯ.

ಅದರಂತೆ ವಿಶ್ಲೇಷಣೆ ಕೂಡ ವಿಮರ್ಶೆಯ ಒಳ್ಳೆಯ ವಿಧಾನವೆಂದು ಒಪ್ಪಿದರೂ, ಅದರಲ್ಲೂ ಎಡವಿ ಬೀಳುವ ಸಂಭವ ಇಲ್ಲದಿಲ್ಲ. ವಿಶ್ಲೇಷಣಾತ್ಮಕ ವಿಮರ್ಶೆಯಲ್ಲಿ ಇಡೀ ಕೃತಿಯನ್ನು ಬಿಡಿಬಿಡಿಯಾಗಿ ತೂಗಿ ನೋಡಿ, ವಿವರಿಸಿ, ಅರ್ಥವನ್ನು ಗ್ರಹಿಸಿ ಅದರ ಸ್ವಾರಸ್ಯವನ್ನು ನಿರೂಪಿಸಲಾಗುತ್ತದೆ. ಇದರಿಂದ ಕಾವ್ಯದ ಇಡೀ ಸತ್ತ್ವವನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ೧೯ನೆಯ ಶತಮಾನದ ಶ್ರೇಷ್ಠ ಆಂಗ್ಲ ವಿಮರ್ಶಕನಾದ ಮಾಥ್ಯೂ ಆರ್ನಾಲ್ಡನು ತೌಲನಿಕ ವಿಧಾನಕ್ಕೆ ಬಹಳ ಪ್ರಾಮುಖ್ಯವಿತ್ತನು. ಆದರೆ ಅದಕ್ಕೆ ಪೂರಕವಾಗಿ ವಿಶ್ಲೇಷಣೆ ಇರಲೇಬೇಕೆಂದು ಎಲಿಯಟ್‌ನ ವಿಚಾರ. ಆತ "But mere comparison won't do. You must also analyse the work of art, to see its tone its nature and the complex structure" ಎಂದಿರುವುದನ್ನು ಒಪ್ಪಬೇಕಾದರೂ, ಅತಿಯಾದ ವಿಶ್ಲೇಷಣೆಯಿಂದ ಕಾವ್ಯದ ಸ್ವಾರಸ್ಯವೇ ಕಳೆದು ಹೋಗಬಹುದು. ಎಲಿಯಟ್‌ನಿಗೆ ಈ ಅರಿವೂ ಇದೆ. ಇಂಗ್ಲೀಷಿನಲ್ಲಿ "Interpretations" ಎಂಬ ವಿಮರ್ಶಾಗ್ರಂಥ ಬಂದಿದೆ. ಅದರಲ್ಲಿ ಹನ್ನೆರಡು ಜನ ವಿಮರ್ಶಕರು ಒಂದೊಂದು ಕವಿತೆಯನ್ನು ಕೂಲಂಕಷವಾಗಿ ಹಿಂಜಿ ಹಿಂಜಿ ವಿಶ್ಲೇಷಿಸಿ ವಿಮರ್ಶಿಸಿರುವರು. ಅವರು ಕವಿತೆಯ ಪ್ರತಿಯೊಂದು ನುಡಿಯನ್ನೂ, ಪ್ರತಿಯೊಂದು ಚರಣವನ್ನೂ ವಿಶ್ಲೇಷಿಸಿರುವರು. ಅದರಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟೆಲ್ಲವನ್ನೂ ಹಿಂಡಿ, ಹೀರಿ ಅರ್ಥದ ಒಂದೊಂದು ಹನಿಯನ್ನೂ ಹೊರದೆಗೆದು ತೋರಿಸಿರುವರು. ಎಲಿಯಟ್‌ನು ಅದನ್ನು "Lemon-squeezer school of criticism" ಎಂದು ಕರೆದ. ಅತ್ಯಂತ ಜಾಣರಾದ ಈ ವಿಮರ್ಶಕರ ಶ್ರಮ ಮೆಚ್ಚುವಂತಹದೇ. ಆದರೆ ಇಂಥದನ್ನು ಓದಿ ಪದ್ಯದ ಸಮಷ್ಟಿ ಅರ್ಥವನ್ನು ಪಡೆಯುವುದೇ ಕಠಿಣ. ಒಂದು ಯಂತ್ರದ ಭಾಗಗಳನ್ನೆಲ್ಲ ಬಿಚ್ಚಿ ಬಿಡಿಬಿಡಿಯಾಗಿ ಇಡುವ ಕೌಶಲ ಎಲ್ಲರಿಗೂ ಬರಲಾರದು, ನಿಜ. ಆದರೆ ಅದರಿಂದ ನಮಗೆ ಯಂತ್ರದ ಬಿಡಿಭಾಗಗಳ ಪರಿಚಯವಾದೀತೇ ಹೊರತು ಯಂತ್ರದ ಬಗ್ಗೆ ಏನೂ ತಿಳಿಯದೆ ಹೋಗಬಹುದು. ಅಂದ ಮೇಲೆ ನಾವು ಯಂತ್ರವನ್ನು ಮೆಚ್ಚಿ ಆನಂದ ಪಡುವ ಸಂದರ್ಭವೇ ಬರಲಿಕ್ಕಿಲ್ಲ. ವಿಮರ್ಶೆಯ ಮುಖ್ಯ ಉದ್ದೇಶ ಅರ್ಥಗ್ರಹಣ ಮತ್ತು ಆನಂದಾನುಭೂತಿ. ಅದು ಅತಿ ವಿಶ್ಲೇಷಣೆಯಿಂದ ಬಹು ಪಾಲು ಕಳೆದು ಹೋಗುವ ಸಂಭವವಿಲ್ಲದಿಲ್ಲ.

೧೧. "ಪಂಪ ಕನ್ನಡದ ಕಾಲಿದಾಸ" ... ಈ ಮೊದಲಾದ ಮಾತುಗಳು ಅಷ್ಟಕ್ಕೇ ಮುಗಿದರೆ ಸರಿ. ಅದನ್ನು ಅತಿರೇಕಕ್ಕೆ ಹಿಗ್ಗಿಸಲು ಪ್ರಯತ್ನಿಸುವಲ್ಲಿ ಅರ್ಥವಿಲ್ಲ.

ಹೀಗೆಂದರೆ, ವಿಶ್ಲೇಷಣೆಯು ವಿಮರ್ಶೆಯ ಒಳ್ಳೆಯ ವಿಧಾನವಲ್ಲ ಎಂದು ತಿಳಿಯಬೇಕಾಗಿಲ್ಲ. ಜಾಣ ವಿಮರ್ಶಕನ ಕುಶಲ ಮತ್ತು ಯಥೋಚಿತ ಪೃಥಕ್ಕರಣದಿಂದ ನಮಗೆ ಖಚಿತವಾದ ಪ್ರಯೋಜನವೂ ಉಂಟು; ತಪ್ಪು ದಾರಿ ತುಳಿಯದಂತೆ ಅದು ನಮಗೆ ಸರಿಯಾದ ಮಾರ್ಗದರ್ಶನ ಮಾಡಬಲ್ಲುದು. ಆದರೆ ಕೊನೆಗೆ ಆ ಕೃತಿಯು ನಮ್ಮ ಮೇಲೆ ಬೀರಿದ ಪರಿಣಾಮದಿಂದ ನಾವೇ ಅದರ ಬೆಲೆಯನ್ನು ನಿರ್ಧರಿಸಬೇಕಾಗುತ್ತದೆ.

ಇವಲ್ಲದೆ ವಿಮರ್ಶಾವಿಧಾನದಲ್ಲಿ ಬೇರೆ ಕೆಲವು ಒಲವುಗಳೂ ಉಂಟು. ಒಂದು ಸಾಹಿತ್ಯ ಕೃತಿಯಲ್ಲಿಯ ಜೀವನ ಮೌಲ್ಯಗಳಿಗೆ ಪ್ರಾಶಸ್ತ್ಯವನ್ನಿತ್ತು ವಿಮರ್ಶೆ ಮಾಡಿದರೆ ಅದು ನೀತಿ ಪ್ರಧಾನ ವಿಮರ್ಶೆ ಎನ್ನಿಸಿಕೊಳ್ಳುತ್ತದೆ: ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ನೀತಿಯನ್ನೂ ಜೀವನ ಮೌಲ್ಯಗಳನ್ನೂ ಎತ್ತಿ ತೋರಿಸುವುದೇ ಇಲ್ಲಿ ಪ್ರಧಾನವಾಗಿರುತ್ತದೆ. ಲೀವಿಸ್, ಎಲಿಯಟ್ ಮೊದಲಾದವರು ಈ ಮಾರ್ಗಕ್ಕೆ ಹೆಚ್ಚು ಒಲಿದವರು. ಅದರಂತೆ ಮನೋವಿಶ್ಲೇಷಣಾತ್ಮಕ ರೀತಿಯನ್ನು ಅನುಸರಿಸಿ ಕೃತಿಯನ್ನು ವಿಶ್ಲೇಷಿಸಿ ನೋಡುವ ವಿಧಾನವನ್ನು ಹಿರಿಯ ವಿಮರ್ಶಕನಾದ ರಿಚರ್ಡ್ಸನು ಮುಖ್ಯವಾಗಿ ಪ್ರತಿಪಾದಿಸಿದನು. ಕೃತಿಯ ವಸ್ತು ಪಾತ್ರ ರಚನೆ ಮೊದಲಾದವುಗಳನ್ನು ಒಳಗಿನಿಂದ ವಿಶ್ಲೇಷಿಸಿದರೆ ಮಾತ್ರ ಕೃತಿಯ ನಿಜವಾದ ಮೌಲ್ಯಮಾಪನ ಸಾಧ್ಯವೆಂದು ಆತನ ಅಭಿಪ್ರಾಯ. ಇಂಥ ವಿಮರ್ಶೆ ಮಾಡಬೇಕಾದರೆ ವಿಮರ್ಶಕನಿಗೆ ಮನೋವೈಜ್ಞಾನಿಕ ಶಾಸ್ತ್ರದ ಆಳವಾದ ಪರಿಚಯವೂ ಅವಶ್ಯ. ಇನ್ನು, ಸಮಾಜಕ್ಕೂ ಸಾಹಿತ್ಯಕ್ಕೂ ನಿಕಟ ಸಂಬಂಧವಿರುವುದರಿಂದ ಸಾಹಿತ್ಯದಲ್ಲಿ ಚಿತ್ರಿತವಾದ ಸಮಾಜವನ್ನು ಅಥವಾ ಸಾಹಿತ್ಯದ ಮೇಲಾದ ಸಮಾಜದ ಪ್ರಭಾವವನ್ನು ಕುರಿತು ವಿಮರ್ಶಿಸುವುದೇ ಮುಖ್ಯವೆಂದು ಹೇಳುವ ಸಮಾಜಶಾಸ್ತ್ರೀಯ ವಿಧಾನವೂ ಉಂಟು. ತೀರ ಇತ್ತೀಚಿನ ವಿಧಾನವೆಂದರೆ ತಂತ್ರಪ್ರಧಾನ ವಿಮರ್ಶಾವಿಧಾನ. ಈಗಿನ ಆಂಗ್ಲಸಾಹಿತ್ಯ ವಿಮರ್ಶೆಯಲ್ಲಿ ಇದುವೇ ಪ್ರಧಾನವಾದ ರೀತಿಯಾಗಿದೆ. ಸಮಕಾಲೀನ ಸಾಹಿತ್ಯವೂ ಮುಖ್ಯವಾಗಿ ತಂತ್ರಪ್ರಧಾನವಾಗಿರುವುದೇ ಈ ವಿಮರ್ಶೆ ಹೆಚ್ಚಾಗಿ ಬೆಳೆಯಲು ಮುಖ್ಯ ಕಾರಣವೆನ್ನಬಹುದು. ಕಾವ್ಯದಲ್ಲಿಯ ಪ್ರತಿಮೆ ಸಂಕೇತ ಮೊದಲಾದವುಗಳ ವಿಶ್ಲೇಷಣೆ-ವಿವರಣೆಗಳೇ ಇಲ್ಲಿ ವಿಮರ್ಶೆಯ ಮುಖ್ಯ ಅಂಗಗಳಾಗಿರುತ್ತವೆ. ಅಷ್ಟೇ ಅಲ್ಲದೆ ಪ್ರಾಚೀನ ಸಾಹಿತ್ಯವನ್ನೂ ಕೂಡ ಇದೇ ವಿಧಾನದಿಂದ ವಿಮರ್ಶಿಸುವ ಪ್ರಯತ್ನಗಳೂ ನಡೆದಿವೆ. ಸಾಮಾನ್ಯ ವಾಚಕರಿಗೆ ನವ್ಯ ಸಾಹಿತ್ಯ ತಿಳಿಯದೆ ಹೋಗುವ ಸಂಭವವಿರುವಂತೆ, ಈ ತಂತ್ರ ಪ್ರಧಾನ ವಿಮರ್ಶೆಯೂ ಅರ್ಥವಾಗದೆ ಹೋದರೆ ಅಚ್ಚರಿಯಿಲ್ಲ. ಇಂಥ ವಿಮರ್ಶಕರ ಭಾಷೆ ಕೂಡ ಒಂದು ವಿಶಿಷ್ಟವಾದ ಪರಿಭಾಷೆಗೇ (Jargon) ಪರಿಮಿತವಾಗಿರುತ್ತದೆ. ಇಂಥ ವಿಮರ್ಶೆ ಇತ್ತೀಚೆ ಕನ್ನಡದಲ್ಲೂ ಬರತೊಡಗಿದೆ.

ಆಧುನಿಕ ಮನೋವೈಜ್ಞಾನಿಕ ವಿಮರ್ಶಾವಿಧಾನವಾಗಲಿ ಅಥವಾ ತಂತ್ರಪ್ರಧಾನ ವಿಮರ್ಶಾವಿಧಾನವಾಗಲಿ ಅಥವಾ ಇನ್ನಾವುದೇ ವಿಧಾನವಾಗಲಿ ವಿಮರ್ಶೆಯ ಉದ್ದೇಶವನ್ನು ನಿರ್ದುಷ್ಟವಾಗಿ ಮತ್ತು ಪರಿಪೂರ್ಣವಾಗಿ ಸಾಧಿಸುತ್ತದೆ ಎಂದು ಹೇಳಲು ಸಾಧ್ಯ

ವಿಲ್ಲ. ಒಂದೊಂದು ರೀತಿಯ ಸಾಹಿತ್ಯವನ್ನು ವಿಮರ್ಶಿಸಲು ಇವುಗಳಲ್ಲಿ ಒಂದೊಂದು ವಿಧಾನ ಹೆಚ್ಚು ಫಲಪ್ರದವಾಗಬಹುದು. ಅಲ್ಲದೆ ಈ ಎಲ್ಲ ವಿಧಾನಗಳು ಕಟ್ಟುನಿಟ್ಟಾದ ನಿರ್ಬಂಧಗಳೆಂದೂ ಭಾವಿಸಬೇಕಾಗಿಲ್ಲ. ತಾತ್ಪರ್ಯವೆಂದರೆ ವಿಮರ್ಶಾ ಶಾಸ್ತ್ರ ಎಷ್ಟೇ ಬೆಳೆದರೂ, ಎಷ್ಟೇ ತತ್ತ್ವಗಳನ್ನು ರೂಪಿಸಿದರೂ ಅವುಗಳ ಸಹಾಯದಿಂದಲೇ ಶ್ರೇಷ್ಠವಾದ ವಿಮರ್ಶೆಯನ್ನು ಬರೆಯಲು ಸಾಧ್ಯವಿಲ್ಲ.

ಆಂಗ್ಲ ಸಾಹಿತ್ಯದ ಖ್ಯಾತ ವಿಮರ್ಶಕನಾದ ಎಬರ ಕ್ರಾಂಬಿಯು ಸೃಜನಶಕ್ತಿ, ಆಸ್ವಾದನ ಶಕ್ತಿ ಮತ್ತು ವಿಮರ್ಶಾಶಕ್ತಿಗಳು ಬೇರೆ ಬೇರೆ ಎಂದು ಹೇಳಿ ವಿಮರ್ಶಾಶಕ್ತಿ ಅಭ್ಯಾಸದಿಂದ ಲಭ್ಯ ಎನ್ನುವನು.[೧೨] ಆತನ ಅಭಿಪ್ರಾಯದಂತೆಯೇ, ಕಾವ್ಯವನ್ನು ಆಸ್ವಾದಿಸುವ ಗುಣ ಅಭ್ಯಾಸದಿಂದ ಲಭ್ಯವಿಲ್ಲವೆಂದ ಮೇಲೆ, ಆಸ್ವಾದಿಸಿ ಅದರ ರುಚಿಯನ್ನು ತಿಳಿಸಿ ಹೇಳುವ ಶಕ್ತಿ ಅಭ್ಯಾಸದಿಂದ ಹೇಗೆ ಲಭ್ಯವಾದೀತು ?

ಕಾವ್ಯಶಾಸ್ತ್ರವನ್ನು, ಕಾವ್ಯಕಾರಣಗಳನ್ನು ಕುರಿತು ಹಲವಾರು ಗ್ರಂಥಗಳು ರಚಿತವಾಗಿವೆ. ಆದರೆ ಕೇವಲ ಅವುಗಳ ಅಭ್ಯಾಸದಿಂದಲೇ ಶ್ರೇಷ್ಠ ಕಾವ್ಯವನ್ನು ಬರೆದವರು ಎಷ್ಟು ಜನ? ಈ ಮಾತು ವಿಮರ್ಶೆಗೂ ಅನ್ವಯಿಸುತ್ತದೆ. ವಿಮರ್ಶಾಶಾಸ್ತ್ರದ ಮೇಲೆ ಹಲವಾರು ಗ್ರಂಥಗಳು ಬಂದಿವೆ. ಆದರೆ ಅವುಗಳ ಅಭ್ಯಾಸದಿಂದಲೆ ಒಬ್ಬ ಪಂಡಿತ ಶ್ರೇಷ್ಠ ವಿಮರ್ಶಕನಾಗಬಲ್ಲನೆ? ಹಾಗೆ, ವಿಮರ್ಶಕನಿಗೂ ಪ್ರತಿಭೆಯ ಕಿಡಿ ಇದ್ದರೆ ಮಾತ್ರ ಈ ಶಾಸ್ತ್ರಾಭ್ಯಾಸವು ಅದನ್ನು ಬೆಳಗಿಸಬಲ್ಲದು. ಕಾವ್ಯವನ್ನು ಆಸ್ವಾದಿಸಲು ಅಸಮರ್ಥನಾದ ಎಂಥ ಘನಪಂಡಿತನೂ ವಿಮರ್ಶಕನಾಗಲಾರ. ಅದರಂತೆ ಹುಟ್ಟು ವಿಮರ್ಶಕ ಬುದ್ಧಿಯುಳ್ಳ ಸಹೃದಯನು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಲ್ಲ

ಈಗ ಶ್ರೇಷ್ಠ ವಿಮರ್ಶಕ ಯಾರು ಎಂಬ ಪ್ರಶ್ನೆ ಬರುತ್ತದೆ. ಸಾಮಾನ್ಯವಾಗಿ ಪಾಂಡಿತ್ಯ, ನಿಶಿತಮತಿ, ಸೂಕ್ಷ್ಮಸಂವೇದನೆ, ಅನುಭವ, ವಿಚಾರಪೂರ್ಣ ವಿಶ್ಲೇಷಣಾತ್ಮಕ ದೃಷ್ಟಿ, ಕಾವ್ಯಶಾಸ್ತ್ರ ಮತ್ತು ವಿಮರ್ಶಾಶಾಸ್ತ್ರಗಳ ಪರಿಚಯ ಇವೇ ಮೊದಲಾದ ಹಲವಾರು ಗುಣಗಳು ವಿಮರ್ಶಕನಲ್ಲಿರಬೇಕೆಂಬುದು ಪರಂಪರಾಗತ ವಿಚಾರ. ಇವೆಲ್ಲ ಸರಿಯಾದರೂ ಮುಖ್ಯವಾಗಿ ವಿಮರ್ಶಕ ಕಾವ್ಯರಸಾಸ್ವಾದವನ್ನು ಆಸ್ವಾದಿಸಬಲ್ಲ ಸಹೃದಯನಾಗಿರಬೇಕು. ಆ ಸಹೃದಯತೆ ಇಲ್ಲದೆ ಎಂಥ ಬಹುಶ್ರುತನಾಗಿದ್ದರೂ, ತೀಕ್ಷ್ಣಮತಿಯಾಗಿದ್ದರೂ ಆತ ಒಳ್ಳೆಯ ವಿಮರ್ಶಕನಾಗಲಾರ. ಕವಿಯಂತೆ ವಿಮರ್ಶಕನೂ ಕಲ್ಪಕತೆಯುಳ್ಳವನಾಗಿರಬೇಕು. ಕವಿಯ ಪ್ರತಿಭೆ ಜೀವನವನ್ನು ಅರಿಯುವಂತೆ ವಿಮರ್ಶಕನ ಕಲ್ಪಕತೆ ಕಾವ್ಯವನ್ನು ಅರಿತು ಆಸ್ವಾದಿಸುತ್ತದೆ. ಹಾಗೆ ಕಲ್ಪಕತೆಯುಳ್ಳವನ ವಿಮರ್ಶೆ ರಸಾರ್ದ್ರವೂ ಹೃದ್ಯವೂ ಆಗಬಲ್ಲದು. ಅದರಂತೆ ಆತನಲ್ಲಿ ವಿಮರ್ಶೆಯ ಬಗ್ಗೆ

---

೧೨. La scelles Aberchrombie : Principles of Literary Criticism (1958). "The chief thing that distinguishes the power to criticize from the other two is the fact that it can be acquired.." Page 9. ಮತ್ತು ".. But there are no principles which will tell you how to create literature, nor how to enjoy it" Page 10.

ಆಳವಾದ ಶ್ರದ್ಧೆಯಿರಬೇಕು, ಆತನ ಮನಸ್ಸು ಪೂರ್ವಗ್ರಹಗಳಿಂದ ದೂರವಿರಬೇಕು. ಅಲ್ಲದೆ ಆತನಲ್ಲಿ ಪ್ರಶಂಸಾರ್ಹ ನಿರ್ಲಿಪ್ತತೆ ಇರಬೇಕು. ಕೇವಲ ಕೆಲವೇ ಸಿದ್ಧಾಂತಗಳಿಗೆ ಅಂಟಿಕೊಳ್ಳದೆ, ತನಗೆ ಸರಿಯೆಂದು ಕಾಣುವ ಎಲ್ಲ ವಿಚಾರಗಳನ್ನೂ ಸ್ವಾಗತಿಸುವ ತೆರೆದ ಮನಸ್ಸು ಆತನಿಗಿರಬೇಕು. ಕೇವಲ ಪಾಂಡಿತ್ಯಕ್ಕಿಂತ, ಆತನ ಓದಿನಿಂದ ಆತನ ಮನಸ್ಸು, ವಿಚಾರಶಕ್ತಿ, ದೃಷ್ಟಿಕೋನ ವಿಶಾಲಗೊಂಡಿರಬೇಕು. ಅಂದರೆ ಅವನಿಗೆ ಕಾವ್ಯದಲ್ಲಿ ಸುಂದರ, ಶ್ರೇಷ್ಠ, ಮಹೋನ್ನತ ಮೊದಲಾದವುಗಳ ಕಲ್ಪನೆ ಬಂದೀತು. ಇಲ್ಲವಾದರೆ ಆತನ ಮಾತುಗಳು ಕೇವಲ ವಿಶೇಷಣಗಳ ಮಾಲೆಯಿಂದ ತುಂಬಿ ಹೋಗಬಹುದು. ಅದರಂತೆ ತನಗೆ ಕಂಡಂತೆ ಮಾತ್ರ ಬರೆಯುವ ಒಂದು ರೀತಿಯ ವಿಕ್ಷಿಪ್ತತೆ ಮತ್ತು ಕೃತಿಯ ದೋಷಗಳನ್ನು ಮಾತ್ರವೇ ಕಾಣುವ ಕಾಕದೃಷ್ಟಿಗಳು ವಿಮರ್ಶಕನಿಗಿದ್ದರೆ ಅವನಿಗೂ ಹಾನಿಕರ, ಸಾಹಿತ್ಯಕ್ಕೂ ಹಾನಿಕರ. ರಾಗದ್ವೇಷರಹಿತವಾದ, ಔದಾರ್ಯ ಸಂಪನ್ನವಾದ ವಿಮರ್ಶೆ ಮಾತ್ರ ಸ್ವಾಗತಾರ್ಹವಾದುದು.

ವಿಮರ್ಶಕನಲ್ಲಿ ವಸ್ತುನಿಷ್ಠ ಮನೋಧರ್ಮವಿರಬೇಕು. ಆದರೆ ವಿಮರ್ಶಕ ತನ್ನ ವ್ಯಕ್ತಿತ್ವವನ್ನು ಬದಿಗಿಟ್ಟು ಕೃತಿಯನ್ನು ಮಾತ್ರ ಕಾಣಬೇಕೆಂದರೆ ಸಾಧ್ಯವಿಲ್ಲ. ಅಷ್ಟುಮಟ್ಟಿಗೆ ವಿಮರ್ಶೆ ಆತ್ಮನಿಷ್ಠವೂ ಆಗಿರುತ್ತದೆ; ಆಗಿರಬೇಕು. ಇಲ್ಲವಾದರೆ ವಿಮರ್ಶಕ ತನ್ನ ಹೃದಯದಲ್ಲಿ ಅನುಭವಿಸಿದ ರಸಾನಂದವನ್ನು ಬೇರೆಯವರಿಗೆ ಹೇಗೆ ಕೊಡಬಲ್ಲ? ಆದರೆ ಕೃತಿಯ ಮೌಲ್ಯವನ್ನು ನಿರ್ಣಯಿಸುವಾಗ ಮಾತ್ರ ವಿಮರ್ಶಕ ನ್ಯಾಯಾಧೀಶನಂತೆ ಗುಣದೋಷಗಳಲ್ಲಿ ಯಾವುದರ ಪಕ್ಷಪಾತಿಯೂ ಆಗಿರದೆ ನಿರ್ಲಿಪ್ತನಾಗಿರುವುದು ಅವಶ್ಯ. " The critic, when he is criticising and any workof art, should, as for as possible, not be personal and self centred in his judgements. He should be like a judge in the court. " ಎಂದು ಹೇಳಲಾಗುತ್ತದೆ. ಆದರೆ ಅತಿ ವಸ್ತುನಿಷ್ಠನಾದ ಹೃದಯಶೂನ್ಯ ಮತ್ತು ಕೇವಲ ಕಾನೂನುಗಳ ಪಂಡಿತನಾಗಿರದೆ, ಆತ ಸಹೃದಯ ನ್ಯಾಯಾಧೀಶನಂತಿರಬೇಕು. ವಿಮರ್ಶಕ ಮುಖ್ಯವಾಗಿ ಸದಭಿರುಚಿ ಮತ್ತು ನ್ಯಾಯಬುದ್ಧಿ(Taste and judgement)ಯುಳ್ಳವನಾಗಿರಬೇಕು. ಅದರಂತೆ ಕೃತಿಯನ್ನು ಅರಿತು ಆನಂದಾನುಭವವನ್ನು ಪಡೆದವನಾಗಿರಬೇಕಲ್ಲದೆ ಕೇವಲ ತಂತ್ರಜ್ಞನಾಗಿದ್ದರೆ ಸಾಲದು. ಒಂದು ವಿಮರ್ಶೆ ತಂತ್ರಪ್ರಧಾನವಾಗಿರಲಿ ಅಥವಾ ಇಲ್ಲದಿರಲಿ ಅದು ಹೆಚ್ಚು ಅರ್ಥಪೂರ್ಣವಾದ, ಹೆಚ್ಚು ಸ್ಪಷ್ಟವಾದ ರಸಾನುಭವವನ್ನು ನಮಗೆ ನೀಡಲಿಕ್ಕೆ ಶಕ್ಯವಾದರೆ ಮಾತ್ರ ಅದು ಸಾರ್ಥಕವೆನಿಸುತ್ತದೆ. ತತ್ವಗಳನ್ನು, ನಿಯಮಗಳನ್ನು ವಿಮರ್ಶಕ ಹೇಗೆ ಬಳಸಿಕೊಂಡಿದ್ದಾನೆ ಎಂಬುವದರಿಂದ ಮಾತ್ರ ಆತನ ವಿಮರ್ಶೆ ಬೆಲೆಯುಳ್ಳದ್ದಾಗುತ್ತದೆಯಲ್ಲದೆ ಆತನ ತಂತ್ರಜ್ಞತೆಯಿಂದಲ್ಲ. ಹೀಗೆ ಆದರೂ ವಿಮರ್ಶೆ ವಿಜ್ಞಾನವಲ್ಲ. ಅದೂ ಒಂದು ಕಲೆ.

ಹಾಗಿರುವದರಿಂದ ವಿಮರ್ಶಕನಿಗೂ ಒಂದು ಮಿತಿ ಇದ್ದೇ ಇದೆ. ವಿಮರ್ಶಕ ವಸ್ತುನಿಷ್ಠನಾಗಿರಬೇಕು, ನಿರ್ಲಿಪ್ತನಾಗಿರಬೇಕು, ತೆರೆದ ಮನಸ್ಸಿನವನಾಗಿರಬೇಕು.

ಎಂದು ಎಷ್ಟೇ ಹೇಳಿದರೂ, ಅದನ್ನು ಸಂಪೂರ್ಣವಾಗಿ ಸಾಧಿಸುವುದು ವಾಸ್ತವವಾಗಿ ಕಠಿಣ. ಏಕೆಂದರೆ ಆತನಿಗೂ ಮಾನಸಿಕ, ನೈತಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಮೊದಲಾದ ಬಂಧನಗಳಿರಬಹುದಾಗಿದೆ.[೧೩] ಅಂಥವರಿಂದ ಸಂಪೂರ್ಣ ನಿಷ್ಪಕ್ಷಪಾತ ವಿಮರ್ಶೆ ಸಾಧ್ಯವಾಗದೆ ಹೋಗಬಹುದು. ಆದರೂ ಅಂಥ ನಿಷ್ಪಕ್ಷಪಾತ ವಿಮರ್ಶೆಯೇ ಎಲ್ಲರ ಗುರಿಯಾಗಿರಬೇಕು. ಅಲ್ಲದೆ ಎಂಥ ಒಳ್ಳೆಯ ವಿಮರ್ಶಕನಿಂದಲೂ ತಪ್ಪುಗಳಾಗುವ ಸಂಭವ ಇದ್ದೇ ಇದೆ. ಮತ್ತು ಈ ತಪ್ಪುಗಳು ಉದ್ದೇಶರಹಿತವಾಗಿಯೂ ಆಗಬಹುದು. ಅದಕ್ಕೆ E. M. Wilson ಅವರು "He is sometimes right for the wrong reason; and he may judge wrongly on the best of principles"[೧೪] ಎಂದಿರುವರು. ಹಾಗಿರುವದರಿಂದ ಕೆಲವು ಸಲ ತಪ್ಪಿದನೆಂಬ ಕಾರಣದಿಂದಲೇ ಒಬ್ಬ ವಿಮರ್ಶಕನನ್ನು ಸಾಮಾನ್ಯನೆಂದು ಕರೆಯಬೇಕಾಗಿಲ್ಲ. ಈ ಬಗ್ಗೆ ಅವರು "To judge rightly is not uniformlly the gift of a great critic; to judge, wrongly, on occasions, does not rob him of his great ness. It is more important for a critic to be a good companion than to be in fallible" ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.[೧೫]

ಅಲ್ಲದೇ ಒಬ್ಬನ ವಿಮರ್ಶೆ ಎಷ್ಟೇ ನಿರ್ದುಷ್ಟವಾಗಿದ್ದರೂ ಅದು ಸರ್ವರಿಗೂ ಗ್ರಾಹ್ಯವೇ ಆಗಿರುತ್ತದೆ ಎಂದೂ ಹೇಳಲಿಕ್ಕೆ ಬಾರದು. ಇಬ್ಬರು ನುರಿತ ವಿಮರ್ಶಕರು ಒಂದೇ ಕೃತಿಯಮೇಲೆ ಬರೆದ ವಿಮರ್ಶೆಯಲ್ಲಿ ಭಿನ್ನಾಭಿಪ್ರಾಯ ಕಂಡರೆ ಆಶ್ಚರ್ಯವೇನಲ್ಲ. ಅದಕ್ಕೆ ಅವರವರ ಮನೋಧರ್ಮ ಕಾರಣವಾಗಿರಬಹುದು. ಎರಡು ಗಡಿಯಾರಗಳು ಎಂದೂ ಒಂದೇ ವೇಳೆಯನ್ನು ತೋರುವುದಿಲ್ಲ ಎಂದು ಇಂಗ್ಲೀಷಿನಲ್ಲಿ ಒಂದು ನಾಣ್ಣುಡಿಯಿದೆ. ಆದರೆ ಆ ಗಡಿಯಾರಗಳು ತೋರುವ ವೇಳೆಯಲ್ಲಿ ಕೆಲವು ಸೆಕೆಂದುಗಳು ಅಥವಾ ಮಿನಿಟುಗಳು ಮಾತ್ರ ವ್ಯತ್ಯಾಸವಾಗಬಹುದು. ತಾಸುಗಟ್ಟಲೆ ವ್ಯತ್ಯಾಸವಾದರೆ ಒಂದು ಗಡಿಯಾರ ತೀರ ಕೆಟ್ಟು ಹೋಗಿದೆ ಎಂದೇ ಹೇಳಬೇಕಾಗುತ್ತದೆ. ಈ ಮಾತು ಸಾಹಿತ್ಯವಿಮರ್ಶೆಗೂ ಅನ್ವಯಿಸುತ್ತದೆ. ಇಬ್ಬರು ವಿಮರ್ಶಕರ ವಿಮರ್ಶೆಯಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯ ಸಾಮಾನ್ಯವಾಗಿ ತೋರುವುದಿಲ್ಲ. ಒಬ್ಬನು 'ಶ್ರೇಷ್ಠ' ಎಂದು ನಿರ್ಣಯಿಸಿದ ಒಂದು ಕೃತಿಯನ್ನು ಬೇರೊಬ್ಬ ತಜ್ಞ ವಿಮರ್ಶಕನು 'ಕನಿಷ್ಠ' ಎಂದು ತೀರ ಕ್ವಚಿತ್ತಾಗಿ ಕರೆಯಬಹುದು. ಹಾಗಾದರೆ ಅಲ್ಲಿ ಕೃತಿಯ

---

೧೩. ವಿಮರ್ಶಕನಿಗೇ ಆಗಲಿ ಅಥವಾ ಯಾವುದೇ ಕಲಾರಾಧಕನಿಗೇ ಆಗಲಿ ಕುಟುಂಬ, ಜಾತಿ, ಪಕ್ಷ, ಪಂಗಡಗಳ ಬಂಧನವಿರಬಾರದು; ಆತ ನಿಜವಾಗಿಯೂ ಸ್ವತಂತ್ರ ವ್ಯಕ್ತಿತ್ವವುಳ್ಳವನಾಗಿರಬೇಕು ಎಂದು T. S. Eliot ಅಭಿಪ್ರಾಯ ಪಡುವರು (ಅವರ The Sacred Wood ದಲ್ಲಿ Imperfect Critic ಎಂಬ ಲೇಖನವನ್ನು ನೋಡಿರಿ) ಆದರೆ ಹಾಗಿರುವುದು ವಾಸ್ತವವಾಗಿ ಸಾಧ್ಯವೇ ? ಎಂಬುದು ಚರ್ಚಾಸ್ಪದ ವಿಷಯ.

೧೪. Encyclopaedia of Literature Vol I, Page 124.

೧೫. ಅದೇ, ಪುಟ ೧೩೭.

ವೈಚಿತ್ರ್ಯವಾದರೂ ಇರಬೇಕು. ವಿಮರ್ಶಕನ ನಿರ್ಣಯವಾದರೂ ತಪ್ಪಿರಬೇಕು. ಸಾಮಾನ್ಯವಾಗಿ ಒಳ್ಳೆಯ ವಿಮರ್ಶೆಯಲ್ಲಿ ಹೀಗಾಗುವುದು ಕಡಿಮೆ. ವಿಮರ್ಶಕನಲ್ಲಿ ಸಹೃದಯತೆ ಮತ್ತು ಪ್ರಾಮಾಣಿಕತೆ ಹೆಚ್ಚಿದಂತೆ ಆತನ ಕೃತಿ ವಿಮರ್ಶೆಗೆ — ಆತ ಕೊಡುವ ನಿರ್ಣಯಕ್ಕೆ — ಹೆಚ್ಚು ಬೆಲೆ ಬರುತ್ತದೆ.

ಮುಖ್ಯವಾಗಿ ವಿಮರ್ಶಕನಲ್ಲಿ ಕಳಕಳಿ. ಪ್ರಾಮಾಣಿಕತೆ ಬೇಕು. ತನ್ನ ವ್ಯಕ್ತಿತ್ವವನ್ನು ಮೀರಿನಿಂತು ಕೃತಿಯನ್ನು ಕಾಣುವ ದೃಷ್ಟಿ ಆತನಲ್ಲಿರಬೇಕು. ಇದನ್ನು ಸಾಧಿಸುವುದು ಬಹು ಕಠಿಣ. ಆದರೂ ಆತ "ನನಗೆ ಈ ಕೃತಿ ಮೆಚ್ಚಿಗೆಯಾಗಿಲ್ಲ. ಆದರೂ ಇದು ಚೆನ್ನಾಗಿದೆ" ಎಂದೋ, "ನಾನು ಇದನ್ನು ಮೆಚ್ಚಿದರೂ ಇದನ್ನು ತಿರಸ್ಕರಿಸುತ್ತೇನೆ." ಎಂದೋ, ಅಥವಾ "ಈ ಕೃತಿ ನನ್ನ ಮೇಲಂತೂ ಈ ಪರಿಣಾಮ ಮಾಡಿತು. ನಿಜವಾಗಿ ಇದು ಬೇರೆಯೇ ಪರಿಣಾಮ ಉಂಟು ಮಾಡಬೇಕಾಗಿತ್ತು" ಎಂದೋ ಹೇಳುವ ಪ್ರಾಮಾಣಿಕತೆಯನ್ನು ಪಡೆದಿರಬೇಕು. ಸ್ತುತಿಗೆ ನಿಜವಾಗಿ ಅನರ್ಹವಾಗಿದ್ದರೂ ಒಂದು ಕೃತಿಯನ್ನು ಹೊಗಳುವುದೆಂದರೆ ಅನೀತಿಯೇ ಸರಿ.[೧೬] ಅದರಂತೆ ಒಂದು ಕೃತಿ ನಿಜವಾಗಿಯೂ ಒಳ್ಳೆಯದಾಗಿದ್ದರೂ ಅದನ್ನು ತಿರಸ್ಕರಿಸುವುದೂ ಅಷ್ಟೇ ಅನೀತಿ.

ಉಳಿದ ಭಾಷೆಗಳಲ್ಲಿಯಂತೆ ಕನ್ನಡದಲ್ಲೂ ಇಂಥ ಅನೀತಿ ಬೇಕಾದಷ್ಟಿದೆ. ಒಂದು ಕಾಲಕ್ಕೆ ಸುಮ್ಮಸುಮ್ಮನೆ ಹೊಗಳುವುದು ಒಂದು ಚಟವಾಗಿತ್ತು. ಈಗ ಒಳ್ಳೆಯ ಕೃತಿಯನ್ನೂ ತೆಗಳಿ ಅಹಂಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವವರೂ ಹುಟ್ಟುತ್ತಿದ್ದಾರೆ. ಇಂಥ ವಿಮರ್ಶಕರಿಂದ ಸಾಹಿತ್ಯಕ್ಕಾಗಲೀ ವಾಚಕರಿಗಾಗಲಿ ಏನೂ ಪ್ರಯೋಜನವಾಗಲಾರದು. ಕೃತಿಯ ನಿಜವಾದ ಮೌಲ್ಯಮಾಪನ ನಡೆದರೆ ಮಾತ್ರ ಅದರಿಂದ ಎಲ್ಲರಿಗೂ ಕ್ಷೇಮ. ಅದರಂತೆ ಇಂದು ನಮ್ಮ ಪತ್ರಿಕೆಗಳಲ್ಲಿ "ಪುಸ್ತಕ ವಿಮರ್ಶೆ" ಎಂಬ ಹೆಸರಿನಿಂದ ಬರುವ ಲೇಖನ ಹೆಚ್ಚಾಗಿ ಪುಸ್ತಕ ಪರಿಚಯವೇ ಆಗಿರುತ್ತದೆ. ಕೃತಿಯ ಸ್ಥೂಲವಾದ ಪರಿಚಯ, ಅಲ್ಲೊಂದು ಇಲ್ಲೊಂದು ವಿಮರ್ಶೆಯ ಮಾತು—ಇಷ್ಟರಿಂದಲೇ ಕೃತಿ ಮೌಲ್ಯನಿರ್ಣಯ ಸರಿಯಲ್ಲ.

ಇನ್ನು "ಒಳ್ಳೆಯ ಕವಿ ಒಳ್ಳೆಯ ಮನುಷ್ಯನೂ ಆಗಿರಬೇಕು" ಎಂಬ ಗ್ರೀಕರ ನಾಣ್ಣುಡಿ ಕವಿಗೆ ಹೇಗೆ ಅನ್ವಯಿಸುವುದಿಲ್ಲವೋ ಅದರಂತೆ ವಿಮರ್ಶಕನಿಗೂ ಅನ್ವಯಿಸುವುದಿಲ್ಲ. ಮನುಷ್ಯ ಸಾಮಾಜಿಕವಾಗಿ ಹೇಗೇ ಇದ್ದರೂ ಒಳ್ಳೆಯ ವಿಮರ್ಶಕನಾಗಿರಲು ಸಾಧ್ಯವಿದೆ. ಅದರಂತೆ ಕವಿಗಳು ಮಾತ್ರ ವಿಮರ್ಶಕರಾಗಬಲ್ಲರು, ಎಂಬುದೂ ಒಂದು ಪರಂಪರಾಗತವಾಗಿ ಬಂದ ಅಭಿಪ್ರಾಯ. ಜಾನ್ಸನ್ನನು "To judge of poets is only the faculty of poets and not of all poets, but the best" ಎಂದನು.[೧೭] ಈ ಮಾತನ್ನು ಇದ್ದಕ್ಕಿದ್ದಂತೆ ಒಪ್ಪುವುದು ಕಠಿಣ. ..."ಕವಿ ಕವಿಯನ್ನು ಅರಿಯಬಲ್ಲ—ಎಂಬುದು ಸಾಮಾನ್ಯವಾಗಿ ಸರಿಯಾದರೂ 'ಕವಿಯೇ ಕವಿಯನ್ನು

೧೬. I. A. Richards : Principles of Literary Criticism. Page 244.

೧೭. As quoted in "The Making of Litreature '. . P. 14.

ಅರಿಯಬಲ್ಲ, ತೂಗಬಲ್ಲ' ಎಂಬುದೂ ಅತಿವಾದವಾಗುತ್ತದೆ." ಎಂಬ ಸಮನ್ವಯ ವಾದ ಅಭಿಪ್ರಾಯವೂ ಇದೆ.[೧೮] ಅದರಂತೆ "... one can certainly appreciate poetry and judge it without having composed poems of one's own, as one can live in a house without having built one oneself"[೧೯] ಎಂದೂ ಹೇಳಲಾಗಿದೆ. ಈ ವಿಚಾರದ ಪೂರ್ವಾರ್ಧವನ್ನು ಒಪ್ಪಬೇಕು. ಆದರೆ, ಇನ್ನೊಬ್ಬರು ಕಟ್ಟಿದ ಮನೆಯಲ್ಲಿ ವಾಸಿಸುವುದೂ, ಇನ್ನೊಬ್ಬರು ರಚಿಸಿದ ಕಾವ್ಯ ವನ್ನು ವಿಮರ್ಶಿಸುವುದೂ ಸರಿಸಮಾನವಾಗಲಾರವು. ಇಲ್ಲಿ ಬೇರೆ ಹೆಚ್ಚು ಉಚಿತ ವಾದ ಸಾದೃಶ್ಯವನ್ನು ಕೊಡಬಹುದೇನೋ. ಪಾಕಶಾಸ್ತ್ರ ನಿಪುಣನು ಸಿದ್ಧ ಮಾಡಿದ ಪಾಕವನ್ನು ಸವಿದು ಅದು ಅದರ ಗುಣದೋಷಗಳನ್ನು ಹೇಳಬೇಕಾದರೆ ನಾವೂ ಪಾಕ ಶಾಸ್ತ್ರದಲ್ಲಿ ನಿಪುಣರೇ ಆಗಿರಬೇಕೆಂದಾಗಲಿ, ಅಡಿಗೆಯನ್ನು ಸ್ವತಃ ಮಾಡಿದವರೇ ಆಗಿರ ಬೇಕೆಂದಾಗಲಿ ಹೇಳುವುದು ಸರಿಯಲ್ಲ. ರಸಗ್ರಾಹಿಯಾದ ನಾಲಗೆಯುಳ್ಳ ಬುದ್ಧಿ ವಂತನು ಎಂಥ ಪಾಕದ ಗುಣದೋಷವನ್ನೂ ಪರೀಕ್ಷಿಸಬಲ್ಲ.

ತಾತ್ಪರ್ಯವೆಂದರೆ ಪ್ರತ್ಯಕ್ಷ ಕಾವ್ಯವನ್ನು ಬರೆದ ಕವಿ ಮಾತ್ರ ವಿಮರ್ಶಕನಾಗ ಬಲ್ಲ ಎಂಬುದಕ್ಕಿಂತ ಅವನು ಕವಿಯಾಗಿರಲಿ ಇಲ್ಲದಿರಲಿ, ಕವಿಹೃದಯವುಳ್ಳವ ಮಾತ್ರ ವಿಮರ್ಶಕನಾಗಬಲ್ಲ ಎಂಬ ವಿಚಾರವೇ ಹೆಚ್ಚು ಸಮಂಜಸವಾದುದು.

ಬಹುಶಃ ವಿಮರ್ಶಕನಿಗಿಂತ ಕವಿ ಶ್ರೇಷ್ಠ ಎಂಬ ಮನೋಭಾವದಿಂದ ಇಂಥ ಮಾತುಗಳು ಹುಟ್ಟಿಕೊಂಡಿರಬಹುದು. ಒಂದು ಅರ್ಥದಲ್ಲಿ ಕವಿ ಶ್ರೇಷ್ಠನೇ ಸರಿ. ಯಾಕೆಂ ದರೆ ಕವಿ ಕಾವ್ಯವನ್ನು ರಚಿಸದೆ ಇದ್ದಲ್ಲಿ ಅದನ್ನು ಆಸ್ವಾದಿಸುವ ಅಥವಾ ವಿಮರ್ಶಿಸುವ ಸಂದರ್ಭವೇ ಬರುತ್ತಿರಲಿಲ್ಲ. ಆ ಮಾತು ಬೇರೆ. ಆದರೆ ಕವಿಯ ಕಾರ್ಯ ವಿಮರ್ಶ ಕನ ಕಾರ್ಯಕ್ಕಿಂತ ಹೆಚ್ಚಿನದು. ಕವಿಯ ಉನ್ನತಿಕೆಯಾಗಲಿ, ಆತನ ಆಳವಾಗಲಿ ವಿಮರ್ಶ ಕನಿಗೆ ಬಾರದು–ಎಂಬ ವಿಚಾರ ಮಾತ್ರ ಪ್ರತಿಷ್ಠಿತ ಅಹಂಮನ್ಯ ಕವಿಗಳ ಅಭಿಪ್ರಾಯ.

ಕೊನೆಯದಾಗಿ ವಿಮರ್ಶೆಯ ಭಾಷೆಯ ಬಗ್ಗೆಯೂ ಇಲ್ಲಿ ಒಂದು ಮಾತನ್ನು ಹೇಳಬಹುದು. ಕಾವ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ರಸಾಸ್ವಾದನದ ಆನಂದವನ್ನು ಪಡೆಯಲಾಗದ ವಾಚಕ ಅಥವಾ ತನ್ನಕಿಂತಲೂ ಹೆಚ್ಚಿನ ಅರ್ಥವನ್ನು ಕಂಡ ವಿಮರ್ಶಕನಿಂದ ತನ್ನ ರಸಾಸ್ವಾದನವನ್ನು ಹೆಚ್ಚಿಸಿಕೊಳ್ಳುವ ಅಪೇಕ್ಷೆಯುಳ್ಳ ವಾಚಕ ವಿಮರ್ಶೆಯ ಸಹಾಯವನ್ನು ಬಯಸುತ್ತಾನೆ. ಹಾಗಿರುವಾಗ ಕಾವ್ಯಭಾಷೆಗಿಂತ ವಿಮರ್ಶೆಯ ಭಾಷೆಯೇ ಹೆಚ್ಚು ಗಹನವೂ ಕ್ಲಿಷ್ಟವೂ ಅಸ್ಪಷ್ಟವೂ ಆದರೆ ಅದರಿಂದ ಪ್ರಯೋಜನವೇನು ? ಆದ್ದರಿಂದ ವಿಮರ್ಶೆಯ ಭಾಷೆ ಸಾಮಾನ್ಯ ವಾಚಕನಿಗೂ ತಿಳಿಯುವಂತೆ ಸುಲಭವೂ ಸರಳವೂ ಆಗಿರಬೇಕೆಂಬುದು ಸ್ಪಷ್ಟವೇ ಇದೆ. ಆದರೆ

೧೮. ಡಾ. ರಂ. ಶ್ರೀ. ಮುಗಳಿ : ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು. ಪುಟ ೨೮.

೧೯. Prof. T. R. Rajasekharaiah : Journal of the Karnatak University Humanities Vol VIII P. 29.

ಕೆಲವು ಕನ್ನಡ ವಿಮರ್ಶಕರು ಬಳಸುವ ಭಾಷೆ ಕನ್ನಡವೆಂದೇ ಅನಿಸುವುದಿಲ್ಲವೆಂಬ ತಕರಾರು ಕೇಳಿಬರುತ್ತಿದೆ. ಅದಕ್ಕೆ ಮುಖ್ಯ ಕಾರಣವೆಂದರೆ ವಿಮರ್ಶಕರಿಗೆ ಭಾಷೆಯ ಮೇಲೆ ಪ್ರಭುತ್ವವಿಲ್ಲದಿರುವುದು. ಅವರ ವಾಕ್ಯರಚನೆ ತೀರ ಇಂಗ್ಲಿಷ ರೀತಿಯದಾಗಿ ಕೃತ್ರಿಮವೆನಿಸುತ್ತದೆಯಲ್ಲದೆ ಸಂದಿಗ್ಧತೆಗೂ ಎಡೆಗೊಡುತ್ತದೆ.[೨೦]

ವಿಮರ್ಶೆಯ ಭಾಷೆ ಸಾಮಾನ್ಯ ವಾಚಕನಿಗೆ ತಿಳಿಯದೆ ಇರಲು ಬಹುಶಃ ವಿಮರ್ಶೆಯ ಪರಿಭಾಷೆಯೂ ಕಾರಣವಾಗಬಹುದು. ವಾಚಕರು ಇಂಥ ಪರಿಭಾಷೆಯ ಪರಿಚಯ ಮಾಡಿಕೊಳ್ಳುವುದು ಅವಶ್ಯ.

ಕಾವ್ಯ ಮೀಮಾಂಸೆಯಲ್ಲಿ ನಮ್ಮಲ್ಲಿ ಮೊದಲಿಗೆ ಅಲಂಕಾರ, ರೀತಿ, ಗುಣ, ಧ್ವನಿ, ರಸ, ಔಚಿತ್ಯ ಮೊದಲಾದ ಪದಗಳು ಬಳಕೆಯಲ್ಲಿದ್ದವು. ಆಂಗ್ಲ ಸಾಹಿತ್ಯದ ಪ್ರಭಾವದಿಂದ ನಮ್ಮಲ್ಲಿ ಬೆಳೆದ ವಿಮರ್ಶೆಯಲ್ಲಿ ರಮ್ಯ, ಮಹೋನ್ನತ, ಆತ್ಮನಿಷ್ಠ, ವಸ್ತುನಿಷ್ಠ, ವಸ್ತು, ಪಾತ್ರ, ನಿರೂಪಣೆ, ಬೆಳವಣಿಗೆ ಇವೇ ಮೊದಲಾದ ಹಲವಾರು ಪದಗಳು ಕಾಣಿಸಿಕೊಂಡವು. ಇತ್ತೀಚೆ ಪ್ರತಿಮೆ, ಸಂಕೇತ, ಸಂವೇದನೆ, ಅಥೆಂಟಿಕ್, ಇನ್ವಾಲ್ವೀಕರಣ ಮೊದಲಾದ ಪದಗಳೂ ಚಲಾವಣೆಯಲ್ಲಿ ಬರತೊಡಗಿವೆ.

ಇಂಥ ಆಯಾತಗೊಂಡ ನವೀನ ಪ್ರಯೋಗಗಳ ಬಳಕೆ ಸರಿಯಲ್ಲವೇನೋ ಎಂಬಂತೆ ಡಾ. ಜಿ. ಎಸ್. ಶಿವರುದ್ರಪ್ಪನವರು ನಮ್ಮ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಬಳಸಿದ ನೂರಾರು ಪದಗಳಲ್ಲಿ "ಕೆಲವನ್ನಾದರೂ ಇಂದು ಚಲಾವಣೆಗೆ ತಂದು ವಿಮರ್ಶೆಯ ಪರಿಭಾಷೆಗೆ ಸಹೃದಯರ ಕಿವಿ ಬಳಕೆಯಾಗುವಂತೆ ಮಾಡಲು ಸಾಧ್ಯವಿದೆ" ಎಂದು ನುಡಿದಿರುವರು.[೨೧] ನಿಜವಾಗಿ ನೋಡಿದರೆ ವಿಮರ್ಶೆಯಲ್ಲಿ ಯಾವ ಪದಗಳನ್ನು ಬಳಸಬೇಕೆಂಬುದು ಅಷ್ಟು ಮಹತ್ವದ್ದಲ್ಲ. ಕಾಲಕಾಲಕ್ಕೆ ಈ ಪದಗಳ ಬಳಕೆಯ ಧ್ಯಾಸನ್ನು ಬದಲಾಗುತ್ತ ಹೋಗುತ್ತದೆ. ಒಂದು ಕಾಲಕ್ಕೆ ವಿಮರ್ಶಕರಿಗೆ ಅತಿ ಪ್ರಿಯವಾದ ಪದಗಳು ಕಾಲಾನುಕ್ರಮದಲ್ಲಿ ನಕಲಿ ನಾಣ್ಯಗಳಂತೆ ನಡೆಯದೆ ಹೋಗಬಹುದು. ಆಗ ವಿಮರ್ಶಕರು ತಮ್ಮ ಪ್ರಗಲ್ಭ ಬುದ್ಧಿಯಿಂದ ಮತ್ತೆ ಕೆಲವು ನವೀನ ಪದಗಳನ್ನು ಸೃಷ್ಟಿಸಿಕೊಂಡು ಬಳಸುತ್ತ ಹೋಗುತ್ತಾರೆ; ಅಷ್ಟೇ.

ವಿಮರ್ಶೆ ಮುಖ್ಯವೇ ಹೊರತು ವಿಮರ್ಶೆಗೆ ಬಳಸುವ ಭಾಷೆ ಮುಖ್ಯವಲ್ಲ.

---

೨೦. ಡಾ. ಜಿ. ಎಸ್. ಶಿವರುದ್ರಪ್ಪ : ಗತಿಬಿಂಬ "ನಮ್ಮಲ್ಲಿ ಇತ್ತೀಚೆಗೆ ವಿಮರ್ಶೆಯ ಹೆಸರಿನಲ್ಲಿ ಬರುತ್ತಿರುವ ಎಷ್ಟೋ ಲೇಖನಗಳನ್ನು ನೋಡಿದಾಗ ಅಲ್ಲಿನ ವಿಮರ್ಶೆಯ ಭಾಷೆ ಯಾವ ಭಾಷೆಯ ಜಾಯಮಾನದಿಂದ ಸಂಭವಿಸಿದ್ದೋ ಹೇಳಲು ಬರುವಂತಿಲ್ಲ" ಪುಟ. ೫೯ ಮತ್ತು ಅಲ್ಲೇ: "ಎಲ್ಲೆಲ್ಲಿಯದೋ ಎರವಲು ತಂದ ಮಾತಿನಲ್ಲಿ, ತಮ್ಮದಲ್ಲದ ಅಭಿಪ್ರಾಯಗಳನ್ನು ತಮ್ಮದೆಂಬಂತೆ ಹೇಳುವ ಈ ಅಭಿನಯಶೈಲಿಯ ಅನಾಥ ಸ್ಥಿತಿಯಿಂದ ನಮ್ಮ ಬುದ್ಧಿವಂತ ವಿಮರ್ಶಕರು ಪಾರಾಗುವ ತನಕ ನಮ್ಮಲ್ಲಿ ನಿಜವಾದ ವಿಮರ್ಶೆ ಬೆಳೆಯಲಾರದು" ಪುಟ ೬೦.

೨೧. ಡಾ. ಜಿ. ಎಸ್. ಶಿವರುದ್ರಪ್ಪ : ವಿಮರ್ಶೆಯ ಪೂರ್ವ ಪಶ್ಚಿಮ, ಪುಟ ೧೪೭.

ಪಾರಿಭಾಷಿಕ ಪದಗಳೇ ವಿಮರ್ಶೆಯಲ್ಲ. ವಿಮರ್ಶಕನ ಮುಖ್ಯ ಗುರಿ ಏನೆಂಬುದನ್ನು ಸ್ಪಷ್ಟವಾಗಿ ಅರಿತ ಮೇಲೆ ಈ ಪಾರಿಭಾಷಿಕ ಪದಗಳ ಸಮಸ್ಯೆಯೇ ಉದ್ಭವಿಸಬೇಕಾಗಿಲ್ಲ.

ಕಾವ್ಯವನ್ನು ಅರ್ಥ ಮಾಡಿಕೊಂಡು ಆನಂದಾನುಭೂತಿಯನ್ನು ಪಡೆದು ಕಾವ್ಯದ ಮೌಲ್ಯಮಾಪನ ಮಾಡಲು ಸಹಾಯಕವಾಗುವ ವಿಮರ್ಶೆ ಮಾತ್ರ ಸಾರ್ಥಕ. ಅದು ಕಾವ್ಯದ ಅಂತಃಸಾರವೆಲ್ಲವನ್ನೂ ನಮ್ಮ ಹೃದಯಕ್ಕೆ ನಿವೇದಿಸಲು ಸಮರ್ಥವಾಗಿರಬೇಕು. ಶ್ರೇಷ್ಠ ವಿಮರ್ಶಕರಾದ I. A. Richards ಅವರ "The whole apperatus of Critical rules and principles is a means to the attainment of finer, more precise, more discriminating communication" ಎಂಬ ಮಾತುಗಳಿಂದ ಈ ಲೇಖನವನ್ನು ಮುಗಿಸುವುದು ಉಚಿತ.

★ ಕೃಷ್ಣಮೂರ್ತಿ ಕಿತ್ತೂರ

---

೨೨. I. A. Richards : Practical Criticism, P. II.

ಬಿತ್ತುವ ಶಕುನ

ಸರ್ವ ಜನರಿಗೆಲ್ಲ ಸವುಜ ಹೇಳುವೆನು
ಕುಂತ ಕೇಳ್ರಿ ನೀವು ಕಿವಿಗೊಟ್ಟು ।
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವದಿಲ್ಲ ಒಂದು ಎಳ್ಳಷ್ಟು ॥ ಪಲ್ಲವಿ ॥

ಏರು ॥

ಕುರುಡರು ಕುಂಟರು ಇಬ್ಬರು ಕೂಡಿ
ಬರಬಾರದು ಬೀಜವಿದಿರೀಗಿ
ಬಿತ್ತಿದಷ್ಟು ಹೊಲ ನಷ್ಟ ಆಗುವದು
ಅಷ್ಟು ಕೇಡ ಆಗುವದು ಗಾಳಿಗಿ ।

ಹೊಲ ಮೊದಲ ಮಾಡಿ ಅಗಸಿ ಪರಿಯಂತರ
ಆಗಸಗಿತ್ತಿ ಬಂದರ ಅಡ್ಡಾಗಿ
ಹಾಲಸೋರಿ ಹೊಲ ಹಾಳಾಗಿ ಹ್ವಾದಿತ್ತ
ಕಾಳ ಬರುವದಿಲ್ಲ ಸೆರಿ ಮನಿಗಿ ।

ಆಗಸಿಯೊಳಗ ನಾವಲಿಗ್ಯಾ ಬಂದರ
ಹಸಿಬಿ ಹಾಕಿಕೊಂಡ ಹೆಗಲೀಗಿ
ಬಿತ್ತಿದಷ್ಟು ಹೊಲ ಚಂಡಿಕ್ಯಾಡುವರು
ಕೈಸೆರೆಯಾಗುವದು ತುಡುಗರಿಗಿ ।

ಇಳುವು ॥

ಮಾನಿಬಿಟ್ಟ ನೂರಾರು ಹೆಜ್ಜಿಗಿ ಶಿಗಣಿ ತುಳಿದರ
ಹಾಯ್ದುದು ಕಾಡಿಗಿ
ಆಗಸಿಯೊಳಗ ಬಂಜಿ ಬಂದರ ಎದುರಿಗಿ
ಹೋಗು ಹಿಂದಕ ತಿರಿಗಿ ।
ಇದುಕು ಮೀರಿ ನೀ ಬಿತ್ತಲಾಕ ಹೋದರ
ಹ್ವಾದಿಯೊ ದುರ್ಮರಡಾಗಿ
ಖಂಡ ಮಾಂಸ ಬಂದರ ಎದುರಿಗಿ
ಹೋಗಿ ಹೂಡು ಜೋಡು ಕೂರಿಗಿ
ತುಂಬಿದ ಕೊಡ ಎರಡು ಬಂದರ ಬೇಗಿ
ಮೂಲಿಲ್ಲದ ಬೆಳಿ ಹುಲುಸಾಗಿ ।

ಏರು ||

ಇಷ್ಟು ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಉತ್ಕೃಷ್ಟ
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವದಿಲ್ಲ ಒಂದು ಎಳ್ಳಷ್ಟು || || ೧ ||

ಹೊಲ ಬಲಕ ಮಾಡಿ ಕೂರಿಗೆ ಹೂಡು | ಬಿಳಿಎತ್ತ ಮಾಡಿಯು ಬಲಕ
ಎಡಗಡಿ ಎತ್ತ ಬೆದರಿ ಹೋದರ| ಯಜಮಾನ ಹೆಂಡತಿ ಸಾಯುವಳು ತಡಕ
ಉಡಿಯೊಳಗಿನ ಬೀಜ ಬಿದ್ದರ| ಎಷ್ಟಂದ ಹೇಳಲೆಪ್ಪನಾ ಶೋಕ
ಹಿರಿಸೊಸಿ ರಂಡಿಯಾಗುವಳು | ಮನಿಯಾಗ ಎನಿಕಿ ಮುಂದ
ಹೇಳುವೆ ಕೆಡಕ

ಹ್ಯಾದ ದಿನ ಹಣಿಹಗ್ಗ ಬಾರಕೋಲ ಕಳದ ಬಂದರ ತಿಳಿ ನಿನ್ನ ಮನಕ
ಬಿತ್ತಿದವನ ಹೆಂಡತಿ ಸಾಯುವಳು ಹಿಂಗ ನೇಮವಿದು ಕಡಿತನಕ

ಇಳುವು ||

ಕೂರಿಗಿದಿಂಡ ಒಡದರ ಮೇಳಿ ಬಂತು ನಿನ್ನ ಜೀವಕ ಹೋಳಿ
ಕಣಕ ಬೆಂಕಿ ಹತ್ತುವದು ತಿಳಿಯಿಷ್ಟು
ಇಷ್ಟು ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಬಲು ಉತ್ಕೃಷ್ಟ ||

ಏರು ||

ಬಿತ್ತಿಬಂದು ಒಳಕಲ್ಲ ಬೀಸುಕಲ್ಲ ಮ್ಯಾಲ ಕೂಡಬ್ಯಾಡ ತಿಳಿನೀನ
ಬಿತ್ತಿದ ದಿನ ಹೆಂಡತಿ ಹಂತ್ಯಾಕ ಹೋದರ
ಹೊಲ ಹರಕಾಗಿ ಆಗಿಸಾಯುವದು ಸುಳಿ ಬೀಳುವುದು ತಿಳಿಖೂನ

ತಾಳ ಮುರದರ ಬಲಗಡಿಯೊಳಗಿನ ಹೆಚ್ಚ ಹೆರಿಗಿ ನಾಕಮಾನ
ಹಿಂಗ ಇರುವದು ಪ್ರಮಾಣ
ಗೋಪಾಳ ದುರದುಂಡಿ ಹೇಳಿದ ಶಕುನ
ಗುರುಪಾದಸ್ವಾಮಿ ಹಾಡಿ ತಿಳಿಸ್ಯಾನ
ಇಷ್ಟ ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಉತ್ಕೃಷ್ಟ
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವದಿಲ್ಲ ಒಂದು ಎಳ್ಳಷ್ಟ || ೨ ||

★ ವಿ. ಶಿವಾನಂದ

(ತಂದೆಯವರಾದ ಶ್ರೀ ಗುರುಪಾದಸ್ವಾಮಿಗಳ ಲಾವಣಿ ಸಂಗ್ರಹದಿಂದ ಆಯ್ದುಕೊಂಡಿದೆ.)

ಸಲಕಿನಕೊಪ್ಪದ ಸಾರ್ಥಕ ಸೇವಾ ಶಿಬಿರ

(ಕಳೆದ ಸಂಚಿಕೆಯಿಂದ)

ಶಿಬಿರಾರ್ಥಿಗಳು

ಶಿಬಿರವನ್ನು ಯಶಸ್ವಿಯಾಗಿ ನಡೆಸಬೇಕಾದರೆ ವ್ಯವಸ್ಥಿತವಾಗಿಯೇ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿರಬೇಕಾಗುತ್ತದೆ. ಈ ವಿಚಾರವನ್ನು ಅನಂತರ ಪ್ರಸ್ತಾಪಿಸಲಾಗುವುದು. ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಶಿಬಿರಾರ್ಥಿಗಳೂ ಯೋಗ್ಯರಾಗಿರಬೇಕಾಗುತ್ತದೆ; ಸಮರ್ಥರಾಗಿರಬೇಕಾಗುತ್ತದೆ.

ಅಕ್ಟೋಬರ ೧೨ ರ ಮಂಗಳವಾರ ಆರಂಭವಾಗಿ ಅದೇ ತಿಂಗಳ ೨೧ರ ಗುರು-ವಾರದವರೆಗೆ ನಡೆದ ಶಿಬಿರದಲ್ಲಿ ನೇರವಾಗಿ ಪಾಲ್ಗೊಂಡವರು ೨೭ ಜನರು. ಇವರಲ್ಲಿ ಇಬ್ಬರು ಮಹಿಳೆಯರು. ಗ್ರಾಮಸ್ಥರು ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ಶಿಬಿರದಲ್ಲಿ ಭಾಗವಹಿಸಿದವರು ನಾಲ್ಕಾರು ಗುಂಪುಗಳಿಗೆ ಸೇರಿದ್ದರು: ಕರ್ನಾಟಕದ ಎಂಟು ಜಿಲ್ಲೆಗಳಿಗೆ ಮೂಲತಃ ಸೇರಿದವರಾಗಿದ್ದರು. ವಿದ್ಯಾರ್ಥಿಗಳೂ (೧೦), ಮನೋಚಿಕಿತ್ಸಾರ್ಥಿಗಳೂ (೧೦), ಮನೋಚಿಕಿತ್ಸಾ ವಿದ್ಯಾರ್ಥಿಯೂ (೧), ಶಿಪಾಯಿಗಳೂ (೩), ಅಡುಗೆಯವರೂ (೨), ನಿರ್ದೇಶಕನೂ (೧) ಕೂಡಿದ ಈ ಗುಂಪಿನಲ್ಲಿ ೧೨ ಜನರು ಧಾರವಾಡ ಜಿಲ್ಲೆಯಿಂದಲೂ, ೪ ಜನ ಬೆಳಗಾವಿಯಿಂದಲೂ, ೩ ಜನರಂತೆ ಬಳ್ಳಾರಿ, ಕಾರವಾರ (ಉತ್ತರ ಕನ್ನಡ) ಜಿಲ್ಲೆಗಳಿಂದಲೂ, ೨ ಜನ ಬಿಜಾಪೂರ ಜಿಲ್ಲೆಯಿಂದಲೂ, ಒಬ್ಬೊಬ್ಬರಂತೆ ಬೀದರ್, ಮಂಗಳೂರು (ದಕ್ಷಿಣ ಕನ್ನಡ) ಹಾಗೂ ಹಾಸನ ಜಿಲ್ಲೆಗಳಿಂದಲೂ ಬಂದಿದ್ದರು. ಆದರೆ ವಿದ್ಯಾರ್ಥಿಗಳು ೫ ಜಿಲ್ಲೆಗಳಿಗೂ, ಮನೋಚಿಕಿತ್ಸಾರ್ಥಿಗಳು ೬ ಜಿಲ್ಲೆಗಳಿಗೂ ಸೇರಿದ್ದರು. ಶಿಪಾಯಿಗಳೂ, ಅಡುಗೆಯವರೂ ಒಂದೇ ಜಿಲ್ಲೆಗೆ ಸೇರಿದ್ದರು. ಅಂತೂ ಒಟ್ಟಿನಲ್ಲಿ ನೋಡಿದಾಗ ಧಾರವಾಡ ಜಿಲ್ಲೆಯಿಂದ ಬಂದವರ ಶೇಕಡಾ ಪ್ರಮಾಣ ೪೪. ಇದೆ ಜಿಲ್ಲೆಯಿಂದಲೇ ಮಹಿಳೆಯರಿಬ್ಬರೂ ಬಂದಿದ್ದರು. ಇವರಲ್ಲಿ ಒಬ್ಬಾಕೆ ವಿದ್ಯಾರ್ಥಿನಿ, ಇನ್ನೊಬ್ಬಾಕೆ ಅದೇ ಊರಿಗೆ ಸೇರಿದ ಅಡುಗೆಯವನಿಗೆ ನೆರವಾಗಿ "ರೊಟ್ಟಿ ಬಡಿಯುವ" ಮಹಿಳೆ (ಈ ಇಪ್ಪತ್ತೇಳು ಜನರಲ್ಲಿ ಅಡುಗೆಯವರು ಕೂಲಿಯಾಳುಗಳಾಗಿ ದುಡಿಯಲು ಬಂದಿದ್ದರು; ಇತರರೆಲ್ಲಾ ತಂ-ತಮ್ಮ ಖರ್ಚಿನಿಂದಲೇ (ಮನೋಚಿಕಿತ್ಸಾರ್ಥಿಗಳನ್ನು ಹೊರತು) ಬಂದಿದ್ದರು. ಮನೋಚಿಕಿತ್ಸಾರ್ಥಿಗಳ ಖರ್ಚನ್ನು ಮಾನಸಿಕ ಆರೋಗ್ಯ ಕೇಂದ್ರವೇ ವಹಿಸಿಕೊಂಡಿತ್ತು.)

ಶಿಬಿರಾರ್ಥಿಗಳ ಸರಾಸರಿ ವಯಸ್ಸು ೩೦ ವರ್ಷ. ಈ ಶಿಬಿರದಲ್ಲಿ ಮುಖ್ಯವಾಗಿ ಎರಡು ಸಂಸ್ಥೆಗಳಿಂದ ಬಂದವರಿದ್ದರು: ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಪ್ರಥಮ ವರ್ಷದ ಹತ್ತು ವಿದ್ಯಾರ್ಥಿಗಳೂ, ಒಬ್ಬ ಶಿಪಾಯಿಯೂ, ಒಬ್ಬ

ಪ್ರಾಧ್ಯಾಪಕನೂ ಸೇರಿ ೧೨ ಜನರು; ಇವರೆಲ್ಲರ ಸರಾಸರಿ ವಯಸ್ಸು ೨೫ ವರ್ಷ; ವಿದ್ಯಾರ್ಥಿಗಳ ಸರಾಸರಿ ವಯಸ್ಸು ೨೩. ಎರಡನೆಯ ಸಂಸ್ಥೆ ಧಾರವಾಡದ ಸರಕಾರೀ ಮಾನಸಿಕ ಆರೋಗ್ಯ ಕೇಂದ್ರ. ಇಲ್ಲಿಂದ ಮನೋಚಿಕಿತ್ಸಾರ್ಥಿಗಳೂ, ಶಿಪಾಯಿಗಳೂ, ಮನೋಚಿಕಿತ್ಸಾ ವಿದ್ಯಾರ್ಥಿಯೂ ಸೇರಿ ೧೩ ಜನ ಬಂದಿದ್ದರು; ಇವರ ಸರಾಸರಿ ವಯಸ್ಸು ೩೩ ವರ್ಷ; ಚಿಕಿತ್ಸಾರ್ಥಿಗಳ ಸರಾಸರಿ ವಯಸ್ಸು ೩೩ ವರ್ಷವೇ ಆಗಿತ್ತು. ಅಡುಗೆಯವರ ಸರಾಸರಿ ವಯಸ್ಸು ೩೪. ಅಂದರೆ ಶಿಬಿರದಲ್ಲಿ ತರುಣರೂ, ನಡುಹರೆಯದವರೂ ಇದ್ದರು. ಕನಿಷ್ಟ ವಯಸ್ಸು ೧೮ ಇದ್ದರೆ, ಗರಿಷ್ಟ ವಯಸ್ಸು ೫೦. ವಯೋವೃಂದದ ದೃಷ್ಟಿಯಿಂದ ನೋಡಿದರೆ ಶಿಬಿರಾರ್ಥಿಗಳು ಉತ್ಪಾದನಾ ಶಕ್ತಿಯುಳ್ಳವರೆಂದೇ ಅರ್ಥವಾಗುತ್ತದೆ.

ಈ ಹಿಂದೆಯೇ ಹೇಳಿದಂತೆ ಶಿಬಿರದಲ್ಲಿ ಇಬ್ಬರು ಮಹಿಳೆಯರು ಮಾತ್ರವಿದ್ದರು ನಿಜ. ಆದರೆ ಶಿಬಿರಾರ್ಥಿಗಳ ಮಹಿಳಾ ಬಂಧುಗಳೂ ಧಾರವಾಡದಿಂದ ಬಂದು ಹೋಗುತ್ತಿದ್ದರು; ಹಳ್ಳಿಯಲ್ಲಿಯೇ ನೆಲೆಸಿರುವ ಡಾಕ್ಟರ್ ಗೋಪಿನಾಥರ ಪತ್ನಿ ಅಂಬುಜಮ್ಮನವರು ಹೆಚ್ಚಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು; ಶಾಲಾ ಬಾಲಕಿಯರು ಕುತೂಹಲಕ್ಕೆಂದೋ, ಆಸಕ್ತಿಯಿಂದಲೊ ಕೆಲವು ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಹೀಗಾಗಿ ಶಿಬಿರದಲ್ಲಿ ಹೆಣ್ಣಿನ ಬಣ್ಣಕ್ಕೆ ಕುಂದೇನೂ ಬಂದಿರಲಿಲ್ಲ.

ವಿದ್ಯಾರ್ಥಿಗಳೂ, ಚಿಕಿತ್ಸಾರ್ಥಿಗಳೂ

ವಿದ್ಯಾರ್ಥಿಗಳ ಮತ್ತು ಚಿಕಿತ್ಸಾರ್ಥಿಗಳ ಬಗ್ಗೆ ಒಂದಿಷ್ಟು ವಿವರಗಳನ್ನು ಕೊಡುವ ಅಗತ್ಯವಿದೆ. ವಿದ್ಯಾರ್ಥಿಗಳು ಬಿ. ಎ. ಅಥವಾ ಬಿ.ಎಸ್‌ಸಿ ತೇರ್ಗಡೆಯಾಗಿ ಬಂದವರು. ಸಮಾಜಕಾರ್ಯದಲ್ಲಿ ಎಂ.ಎ. ಓದಲೆಂದು ಅರ್ಜಿ ಹಾಕಿಕೊಂಡ ಸುಮಾರು ೭೦ ಜನ ಪದವೀಧರರಲ್ಲಿ ಸಂದರ್ಶನದ ಮೂಲಕ ಈ ಹತ್ತು ಜನ ಆಯ್ಕೆಯಾಗಿದ್ದರು. ಇವರಲ್ಲಿ ಕೆಲವರು ಅರ್ಥಶಾಸ್ತ್ರ ಓದಿದ್ದರೆ, ಕೆಲವರು ಸಮಾಜಶಾಸ್ತ್ರವನ್ನೂ, ಕೆಲವರು ಅಪರಾಧ ಶಾಸ್ತ್ರವನ್ನೂ ಓದಿದ್ದವರು, ಒಬ್ಬಾತ ಇಂಗ್ಲಿಷ್ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದಾತ.

ವಿದ್ಯಾರ್ಥಿಗಳಲ್ಲಿ ಬಹಳ ಜನ ನಗರದಿಂದ ಬಂದವರೇ ಆಗಿದ್ದರು. ಅವರಿಗೆ ಗ್ರಾಮೀಣ ಸಮುದಾಯದ ಅಲ್ಪಸ್ವಲ್ಪ ಪರಿಚಯವಿದ್ದಿತು. ಒಂದಿಬ್ಬರು ಎನ್.ಸಿ.ಸಿ. ಶಿಬಿರದಲ್ಲಿ ಭಾಗವಹಿಸಿದ್ದಿರಬಹುದು. ಮೂವರನ್ನು ಹೊರತು ಮನೋಚಿಕಿತ್ಸಾರ್ಥಿಗಳ ಪರಿಸ್ಥಿತಿಯು ಇವರಿಗೆ ತಿಳಿಯದು. ಒಬ್ಬಾತ ಮಾತ್ರ ಮಾನಸಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ವೃತ್ತಿಯಲ್ಲಿರುವಾತ. ವಿದ್ಯಾರ್ಥಿಗಳಲ್ಲಿ ಬಹುಜನ ಅವಿವಾಹಿತರು. ಈ ಹಿನ್ನೆಲೆಯಲ್ಲಿ ನೋಡಿದರೆ ಗ್ರಾಮದಲ್ಲಿ ನಡೆಸುವ ಶಿಬಿರಕ್ಕೆ ಅವರು ಹೊಂದಿಕೊಳ್ಳುವಲ್ಲಿ ಪಡುವ ಕಷ್ಟಗಳ ಕಲ್ಪನೆ ಬರಬಹುದಲ್ಲವೆ? ಅವರಲ್ಲೂ ಹೊಣೆಗಾರಿಕೆಯನ್ನು ತಾವೇ ಹೊತ್ತುಕೊಳ್ಳುವುದಲ್ಲದೆ ಮನೋಚಿಕಿತ್ಸಾರ್ಥಿಗಳೊಡನೆ

ಹತ್ತು ದಿನ ಹೊತ್ತು ಕಳೆಯುವುದೆಂತು, ಎಂಬ ಚಿಂತೆ ಅವರಿಗೆ ಹಾಸಲುಂಟು. ಹೊದೆಯಲುಂಟು, ಎನ್ನಿಸಿದರೆ ತಪ್ಪೇನು! ಶಿಬಿರದಲ್ಲಿ ಭಾಗವಹಿಸಬೇಕಾದುದು ಕಡ್ಡಾಯವಾದುದಾದ್ದರಿಂದ ಅವರು ಬರಲೇಬೇಕಾಗಿತ್ತು, ಬಂದಿದ್ದರು. ಅದೂ ಅಲ್ಲದೆ ಈ ಹತ್ತು ಜನರಲ್ಲಿ ಆರು ಜನ ಮನೆಗಳಲ್ಲಿದ್ದು ಬಂದವರು; ಇಬ್ಬರು ಪ್ರತ್ಯೇಕವಾದ ಕೋಣೆಗಳಲ್ಲಿದ್ದು ಬಂದವರು; ಉಳಿದಿಬ್ಬರು ಮಾತ್ರ ಹಾಸ್ಟೆಲಿನಲ್ಲಿದ್ದವರು. ಅಂದರೆ ವೃಂದ ಜೀವನದ ಅನುಭವದಲ್ಲಿ, ಊಟೋಪಚಾರದಲ್ಲಿ, ಕೊಡುಕೊಳ್ಳುವ ಹೊಣೆಗಾರಿಕೆಯಲ್ಲಿ ಅವರೆಲ್ಲರ ಸ್ಥಿತಿ ಭಿನ್ನ ಭಿನ್ನವಾದದ್ದು. ಇಂಥ ಹಿನ್ನೆಲೆಯಿಂದ ಬಂದವರು ಹೇಗೆ ವರ್ತಿಸುತ್ತಾರೆ ಎಂಬುದನ್ನು ವೀಕ್ಷಿಸಿ, ಅಭ್ಯಸಿಸುವುದೇ ಒಂದು ಅನುಭವ.

ಇನ್ನು ಮನೋಚಿಕಿತ್ಸಾರ್ಥಿಗಳು. ಇವರೆಲ್ಲರೂ ವೃಂದಜೀವನಕ್ಕೆ ಒಳಗಾಗಿ ಬಂದವರೇನೋ ನಿಜವೇ. ಆಸ್ಪತ್ರೆಯ ವಾತಾವರಣದಲ್ಲಿ ಇದ್ದು ಬಂದವರು. ಅವರಲ್ಲಿ ಐದು ವರ್ಷದಿಂದಲೂ ಒಬ್ಬಾತ, ಮೂರು ವರ್ಷದಿಂದಲೂ ಇನ್ನೊಬ್ಬಾತ ಇದ್ದುದು ತಿಳಿಯಿತು. ಉಳಿದವರೆಲ್ಲಾ ಇತ್ತೀಚೆಗೆ ಆಸ್ಪತ್ರೆಗೆ ಸೇರಿದವರು. ಅವರು ಆಸ್ಪತ್ರೆಯಲ್ಲಿದ್ದ ಸರಾಸರಿ ಕಾಲವೆಂದರೆ ೪ ತಿಂಗಳು ಮಾತ್ರ. ಅವರ ಮನೋವಿಕಲ ಸ್ಥಿತಿಯ ಮೇಲೆ ವೃಂದಜೀವನವು ಎಂಥ ಪರಿಣಾಮ ಮಾಡಿರಬೇಕು ಎಂದು ಊಹಿಸಬೇಕು.

ಚಿಕಿತ್ಸಾರ್ಥಿಗಳಲ್ಲಿ ಮೂವರು ಮಾತ್ರ ಖಾಸಗಿಯಾಗಿ ಸೇರಿಸಲ್ಪಟ್ಟಿದ್ದರು. ಉಳಿದವರೆಲ್ಲಾ ಜನರಿಗೆ ಅಪಾಯಕಾರಿಯಾಗಿ ವರ್ತಿಸುವವರೆಂದು ನ್ಯಾಯಾಲಯದ ಮೂಲಕ ಸೇರಿಸಲ್ಪಟ್ಟವರು.

ಅವರೆಲ್ಲರೂ ಒಂದೇ ಗುಂಪಿಗೆ ಸೇರಿದವರಲ್ಲ. ಎಲ್ಲರೂ ಹಿಂದೂ ಧರ್ಮೀಯರಾಗಿದ್ದರೂ ಬೇರೆಬೇರೆ ಜಾತಿಗೆ ಸೇರಿದ್ದರು. ಅವರ ರೋಗದ ಪರಿ ಮತ್ತು ಚಿಕಿತ್ಸೆ ಪಡೆದ ರೀತಿ ಇವೂ ಭಿನ್ನವಾಗಿದ್ದವು. ಮೂವರನ್ನು ಹೊರತು ಎಲ್ಲರೂ ಒಂದಕ್ಕಿಂತ ಹೆಚ್ಚು ಸಲ ಮನೋಚಿಕಿತ್ಸೆಗೆ ಈ ಹಿಂದೆಯೇ ಒಳಗಾಗಿದ್ದವರು. ಸಮಾಜದಲ್ಲಿ ಸರಿಯಾಗಿ ಹೊಂದಿಕೊಂಡು ಜೀವಿಸಲು ಅವರಿಗೆ ಸಾಧ್ಯವಾಗಲಿಲ್ಲವೋ. ಅವಕಾಶ ಸಿಗಲಿಲ್ಲವೋ ಅಥವಾ ರೋಗವು ಉಲ್ಬಣವಾಯಿತೋ ಮತ್ತೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹಿಂದಿರುಗಿದರು. ಅವರಲ್ಲಿ ಆರನೆಯ ಸಲ ಬಂದಾತನೊಬ್ಬನಿದ್ದರೆ, ಇನ್ನೊಬ್ಬಾತ ಐದನೆಯ ಸಲ ಬಂದಿದ್ದ.

ಚಿಕಿತ್ಸಾರ್ಥಿಗಳಲ್ಲಿ ಹೆಚ್ಚಾಗಿ ನಗರ ಸಮುದಾಯದಿಂದಲೇ ಬಂದವರಾಗಿದ್ದರು(೬). ನಾಲ್ವರು ಮಾತ್ರ ಹಳ್ಳಿಗಳಿಂದ ಬಂದವರು. ಆದರೂ ಇವರಿಗೂ ನಗರವು ಹೊಸದೇನೂ ಅಲ್ಲ.

ರೋಗಿಷ್ಟರಾಗದ ಮುನ್ನ ಯಾವ್ಯಾವ ಉದ್ಯೋಗಗಳಲ್ಲಿದ್ದರೆಂಬುದನ್ನು ತಿಳಿಯಬೇಕಾಗುತ್ತದೆ. ಇಬ್ಬರು ವಿದ್ಯಾರ್ಥಿಗಳಾಗಿದ್ದರು. ಇಬ್ಬರು ಸರಕಾರಿ ಕಚೇರಿಗಳಲ್ಲಿ ಶಿಪಾಯಿಗಳಾದ್ದರು. ಒಬ್ಬಾತ ಮಿಲಿಟರಿಯಲ್ಲಿದ್ದು ನಿವೃತ್ತಿಯನಂತರ ಹಳ್ಳಿಗೆ

ಬಂದು ಒಕ್ಕಲುತನದಲ್ಲಿ ನಿರತನಾಗಿದ್ದ. ಒಬ್ಬಾತ ಹೈಸ್ಕೂಲೊಂದರ ಮುಖ್ಯೋಪಾಧ್ಯಾಯನಾಗಿದ್ದ. ಒಬ್ಬಾತ ಪೋಲೀಸ್ ಕಾನ್‌ಸ್ಟೇಬಲ್ ಆಗಿದ್ದ. ಮತ್ತೊಬ್ಬ ಅಂಗಡಿಯೊಂದರಲ್ಲಿ ಕೂಲಿಯಾಗಿದ್ದ. ಒಬ್ಬಾತ ಶ್ರೀಮಂತ ರೈತನ ಏಕೈಕ ಪುತ್ರನಾಗಿದ್ದುದರಿಂದ ಏನೂ ಕೆಲಸದಲ್ಲಿದ್ದಂತೆ ಕಾಣುತ್ತಿಲ್ಲ. ಕೊನೆಯಾತ ಒಂದನೇ ದರ್ಜೆಯ ಭಾರತ ಸರಕಾರದ ಸುಂಕದ ಅಧಿಕಾರಿಯಾಗಿದ್ದ.

ಇವರ ವಿದ್ಯಾಭ್ಯಾಸದ ಮಟ್ಟವೇನೂ ಕಡಮೆಯಾಗಿರಲಿಲ್ಲ. ಅಂದರೆ ಇಬ್ಬರನ್ನು ಹೊರತು ಎಲ್ಲರೂ ವಿದ್ಯಾವಂತರೇ. ಕನಿಷ್ಠ ಓದಿನ ಮಟ್ಟವೆಂದರೆ ಆರನೆಯ ತರಗತಿ. ಅತೀ ಹೆಚ್ಚಿನ ಮಟ್ಟವೆಂದರೆ ಪದವಿಯನ್ನು ಪಡೆದಿದ್ದುದು.

ಚಿಕಿತ್ಸಾರ್ಥಿಗಳು ಒಂದಕ್ಕಿಂತ ಹೆಚ್ಚು ಭಾಷೆಯನ್ನು ಬಲ್ಲವರಾಗಿದ್ದರು. ಎಂಟು ಜನರದು ಕನ್ನಡ ಮಾತೃಭಾಷೆಯಾಗಿತ್ತು; ಒಬ್ಬಾತನದು ಕೊಂಕಣಿ, ಇನ್ನೊಬ್ಬಾತನದು ಗುಜರಾತಿ. ಆದರೆ ಎಲ್ಲರಿಗೂ ಕನ್ನಡ ಬರುತ್ತಿತ್ತು. ನಾಲ್ವರಿಗೆ ಇಂಗ್ಲೀಷೂ, ಏಳು ಜನರಿಗೆ ಹಿಂದಿಯೂ, ಇಬ್ಬರಿಗೆ ಮರಾಠಿಯೂ ಬರುತ್ತಿತ್ತು. ವಿದ್ಯಾರ್ಥಿಗಳು ಚಿಕಿತ್ಸಾರ್ಥಿಗಳೊಡನೆ ಆಗಾಗ ಇಂಗ್ಲೀಷ್, ಹಿಂದಿ ಹಾಗೂ ಮರಾಠಿಯಲ್ಲಿಯೂ ಸಂಭಾಷಿಸುತ್ತಿದ್ದುದು ಕಂಡುಬರುತ್ತಿತ್ತು.

ಅವರ ವೈವಾಹಿಕ ಸ್ಥಿತಿಯ ಬಗ್ಗೆ ಒಂದು ಮಾತು. ಹತ್ತರಲ್ಲಿ ನಾಲ್ವರಿಗೆ ಮದುವೆಯಾಗಿ ಮಕ್ಕಳಾಗಿದ್ದುವು. ಉಳಿದ ಆರು ಜನರಿಗೆ ಮದುವೆಯಾಗಿರಲಿಲ್ಲ. ಆದರೆ ಒಂದಿಬ್ಬರಿಗಂತೂ ಲೈಂಗಿಕ ಸಂಪರ್ಕದ ಅನುಭವವಿತ್ತೆಂದು ತಿಳಿದುಬರುತ್ತದೆ.

ಚಿಕಿತ್ಸಾರ್ಥಿಗಳನ್ನು ಆಸ್ಪತ್ರೆಗೆ ಏಕೆ ಸೇರಿಸಲಾಯಿತು ? ಎಂಬ ಪ್ರಶ್ನೆ ಏಳುತ್ತದೆ. ಎಲ್ಲರನ್ನೂ ಒಂದೇ ಕಂಸಿನಲ್ಲಿ ಗಣಿಸಲಾಗದು. ಒಬ್ಬೊಬ್ಬರದೂ ಒಂದೊಂದು ರೋಗ, ಒಂದೊಂದು ಕಾರಣಕ್ಕಾಗಿ ಆ ಅಂಥ ರೋಗ. ಪ್ರತಿಯೊಬ್ಬರ ರೋಗ ಮತ್ತದರ ಕಾರಣವನ್ನು ಇಲ್ಲಿ ಪ್ರಸ್ತಾಪಿಸಲು ಸಾಧ್ಯವಲ್ಲವಾದುದರಿಂದ ಅವರೆಲ್ಲರ ವರ್ತನೆಗಳ ಸ್ಥೂಲ ವಿವರಣೆಯನ್ನು ಕೊಡಲಾಗುವುದು.

ಅಶ್ಲೀಲವಾಗಿ ಕಂಡಕಂಡವರನ್ನೆಲ್ಲಾ ಬೈಯುವುದು, ಹೊಡೆಯುವುದು. ಕಲ್ಲು ತೂರುವುದು, ಹೇಳದೇ ಕೇಳದೇ ಅದೆಲ್ಲಿಗೋ ಓಡಿಹೋಗುವುದು. ನಿದ್ರೆಮಾಡದಿರುವುದು, ಜ್ಞಾಪಕಶಕ್ತಿಯಿಲ್ಲದಿರುವುದು, ಕಾರ್ಯಕಾರಣ ಸಂಬಂಧವನ್ನು ಕಾಣಲಾರದ ಸ್ಥಿತಿ, ತನ್ನ ವರ್ತನೆಯನ್ನು ವಿವರಿಸಲಾರದ ಅಸಮರ್ಥತೆ. ಏನೋ ಮನೋಗೊಂದಲ, ಜನರಿಗೆ ಅಪಾಯವಾಗುವಂತೆ ವರ್ತಿಸುವುದು, ಕೊಳಕು ಕೊಳಕಾಗಿರುವುದು, ಅರಿವೆಗಳನ್ನು ಹರಿದುಹಾಕುವುದು, ಉಗ್ರ ವರ್ತನೆ, ಶಂಕೆ ಅನುಮಾನ ಪಡುವುದು, ಕಿರಿಕಿರಿ ಮಾಡುವುದು, ಉಪಟಳ ಕೊಡುವುದು. ಏಕಾಗ್ರ ಚಿತ್ತವಿಲ್ಲದಿರುವುದು, ಉನ್ಮಾದ ರೀತಿಯಲ್ಲಿ ಕುಣಿದಾಡುವುದು, ಚೀರಾಡುವುದು, ಗಾಳಿ ಹಗುರಾದ ಭಾವನೆಗಳಿಗೆ ಈಡಾಗಿ ವರ್ತಿಸುವುದು. ವಿಪರೀತ ಚಟುವಟಿಕೆ, ಉದಾಸೀನತೆ, ಧ್ಯಾನಮಗ್ನತೆ, ವಟಗುಟ್ಟುವುದು ಅಥವಾ ತನ್ನೊಳಗೆ ತಾನು ಮಾತನಾಡಿಕೊಳ್ಳುವುದು.

ಏಕಾಕಿತನ. ಆತ್ಮಹತ್ಯೆಗೆ ಎಳಸುವುದು, ಊಟವನ್ನು ತಿರಸ್ಕರಿಸುವುದು ಇತ್ಯಾದಿ.

ಇಂಥ ವರ್ತನೆಯು ಜನರಿಗೆ ಅಪಾಯಕಾರಿ ಎಂದು ಕಂಡುದುದರಿಂದ ಮಾನಸಿಕ ಆರೋಗ್ಯ ಕೇಂದ್ರಕ್ಕೆ ತಂದು ಸೇರಿಸಲಾಗಿತ್ತು ಎಂಬುದು ನಿಜವೇ. ಕೇಂದ್ರದಲ್ಲಿ ಔಷದೋಪಚಾರದಿಂದ ಚಿಕಿತ್ಸೆ ನಡೆಯುತ್ತಿದ್ದುದೂ ನಿಜವೇ. ಇವರೆಲ್ಲರೂ ಬಹು ಮಟ್ಟಿಗೆ ಗುಣಮುಖರಾಗಿದ್ದುದೂ ನಿಜವೇ. ಆದರೂ ಆಸ್ಪತ್ರೆಯ ಬಂಧನ-ರಕ್ಷಣೆಯ ಕಾವಲಿನಿಂದ ಪೂರ್ಣ ತೆರೆದ ಶಿಬಿರದ ವಾತಾವರಣಕ್ಕೆ ಇವರೆಲ್ಲಾ ಬಂದಿದ್ದರು. ಸಮಾಜಕಾರ್ಯದ ವಿದ್ಯಾರ್ಥಿಯೂ, ಮಾನಸಿಕ ಆರೋಗ್ಯ ಕೇಂದ್ರದಲ್ಲಿ ನರ್ಸೂ, ಶಿಬಿರದ ಕಾರ್ಯದರ್ಶಿಯೂ ಆಗಿದ್ದಾತನ ನೆರವಿನಿಂದ ಇವರನ್ನು ಆರಿಸಲಾಗಿತ್ತು ಶಿಬಿರಕ್ಕೆ ಕರೆದು ತರಲು. ಆದರೂ ಮುನ್ನೆಚ್ಚರಿಕೆಯ ದೃಷ್ಟಿಯಿಂದ ಇವರ ಸಮವಸ್ತ್ರವನ್ನು (uniform) ಇರಿಸಿಕೊಂಡುದಲ್ಲದೆ ಇಬ್ಬರು ಶಿಪಾಯಿಯರನ್ನೂ. ಒಬ್ಬ ಮನೋ ಚಿಕಿತ್ಸಾ ವಿದ್ಯಾರ್ಥಿಯನ್ನೂ ಜೊತೆಗೆ ಕರೆದು ತರಲಾಗಿತ್ತು.

ಯೋಜಿತ ಮತ್ತು ವ್ಯವಸ್ಥಿತ ಕಾರ್ಯ

ಸಮಾಜ ಸೇವಾ ಶಿಬಿರವನ್ನು ನಡೆಸಬೇಕಾದರೆ ಯೋಜಿತ ಮತ್ತು ವ್ಯವಸ್ಥಿತ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಶಿಬಿರವನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿತುಕೊಳ್ಳುವಂಥ ಅವಕಾಶವನ್ನೂ ವಿದ್ಯಾರ್ಥಿಗಳಿಗೆ ಒದಗಿಸಬೇಕಾಗಿರುವುದರಿಂದ ಹೆಚ್ಚಿನ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕನೊಬ್ಬ ಶಿಬಿರದ ನಿರ್ದೇಶಕನೆಂದು ನಿಯಮಿತನಾಗಿದ್ದರೂ ಶಿಬಿರವು ಯಶಸ್ವಿಯಾಗಲು ಇಡಿಯ ವಿಭಾಗವೇ ಆಸಕ್ತಿಯಿಂದ ಕಾರ್ಯಮಗ್ನವಾಗಬೇಕಾಗುತ್ತದೆ. ಪ್ರಥಮ ವರ್ಷದ ವಿದ್ಯಾರ್ಥಿಗಳು ಶಿಬಿರಕ್ಕೆ ಹೋಗುತ್ತಿರುವುದರಿಂದ ಅವರಿಗೆ ಎರಡನೆಯ ವರ್ಷದ ವಿದ್ಯಾರ್ಥಿಗಳ ಅನುಭವ-ಮಾರ್ಗದರ್ಶನ ಬೇಕಾಗುತ್ತದೆ: ನಿರ್ದೇಶಕನಿಗೆ ಇತರ ಸಹೋದ್ಯೋಗಿಗಳ ನೆರವು. ಸಹಕಾರ ಬೇಕಾಗುತ್ತದೆ. ಶಿಬಿರ ನಡೆಯುವುದು ಇನ್ನೂ ಒಂದೆರಡು ತಿಂಗಳುಗಳಿವೆ ಎನ್ನುವಾಗಲೇ ಶಿಬಿರದ ವ್ಯವಸ್ಥೆಯ ಕಾರ್ಯ ಆರಂಭವಾಗಬೇಕಾಗುತ್ತದೆ. ಅದರಲ್ಲೂ ಸಮಾಜ ಕಲ್ಯಾಣ ಕೇಂದ್ರದ ಅರ್ಥಿಗಳನ್ನೂ ಶಿಬಿರಕ್ಕೆ ಕರೆದೊಯ್ಯುವ ಕಾರ್ಯಕ್ರಮವನ್ನಿರಿಸಿಕೊಂಡರಂತೂ ಮೈತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದಲ್ಲದೆ ಸಮಗ್ರ ಯೋಜನೆಯನ್ನು ಬಹು ಮೊದಲೇ ಸಿದ್ಧಗೊಳಿಸಿ, ಅದರ ಅನುಷ್ಠಾನದಲ್ಲಿ ಒದಗಬಹುದಾದ ಎಡರು ತೊಡರುಗಳನ್ನು ಮುಂದಾಲೋಚನೆಯಿಂದ ಊಹಿಸಿ, ಅವುಗಳ ಪರಿಹಾರಕ್ಕೆ ಸೂಕ್ತವಾದ ಉಪಾಯಗಳನ್ನು ನಿಯೋಜಿಸಿಕೊಳ್ಳಬೇಕಾಗುತ್ತದೆ.

ಈ ವರ್ಷದ ಶಿಬಿರವನ್ನು ಎಲ್ಲಿ ನಡೆಸಬೇಕು. ಎಂದು ಆಲೋಚಿಸಿದಾಗ ಸಲಕಿನ ಕೊಪ್ಪ ಮನದ ಇದಿರು ನಿಂತಿತು. ಸಾರ್ಥಕ ಕೆಲಸ ಮಾಡಬೇಕಾದರೆ ಒಂದು ಹಳ್ಳಿಯಲ್ಲಿ 'ಧ್ವಜ ಊರಿದರೇ' ಒಳ್ಳೆಯದೆನ್ನಿಸಿತು. ಒಂದೊಂದು ಹಳ್ಳಿಯಲ್ಲಿ ಒಂದೊಂದು ಕೆಲಸ

ತೆಗೆದುಕೊಂಡು ಅರೆಕೊರೆಯಾಗಿ ಕಾರ್ಯ ಮಾಡುವುದಕ್ಕಿಂತ ಇದು ಒಳ್ಳೆತು, ಎನ್ನಿಸಿತು. ಯಾಕೆಂದರೆ, ಒಂದಾದ ನಂತರ ಒಂದು ಕೆಲಸ ಹಮ್ಮಿಕೊಂಡು, ಸಂತತವಾದ ಸಂಪರ್ಕ ವನ್ನಿರಿಸಿಕೊಂಡರೆ ಹಳ್ಳಿಗರಲ್ಲಿ ತಮ್ಮ ಬಗ್ಗೆ ವಿಶ್ವಾಸ ಮೂಡಿ, ಅಭಿವೃದ್ಧಿಯ ಹಾದಿ ಯತ್ತ ನಡೆಯುತ್ತಾರೆ, ಎನ್ನುವ ವಿಶ್ವಾಸ. ಈ ಕಾರಣದಿಂದಲೇ ಈಗಾಗಲೇ ಅನುನಯ ಸಂಬಂಧವನ್ನು (Rapport) ಬೆಳೆಸಿ, ಕೆಲವು ಕೆಲಸಗಳನ್ನು ಮಾಡಿದ್ದುದರಿಂದ ಸಾಂಗ್ರಾ ಹಿಕ ಪರಿಣಾಮವನ್ನು (Cumulative effect) ಅಲ್ಲಿ ಕಾಣಬಹುದೆಂದು ಸಲಕಿನ ಕೊಪ್ಪವನ್ನು ಆರಿಸಿಕೊಳ್ಳಲಾಯಿತು.

ಸಮಾಜ ಸೇವಾ ಶಿಬಿರವನ್ನು ನಡೆಸಬೇಕಾದರೆ ಆ ಮೊದಲೇ ಹಳ್ಳಿಯ ಪರಿಚಯ, ಸಾಧ್ಯವಾದರೆ ಹೆಚ್ಚಿನ ಸಂಬಂಧ, ಇರಬೇಕಾಗುತ್ತದೆ. ಸಮಾಜಕಾರ್ಯ ವಿಭಾ ಗದ ಪ್ರಾಧ್ಯಾಪಕ ವರ್ಗದವರಿಗೇನೊ ಸಲಕಿನಕೊಪ್ಪದೊಡನೆ ಸಂಬಂಧವಿತ್ತು ನಿಜ, ಆದರೆ ಶಿಬಿರಾರ್ಥಿಗಳಾಗಲಿರುವ ವಿದ್ಯಾರ್ಥಿಗಳಾರಿಗೂ ಆ ಊರಿನ ಪರಿಚಯವಿರಲಿಲ್ಲ. ಆದುವರಿಂದ ಆ ಊರನ್ನು ಕ್ಷೇತ್ರ ಕಾರ್ಯಕ್ಕೆ ಮೊದಲು ಆರಿಸಿಕೊಂಡಿರದಿದ್ದರೂ ಆನಂತರ ಆರಿಸಿಕೊಳ್ಳಲಾಯಿತು.

ಕ್ಷೇತ್ರ ಕಾರ್ಯಕ್ಕಾಗಿ ಮುಂದಾಗುವ ಯಶಸ್ವೀ ಶಿಬಿರದ ಸೂಚನೆಯೊ ಎಂಬಂತೆ ಮಾನಸಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ಆಗಿದ್ದುಕೊಂಡು ಸಮಾಜ ಕಾರ್ಯದ ಸ್ನಾತ ಕೋತ್ತರ ಪದವಿಯನ್ನು ಪಡೆಯಲು ಬಂದಾತನನ್ನು ಸಲಕಿನಕೊಪ್ಪಕ್ಕೆ ಕಳಿಸಲಾಯಿತು. ಶಿಬಿರವನ್ನು ನಡೆಸುವ ಯೋಜನೆ ಇದ್ದಿತಾದರೂ, ಮನೋಚಿಕಿತ್ಸಾರ್ಥಿಗಳನ್ನು ಕರೆದು ಕೊಂಡು ಬರುವ ಆಲೋಚನೆಯೇನೂ ಇರಲಿಲ್ಲ. ಮನೋಚಿಕಿತ್ಸಾರ್ಥಿಗಳನ್ನು ಬೇರೆ ಯವರ ಬದಲು ಕರೆದುಕೊಂಡು ಹೋಗಬೇಕಾಯಿತು.

ಸಮಾಜ ಸೇವಾ ಶಿಬಿರವು ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೇ ಸೀಮಿತವಾದದ್ದು. ಆದರೆ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹುಬ್ಬಳ್ಳಿ–ಧಾರವಾಡದ ನಗರ ದಲ್ಲಿನ ಯಾವುದಾದರೂ ಕಲ್ಯಾಣ ಕೇಂದ್ರದ ಅರ್ಥಿಗಳನ್ನು ಶಿಬಿರಕ್ಕೆ ಯಾಕೆ ಕರೆಯೊ ಯ್ಯಬಾರದು ? ಎಂಬ ಆಲೋಚನೆ ಒಂದು ವರ್ಷದಿಂದಲೂ 'ಕಾಡುತ್ತಿತ್ತು.' ಹುಬ್ಬಳ್ಳಿಯಲ್ಲಿರುವ ಸರಕಾರೀ ಪಶ್ಚಾದ್ಯೋಗ ಕ್ಷೇಮ ಕೇಂದ್ರ (ಸ್ಟೇಟ್ ಹೋಂ ಫಾರ್ ಮೆನ್) ಮನದೆದುರು ಸುಳಿಯಿತು. ಆ ಕೇಂದ್ರಕ್ಕೆ ಒಂದು ಸ್ಥಳೀಯ ವ್ಯವ ಸ್ಥಾಪಕ ಮಂಡಲಿಯಿದೆ. ಅದರ ಸದಸ್ಯನಾಗಿರುವ ಅವಕಾಶ ನನಗೆ ಇದೆ. ಹಿಂದಿನ ವರ್ಷ ವ್ಯವಸ್ಥಾಪಕ ಮಂಡಲಿಯ ಸಭೆ ಸೇರಿದಾಗ ಅರ್ಥಿಗಳು ಯಾವುದಾದರೂ ದೈಹಿಕ ಶ್ರಮ ಕಾರ್ಯದ ಉದ್ಯೋಗವನ್ನು ದೊರಕಿಸಿಕೊಟ್ಟರೆ ಸ್ವೀಕರಿಸುವುದಿಲ್ಲ. ರೈಲ್ವೆಯ ವರು ಹಲವರನ್ನು ತೆಗೆದುಕೊಳ್ಳಲು ಸಾಧ್ಯವಿದೆ, ಏನು ಮಾಡುವುದು ಎಂಬ ಸಮಸ್ಯೆ ಸಭೆಯ ಮುಂದೆ ಬಂದಿತು. ಅರ್ಥಿಗಳು ಸಮುದಾಯದಲ್ಲಿ ಇನ್ನೂ ಒಂದಾಗಿಲ್ಲ, ಹೊಂದಿಕೊಂಡು ಜೀವಿಸುವುದು ಕಷ್ಟ, ಶ್ರಮ ಜೀವನದ ಪರಿಚಯ ಅವರಿಗೆ ಸಾಕಷ್ಟಿ ರುವುದಿಲ್ಲ. ಆದುದರಿಂದ ಅವರನ್ನು ಹಳ್ಳಿಯೊಂದರಲ್ಲಿ ಶಿಬಿರಾರ್ಥಿಗಳನ್ನಾಗಿ ಮಾಡಿ

ದೈಹಿಕ ಶ್ರಮ, ಮನೋರಂಜನೆ, ಬುದ್ಧಿ ವಿಕಾಸ ಕಾರ್ಯಕ್ರಮಗಳ ಮೂಲಕ ಜೀವನದ ನೈಜಸ್ಥಿತಿಯನ್ನೂ, ಕೆಲಸ ಮಾಡುವುದರಿಂದ ದೊರೆಯುವ ತೃಪ್ತಿಯ ಪರಿಚಯವನ್ನೂ ಅವರಿಗೆ ಮಾಡಿಕೊಡಬಹುದೆಂಬ ಸಲಹೆಯನ್ನು ನಾನು ಮುಂದಿಸಿದೆ. ಈ ಸಲಹೆಯನ್ನು ಮಂಡಲಿಯು ತಾತ್ತ್ವಿಕವಾಗಿ ಒಪ್ಪಿಕೊಂಡರೂ, ಇಂತಹ ಶಿಬಿರವನ್ನು ನಡೆಸುವವರಾರು, ಎಂಬ ಪ್ರಶ್ನೆ ಎದ್ದಿತು. ಆಗ ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದವರು ಈ ಕಾರ್ಯ ಕೈಕೊಳ್ಳಬಹುದು ಎಂದು ನಾನು ಪರಿಹಾರ-ಸಲಹೆಯನ್ನು ಸೂಚಿಸಿದೆ. ಇದು ಮಂಡಲಿಗೆ ಒಪ್ಪಿಗೆಯಾಯಿತು. ಕೇಂದ್ರದಲ್ಲಿ ಹುಡುಗರಿಗೆ ಖರ್ಚು ಮಾಡುವ ಆಹಾರ ಪದಾರ್ಥಗಳನ್ನು ಶಿಬಿರಕ್ಕೆ ತೆಗೆದುಕೊಂಡು ಹೋಗಬಹುದು ಎಂಬ ನಿರ್ಣಯವನ್ನೂ ಸ್ವೀಕರಿಸಲಾಯಿತು. ಆದರೆ ಹುಬ್ಬಳ್ಳಿಯಿಂದ ಶಿಬಿರ ನಡೆಯುವ ಸ್ಥಳಕ್ಕೆ ಅವರನ್ನು ಸಾಗಿಸುವ ಖರ್ಚನ್ನು ಭರಿಸುವುದು ಹೇಗೆ ಎಂಬ ಪ್ರಶ್ನೆ ಹಾಗೆಯೇ ಉಳಿಯಿತು. ಏನಾದರೂ ಮಾಡಿದರಾಯಿತು. ಎಂದುಕೊಳ್ಳಲಾಯಿತು.

ಈ ವರ್ಷದ ವಿದ್ಯಾರ್ಥಿ ಶಿಬಿರದ ಜೊತೆಗೆ ಆ ಕ್ಷೇಮ ಕೇಂದ್ರದ ಹುಡುಗರನ್ನು ಕರೆದೊಯ್ಯುವ ನಿರ್ಣಯವನ್ನು ಕೈಕೊಳ್ಳಲಾಯಿತು. ವ್ಯವಸ್ಥಾಪಕ ಮಂಡಳಿಯ ಅಧಿಕಾರ ವ್ಯಾಪ್ತಿಗೆ ಬರುತ್ತದೆಂಬ ನಿಯಮವಿದ್ದುದರಿಂದ ಇಪ್ಪತ್ತೈದು ರೂಪಾಯಿಗಳನ್ನು ಹುಡುಗರನ್ನು ಕರೆದುಕೊಂಡು ಹೋಗಿ ಹಿಂದಿರುಗಿಸಲು ಉಪಯೋಗಿಸಬಹುದೆಂದು ನಿರ್ಣಯವನ್ನೂ ತೆಗೆದುಕೊಳ್ಳಲಾಯಿತು. ಶಿಬಿರ ನಡೆಯಲು ಇನ್ನೊಂದು ತಿಂಗಳಿರಲಿಲ್ಲ, ಆಗ ಹುಡುಗರ ಆಯ್ಕೆಯನ್ನು ಮಾಡಬೇಕೆಂದು ಕೇಂದ್ರದ ಮುಖ್ಯಾಧಿಕಾರಿಯನ್ನು ವಿನಂತಿಸಿಕೊಳ್ಳಲಾಯಿತು. ಆ ಅಧಿಕಾರಿಗೂ ಇಂಥದೊಂದು ಶಿಬಿರ ನಡೆಯುವುದು ಒಳ್ಳೆಯದೆಂಬ ಉತ್ಸಾಹ.

ಆ ಕ್ಷೇಮ ಕೇಂದ್ರವೂ ಸಮಾಜಕಾರ್ಯ ವಿದ್ಯಾರ್ಥಿಗಳು ಕ್ಷೇತ್ರ ಕಾರ್ಯ ಮಾಡುವ ಕೇಂದ್ರವಾಗಿದೆ. ಕ್ಷೇತ್ರಕಾರ್ಯಕ್ಕೆ ಹೋಗುವಾತ ಪ್ರಥಮ ವರ್ಷದ ವಿದ್ಯಾರ್ಥಿಯಾದುದರಿಂದ ಪ್ರಾಧ್ಯಾಪಕ-ತನಿಕೆಯಧಿಕಾರಿಯ ಮತ್ತು ಕೇಂದ್ರದ ಮುಖ್ಯಾಧಿಕಾರಿಯ ನೆರವಿನಿಂದ ಆತನು ಹತ್ತು ಹುಡುಗರನ್ನು ಆಯ್ದುಕೊಳ್ಳುವ ಅಗತ್ಯವನ್ನು ಸೂಚಿಸಲಾಯಿತು. ಆ ಮೂವರೂ ಸೇರಿ ಶಿಬಿರಕ್ಕೆ ಸೂಕ್ತರಾದವರನ್ನು ಆಯ್ದುಕೊಂಡರೂ ಕೂಡ. ಶಿಬಿರಕ್ಕಾಗಿ ಹೊರಡುವ ದಿನ ಹತ್ತಿರ ಬಂದಿತು. ಆದರೆ ಸಿಡಿಲೆರಗಿದಂಥ, ಸುದ್ದಿ ಬಂದಿತು: ಹತ್ತು ದಿನಕ್ಕಾಗುವ ಜೋಳವನ್ನು ಮಾತ್ರವೇ ಕೊಡಲು ಸಾಧ್ಯವೆಂದೂ, ಅಕ್ಕಿ ಬೇಳೆ ಇಲ್ಲವೆಂದೂ, ಕಾಯಿಪಲ್ಲೆ ಹಾಗೂ ಹಾಲಿಗೆ ಬೇಕಾದ ಹಣವನ್ನು ಕೊಡಲು ಸಾಧ್ಯವಿಲ್ಲವೆಂದೂ ಮುಖ್ಯಾಧಿಕಾರಿಯಿಂದ ತಿಳಿದು ಬಂದಿತು. ಹತ್ತು ಹುಡುಗರ ಊಟಕ್ಕೆಬೇಕಾಗುವ ಆಹಾರ ಸಾಮುಗ್ರಿಗಳನ್ನು ಕೊಡಲು ಸರಕಾರೀ ನಿಯಮವಿಲ್ಲ, ಹೊರಗೆ ಹೋದವರಿಗೊಂದು, ಕೇಂದ್ರದಲ್ಲಿಯೇ ಇರುವವರಿಗೆ ಇನ್ನೊಂದು ಲೆಕ್ಕವನ್ನು ಇಡಲು ಬರುವುದಿಲ್ಲ; ಕಾಯಿಪಲ್ಲೆ ಹಾಗೂ ಹಾಲನ್ನು

ಪ್ರತಿದಿನವೂ ತೆಗೆದುಕೊಳ್ಳಬೇಕಾಗುತ್ತದಾದುದರಿಂದ ಹತ್ತು ದಿನ ಮೊದಲಿಗೆ ಹಣವನ್ನು ಕೊಡಲು ಸಾಧ್ಯವಿಲ್ಲ. ಅದು ನಿಯಮಕ್ಕೆ ವಿರುದ್ಧವಾದುದು. ಹೀಗೆಂದು ತಿಳಿಯಿತು. ಬರಿಯ ಜೋಳದಿಂದ ಕೆಲಸವಾಗದು ; ಹತ್ತು ದಿನಕ್ಕೆ ಹತ್ತು ಹುಡುಗರಿಗೆ (ಅವರೆಲ್ಲಾ ತರುಣರೇ) ಸಾಕಾಗುವ ಇತರ ಆಹಾರ ಸಾಮಗ್ರಿಗಳಿಗೆ ಬೇಕಾಗುವ ಹಣವನ್ನು ಒದಗಿಸುವುದೂ ಸಾಧ್ಯವಿಲ್ಲ. ಆದುದರಿಂದ ವಿದ್ಯಾರ್ಥಿಗಳನ್ನಷ್ಟೇ ಕರೆದುಕೊಂಡು ಹೋಗುವುದೆಂದು ನಿರ್ಧರಿಸಲಾಯಿತು.

ಮನಸ್ಸಿಗೆ ಬೇಸರವೇನೋ ಆಯಿತು. ಸಮಾಜಕಾರ್ಯದಲ್ಲಿ ನವೀನ ಪ್ರಯೋಗವನ್ನು ನಡೆಸುವ ಆಕಾಂಕ್ಷೆಗೆ ತಣ್ಣೀರು ಎರಚಿದಂತೆ ಆಯಿತು. ಆದರೆ ಕತ್ತಲೆಯಲ್ಲಿಯೂ ಮಿಂಚು ಹೊಳೆಯಿತು. ಮಾನಸಿಕ ಆರೋಗ್ಯ ಕೇಂದ್ರವೂ ಕ್ಷೇತ್ರ ಕಾರ್ಯದ ಕೇಂದ್ರ, ಅದರಲ್ಲಿನ ಚಿಕಿತ್ಸಾರ್ಥಿಗಳನ್ನು ಕರೆದುಕೊಂಡು ಹೋದರೆ ಹೇಗೆ? ಈ ಆಲೋಚನೆ ಹೊಳೆಯುತ್ತಿದ್ದಂತೆಯೇ ಸಲಕಿನಕೊಪ್ಪಕ್ಕೆ ಕ್ಷೇತ್ರ ಕಾರ್ಯಕ್ಕೆ ಹೋಗುತ್ತಿದ್ದ ವಿದ್ಯಾರ್ಥಿ ಆನಂದಶೆಟ್ಟಿಯೂ ಆ ಪ್ರಸ್ತಾಪವೆತ್ತಿದರು. ವಿಚಾರಿಸಿ ತಿಳಿಸಲು ಹೇಳಲಾಯಿತು. ಆರೋಗ್ಯ ಕೇಂದ್ರದ ಮುಖ್ಯಸ್ಥರನ್ನು ಕಂಡು ಬರಬೇಕೆಂದು ತೀರ್ಮಾನಿಸಲಾಯಿತು.

ಅಕ್ಟೋಬರ ೧೧ ನೆಯ ಸೋಮವಾರ ಮಾನಸಿಕ ಆರೋಗ್ಯ ಕೇಂದ್ರದ ಮುಖ್ಯಸ್ಥೆಯನ್ನೂ, ಕಾರ್ಯದರ್ಶಿಯನ್ನೂ ಕಂಡು ಮಾತನಾಡಲಾಯಿತು. ಹೊಸ ಪ್ರಯೋಗ, ಮನೋರೋಗಿಗಳನ್ನು ಸ್ವಚ್ಛಂದ ವಾತಾವರಣಕ್ಕೆ ಕರೆದೊಯ್ದು ದಿನಗಟ್ಟಲೆ ಆಸ್ಪತ್ರೆಯ ಹೊರಗಡೆಯೇ ಇರಿಸಿಕೊಂಡರೆ ಹೇಗೆ ? ಏನಾದರೂ ಕಹಿ ಪ್ರಸಂಗ ಉಂಟಾಗಲಿಕ್ಕಿಲ್ಲವೆನ್ನಲು ಭರವಸೆಯೆನು ? ಇದರ ಹೊಣೆ ಹೊರುವವರಾರು ? ಮೇಲಾಗಿ ರೋಗಿಗಳ ಆಹಾರದ ಖರ್ಚನ್ನು ಭರಿಸುವುದು ಹೇಗೆ? ಇಂಥವೇ ಜಟಿಲ ಪ್ರಶ್ನೆಗಳಿದ್ದವು. ಬೆಳಗ್ಗೆ ಕರೆದೊಯ್ದು ಸಂಜೆ ಅವರನ್ನು ಹಿಂದಿರುಗಿಸಿದರೆ ಒಳಿತು, ಎಂಬ ಸಲಹೆಯೂ ಬಂದಿತು. ಆದರೆ ಒಮ್ಮೆ ಸಾಮಾನು ಹಾಗು ವಿದ್ಯಾರ್ಥಿಗಳನ್ನು ಸಾಗಿಸುವುದೇ ಕಷ್ಟವಾಗಿರುವಾಗ ಹತ್ತು ದಿನವೂ ಸಾರಿಗೆಯ ವ್ಯವಸ್ಥೆ ಮಾಡುವುದು ಅಸಾಧ್ಯದ ಮಾತೇ ಸರಿ. ಅದೂ ಅಲ್ಲದೆ ಹತ್ತು ದಿನಗಳೂ—ಹಗಲೂ.ರಾತ್ರಿ— ಜೊತೆಗೆ ಜೀವಿಸಬೇಕಾದಂಥ ಪರಿಸ್ಥಿತಿಯನ್ನು ನಾವು ನಿರ್ಮಿಸಿಕೊಳ್ಳುತ್ತಿರುವಾಗ ಇದು ಸರಿಯಾಗಲಾರದು. ಹತ್ತು ದಿನವೂ ನಿರಂತರವಾಗಿ ಹಳ್ಳಿಯ ಶಿಬಿರದಲ್ಲಿಯೇ ಇರಲೆಂದು ಒಪ್ಪಿಕೊಳ್ಳೋಣ. ಆದರೆ ಅವರಿಗೆ ಬೇಕಾದ ಆಹಾರಸಾಮಗ್ರಿಗಳ ಸರಬರಾಜು ಹೇಗೆ? ಎಂಬ ಪ್ರಶ್ನೆ ಬಂದಿತು. ಅವರಿಗೆ ಬೇಕಾದ ಸಿದಾವನ್ನು ಕೊಡಬಹುದು. ಆದರೆ ಹತ್ತು ದಿನಗಳ ಮೊದಲೇ ಕೊಡಲಾಗದು. ಅದು ನಿಯಮ ಬಾಹಿರ, ಅದೂ ಅಲ್ಲದೆ ಜನತಾ ಬಜಾರಿನಿಂದ ದಿನದಿನವೂ ಕೊನೆಗೆ ಎರಡು ದಿನಕ್ಕೊಮ್ಮೆಯಾದರೂ ಬೇಳೆ, ಹಿಟ್ಟು ಮುಂತಾದುವನ್ನು ತಂದು ರೋಗಿಗಳಿಗೆ ಕೊಡುವುದು ಆಸ್ಪತ್ರೆಯ ನಿಯಮ. ಅಕ್ಕಿಯೊಂದನ್ನು ಮಾತ್ರ ಹತ್ತು ದಿನಗಳಿಗಾಗುವಷ್ಟು ಮೊದಲೇ ಕೊಡಬಹುದು. ಇಂಥ ಸಮಸ್ಯೆಗೆ ನಾನೊಂದು ಪರಿಹಾರ ಸೂಚಿಸಿದೆ. 'ಪ್ರತಿದಿನವೂ ನಮ್ಮ

ಲ್ಲೊಬ್ಬರು ಬಂದು ಆ ದಿನದ ಸಿದಾವನ್ನು ತೆಗೆದುಕೊಂಡು ಹೋಗುತ್ತೇವೆ' ಎಂದು. ಇದು ಒಪ್ಪಿಗೆಯಾಯಿತು. ಆಗ ದೊಡ್ಡದೊಂದು ಹಗುರಾದ ಉಸಿರನ್ನು ಬಿಟ್ಟೆವು. ಮರು ದಿನವೇ ಸಲಕಿನಕೊಪ್ಪಕ್ಕೆ ಪಯಣ ಬೆಳೆಸಬೇಕು. ಆಸ್ಪತ್ರೆಯ ಸಿಬ್ಬಂದಿಯವರ ನೆರವಿನಿಂದ ಆನಂದಶೆಟ್ಟಿ ಹತ್ತು ಜನರನ್ನು ಆಯ್ದುಕೊಂಡರು. ಅವರ ಆರೋಗ್ಯದ ಪರಿಸ್ಥಿತಿಯನ್ನು ಪರೀಕ್ಷಿಸಿದರು; ತೂಕವನ್ನು ಮಾಡಿಸಿದರು; ಅವರ ಹಾಸುಗೆ ಇತ್ಯಾದಿಗಳೊಡನೆ ಸಿದ್ಧವಾಗಲು ತೊಡಗಿದರು.

ಯೋಜನೆ ಹಾಗೂ ಕ್ರಿಯಾತ್ಮಕ ಗುಂಪುಗಳು

ಸಮಾಜಕಾರ್ಯದ ವಿದ್ಯಾರ್ಥಿಗಳು ಕೇವಲ ಹತ್ತು ಜನ. ಆದರೆ ಹತ್ತು ದಿನದ ಶಿಬಿರಕ್ಕಾಗಿ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಳ್ಳಬೇಕಲ್ಲವೇ ? ವ್ಯವಸ್ಥೆಯೆಂದರೆ, ಹತ್ತು ದಿನ ಶಿಬಿರದಲ್ಲಿ ಏನೇನು ಕಾರ್ಯಕ್ರಮಗಳನ್ನು ಇರಿಸಿಕೊಳ್ಳಬೇಕು. ಯಾವ್ಯಾವ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಯಾವುದಕ್ಕೆ ಎಷ್ಟೆಷ್ಟು ಹಣ ಬೇಕಾಗುತ್ತದೆ. ಯಾರ್ಯಾರು ಯಾವ್ಯಾವ ಕಾರ್ಯವನ್ನು ಎಷ್ಟು ಸಮಯದೊಳಗೆ ನಿರ್ವಹಿಸಬೇಕು ? ಎಂಬಿತ್ಯಾದಿ ಮಾರ್ಗದರ್ಶಿ ಪ್ರಶ್ನೆಗಳನ್ನಿರಿಸಿಕೊಂಡು ಕಾರ್ಯ ಪ್ರವೃತ್ತರಾದರು ವಿದ್ಯಾರ್ಥಿಗಳು.

ಕಾರ್ಯಕ್ರಮ ಕಾರ್ಯದಾವುದನ್ನು ತೆಗೆದುಕೊಳ್ಳಬೇಕು ಎಂಬುದೊಂದು ಸಮಸ್ಯೆ. ಕ್ಷೇತ್ರಕಾರ್ಯಕ್ಕಾಗಿ ಹೋಗುವ ವಿದ್ಯಾರ್ಥಿಯು ಹಳ್ಳಿಯ ಸಮಸ್ಯೆ, ಸಂಪನ್ಮೂಲಗಳ ಪರಿಚಯವನ್ನು ಮಾಡಿಕೊಳ್ಳುವಾಗಲೇ ಹಳ್ಳಿಗರ ಅಭಿಮತದಲ್ಲಿ ಯಾವುದು ಅತ್ಯಂತ ಮುಖ್ಯವಾದ ಕಾರ್ಯವೆಂಬುದನ್ನೂ, ಅದು ಸಾಧ್ಯವಾಗದಿದ್ದರೆ ಎರಡು. ಮೂರನೆಯ ಮಹತ್ವದ ಕಾರ್ಯಗಳನ್ನೂ ತಿಳಿದುಕೊಂಡು ಇತರ ವಿದ್ಯಾರ್ಥಿಗಳೊಡನೆಯೂ, ನಿರ್ದೇಶಕನೊಡನೆಯೂ ಚರ್ಚಿಸಬೇಕಾಗುತ್ತದೆ. ಆ ಕಾರ್ಯಗಳ ಆಗುಹೋಗುಗಳನ್ನು ಮುನ್ನವೇ ಪರಾಂಬರಿಸಬೇಕಾಗುತ್ತದೆ. ಒಂದೆರಡು ಸಲವಾದರೂ ಎಲ್ಲ ವಿದ್ಯಾರ್ಥಿಗಳೂ ಶಿಬಿರದ ಸ್ಥಳವನ್ನು ನೋಡಿರಬೇಕಾಗುತ್ತದೆ.

ಆದರೆ ಸಲಕಿನಕೊಪ್ಪದೊಡನಿದ್ದ ಸಂಪರ್ಕದ ಕಾರಣದಿಂದ ಕೆರೆಯ ಏರಿಯ ಇಬ್ಬದಿಯಲ್ಲಿಯೂ ಇರುವ ತಗ್ಗನ್ನು ಕೊಳವೆಗಳನ್ನು ಹಾಕಿ ಅಡಿಗಾಲುವೆ (Culvert) ಗಳನ್ನು ನಿರ್ಮಿಸಿ ವಾಹನಗಳ ಸಂಚಾರಕ್ಕೆ ಅನುಕೂಲಮಾಡುವುದು ಅತ್ಯಂತ ಮುಖ್ಯ ಕಾರ್ಯವೆಂಬುದನ್ನು ಕಂಡುಕೊಂಡಿದ್ದೆವು. ರಸ್ತೆಯ ಕೆಲಸ ತಾಲ್ಲೂಕ ಅಭಿವೃದ್ಧಿ ಮಂಡಳಿಯದು; ಆದರೆ ಆ ಕೆರೆಯ ಏರಿಯು ಲೋಕೋಪಯೋಗಿ ಖಾತೆಗೆ ಸೇರುತ್ತದೆ. ಹೀಗಾಗಿ ಒಂದು ಸಮಸ್ಯೆ ಎದ್ದಿತು. ಆದರೂ ಕೆರೆ ಏರಿಯ ದುರಸ್ತಿಯನ್ನು ಲೋಕೋಪಯೋಗಿಯವರು ಕೈಕೊಳ್ಳಬೇಕೆಂದು ಅವರನ್ನು ಕಂಡು ಮನವೊಲಿಸಲಾಯಿತು. ಆ ಕೆಲಸಕ್ಕೆ ಆಗುವ ಹಣವನ್ನು ಮಂಜೂರು ಮಾಡಿದರೆ ಶ್ರಮದಾನದಿಂದ ಕಾರ್ಯವನ್ನು ಮಾಡಿ ಊರ ಅಭಿವೃದ್ಧಿಗಾಗಿ ಹಣವನ್ನು ಉಳಿಸುವ ಹಂಚಿಕೆ

ಯನ್ನು ಹಾಕಲಾಯಿತು. ನಿಯಮಕ್ಕೆ ತಕ್ಕಂತೆ ಪಂಚಾಯತಿಯ ಬೇಡಿಕೆಯ ನಿರ್ಣಯ ವನ್ನು ಲೋಕೋಪಯೋಗಿ ಕಚೇರಿಗೆ ಕಳಿಸಲಾಯಿತು. ಆದರೆ ಕಾರಣಾಂತರಗಳಿಂದ ಶಿಬಿರ ಆರಂಭವಾದರೂ ಲೋಕೋಪಯೋಗಿಯವರಿಂದ ಆ ಕೆಲಸಕ್ಕೆ ಮಂಜೂರಾತಿ ಬರಲಿಲ್ಲ. ಮುಂದಿನ ಶಿಬಿರದ ಹೊತ್ತಿಗೆ ಮಂಜೂರಾತಿ ಪಡೆಯುವ ನಿರ್ಧಾರವನ್ನು ಕೈಕೊಂಡು ಏರಿಯ ಉತ್ತರದ ಕೊನೆಯಿಂದ ಊರ ಮುಖ್ಯ ರಸ್ತೆಯ ಇಬ್ಬದಿಯ ಚರಂಡಿಗ ಳನ್ನು ಅಗಿದು ಅದೇ ಮಣ್ಣನ್ನು ಹರಡಿ ರಸ್ತೆಯನ್ನು ಸರಿಮಾಡುವುದು ಎಂಬ ನಿರ್ಣಯ ವನ್ನು ತೀರಾ ಕೊನೆಗೆ ಕೈಕೊಳ್ಳಲಾಯಿತು. ಈ ಕಾರ್ಯವು ಗ್ರಾಮದವರ ಅಭಿಪ್ರಾಯ ದಲ್ಲಿ ಎರಡನೆಯ ಮಹತ್ವದ ಕೆಲಸವಾಗಿತ್ತು. ಯಾಕೆಂದರೆ ಗುಡ್ಡದ ನೀರೆಲ್ಲಾ ಹರಿದು ರಸ್ತೆಯ ನಡುವೆ ಕೊರಕಲನ್ನು ಮಾಡಿತ್ತು. ಚರಂಡಿಗಳು ದುರಸ್ತಿಗೊಂಡರೆ, ನೀರು ಹಾದಿಯನ್ನು ಹಾಳುಮಾಡದೆ 'ಹಾದಿಯನ್ನು ಹಿಡಿದು' ಹರಿದು ಕೆರೆ ಯನ್ನು ಸೇರುತ್ತದೆ ಎಂಬುದು ಅವರ ಅಭಿಪ್ರಾಯವಿತ್ತು. ಈ ಕೆಲಸಕ್ಕೆ ಹಣದ ಅವಶ್ಯ ಕತೆಯೇನೂ ಇರಲಿಲ್ಲ. ವಿಶ್ವವಿದ್ಯಾಲಯದವರು ಗುದ್ದಲಿ, ಸಲಿಕೆ, ಬುಟ್ಟಿಗಳನ್ನು ಒದಗಿಸುತ್ತಾರೆ. ಆದುದರಿಂದ ಕೆಲಸ ನಡೆಯಲು ತೊಂದರೆಯಿಲ್ಲವೆನ್ನಿಸಿತು. ಆದರೆ ಇಂಥ ಕೆಲಸವನ್ನು ಆರಿಸಿಕೊಳ್ಳುವಲ್ಲಿ ಶಿಬಿರಾರ್ಥಿಗಳೂ, ಊರವರೂ ಸಮಾಲೋ ಚನೆಯನ್ನು ನಡೆಸುವುದು ಅಗತ್ಯವಾಗಿತ್ತು. ಅಂಥ ಔಪಚಾರಿಕ ಸಭೆಯಾಗಲಿಲ್ಲವೆಂಬು ದೊಂದು ಲೋಪವೇ.

ಹತ್ತು ವಿದ್ಯಾರ್ಥಿಗಳಲ್ಲಿ ಒಬ್ಬಾತನನ್ನು ಕಾರ್ಯದರ್ಶಿಯನ್ನಾಗಿ ಆರಿಸಲಾಯಿತು. ಆತನು ಎಲ್ಲ ಸಮಿತಿಗಳ ಸಾಮಾನ್ಯ ಸದಸ್ಯನಾಗಿರತಕ್ಕುದೆಂದು ತೀರ್ಮಾನಿಸ ಲಾಯಿತು. ಉಳಿದ ಒಂಬತ್ತು ವಿದ್ಯಾರ್ಥಿಗಳು ನಾಯಕರಾಗುವಂತೆ ಆರ್ಥಿಕ. ಅಡುಗೆ, ಸಾರಿಗೆ, ಆರೋಗ್ಯ, ದೈಹಿಕಶ್ರಮ (ರಸ್ತೆರಿಪೇರಿ). ವಸತಿ. ಚರ್ಚಾಗೋಷ್ಠಿ, ಸಾರ್ವ ಜನಿಕ ಸಂಪರ್ಕ, ಮನೋರಂಜನೆ ಹೀಗೆ ಒಂಬತ್ತು ಯೋಜನಾಗುಂಪುಗಳನ್ನು ಸೃಷ್ಟಿಸ ಲಾಯಿತು. ಒಂದೊಂದು ಗುಂಪಿನಲ್ಲೂ ಸಾಮಾನ್ಯವಾಗಿ ಇಬ್ಬರು ಸದಸ್ಯರೂ ಒಬ್ಬ ನಾಯಕನೂ ಇರುವಂತೆ ಏರ್ಪಡಿಸಲಾಯಿತು. ಎಲ್ಲ ಗುಂಪುಗಳ ನಾಯಕರೂ, ಕಾರ್ಯದರ್ಶಿಯೂ, ನಿರ್ದೇಶಕನೂ ಸೇರಿದಂತೆ ಸಂಯೋಜನಾ ಸಮಿತಿಯನ್ನು ನಿಯ ಮಿಸಲಾಯಿತು. ಶಿಬಿರವನ್ನು ಮೊದಲಿನಿಂದಲೂ ವೀಕ್ಷಿಸಿ ವಸ್ತುನಿಷ್ಠ ಮೌಲ್ಯಮಾಪ ನೆಯನ್ನು ಮಾಡಲು ಐವರು ವಿದ್ಯಾರ್ಥಿಗಳ ಸಮಿತಿಯನ್ನು ನಿಯಮಿಸಲಾಯಿತು.

ಈ ಗುಂಪುಗಳು ಆಗಾಗ ಕೂಡಿ. ಚರ್ಚಿಸಿ, ಹಣ ಹಾಗೂ ವಸ್ತುಗಳನ್ನು ಸಂಗ್ರ ಹಿಸಬೇಕೆಂದೂ, ಸಮಯವನ್ನು ಫಲದಾಯಕವಾಗಿ ಉಪಯೋಗಿಸುವ ಉದ್ದೇಶದಿಂದ ಸೂಕ್ತ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಗೊಳಿಸಬೇಕೆಂದೂ ನಿರ್ದೇಶನವನ್ನು ನೀಡ ಲಾಯಿತು.

ಈ ಎಲ್ಲ ಕಾರ್ಯಗಳನ್ನು ಪೂರೈಸಲು ಹದಿನೈದು ಇಪ್ಪತ್ತು ದಿನಗಳಷ್ಟು ಸಮಯವಿದ್ದರೂ ಅನೇಕ ಸಮಿತಿಗಳು ತಂತಮ್ಮ ಯೋಜನೆಗಳನ್ನು ಪೂರ್ಣ

ಸಿದ್ಧಗೊಳಿಸಿದ್ದುದು ಶಿಬಿರ ಇನ್ನೇನು ಎರಡು–ಮೂರು ದಿನಗಳಲ್ಲಿ ಆರಂಭವಾಗಲಿದೆ ಎನ್ನುವಾಗಲೇ. ಆದುದರಿಂದ ಎಲ್ಲರಲ್ಲಿಯೂ ಗಡಿಬಿಡಿಯಿತ್ತು, ಕೆಲವರಲ್ಲಿ ಅಧೈರ್ಯವಿತ್ತು. ಆದರೆ ಸಮಾಜಕಾರ್ಯದ ಎಲ್ಲ ಪ್ರಾಧ್ಯಾಪಕರೂ ವಿದ್ಯಾರ್ಥಿಗಳಿಗೆ ನೆರವನ್ನು ನೀಡಿದುದರಿಂದ ಯೋಜನೆಯು ಸಿದ್ಧವಾಯಿತು, ಆಹಾರ ಸಾಮಗ್ರಿಗಳನ್ನು ಕೊಳ್ಳಲಾಯಿತು, ಕೆಲಸಕ್ಕೆ ಬೇಕಾದ ಉಪಕರಣಗಳನ್ನು ಸಂಗ್ರಹಿಸಲಾಯಿತು, ಆರೋಗ್ಯ ಸಮಿತಿಯವರು ಸಲಕಿನಕೊಪ್ಪಕ್ಕೆ ಹೋಗಿ ಬೀಡುಬಿಡುವ ಸ್ಥಳದ ಹತ್ತಿರ ಪಾಯಖಾನೆಯನ್ನು ನಿರ್ಮಿಸಿ ಬಂದರು, ವಾಹನವನ್ನು ಗೊತ್ತು ಮಾಡಲಾಯಿತು, ಯಾರ್ಯಾರು ಯಾವ್ಯಾವ ಸ್ಥಳದಿಂದ ಎಷ್ಟೆಷ್ಟು ಹೊತ್ತಿಗೆ ಹೋಗಬೇಕು ಎಂಬುದನ್ನು ನಿರ್ಧರಿಸಲಾಯಿತು. ಆದರೂ ವಾಹನವೊಂದರಲ್ಲೇ ಎಲ್ಲ ಸಾಮಾನುಗಳನ್ನೂ, ಎಲ್ಲ ಜನರನ್ನೂ ಸಾಗಿಸುವುದು ಅಸಾಧ್ಯವಾದುದರಿಂದ ಅನೇಕರು ಬಸ್ಸುಗಳಲ್ಲಿಯೇ ಶಿಬಿರದ ಸ್ಥಳಕ್ಕೆ ಪ್ರಯಾಣ ಮಾಡಬೇಕಾಯಿತು.

ಶಿಬಿರ ಆರಂಭವಾದಂದಿನಿಂದ ಮುಗಿಯುವವರೆಗೂ ಕ್ರಿಯಾತ್ಮಕ ಗುಂಪುಗಳು ಕಾರ್ಯಶೀಲವಾಗಿದ್ದವು. ಈ ಗುಂಪುಗಳನ್ನು ಹಿಂದಿನ ರಾತ್ರಿ ನಿಯಮಿಸಲಾಗುತ್ತಿತ್ತು: ಒಂದೊಂದು ಕಾರ್ಯಕ್ಕೆ ಒಬ್ಬೊಬ್ಬ ನಾಯಕನಿರುತ್ತಿದ್ದ. ಕಾರ್ಯಕ್ಕೆ ತಕ್ಕಂತೆ ಗುಂಪಿನ ಸದಸ್ಯರ ಸಂಖ್ಯೆ ಇರುತ್ತಿತ್ತು. ಉದಾಹರಣೆಗೆ ೫–೩೦ ಕ್ಕೆ ಏಳಿಸಲು ಒಬ್ಬಾತ; ಕವಾಯತು ಮಾಡಿಸುವಾತ ಒಬ್ಬ; ನೀರು ಸರಬರಾಜು ಮಾಡುವ ಗುಂಪಿನ ಸಂಖ್ಯೆ ದೊಡ್ಡದು. ಆದರೆ ಅದಕ್ಕೊಬ್ಬ ನಾಯಕನಿರುತ್ತಿದ್ದ: ಅಡುಗೆಯನ್ನು ನಿರ್ವಹಿಸುವ ಎರಡು ಮೂವರ ಗುಂಪು. ಇದಕ್ಕೆ ಒಬ್ಬ ನಾಯಕ. ಒಮ್ಮೊಮ್ಮೆ ಬೆಳಗಿನ ಉಪಾಹಾರಕ್ಕೆ ಒಬ್ಬಾತ ನಾಯಕನಾದರೆ, ಇನ್ನೊಬ್ಬ ಮಧ್ಯಾಹ್ನದ ಊಟಕ್ಕೆ, ಮಗದೊಬ್ಬ ರಾತ್ರಿಯ ಊಟಕ್ಕೆ. ಉಪನ್ಯಾಸವನ್ನೀಯಲಿರುವ ಅತಿಥಿಗಳನ್ನು ಧಾರವಾಡದಿಂದ ಕರೆದು ತರಲು ಒಬ್ಬೊಬ್ಬರು ಒಂದೊಂದು ದಿನ ಹೋಗಿಬರುವಂತೆ ಏರ್ಪಾಟಾಯಿತು. ಆತನೇ ಬೇಕಾದ ಸಾಮಾನುಗಳನ್ನು ಪೇಟೆಯಿಂದ ತರಬೇಕಾಗುತ್ತಿತ್ತು. ಒಮ್ಮೆ ನಿರ್ದೇಶಕ ಹೋಗಿ ಬಂದುದುಂಟು. ಇನ್ನೊಮ್ಮೆ ಪ್ರಾಧ್ಯಾಪಕರೊಬ್ಬರು ಸ್ವಯಂ ಪ್ರೇರಿತರಾಗಿ ಮನೋರಂಜಕರನ್ನು ಕರೆದು ತಂದುದುಂಟು.

ಯೋಜನಾ ಸಮಿತಿಗಳ, ಕ್ರಿಯಾತ್ಮಕ ಗುಂಪುಗಳ ನಿರ್ಮಾಣದ ಉದ್ದೇಶವೆಂದರೆ ಪ್ರತಿಯೊಬ್ಬ ಶಿಬಿರಾರ್ಥಿಗೂ ಶಿಬಿರದ ಪ್ರತಿಯೊಂದು ಭಾಗದ ಪರಿಚಯವನ್ನು ಮಾಡಿಸುವುದು, ಹಾಗೂ ಹೊಣೆಗಾರಿಕೆಯನ್ನು ಸ್ವೀಕರಿಸಿ, ನೆರವೇರಿಸುವಂಥ ತಂತ್ರ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು. ಆದರೆ ಮಾನಸಿಕ ಆರೋಗ್ಯ ಕೇಂದ್ರದಿಂದ ದಿನ ದಿನದ ಸೀದಾವನ್ನು ತರಲು ಆ ಕೇಂದ್ರದಿಂದ ಬಂದಿದ್ದ ಸಿಪಾಯಿಗಳಲ್ಲಿ ಒಬ್ಬಾತನಾಗಲಿ, ಮನೋಚಿಕಿತ್ಸಾ ವಿದ್ಯಾರ್ಥಿಯಾಗಲಿ, ನರ್ಸ್ (ಅಲ್ಲಿನ ವಿದ್ಯಾರ್ಥಿ) ಆಗಲಿ ಹೋಗಿ ಬರುತ್ತಿದ್ದುದುಂಟು.

ದೈನಂದಿನ ಕಾರ್ಯಕ್ರಮ

ಇಡಿಯ ದಿನವನ್ನು ಬೆಳಗಿನ ೫-೩೦ ರಿಂದ ರಾತ್ರಿಯ ೧೦ ರ ವರೆಗೆ ಕೆಲವು ಕಾರ್ಯಕ್ರಮಗಳಲ್ಲಿ ವಿಭಾಗಿಸಲಾಗಿತ್ತು. ಮೊದಲ ಮತ್ತು ಕೊನೆಯ ದಿನಗಳಲ್ಲಿ ಕಾರ್ಯಕ್ರಮ ಪಟ್ಟಿ ಭಿನ್ನವಾಗಿತ್ತು. ಯಾಕೆಂದರೆ ಮೊದಲನೆಯ ದಿನ ಬಿಡಾರವನ್ನು ಹೂಡುವುದಷ್ಟೇ ಕಾರ್ಯವಾಗಿತ್ತು; ಕೊನೆಯದಿನ ಮಧ್ಯಾಹ್ನ ಶಿಬಿರದಿಂದ ಹೊರಡುವ ಏರ್ಪಾಟಿತ್ತು. ಇನ್ನುಳಿದ ದಿನಗಳಲ್ಲಿ ಸಾಮಾನ್ಯವಾದ ಕಾರ್ಯಕ್ರಮ ಹೀಗಿತ್ತು.

ಶಿಬಿರದಲ್ಲಿರುವವರೆಲ್ಲರೂ ೫-೩೦ ಕ್ಕೆ ಏಳುವುದು; ೬-೩೦ ರ ಒಳಗೆ ಮುಖ ಮಾರ್ಜನಾದಿಗಳನ್ನು ತೀರಿಸಿಕೊಂಡು ಪ್ರಾರ್ಥನೆಗೆ ತೊಡಗುವುದು; ಪ್ರಾರ್ಥನೆಯಾದ ನಂತರ ಕವಾಯತು. ಅನಂತರ ನೀರು ತರುವದು; ಇದೆಲ್ಲಾ ೮ ಗಂಟೆಯ ಒಳಗೇ ಮುಗಿಯುವುದು: ಅಷ್ಟರ ಒಳಗೇ ಉಪಾಹಾರವೂ ಆಗುವುದು; ೮ ಗಂ.ಗೆ ಶ್ರಮ ಕಾರ್ಯ ಆರಂಭ, ೧೧ ರ ವರೆಗೆ ಕೆಲಸ; ೧೧ ರಿಂದ ೧೨-೩೦ ರ ವರೆಗೆ ಸ್ನಾನಾದಿಗಳು; ೧-೩೦ರ ಒಳಗೆ ಮಧ್ಯಾಹ್ನದ ಊಟ; ೨-೩೦ರವರೆಗೆ ವಿಶ್ರಾಂತಿ; ೪ರ ವರೆಗೆ ಊರನ್ನು ಸಂದರ್ಶಿಸಿ, ಗ್ರಾಮಸ್ಥರೊಡನೆ ವಿಚಾರವಿನಿಮಯ ಮಾಡುವುದು; ೪ ಕ್ಕೆ ಮಧ್ಯಾಹ್ನದ ಚಹಾ; ಆರರವರೆಗೆ ಬಂದ ಅತಿಥಿಯಿಂದ ಭಾಷಣ, ಚರ್ಚಾಗೋಷ್ಠಿ; ೮-೩೦ ರವರೆಗೆ ಮನರಂಜನೆ, ದಿನದ ಕಾರ್ಯದ ಸಮೀಕ್ಷೆ, ವಿಮರ್ಶೆ ಹಾಗೂ ಮರುದಿನದ ಕಾರ್ಯ ಕ್ರಮದ ಮತ್ತು ಕ್ರಿಯಾತ್ಮಕ ಗುಂಪುಗಳ ಹಾಗೂ ನಾಯಕರ ನೇಮಕ; ೯-೩೦ರ ಒಳಗೆ ರಾತ್ರಿಯ ಊಟ; ೧೦ಕ್ಕೆ ನಿದ್ರೆ ಹೋಗುವುದು.

ಈ ಕಾರ್ಯಕ್ರಮದಲ್ಲಿ ಆಗಾಗ ಅಲ್ಪಸ್ವಲ್ಪ ಬದಲಾವಣೆಯಾಗುತ್ತಿತ್ತು. ಕೆಲವೊಮ್ಮೆ ೧೧ ಗಂಟೆಯವರೆಗೂ ಮಲಗುತ್ತಿರಲಿಲ್ಲ; ಒಂದೆರಡು ಸಲ ಕಾರ್ಯ ಕ್ರಮದ ಸಮೀಕ್ಷೆಯಾಗಲಿಲ್ಲ; ಮನರಂಜನೆಗೆ ಕೆಲವು ಸಲ ಸಮಯ ಸಿಗಲಿಲ್ಲ; ಎರಡು ದಿನಗಳಲ್ಲಿ ಬರಬೇಕಾದ ಅತಿಥಿಗಳು ಬರಲಿಲ್ಲ. ಒಂದು ದಿನ ಶ್ರಮಕಾರ್ಯವನ್ನು ಬೆಳಗಿನ ಬದಲು ಸಂಜೆಗೆ ಬದಲಿಸಲಾಯಿಸಲಾಯಿತು, ಊರ ಸಂದರ್ಶನಕ್ಕೆ ಒಂದೆರಡು ಸಲ ವ್ಯತ್ಯಯಬಂದಿತು. ಈ ಶಿಬಿರವು ನಮ್ರತೆಯ (Flexibility) ಮೇಲೆ ಅವಲಂಬಿಸಿ ಕೊಂಡಿರಬೇಕಾದುದರಿಂದ ಹೀಗಾಗುವುದು ಸಹಜ. ಸ್ಥಿತ್ಯಂತರವಾಗುವುದು ಪರಿಣಾಮ ಕಾರೀ ಕೆಲಸವನ್ನು ನೆರವೇರಿಸಲಿಕ್ಕಾಗಿಯೇ.

ಕಾರ್ಯಕ್ರಮ ಹಾಗೂ ವಾತಾವರಣ

ಊರಿನ ಶಾಲೆಯಲ್ಲಿ ಶಿಬಿರಾರ್ಥಿಗಳ ಬಿಡಾರ. ಹಿಂದೊಮ್ಮೆ ಬಂದ ಸರ್ವೋ ದಯ ಮಂಡಳಿಯವರು ಮೊದಲ ಶಾಲೆಯನ್ನು ಕಟ್ಟಿದ್ದರು. ಅದಕ್ಕೆ ಹೊಂದಿ ಕೊಂಡಂತೆಯೇ ಊರಿನ ಮುಖ್ಯ ರಸ್ತೆಯ ಕಡೆಗೆ ಚಿಕ್ಕ ಕೋಣೆ. ಅದು ಊರ ಉಪಾಧ್ಯಾ ಯನು ಇರುವ ಮನೆ. ಶಾಲಾಕೋಣೆಯ ಎಡಪಕ್ಕದಲ್ಲಿ ಖಾಸಗೀ ಹೊಲ. ೧೯೬೯ರಲ್ಲಿ ಕಟ್ಟಿದ ಕೋಣೆಯು ಈ ಮುಖ್ಯ ಕೋಣೆಯ ಮುಂದೆ, ದಕ್ಷಿಣಕ್ಕೆ, ಎಡಭಾಗದ

ಕೆಲವು ಅಂಶವನ್ನು ಮರೆಮಾಡಿದಂತೆ ಪಶ್ಚಿಮಾಭಿಮುಖವಾಗಿ ಇದೆ. ಮುಖ್ಯ ರಸ್ತೆಯಿಂದ ಕಚ್ಚಾ ಮೆಟ್ಟಿಲುಗಳನ್ನು ಏರಿ ಹೋದರೆ ಈ ಶಾಲಾಕೋಣೆಗಳನ್ನು ಸೇರಬಹುದು. ಸರ್ವೋದಯದವರ ಕೋಣೆಯಲ್ಲಿ ಸಮಾಜಕಾರ್ಯ ವಿಭಾಗದವರೂ ಗಾಂಧೀ ಶತಮಾನೋತ್ಸವದ ಕೋಣೆಯಲ್ಲಿ ಮಾನಸಿಕ ಆರೋಗ್ಯ ಕೇಂದ್ರದವರೂ ಉಳಿದುಕೊಂಡಿದ್ದರು.

ಸಲಕಿನಕೊಪ್ಪವನ್ನು ಹಳಿಯಾಳ–ಧಾರವಾಡ ರಸ್ತೆಯಿಂದ ನೋಡಿದರೆ ಎತ್ತರವಾಗಿ ಕಾಣುವ ಕಟ್ಟಡವೇ ಶಾಲೆ. ಊರೊಳಗೆ ಬಂದಾಗಲೂ ಮೋಹಕವಾಗಿ ಕಾಣುವಂತಹದೇ ಈ ಶಾಲೆ. ಕಲಾವಿದ ಕುಲಕರ್ಣಿಯವರ ವರ್ಣಕುಂಚದಲ್ಲಿ ಶಾಲೆಗೆ ಅಪೂರ್ವ ಕಳೆಬಂದಿತು. ಶಿಬಿರದ ಆವರಣವನ್ನು ಸದಾ ಶುಚಿಯಾಗಿಡಲು ವಿದ್ಯಾರ್ಥಿ ಸಮಾಜ ಆರೋಗ್ಯ ವಿಭಾಗದವರೂ, ಚಿಕಿತ್ಸಾರ್ಥಿಗಳಲ್ಲಿ ಇಬ್ಬರೂ ಯತ್ನಿಸುತ್ತಿದ್ದರು. ಊಟದ ಎಲೆಗಳನ್ನು ಹಾಕಲು ಶಾಲೆಯ ಹಿಂದೆ ತಗ್ಗುಗಳನ್ನು ತೋಡಲಾಗಿತ್ತು. ಆಗಾಗ ನಾಯಿಗಳ ದೆಸೆಯಿಂದ ಪತ್ರಾವಳಿಯ ಚೂರುಗಳು ಚೆಲ್ಲಿರುತ್ತಿದ್ದುದುಂಟು. ಅವರೆ ಕಂಡೊಡನೆ ಕೈಹಾಕಿ ಯಾರಾದರೂ ಅವನ್ನು ತಗ್ಗುಗಳಲ್ಲಿ ಹಾಕುತ್ತಿದ್ದರು.

ಶಿಬಿರದಲ್ಲಿಯೇ ದೀಪಾವಳಿಯನ್ನು ಆಚರಿಸಲಾಯಿತು. ಅಂದು ಇನ್ನೂ ಬೇಗನೆ ಎದ್ದು ಮುಖ ತೊಳೆದು ಎಲ್ಲರೂ ಸಾಲಾಗಿ ಕುಳಿತರು. ಅಂಬುಜಮ್ಮ ಹಾಗೂ ವಿದ್ಯಾರ್ಥಿನಿ ಸುಮಿತ್ರ ಶಿಬಿರಾರ್ಥಿಗಳಿಗೆಲ್ಲರಿಗೂ ಆರತಿಯನ್ನು ಬೆಳಗಿದರು. ಮನೋಚಿಕಿತ್ಸಾರ್ಥಿಗಳ ಕೈಗೆ ಕೆಲವು ಪೈಸೆಗಳನ್ನು ಕೊಡಲಾಗಿತ್ತು. ಅವನ್ನು ಅವರು ಆರತಿಯ ತಟ್ಟೆಗೆ ಹಾಕಿದರು; ವಿದ್ಯಾರ್ಥಿಗಳೂ ತಮ್ಮ ಶಕ್ತ್ಯಾನುಸಾರ ಹಣ ಹಾಕಿದರು. ಹಾಗೆ ಆಚರಿಸಿದ್ದುದು ಎಲ್ಲರಿಗೂ ಸಂತೋಷವನ್ನೇ ತಂದಿತು. ಸಂಗ್ರಹವಾದ ಹಣವನ್ನು ಆರತಿ ಬೆಳಗಿದವರಿಬ್ಬರೂ ಹೃತ್ಪೂರ್ವಕವಾಗಿ ಆ ಶಿಬಿರದಲ್ಲಿ ಆರಂಭಿಸಲ್ಪಟ್ಟ ಸಮಾಜಕಾರ್ಯ ಕಲ್ಯಾಣ ನಿಧಿಗೆ ಅರ್ಪಿಸಿದರು. ಅದೇ ಮಧ್ಯಾಹ್ನ ಚಿಕಿತ್ಸಾರ್ಥಿಯೊಬ್ಬನನ್ನು ಆತನ ಬಂಧುಗಳು ಬಂದು ಕರೆದುಕೊಂಡು ಹೋದರು. ಶಿಬಿರಕ್ಕೆ ಬರುವ ಮುನ್ನ ಇದ್ದುದಕ್ಕಿಂತ ಬಹುವಾಗಿ ಉತ್ತಮಗೊಂಡಿದ್ದುದು ಆತನ ಮುಖದಲ್ಲಿ ಕಾಣುತ್ತಿತ್ತು. ಉತ್ತಮಗೊಂಡಿದ್ದಾನೆಂದು ಆಸ್ಪತ್ರೆಯಿಂದ ಬಿಡುಗಡೆಯ ಪತ್ರವನ್ನು ಆ ಬಂಧುಗಳು ತಂದಿದ್ದರು. ಆತನ ಸಹೋದರಿ ಆತನಿಗೆ ಆರತಿ ಮಾಡಲು ಮನೆಯಲ್ಲಿ ಕಾಯ್ದು ಕುಳಿತಿದ್ದಳಂತೆ. ಚಿಕಿತ್ಸಾರ್ಥಿ ಆಗ ಸಾಧಾರಣ, ಸರಳ ವ್ಯಕ್ತಿಯಾದ. ಸಮವಸ್ತ್ರದಿಂದ ಸಾಮಾನ್ಯ ಉಡುಪನ್ನು (ಹೊಸ ಅರಿವೆಗಳನ್ನು) ಧರಿಸಿದಾಗ ಆತನ ಮುಖದ ತುಂಬಾ ಆನಂದದ ಕಳೆ ಕಂಡುಬಂದಿತು. ಆತನ ಬಿಡುಗಡೆಯು ಆ ಪವಿತ್ರ ದಿನದಂದು ಶಿಬಿರದಿಂದಲೇ ಆದುದನ್ನು ಕಂಡು ಅದೊಂದು ಶುಭ ಸಂಕೇತ ಎಂದು ಎಲ್ಲರಿಗೂ ಅನ್ನಿಸಿತು.

ಚಿಕಿತ್ಸಾರ್ಥಿ ಬಸವಲಿಂಗಪ್ಪ ವಿಪರೀತ ಚಟುವಟಿಕೆಯ ಮನುಷ್ಯ. ಆತನೆಷ್ಟು ಗಿಡ್ಡಕ್ಕಿದ್ದನೊ ಅದರ ವಿರುದ್ಧವೆಂಬಂತೆ ಆತನ ಹಾಡುಗಳು, ಕೆಲಸಗಳು ವಿಶಾಲ.

ಉದ್ದ, ಸಮೃದ್ಧ. ಶಾಲೆಯ ಅಂಗಳವನ್ನು ಚಿಕಿತ್ಸಾರ್ಥಿ ಶುಕ್ರೆ ಕೆತ್ತಿ ಸ್ವಚ್ಛಗೊಳಿಸಿದರೆ, ಬಸವಲಿಂಗಪ್ಪ ಸಗಣಿ ತಂದು ಸಾರಿಸಿದ. "ಸಿಸ್ಟರ್' (ಹಾಗೆಂದು ಸುಮಿತ್ರಾ ಅವರನ್ನು ಅವರೆಲ್ಲಾ ಸಂಬೋಧಿಸುತ್ತಿದ್ದರು) ರಂಗೋಲಿ ಹಾಕಿರಿ" ಎಂದು ಆತನ ಆಜ್ಞಾ-ಬಿನ್ನಪ. ಆತನು ಎಷ್ಟು ದೊಡ್ಡದಾಗಿ ನೆಲವನ್ನು ಸಾರಿಸುತ್ತಾನೋ ಅಷ್ಟು ದೊಡ್ಡ ರಂಗೋಲಿಯನ್ನು 'ಸಿಸ್ಟರ್' ಹಾಕಬೇಕು ಎಂಬುದು ಆತನ ಸವಾಲು. ಹೆಚ್ಚಾಗಿ ಆತನೇ ಗೆಲ್ಲುತ್ತಿದ್ದ. ಹಳ್ಳಿಯ ಪದ್ಧತಿಯಂತೆ ಸಗಣಿಯ ಉಂಡೆಮಾಡಿ, ಹೊನ್ನರಿಕೆ ಹೂಗಳನ್ನು ಸಿಗಿಸಿ ನಾಲ್ಕಾರುಕಡೆ ಅಂಗಳದಲ್ಲಿ ಆತನೇ ಇರಿಸಿದ. ಅವೆಲ್ಲಾ ಹಟ್ಟೆವ್ವಗಳು, ದನಕರುಗಳ ದೇವತೆ. ರಾತ್ರಿಯೆಲ್ಲಾ ಹಣತೆ ಬೆಳಗಿದವು. ೨೦ ರ ಬೆಳಗು ಹಳ್ಳಿಯು ಸಡಗರದಿಂದ ಬಣ್ಣಬಳಿದುಕೊಂಡಿತ್ತು. ಮನೆಗಳೆಲ್ಲಾ ಸಾರಣೆಯ ಕಾರಣೆಯನ್ನು ಕಂಡಿದ್ದವು; ಮಕ್ಕಳು ಮರಿಗಳು, ಹೆಣ್ಣು ಗಂಡುಗಳು ಹೊಸ ಉಡುಪು ಧರಿಸಿದ್ದರು; ಎತ್ತುಗಳ ಕೋಡಂಗಳಿಗೆ ಬಣ್ಣ ಬಳಿದು, ಗಂಟೆ ಕಟ್ಟಿ ಓಡಿಸಲಾಯಿತು; ಹಬ್ಬ ದೂಟವನ್ನುಂಡು ಜನ ರಾತ್ರಿ ಉರಿಯನ್ನು ಹಾಕಿ ದನಗಳನ್ನು ಅದರ ಮೇಲೆ ಹಾಯಿಸಿದರು. ವಿದ್ಯುದ್ದೀಪಗಳಿಲ್ಲದ ಊರು ಓಣಿಓಣಿಗಳಲ್ಲಿ ಬೆಳಗುವ ಉರಿಗಳ ಮತ್ತು ಕವಿದ ಕತ್ತಲೆಯಲ್ಲಿ ಅಪೂರ್ವ ಮೆರುಗನ್ನು ಪಡೆದಿತ್ತು. ಊರ ಹಬ್ಬದ ಸಡಗರ ಶಿಬಿರದಲ್ಲೂ ಪ್ರತಿಫಲಿಸಿತು. ದೀಪಾವಳಿಯಂಥ ದೊಡ್ಡ ಹಬ್ಬವನ್ನು ತಮ್ಮ ತಮ್ಮ ಮನೆಗಳಲ್ಲಿ ಆಚರಿಸದೆ ಯಾವುದೋ ಹಳ್ಳಿಯಲ್ಲಿ ಕಳೆಯುವುದೆ? ಎಂಬ ಪ್ರಶ್ನೆಗೆ ಇಂಥ ದೀವಳಿಗೆ ಎಂದಾದರೂ ಬಂದೀತೆ, ಎಂಬಂತಹ ಹರ್ಷೋತ್ತರ ಸಿಕ್ಕಿತು. ಆದರೂ ಕ್ರಿಯಾವಿಧಿಯು ಬಿಡಲಾರದೆಂದು ಒಬ್ಬ ವಿದ್ಯಾರ್ಥಿ ಸೋಮಶೇಖರ ತನ್ನೂರಿಗೆ ಹೋಗಿ ರಾತ್ರಿಯೊಂದನ್ನು ಕಳೆದುಬರಲು ಅವಕಾಶ ಮಾಡಿಕೊಡಲಾಯಿತು.

ಶಿಬಿರಕ್ಕೆ ಧಾರವಾಡದಿಂದ ಶಿಬಿರಾರ್ಥಿಗಳ ಬಂಧುಗಳು ಬಂದರು, ಗೆಳೆಯರು ಬಂದರು, ಪ್ರಾಧ್ಯಾಪಕರೂ, ಎರಡನೆಯ ವರ್ಷದ ವಿದ್ಯಾರ್ಥಿಗಳೂ ಬಂದರು. ಭಾರತ ಸರಕಾರ ಹಾಗೂ ಮೈಸೂರ ಸರಕಾರದ ವಾರ್ತಾ ಮತ್ತು ಪ್ರಚಾರ ಖಾತೆಯ ಅಧಿಕಾರಿಗಳು ಚಲನಚಿತ್ರ ತೋರಿಸಲು ಬಂದರು, ಪತ್ರಿಕಾಕರ್ತರೂ ಐತಂದರು. ಆಕಾಶ ವಾಣಿಯವರೂ ಸಂದರ್ಶನವನ್ನು ರೆಕಾರ್ಡುಮಾಡಲು ಬಂದರು, ಅಕ್ಕಪಕ್ಕದ ಹಳ್ಳಿಯ ಕೆಲವು ಹಿರಿಯರೂ, ಕಿರಿಯರೂ ಬಂದರು. ಬಂದವರೆಲ್ಲಾ ಶಿಬಿರಾರ್ಥಿಗಳೆಲ್ಲರೊಡನೆ ಬೆರೆತರು. ಅವರಲ್ಲಿ ಹಲವರು ಸಿಹಿತಿನಿಸುಗಳನ್ನು ತಂದರು, ಹಂಚಿ ತಾವೂ ತಿಂದರು. ಶಿಬಿರಾರ್ಥಿಗಳ ಆತಿಥ್ಯವನ್ನೂ ಸ್ವೀಕರಿಸಿದರು. ಹೀಗಾಗಿ ಶಿಬಿರವು ಸದಾ ತುಂಬಿಕೊಂಡಿತ್ತು; ಚಟುವಟಿಕೆಗಳಿಂದ ಪ್ರಫುಲ್ಲಿತವಾಗಿತ್ತು. "ನೀವು ಹೋದಮೇಲೆ ಕೆಲವು ದಿನ ಇಲ್ಲಿ ಹಳಹಳ ಎನಿಸುತ್ತದೆ" ಎಂದು ಗ್ರಾಮದ ಬಾವಿ ಚೆನ್ನಬಸಪ್ಪನವರೂ ಅಂದರು, ಯುವಕ ಮಂಡಲಿಯ ಕಾರ್ಯದರ್ಶಿ ರಾಮಣ್ಣನೂ ಅಂದರು.

ಕಾರ್ಯಕ್ರಮಗಳು ಶಿಬಿರದ ಹೊರಗೂ ಇದ್ದವು, ಒಳಗೂ ಇದ್ದವು. ಎಲ್ಲ ಕಾರ್ಯಕ್ರಮಗಳೂ ಮಹತ್ವದ ಅಂಶಗಳಾಗಿದ್ದವೇನೊ ನಿಜವೆ. ಆದರೆ ರಸ್ತೆಯನ್ನು

ರಿಪೇರಿಮಾಡುವುದು, ಉಪನ್ಯಾಸ ಚರ್ಚಾಗೋಷ್ಠಿಯನ್ನು ನಡೆಸುವುದು ಹೇಳಿಕೊಳ್ಳುವಂಥವುಗಳೇ. ಮೊದಲನೆಯದು ದೈಹಿಕ ಶಕ್ತಿಯ ಸಾರ್ಥಕ ಉಪಯೋಗವಾಗಲಿಕ್ಕೆ ಅವಕಾಶವನ್ನಿತ್ತಿದ್ದರೆ ಎರಡನೆಯದು ಬೌದ್ಧಿಕ ಶಕ್ತಿಯ ಸಂವರ್ಧನೆಗೆ ಎಡೆಮಾಡಿಕೊಟ್ಟಿತ್ತು. ಶಿಬಿರಾರ್ಥಿಗಳೆಲ್ಲರೂ, ಊರಿನವರೂ ಈ ಎರಡರಲ್ಲೂ ಭಾಗವಹಿಸಿದ್ದರೆಂಬುದು ನಿಜವಾದರೂ ಮೊದಲಿನದರಷ್ಟು ಎರಡನೆಯದರಲ್ಲಿ ಭಾಗತೆಗೆದುಕೊಂಡವರು ಕಡಮೆಯೆಂದೇ ಹೇಳಬೇಕು. ವಿಚಾರಗೋಷ್ಠಿಯ ವ್ಯವಸ್ಥೆಗೆ ಹೊಣೆಗಾರನಾಗಿದ್ದ ವಿದ್ಯಾರ್ಥಿ ಸುಧೀರ ಅಲ್ಪಸ್ವಲ್ಪ ಅಸಮಾಧಾನಪಟ್ಟಿರಬೇಕು. ಆದರೆ ಚರ್ಚಾಗೋಷ್ಠಿಯ ಕೊನೆಗೆ ಚಿಕಿತ್ಸಾರ್ಥಿಗಳಲ್ಲಿ ನಾಗರಾಜಪ್ಪ ಹಾಗೂ ಶ್ರೀಕಾಂತ ವಂದನಾರ್ಪಣೆಯನ್ನು ಸಲ್ಲಿಸಿದುದನ್ನು ಕಂಡವರು ಮೂಗಿನ ಮೇಲೆ ಬೆರಳಿಡುವಂತಿತ್ತು. ಹರ್ಷಬಾಷ್ಪ ತುಳುಕುವಂತಿತ್ತು.

ಮನೋರಂಜನೆಯ ಕಾರ್ಯಕ್ರಮ ಅಂದುಕೊಂಡಷ್ಟು ಕ್ರಮಾಗತವಾಗಿ ಆಗದುದಕ್ಕೆ ಅದರ ವ್ಯವಸ್ಥಾಪಕ ವಿದ್ಯಾರ್ಥಿ ಸಿಂಧೆಯದೇನೂ ತಪ್ಪಿಲ್ಲವೆಂದೆಲ್ಲರೂ ಅಭಿಪ್ರಾಯಪಟ್ಟರು. ಸಮಯದ ಅಭಾವವಿದ್ದರೂ ಧಾರವಾಡದಿಂದ ಗೆಳೆಯರ ಗುಂಪೊಂದು ಬಂದು ಕಾರ್ಯಕ್ರಮವಿತ್ತಿತು, ಹುಕ್ಕೇರಿ ಬಾಳಪ್ಪನವರೂ ಬಂದು 'ಹತ್ತು ದಿನದ ಕಾರ್ಯವನ್ನು ಮೂರು ತಾಸಿನಲ್ಲೇ ಮುಗಿಸಿದರು.' ಚಿಕಿತ್ಸಾರ್ಥಿ ಪಾಟೀಲ ಹಾಡು ಕಟ್ಟಿ ಹಾಡಿದರು.

ಅಡುಗೆಯ ಬಗ್ಗೆ ಒಂದೆರಡು ಮಾತು ಅಗತ್ಯ. ವಿದ್ಯಾರ್ಥಿಗಳು ತಾವು ತಂದ ಆಹಾರಧಾನ್ಯಗಳನ್ನೂ ಚಿಕಿತ್ಸಾರ್ಥಿಗಳಿಗೆ ಆಸ್ಪತ್ರೆಯವರು ಕೊಟ್ಟ ಸೀದಾ ಪದಾರ್ಥಗಳನ್ನೂ ಸೇರಿಸಿ ಎಲ್ಲರಿಗೂ ಒಂದೇ ತೆರನ ಅಡುಗೆಯನ್ನು ಏರ್ಪಡಿಸುತ್ತಿದ್ದರು. ಅವರಿವರೆನ್ನುವ ಭೇದವಿನಿತೂ ಇರಲಿಲ್ಲ. ಸಸ್ಯಾಹಾರವನ್ನೇ ತಯಾರಿಸುತ್ತಿದ್ದುದನ್ನು ಕಂಡ ಕೆಲವು ಶಿಬಿರಾರ್ಥಿಗಳ ನಾಲಗೆ ಒಣಗಿದಂತೆನಿಸಿರಬೇಕು. ಕಂಡೂ ಕಾಣದಂತೆ ಕಾಡಲ್ಲಿ ಕುಪ್ಪಳಿಸುವ ಜೀವವೊಂದು ಮೂವರ ನಾಲಗೆಯಲ್ಲಿ ಓಡಾಡಿತು ಎಂದು ತಿಳಿದು ಬಂದಿತು. ಆದರೆ ವ್ಯಾಸರಾಜನ ಬಿಸಿಬೇಳೆ ಭಾತ್ ಒಂದು ಹೊತ್ತಿಗಲ್ಲ ಎರಡು ಹೊತ್ತಿಗಾಗುವಷ್ಟು ಅಕ್ಷಯವಾಗಿದ್ದುದು ಎಲ್ಲರಿಗೂ ಸಂತಸವನ್ನಿತ್ತಿರಬೇಕು. ಉಪ್ಪಿಟ್ಟು, ರೊಟ್ಟಿ, ಚಪಾತಿ, ಅನ್ನ, ಸಾರು, ಚಟ್ನಿಪುಡಿ, ಒಮ್ಮೊಮ್ಮೆ ಉಪ್ಪಿನಕಾಯಿ. ಪಾಯಸ ಅತಿಥಿಗಳು ತಂದ ಸಿಹಿತಿನಿಸುಗಳು. ಇವೆಲ್ಲಾ ಚಿಕಿತ್ಸಾರ್ಥಿಗಳಲ್ಲಿ ಮಹತ್ತರ ಬದಲಾವಣೆಯನ್ನು ಉಂಟು ಮಾಡಿದವೆಂದು ಕಾಣುತ್ತದೆ. ಆಹಾರವನ್ನು ನೀಡುವ ರೀತಿಯೂ ಅವರಿಗೆ ಹಿಡಿಸಿತೆಂದು ಕಾಣುತ್ತದೆ. ಶಿಬಿರದ ಕೊನೆಕೊನೆಗೆ ಅವರೆಲ್ಲರೂ ಶಿಬಿರದ ತಾದಾತ್ಮ್ಯವನ್ನು ಹೊಂದಿದ್ದುದರಲ್ಲಿ ಆಹಾರದ ಪಾತ್ರ ಬಹು ಮಹತ್ವದ್ದೆಂದು ತೋರುತ್ತದೆ. ತನ್ನೊಳಗೇ ಮಾತನಾಡುತ್ತಿದ್ದು, ಯಾರೊಡನೆಯೂ ಬೆರೆತು ಸಂಭಾಷಿಸದೆ. 'ರಿಜರ್ವ' ಇರುತ್ತಿರುವವನಂತೆ ಕಂಡ ಚಿಕಿತ್ಸಾರ್ಥಿ ಅರವಿಂದ ಕೂಡಾ ಒಮ್ಮೆ ಬಡಿಸಿಯಾದ ಮೇಲೆ ಊಟಕ್ಕೆ ಕುಳಿತವರ ಹತ್ತಿರ ಹೋಗಿ "ನಾನು ನಿಮಗೆ ಬಡಿಸಲೇ ?" ಎಂದು

ಕೇಳಿದರು ಎಂದರೆ ಆ ವ್ಯಕ್ತಿಯಲ್ಲಾದ ಮಹತ್ತರ ಬದಲಾವಣೆಯನ್ನು ಯಾರಾದರೂ ಗುರುತಿಸಬಹುದಿತ್ತು.

ಶಿಬಿರ ನಡೆಸುವಲ್ಲಿ ಅನೇಕ ತೊಂದರೆಗಳು ಬಂದೊದಗಿದ್ದರೂ ಸಾಗಣೆಯ ವ್ಯವಸ್ಥೆಯದು ಮಾತ್ರ ಗಮನಿಸುವಂತಹುದಾಗಿತ್ತು. ಮೊದಲ ದಿನ ಒಂದು ಸುತ್ತು ವ್ಯಾನ್ ಕೊಟ್ಟಿತು ವಿಶ್ವವಿದ್ಯಾಲಯ. ಅದರಿಂದ ಕೆಲವು ಸಾಮಾನುಗಳನ್ನು ಸಾಗಿಸಲು ಸಾಧ್ಯವಾಯಿತು. ಆದರೆ ವಿದ್ಯಾರ್ಥಿಗಳನ್ನೂ, ಚಿಕಿತ್ಸಾರ್ಥಿಗಳನ್ನೂ ಸಾಗಿಸುವುದಕ್ಕಾಗಿ ಸ್ಥಳೀಯ ಬಸ್ಸುಗಳನ್ನು ಹಿಡಿಯಬೇಕಾಯಿತು. ಕೊನೆಯ ದಿನ ವ್ಯಾನಿನ ಬದಲು ಕಾರೊಂದು ದೊರೆಯಿತು. ಅದು ಜನರನ್ನಷ್ಟೇ ಸಾಗಿಸಲು ತಕ್ಕದು, ಮೂರು ಸುತ್ತಿಗೂ ಜನರೆಲ್ಲರನ್ನೂ ಸಾಗಿಸಲು ಸಾಧ್ಯವಾಗಲಿಲ್ಲ. ಸಲಕಿನಕೊಪ್ಪದ ಚಕ್ಕಡಿಯನ್ನು ಹೂಡಿ ಸಾಮಾನುಗಳನ್ನು ಸಾಗಿಸಲು ಊರ ಮಲ್ಲಪ್ಪ ಸಾರಥಿಯಾದರು ಎಂದೇ ಸಮಸ್ಯೆ ಪರಿಹಾರಗೊಂಡಿತು. ಜೊತೆಗೆ ಸರಕಾರೀ ಜೀಪೊಂದು ಸಹಕಾರದ ಕೈಚಾಚಿದ್ದುದರಿಂದ ಕೆಲಸ ಹೆಚ್ಚು ಸರಳವಾಯಿತು. ಸಾರಿಗೆಯ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಕಾನಡೆ ಸೋಲದಂತೆ ಇತರರೆಲ್ಲಾ ನೆರವಾದುದು ನೆನೆಸಿಕೊಳ್ಳುವಂತಹುದೇ. ಶಿಬಿರಾರ್ಥಿಗಳೂ, ಅನ್ಯರೂ ಕೂಡಿ ಕೆಲಸ ಮಾಡಿದರೆ ಯಾವ ಸಮಸ್ಯೆಯನ್ನೂ ತಡವಬಹುದು ಎನ್ನಿಸಿತು.

ಶಿಬಿರದ ಸಾಧನೆಗಳು

ಅನೇಕ ದೃಷ್ಟಿಗಳಿಂದ ಈ ಶಿಬಿರವು ವಿಶಿಷ್ಟವಾದುದುದಾಗಿತ್ತು. ಅದು ಸಾಧಿಸಿದ ಗುರಿಗಳಲ್ಲೂ ವಿಶೇಷವನ್ನು ಕಾಣಬಹುದು. ಇರಿಸಿಕೊಂಡ ಗುರಿಗಳಿಗೆ ಮಿಗಿಲಾಗಿ ಸರಪಳಿಯೋಪಾದಿಯಲ್ಲಿ ಇತರ ಗುರಿಗಳನ್ನೂ ಸಾಧಿಸಲಾಯಿತು. ಶಿಬಿರವು ನೀಡಿದ ಫಲಗಳನ್ನು ಬಹು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗುವುದು.

ಶಿಬಿರವು ಇರಿಸಿಕೊಂಡ ಮುಖ್ಯ ಗುರಿಯೆಂದರೆ ಸಮಾಜಕಾರ್ಯ ವಿದ್ಯಾರ್ಥಿಗಳಿಗೆ ಸಾಮೂಹಿಕ ಅನುಭವವನ್ನು ಕಲ್ಪಿಸುವದಾಗಿತ್ತು. ಅದಂತೂ ಅತ್ಯದ್ಭುತವಾಗಿ ನೆರವೇರಿತು ಎಂದೇ ಹೇಳಬೇಕು. ಆಗೀಗ ಲಘುಘರ್ಷಣೆಗಳು ಗುಂಪಿನಲ್ಲಿ ಏಳುತ್ತಿದ್ದುವು, ಕಾರ್ಯಕ್ರಮಗಳಲ್ಲಿ ವ್ಯತ್ಯಾಸವಾಗುತ್ತಿತ್ತು. ಆದರೆ ಶಿಬಿರಾರ್ಥಿಗಳು ಪಡೆಯಬೇಕಾದ ವೃಂದಾನುಭವವು ಬಹು ಪರಿಣಾಮಕರವಾಗಿಯೇ ದೊರಕಿತು. ಇದಕ್ಕಿಂತಲೂ ಹೆಚ್ಚಿನದೆಂದರೆ ಮನೋಚಿಕಿತ್ಸಾರ್ಥಿಗಳು ಗುಣಮುಖರಾದುದು. ಹತ್ತು ಜನರಲ್ಲಿ ಏಳು ಜನರು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿ ಸಮಷ್ಟಿತಿಯ ಬಾಳುವೆಯಲ್ಲಿ ತೊಡಗಲು ಶಕ್ತರಾದುದು ಈ ಶಿಬಿರವು ನೀಡಿದ ಸ್ಮರಣೀಯ ಫಲ. ಹಳ್ಳಿಯ ಹಿತವಾದ ವಾತಾವರಣದಲ್ಲಿ, ಸೌಹಾರ್ದಯುತವಾದ ವೃಂದದಲ್ಲಿ. ಆನಂದಕರವಾದ ಕೆಲಸ. ಕಾರ್ಯಕ್ರಮಗಳ ಮಧ್ಯದಲ್ಲಿ ಅವರು ದೈಹಿಕವಾಗಿಯೂ, ಮಾನಸಿಕವಾಗಿಯೂ ಆರೋಗ್ಯವನ್ನು ಪಡೆದುದು ತಿಳಿದು ಬಂದಿತು. ಉದಾಹರಣೆಗೆ ಅವರ ತೂಕ ೩ ಪೌಂಡಿನಿಂದ ೧೨ ಪೌಂಡಿನವರೆಗೂ ಏರಿ ಶಿಬಿರದ 'ತೂಕ'ವನ್ನು ಹೆಚ್ಚಿಸಿತು. ವಿದ್ಯಾರ್ಥಿಗಳಿಗೆ

ಮನೋ ಚಿಕಿತ್ಸಾರ್ಥಿಗಳನ್ನು ಬಹು ಹತ್ತಿರದಿಂದ ವೀಕ್ಷಿಸುವ ಅವಕಾಶ ಸಿಕ್ಕಿದುದು ಅಂಥವರೊಡನೆ ಹೇಗೆ ಕಾರ್ಯಮಾಡಬೇಕೆಂಬುದು ವಿದ್ಯಾರ್ಥಿಗಳಿಗೆ ದೊರೆತ ಅತ್ಯ-ಮೌಲ್ಯ ಅನುಭವವೆ ಸರಿ.

ಇನ್ನು ಹಳ್ಳಿಯಲ್ಲಿ ಮಹಿಳೆಯರಿಗೆ ರಾತ್ರಿಶಾಲೆಯನ್ನು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯವರ ನೆರವಿನಿಂದ ಆರಂಭಿಸಲಾಯಿತು. ಮಹಿಳೆಯರು ಹಿಂದೆ ಎಂದೆಂದೂ ಮುಂದೆ ಬಾರದಿದ್ದವರು ಈ ಶಿಬಿರದಲ್ಲಿ ಭಾಗವಹಿಸಿದರು. ಅಕ್ಷರಾಭ್ಯಾಸವನ್ನು ಮಾಡಲೂ ಮುಂದೆ ಬಂದರು. ಹಳ್ಳಿಯವನೊಬ್ಬನ ಕಟ್ಟೆಯ ಮೇಲೆ ರಾತ್ರಿಶಾಲೆಯು ಆರಂಭವಾಯಿತು. ಅದೇ ಊರಿಗೆ ವಲಸೆ ಬಂದ ಡಾ॥ ಗೋಪಿನಾಥರ ಪತ್ನಿಯವರು ಉಪಾಧ್ಯಾಯಿನಿಯಾಗಲು ಒಪ್ಪಿಕೊಂಡರು.[೧]

ಸಲಕಿನಕೊಪ್ಪ ಸುಂದರವಾದ ಪ್ರಕೃತಿಯ ಮಡಿಲಲ್ಲಿದ್ದರೂ ಯಾವ ಕಲಾವಿದನ ದೃಷ್ಟಿಯೂ ಅದರ ಮೇಲೆ ಬಿದ್ದಿರಲಿಲ್ಲ. ಈ ಶಿಬಿರದ ದೆಸೆಯಿಂದ ಕಲಾವಿದ ಸುರೇಶ ಕುಲಕರ್ಣಿಯವರ ಕುಂಚದಿಂದ ಆ ಊರಿಗೆ ಒಂದು ಕಳೆಬಂದಿತು. ಆ ಕಲಾವಿದರು ಹಳ್ಳಿಯ ವಿವಿಧ ಭಾಗಗಳನ್ನು ಬಣ್ಣಗಳಿಂದ ಚಿತ್ರಿಸಿದರು. ಅಂತಹ ಅನೇಕ ಚಿತ್ರಗಳ ಸಂಗ್ರಹವನ್ನು ಬಣ್ಣದಲ್ಲಿ ಭಾರತದ ಒಂದು ಹಳ್ಳಿ ಎಂದು ಏಕೆ ಪ್ರಕಟಿಸಬಾರದು ಎಂಬ ಯೋಚನೆಯು ಸುಳಿಯುವಷ್ಟು ಸುಂದರವಾದ ಚಿತ್ರಗಳು ಮೂಡಿ ಬಂದವು.

ಈ ಎಲ್ಲವಕ್ಕಿಂತಲೂ ಆ ಊರಿನವರ ಸಹಕಾರದ ಪರಿಚಯವಾದದು ಒಂದು ದೊಡ್ಡ ಗುರಿಯನ್ನು ಸಾಧಿಸಿದಂತಾಯಿತು. ಅಲ್ಲದೆ ಅಭಿವೃದ್ಧಿಗೆ ಏನು ಸಾಧ್ಯವೋ ಅದನ್ನು ಕೈಕೊಳ್ಳಲು ಅವರು ಸಿದ್ಧವಾಗಿರುವುದನ್ನು ಅವರ ಉತ್ಸಾಹವು ತೋರಿಸುತ್ತಿತ್ತು.

ಹೀಗೆ ಈ ಶಿಬಿರವು ಸಾರ್ಥಕ ಸೇವಾಶಿಬಿರವಾಗಿ ಮಾರ್ಪಟ್ಟಿತು.

★ ಎಚ್. ಎಮ್. ಮರುಳಸಿದ್ದಯ್ಯ.

---

೧. ಮಹಿಳೆಯರು ಓದು ಕಲಿತು ಶಿಫಾರಸು ಪತ್ರ ಪಡೆದರೆಂದೂ, ಆ ಸಂದರ್ಭದಲ್ಲಿ ಫೋಟೋ ತೆಗೆಸಿಕೊಂಡರೆಂದೂ ತಿಳಿದು ಬರುತ್ತದೆ.

ಪ್ರಾಚೀನರಲ್ಲಿ ವಿಷ್ಣುವಿನ ಕಲ್ಪನೆ

ಭರತಭೂಮಿಯನ್ನು ಆರ್ಯರು ಆಕ್ರಮಿಸಿ ಇಲ್ಲಿಯ ನಿವಾಸಿಗಳೊಂದಿಗೆ ಕೊಡು ಕೊಳ್ಳಿಕೆ ನಡೆಸಿದ್ದು ಬಹು ಪ್ರಾಚೀನವೆಂದು ತಿಳಿದವರ ಅಭಿಪ್ರಾಯ. ಕ್ರಿ.ಪೂ. ೧೫೦೦ ರಿಂದ ಕ್ರಿ.ಪೂ. ೧೦೦೦ ದ ವರೆಗೆ ರಚಿತವಾದ (ಬಹುಶಃ) ಋಗ್ವೇದ, ಆರ್ಯಜನಾಂ-ಗದ ಅಂದರೆ ಋಷಿಗಳ ಆರ್ಷೇಯತೆಯನ್ನು ತೋರುವುದರ ಜತೆಗೆ, ನಮಗೆ ಕೆಲವು ಐತಿಹಾಸಿಕ ಘಟನೆಗಳನ್ನು ಒದಗಿಸುತ್ತದೆ. ಆ ಕಾಲದಲ್ಲಿಯ ನಮ್ಮ ದೇವತೆಗಳ ಮೂಲ ಸ್ವರೂಪ ಹೇಗೆ ಉತ್ಪನ್ನವಾಯಿತು ಎಂಬುದರ ಬಗ್ಗೆ ಆಧಾರಗಳೂ ಇಲ್ಲಿ ದೊರೆಯುತ್ತವೆ. ವೇದಗಳಲ್ಲಿ ಇಂದ್ರ ಪ್ರಧಾನ ದೇವತೆಯಾಗಿದ್ದು ಅವನಿಗೆ ಬಲ ನೀಡುವಲ್ಲಿ ವರುಣ, ವಿಷ್ಣು, ಈ ದೇವತೆಗಳು ಸಹಾಯಕರಾದರು, ಎಂಬ ದಂತ ಕಥೆಗಳ ಒಡಲಲ್ಲಿ ವಿಷ್ಣು, ಬರಬರುತ್ತ ಒಂದು ಅತ್ಯಂತ ದಿವ್ಯ ದೇವತೆ ಹೇಗಾದ ಎಂದು ತಿಳಿಯುವದು ನನಗೆ ಕುತೂಹಲವೆನಿಸಿತು. ಈ ಕುತೂಹಲವೇ ನನ್ನ ಈ ಲೇಖನ.

ಪ್ರಾಚೀನ ಭಾರತದಲ್ಲಿ ಆರ್ಯರು, ಆರ್ಯರಲ್ಲದವರ ಮಧ್ಯೆ ಹೊಕ್ಕು ಬಳಕೆ. ರಕ್ತಸಂಬಂಧ, ಭಾಷೆಯಲ್ಲಿ ನಿಕಟ ಸಂಪರ್ಕ, ಹಾಗೂ ಸಾಂಸ್ಕೃತಿಕ ಹೊಂದಾಣಿಕೆಗಳು ನಡೆದುದಕ್ಕೆ ನಮಗೆ ಸಾಕಷ್ಟು ಆಧಾರಗಳು ದೊರೆಯದಿದ್ದರೂ, ಅಲ್ಲಗಳೆಯಲು ಬಾರದಷ್ಟು ಆಧಾರಗಳಿವೆ. "ವಸಿಷ್ಠೋ ವಾಸಿಷ್ಠ ತ್ರಿಪ್ರವರಾನ್ವಿತ. ವಸಿಷ್ಠ ಗೋತ್ರೋತ್ಪನ್ನೋಹಂ, ಗಿರ್ವಾಣೇಶ ಶರ್ಮಾಹಂ' ಎಂದು ಸಂಧ್ಯಾವಂದನೆ ಮುಗಿಸಿದಾಗ ನಾನೊಬ್ಬ ಪ್ರಾಚೀನ ಋಷಿಯ ವಂಶಜ ಎಂಬ ಪ್ರಜ್ಞೆ ಇಂದಿನ ಯುಗದಲ್ಲಿಯೂ ಮೈನವಿರೇಳುವಂತೆ ಮಾಡುತ್ತದೆ. ಈ ಪ್ರಜ್ಞೆ ಇಂದು ಇಳಿಯುತ್ತಿರುವದರಿಂದ ಸಂಸ್ಕೃತಿ ಪ್ರತಿಪಾದಕರು ಸ್ವಲ್ಪ ಎಚ್ಚರಿಕೆಯಿಂದ ಇಂಥ ಜ್ಞಾನ ಪಡೆಯಬೇಕು. ಜ್ಞಾನವೇ ವಿಷ್ಣುವಿನ ಮೂಲ ರೂಪ. ಬುದ್ಧಿ, ಬಲ, ಯಶ, ಧೈರ್ಯ, ನಿರ್ಭಯ, ಆರೋಗತೆ, ಅಜಾಡ್ಯ. ವಾಕ್ಪಟುತ್ವ. ಇವೆಲ್ಲ ವಿಷ್ಣುವಿನ ಪಾದಸೇವಕನಿಗೆ ಲಭ್ಯವಾಗುತ್ತವೆ, ಎಂದು ಒಂದು ಮಂತ್ರ ಹೇಳುತ್ತದೆ. ಅಂದ ಮೇಲೆ ಈ ಮೂಲ ದೇವನ ಜ್ಞಾನ ಎಷ್ಟು ಹೆಚ್ಚಿನದೆಂಬುದು ಪ್ರಸಕ್ತ ವಿಷಯ.

ಋಗ್ವೇದದ ರುದ್ರ, ಆರ್ಯಪೂರ್ವಕಾಲದ ಪಶುಪತಿ ಬರಬರುತ್ತ ದೇವವಾದದಲ್ಲಿ ಅಗ್ರಸ್ಥಾನ ಆಕ್ರಮಿಸಿದರು. ಇದೇ ವೇಳೆಗೆ ವಿಷ್ಣುವಿನ ಬಗ್ಗೆ ಋ.ವೇ. (I.22.20) ದಲ್ಲಿ ವಿಷ್ಣು ಒಂದು ಜನಾಂಗದ ಪ್ರಧಾನ ದೇವತೆಯಾದನೆಂದು ಪಂಡಿತರ ಅಭಿಪ್ರಾಯ. ಈ ದೇವತೆಯ ಆರಾಧಕರೇ ವೈಷ್ಣವರಾದರು.

ಋಗ್ವೇದವಲ್ಲಿ ವಿಷ್ಣುವಿಗೆ ಇದ್ದ ಅಗ್ರ ಸ್ಥಾನ ವೇದಪೂರ್ವ ಕಾಲದಲ್ಲಿ ಇರಲಿಲ್ಲ. ಋ. ವೇ. (I. 155.6) ದಲ್ಲಿ ವಿಷ್ಣುವು ಸೂರ್ಯನ ಅವತಾರವೆಂದು ಪರಿಗಣಿಸಲಾಗಿದೆ. ಅವನನ್ನು "ಶಿಪಿವಿಷ್ಟ" ಅಂದರೆ ಬೆಳಕಿನಿಂದ ಅಥವಾ ಬೆಳಕಿನ ಕಿರಣಗಳ ಹೊದಿಕೆಯುಳ್ಳವ; ಎಂದೂ ಬಣ್ಣಿಸಲಾಗಿದೆ. ಅವನನ್ನು ಬಣ್ಣಿಸಲು ಅಸಾಧ್ಯವಾದ ದೇವತೆ. ಏಕೆಂದರೆ

ತನ್ನ ಕಿರಣಗಳಿಂದ ಪೃಥ್ವಿಯನ್ನೆ ಬೆಳಗಿದ ದೇವ. ಇತ್ಯಾದಿ, ಹೇಳಿಕೆಗಳಿವೆ. ಹೆಚ್ಚೇಕೆ, ಇವನೇ ಸೂರ್ಯನ ಪ್ರತಿನಿಧಿ, ಹಗಲು ರಾತ್ರಿ ಋತುಮಾನಗಳು ಇವನಿಂದಲೇ ಬೆಳಗುತ್ತವೆ ಎಂಬ ಕಲ್ಪನೆಯೂ ಇದೆ. ಶತಪಥ ಬ್ರಾಹ್ಮಣರ ಒಂದು ದಂತಕತೆಯಲ್ಲಿ ವಿಷ್ಣುವಿನ ತಲೆಯನ್ನು ದೇವತೆಗಳು ಚಾತುರ್ಯದಿಂದ ದೇಹದಿಂದ ಬೇರ್ಪಡಿಸಿ ಸೂರ್ಯನನ್ನು ನಿರ್ಮಾಣ ಮಾಡಿದರಂತೆ. ಆಗ ಸೂರ್ಯ "ಆದಿತ್ಯ"ನಾದ. 'ಆದಿತ್ಯ' ಶಬ್ದ ದೇವಮಾತೆ ಅದಿತಿಯಿಂದ ಬಂದುದು ಗಮನಾರ್ಹವಾಗಿದೆ. ನಂತರ ಬಂದ ವಿಷ್ಣುವಿನ ಕಲ್ಪನೆಯಲ್ಲಿ ನಾವು ಸೂರ್ಯನ ಕಲ್ಪನೆಯನ್ನೂ ಕಾಣುತ್ತೇವೆ. "ಉದ್ಯತ್ಕೋಟಿ ದಿವಾಕರ ಪ್ರಭಾ." ಸವಿತೃಮಂಡಲ ಮಧ್ಯವರ್ತೀ, ಈ ಭಾವಗಳನ್ನು ವಿಷ್ಣುವಿನ ಕೈಯಲ್ಲಿಯ ಚಕ್ರವೂ, ಋ.ವೇ.ಕಾಲದಲ್ಲಿ ಸೂರ್ಯ ರೆಕ್ಕೆಯುಳ್ಳ ದೇವತೆಯಾದುದನ್ನು ವಿಷ್ಣುವಿನ ವಾಹನವಾದ ಗರುಡನಿಗೂ ಅನ್ವಯಿಸಿ ನೋಡಬಹುದು. ಋಗ್ವೇದದಲ್ಲಿಯೇ ವಿಷ್ಣು ಸೂರ್ಯರ ಬಗ್ಗೆ ಹೇಳಿಕೆಗಳಿವೆ. ನಂತರದ ಮಂತ್ರಗಳಲ್ಲಿಯೂ ಇದನ್ನು ಗುರುತಿಸಬಹುದು.

ವಿಷ್ಣುವಿನ ಇನ್ನೊಂದು "ಗಗನ ಕಲ್ಪನೆ"ಯೆಂದರೆ ವಿಷ್ಣುಪಾದ. ವೈಷ್ಣವರ ಮನೆ ಮನೆಗಳಲ್ಲಿ ದಿನನಿತ್ಯವೂ ಈ ಪರಮ ಪಾದದ ಪಾದೋದಕ ತೀರ್ಥವೆನಿಸಿಕೊಳ್ಳುತ್ತದೆ. ಬಲಿಯನ್ನು ಮೆಟ್ಟಿದ ವಿಷ್ಣುವಿನ ಮೂರು ಪಾದಗಳ ಕತೆ ಅವನ ವೈಶಾಲ್ಯ, ಸರ್ವ ಸಮರ್ಥತೆಯನ್ನು ಸಮರ್ಥಿಸುತ್ತದೆ. ವಾಮನ(ಪುರಾಣ ಕಲ್ಪನೆಯಲ್ಲಿ ವಿಷ್ಣುವೇ ಇವನು) ನಾಗಿ ಬಲಿಯ ಗರ್ವಹರಣ ಮಾಡಿದ ಕತೆ ತುಂಬ ಕುತೂಹಲಕಾರಿಯಾಗಿದೆ. (ಶ.ಪ.ಬ್ರಾ. I. 22·18) ಈ ಹರಿಪಾದಗಳು ಊರಲ್ಪಟ್ಟಲ್ಲಿ ಧರ್ಮ ಸ್ಥಿರತೆ ಮೂಡುತ್ತದೆ ಎಂದು ಹೇಳಿಕೆ ಇದೆ. ಈ ಮೂರು ಪಾದಗಳು ಎರಡು ಭೂಮಿಗೆ ಸಂಬಂಧಪಟ್ಟವುಗಳು. ಇನ್ನೊಂದು ದಿವ್ಯಪಾದ ಆಕಾಶದಲ್ಲಿ. ಅನಿಮಿಷನೇತ್ರರಿಗೆ ಮಾತ್ರ ಕಾಣುತ್ತದೆ. ಅಥವಾ ಯಾವನ ಚಕ್ಷು 'ದಿವಾ'ದ ಕಡೆಗಿದೆಯೋ ಅವನಿಗೆ ಕಾಣುತ್ತದೆ. ಈ ಮೂರನೆಯ ಪಾದದರ್ಶನ ಅಸಾಧ್ಯವಂತೆ. ಅಲ್ಲಿ ಮರ್ತ್ಯರು ಹೋಗಲಾರರು. ವಿಹಂಗಮಗಳು ಹಾರಲಾರವು ಇತ್ಯಾದಿ. ಈ ಮೂರನೆಯ ಪರಮ ಪಾದ ಸಾಮೀಪ್ಯದಲ್ಲಿ ದೇವತೆಗಳು ಆನಂದಿಸುವರು. ಈ ಭಾವ ಮುಂದೆ ಬೆಳೆದು ಬಂದು ಭೂಮಿಯಿಂದ ಅಗಲಿದವರು, ದಿವಂಗತರಾಗುತ್ತಾರೆಂಬ ನಂಬಿಗೆ, ಹರಿಪಾದ ಸೇರುತ್ತಾರೆಂಬ ಕತೆಗಳು ಹುಟ್ಟಿಕೊಂಡಿವೆ. ಇನ್ನೂ ಮುಂದೆ ಬರಬರುತ್ತ ಪರ್ವತ ಶ್ರೇಣಿಗಳ ತುದಿಗಳಲ್ಲಿ ವಿಷ್ಣು ಪಾದದ ಪವಿತ್ರ ಸ್ಥಳಗಳಲ್ಲಿ ಹೆಚ್ಚಿಗೆ ಕಾಣುತ್ತೇವೆ. ಎತ್ತರ ಸ್ವರ್ಗದ ಸಂಕೇತವಾಗಿರಬಹುದು.

ಯಾಸ್ಕನ ನಿರುಕ್ತದಲ್ಲಿ (XII.19)ವಿಷ್ಣುವಿನ ಮೂರು ಪಾದಗಳು ಸೂರ್ಯನ ಮೂರುಗತಿಗಳಿಗೆ ಸಮ ಎಂದು ಭಾಷ್ಯವಿದೆ. ಉದಯ, ಮಧ್ಯಾಹ್ನ. ಸಂಜೆ, ಈ ಮೂರು ಗತಿಗಳು ವಿಷ್ಣುಪಾದದ ಸಂಕೇತವೆನ್ನುತ್ತಾರೆ. ಇನ್ನೊಬ್ಬ ಪ್ರಾಚೀನ ಭಾಷ್ಯಕಾರನ ಹೇಳಿಕೆಯಂತೆ ಮೂರು ಪಾದಗಳು, ೧. ಅಗ್ನಿ. ೨. ಮಿಂಚು. ೩. ಸೂರ್ಯ ಈ ಮೂರು ಅವತಾರಗಳು. ಹೇಗೆಂದರೆ ಭೂಮಿಯ ಮೇಲೆ ಬೆಂಕಿ. ಹವಾಮಾನದಲ್ಲಿ

ಮಿಂಚು, ಆಕಾಶವಲ್ಲಿ ಸೂರ್ಯ, ತೈತ್ತಿರಿಯ ಸಂಹಿತೆ. ಶ. ಪ. ಬ್ರಾ (I. 9. 3. 9)ದ ವಿವರಣೆಯಲ್ಲಿಯೂ ಸಹ ವಿಷ್ಣು ಇರುವ ಮೂರು ಸ್ಥಾನಗಳೆಂದರೆ ಭೂಮಿ, ಗಾಳಿ, ಮತ್ತು ಬಾನು. ಅಂತೂ ಈ ಪರಮ ಪಾದಗಳ ಕತೆಗೆ ಬೇಕಾದಷ್ಟು ಗ್ರಾಂಥಿಕ ಆಧಾರ ಸಿಕ್ಕುತ್ತದೆ. ದಿನೇಶಚಂದ್ರ ಸರ್ಕಾರ ಅವರು ಸಂಗ್ರಹಿಸಿದ ಬೇಸನಗರದ ಶಿಲಾ ಲೇಖ ವೊಂದರಲ್ಲಿ (ಕ್ರಿ. ಪೂ. ೨ ನೇ ಶತಮಾನ) ಈ ಮೂರು ಪಾದಗಳು ಆತ್ಮ ಸಂಯಮ, ತ್ಯಾಗ, ಜಾಗ್ರತೆಯ ಸಂಕೇತಗಳೆಂದು ತಿಳಿಯಲಾಗಿದೆ. ಈ ಗುಣಗಳೇ ವಿಷ್ಣು ಲೋಕಕ್ಕೆ ಹೋಗುವ ಸಾಧನಗಳೆಂದು ಅರ್ಥಯಿಸಲಾಗಿದೆ.

ಋಗ್ವೇದದಲ್ಲಿ (I. 155.6) ವಿಷ್ಣು ಎಂದರೆ ತರುಣ. ಯುದ್ಧ ಗೆಲ್ಲುವ ಶಕ್ತಿಶಾಲಿ. ಅಜೇಯನೆಂದು ಗೌರವವಿದೆ. ಶಂಬರಾರಿ ಅವನು. ಇಂದ್ರ ಇವನ ಸಹಾಯ ತೆಗೆದುಕೊಳ್ಳುತ್ತಿದ್ದನಂತೆ. ಇಂದ್ರನ ಕ್ರಿಯಾಶೀಲ ಗುಣಗಳೇ ಋಗ್ವೇದದ ಕಾಲಕ್ಕೆ ವಿಷ್ಣುವಿನಲ್ಲಿ ಆರೋಪಿತವಾಗಿ ವಿಷ್ಣುದೇವನ ಉದಯಕ್ಕೆ ಕಾರಣವಾಗಿರಬಹುದು. ಆ ಮೇಲೆ ವಿಷ್ಣುವಿನ ಸ್ಥಾನ ಬೆಳೆಯುತ್ತ ಹೋಗುತ್ತದೆ. ಮುಂದೆ ಪುರಾಣ ಕಲ್ಪನೆ ಯಲ್ಲಿ ಅವನೊಬ್ಬ ದಶಾವತಾರಿ (ಬುದ್ಧನೂ ಸೇರಿ) ಇಂದ್ರ ವೃತ್ರನನ್ನು ಸೋಲಿಸಲು ಅಸುರರನ್ನು ಹೊಡದಟ್ಟಲು ವರುಣ, ವಿಷ್ಣು, ಬೃಹಸ್ಪತಿಗಳ ಸಹಾಯ ಹೊಂದಿದನಂತೆ. ಈ ಕತೆ ವಿಷ್ಣುವಿನ ಅಜೇಯತೆಗೆ ಸಾಕ್ಷಿ.

ಋಗ್ವೇದದ ಕಲ್ಪನೆಯಲ್ಲಿ ವಿಷ್ಣುವು ಯಜ್ಞದೇವತೆ ಈ ಕಲ್ಪನೆ · ವಿಷ್ಣುವು ಇಂದ್ರನ ಸಹಾಯಾರ್ಥವಾಗಿ ತೋರಿದ. ಮೇಲೆ ಉದಾಹರಿಸಿದ ಶೌರ್ಯವೇ ಕಾರಣ ವಾಗಿರಬೇಕು. ನೀತಿಯನ್ನು ಸ್ಥಾಪಿಸುವವನು ವಿಷ್ಣು. ವಿಷ್ಣು ಯಜ್ಞದೇವತೆ ಯೆಂದು ತಿಳಿಯಲು ಅವನನ್ನು ಈ ಕೆಳಗಿನ ಹೆಸರುಗಳಲ್ಲಿ ಕರೆಯಲಾಗಿದೆ. ಯಜ್ಞ. ಯಜ್ಞಾವಯವ, ಯಜ್ಞೇಶ್ವರ, ಯಜ್ಞಪುರುಷ, ಯಜ್ಞಭಾವನ, ಯಜ್ಞವರಾಹ, ಯಜ್ಞಕೃತ್, ಯಜ್ಞತ್ರಾತೃ. ಯಜ್ಞಭೋಕ್ತೃ, ಯಜ್ಞಕೃತು. ಯಜ್ಞವಾಹನ. ಯಜ್ಞ ವೀರ್ಯ ಮುಂತಾದ ಐತರೇಯ ಬ್ರಾಹ್ಮಣದ ಅಭಿಪ್ರಾಯದಲ್ಲಿ ವಿಷ್ಣು ಹಾಗೂ ವರುಣ ದೇವತೆಗಳು ಕ್ರಮವಾಗಿ ಯಜ್ಞ ವಿರೋಧಿಗಳನ್ನು ನಾಶಮಾಡುವ ಹಾಗೂ ರಕ್ಷಿಸುವ ಹೊಣೆಗಾರರಾಗಿದ್ದಾರೆ. ಯಜ್ಞದೇವತೆಯಾದ ವಿಷ್ಣು ಸರ್ವಶ್ರೇಷ್ಠ ದೇವತೆಯೆಂದು ಐತರೇಯ ಬ್ರಾಹ್ಮಣ ತಿಳಿಸುತ್ತದೆ. ಸ್ವರ್ಗದಲ್ಲಿ ಸ್ವೀಕರಿಸುವ ದೇವತೆ ವಿಷ್ಣು ಎಂಬ ಭಾವನೆ ಇಲ್ಲಿ ಬಲವತ್ತರವಾದುದು. ವೈಷ್ಣವರಿಗೆ ಇಲ್ಲಿ 'ಪರಮ' ವಿಷ್ಣು. ವೈಕುಂಠವಾಸಿ.

ವಿಶ್ವಕ್ಕೆಲ್ಲ ಆಹಾರ ಒದಗಿಸುವವ ಭಾಗವತ ವಿಷ್ಣುವೆಂದೂ. ಕಠೋಪನಿಷತ್ತಿನ (III. 9) ಪ್ರಕಾರ ಜೀವಿಗಳು ಬಯಸುವ ಮೋಕ್ಷಪದವನ್ನು ದಯಪಾಲಿಸುವ ಪರಮ ಪದ. ವಿಷ್ಣುವೆಂವೂ ವಿಚಾರಗಳು ಬೆಳೆದು ಬಂದಿವೆ. ವೇದ ಭಾವನೆಯ ಆಧಾರದ ಮೇಲೆ ಸಪ್ತಪದಿ ದಾಟುವಾಗ ವಧುವಿನ ಹರಕೆಯಲ್ಲಿ ವಿಷ್ಣುವು ನಿನ್ನ ಜತೆಗಿರಲಿ ! ಎಂದು ಪ್ರಾರ್ಥಿಸುವಾಗ ವಿಷ್ಣು ಗರ್ಭದಾನ ಮಾಡುವ ಹಾಗೂ ಗರ್ಭವನ್ನು ಬೆಳೆಸುವ ದೇವತೆ ಯಾಗಿದ್ದಾನೆ. (ಗೃಹ್ಯಸೂತ್ರಗಳ ಆಧಾರ.)

ಕೊನೆಯದಾಗಿ ವಿಷ್ಣು ಗೋಪಾಲನಾಗಿದ್ದಾನೆ. ಈ ಗೋಪಭಾವ. ಪಶುಗಳನ್ನು ರಕ್ಷಿಸುವವ ಎಂಬರ್ಥದಲ್ಲಿ ಇದೆ. ಋಗ್ವೇದದಲ್ಲಿ (I.154-6) ಆಕಳು ವಿಷ್ಣುವಿನ ವಾಸಸ್ಥಾನ ಎಂದಿದೆ. ಗೋವಿಂದ ಎಂಬ ವಿಷ್ಣುವಿನ ಇನ್ನೊಂದು ಹೆಸರು 'ಆಕಳು ರಕ್ಷಕ' ಎಂಬರ್ಥದಲ್ಲಿ, ದಾಮೋದರ ಎಂಬ ಹೆಸರು ಉದರಕ್ಕೆ ದಾಮ (ಹಗ್ಗ)ವನ್ನು ಕಟ್ಟಿಕೊಂಡ ಗೋವಳಿಗನ ಚಿತ್ರ ಕಣ್ಣೆದುರು ಬರುತ್ತದೆ. ಇಂಥ ಹೆಸರುಗಳಿಗೆ ತಾತ್ವಿಕ ವಿವರಣೆಗಳನ್ನು ನೀಡುವ ವೈಷ್ಣವರೂ ಇದ್ದಾರೆ.

ವಿಷ್ಣು ಕಪಟಿ, ತಂತ್ರಗಾರ ಎಂಬ ಕತೆಗಳು ಹಲವೆಡೆ ಇವೆ. ಅಸುರರನ್ನು ಸೋಲಿಸಲು ವಿಷ್ಣು ಹೂಡಿದ ತಂತ್ರಗಳೇ ಈ ಹೇಳಿಕೆಗೆ ಹಿನ್ನೆಲೆಯಾಗಿರಬೇಕು. ಅಥವಾ ಇಂಥ ದಂತ ಹೇಳಿಕೆಗಳು ಆರ್ಯವಲ್ಲದ ಜನಾಂಗಗಳಿಂದ ಜನಜನಿತವಾಗಿರಬೇಕು. ಅಂತೂ ವಿಷ್ಣು ವೇದಕಾಲದಿಂದ ಮುಂದೆ ಪ್ರಧಾನ ಆರ್ಯದೇವತೆಯಾಗಿ ಭಾರತ ಭೂಮಿಯಲ್ಲಿ ಇಂದಿಗೂ ಬೆಳಗುತ್ತಿರುವ ದೇವತೆ. ಇಲ್ಲಿಯ ವರೆಗೆ ವಿವರಿಸಲಾದ ಅವನ ಬಗ್ಗೆ ವಿವಿಧ ಕತೆ. ವಿವರಣೆಗಳಲ್ಲಿ ಅವನ ಹಿರಿಮೆ ಎದ್ದು ತೋರುತ್ತದೆ. ವೈಷ್ಣವರು ಗಾಯತ್ರಿ ಮಂತ್ರ ಹೇಳಿದಾಗ ಪವಿತ್ರಮಂಡಲಕ್ಕೆ ಪ್ರಾರ್ಥನೆ ಸಲ್ಲಿಸಿ "ಧಿಯೋ ಯೋನಃ ಪ್ರಚೋದಯಾತ್" ಎಂದಾಗ ಮನಸ್ಸು ಜಾಗೃತವಾಗುತ್ತದೆ. ಈ ಜಾಗೃತಿಯ ದೇವತೆಯೇ ನಾವು ಆರಾಧಿಸಬೇಕಾದ ವಿಷ್ಣು.

★ **ಎಚ್. ಎ. ಕುಲಕರ್ಣಿ**

ಆಧಾರ ಗ್ರಂಥಗಳು

1) The Cultural Heritage of India
Vol. VI. The Religions

2) A Study of Vaisnavism
in Ancient and Medieval Bengal
—*Dr. S. C. Mukherji*

ಯಾರವನು ?

ನನ್ನ ಪಾಡಿಗೆ ನಾನು ಹಾದಿಯಲ್ಲಿದ್ದೆ—
ಎಂದೂ ನೋಡದ ವ್ಯಕ್ತಿ ಎದುರಾದ
ಎಲ್ಲೂ ಕೇಳಿರದ ವ್ಯಕ್ತಿ ನಿಂತು ಮಾತಾಡಿಸಿದ;
ಎಲ್ಲಾ ಆರೋಗ್ಯವೇ ? ಹೇಗಿದ್ದಾರೆ ಅವರು ? ಚೆನ್ನಾಗಿದ್ದಾರಾ ಇವರು?
ಎಲ್ಲಿಗೆ ಬಂತು ಇದು ? ಮುಗಿಯಿತಾ ಅದು ? ಏನೇನೋ ಕುಶಲಿಸಿದ.
ನನ್ನ ಪಾಡಿಗೆ ನಾನು ತೆಪ್ಪಗೆ ನಿಂತೆ – ಸುಮ್ಮನೆ
ಓಹೋ ಇಷ್ಟು ಬೇಗ ಮರೆತು ಬಿಟ್ಟಿರಾ ನನ್ನ ?
ಅವರ ಗೆಳೆಯರು ನೀವಲ್ಲವೇ ? ಇಂಥವರ ಬಂಧು ನೀವಲ್ಲವೇ ?
ಯಾರ್‍ಯಾರದೋ ಗೊತ್ತಿಲ್ಲದವರಿವರ ಹೆಸರ ಪಟ್ಟಿ ಮಾಡಿ ಒಪ್ಪಿಸಿದ
ಮಗ್ಗಿ ಹೇಳುವ ಹಾಗೆ—ಅವರೆಲ್ಲಿ ? ಇವರು ಏನು ಮಾಡುತ್ತಿದ್ದಾರೆ ?
ನೀವೇನು ಇಲ್ಲಿ ? ಇವರು ಲುಕ್ಸಾನು ಕಂಡರೆ ?
ಎಲ್ಲಿಗೆ ಹೊರಟಿರಿ ಈ ಕಡೆ ? ಈಗ ಅದನ್ನು ಕೈ ಹಾಕಬೇಡಿ
ಸ್ವಲ್ಪ ತಡೆದು ನೋಡಿ— ನನ್ನ ಮಾತಾಡಲಿಕ್ಕವಕಾಶ ಕೊಡದೆ
ಕೊರೆದ, ಹತ್ತಾರು ವಿಷಯ ಒತ್ತಿ ಗೊಂದಲ ಬಿತ್ತಿ—
ನಾನು ಕೇಳಿದೆ ಅಂತ ಹೇಳಿ ನಿಮ್ಮ ಇವರಿಗೆ; ಅಲ್ಲೇ ಇರುತ್ತೀನಿ
ಕಾಗದ ಬರೆಯಲಿಕ್ಕೆ ಜ್ಞಾಪಿಸಿ—ನಾನು ಬರಲಾ ಇನ್ನ ?
ಎಂದು ಹೋಗುವ ಮುನ್ನ ಸಂಶಯದ ಸ್ವಪ್ನ ಬೆಳಸಿ
ನಕ್ಕು ಹೋಗಿಯೇ ಬಿಟ್ಟ ಮರೆಯಾಗಿ,
ಆ ಅಪರಿಚಿತ ಪರಿಚಿತ ಹೊರೆಯಾಗಿ ಭಾರವಾಗಿ.....

ಕೆಣಕುತ್ತೆ ಆ ನೆನಪು; ಆ ನಗೆ ಬಿಡಿಸಲಾಗದ ಒಡಪು
ಬಗೆ ಬಗೆ ಆ ಮಾತಿನ ಬಿಡಿ ಬಿಡಿ ಪದದ ಬಿಗಿ—ಹೊಗೆಯಾಗಿ
ಸುತ್ತಿಕೊಳ್ಳ ಬಂದ ಹೋದಲ್ಲೆಲ್ಲಾ.....ಕಣ್ಣಲ್ಲಿ ಎದರು ಬದರು
ಕಣ್ಣಿಟ್ಟ ಭೂತವಾಗಿ ಕೂತ ನಿಂತ ಮಲಗಿದಲ್ಲೂ ಬಿಡದೆ ಕಾಡಿದ
ತೆರೆ ತೆರೆಯಾಗಿ ಬರುತ್ತೆ ಮುತ್ತತ್ತೆ ಆ ಮಾತು ಕತೆ ಘೋರ್ಗರೆಯುತ್ತೆ

ಮತ್ತೆ ಮತ್ತೆ; ಸಧ್ಯ ಆ ವ್ಯಕ್ತಿ ಮತ್ತೊಮ್ಮೆ ಸಿಕ್ಕಬಾರದೆ?
ಹುಡುಕುತ್ತಿದ್ದೇನೆ ಆ ಹೊತ್ತಿನಿಂದ ಈ ಹೊತ್ತಿನ ತನಕ
ಸಿಗಲಿಲ್ಲ ವಿಚಾರಿಸಿಕೊಳ್ಳಲಿಲ್ಲ—ಎದೆ ತಳ್ಳಂಕ ಬಗೆಹರಿಯಲಿಲ್ಲ
ಸುಮ್ಮನಾಗಲಾರೆ ನಾನು; ಬಿಡದು ಅಂಟಿಕೊಂಡ ಬಲವಾದ ಅವಿವೇಕ

ಅಕ್ಕ ಪಕ್ಕ ನಿಂತು ಮಾತಾಡಿದ ಆ ಕುರುಡುಗಲ್ಲಿಯ ಬಾಗು ತಿರುವು
ಮರೆಯುತ್ತಿಲ್ಲ; ಚಿನ್ನ ಬೆಳ್ಳಿಯಂತೆ ಹೊಳೆದ ನೋಟ – ನಗೆ
ಮರೆಯುವುದಿಲ್ಲ – ಯಾವಾಗಲಾದರೂ ಭೆಟ್ಟಿಯಾಗಬಾರದೆ ಆ ಪ್ರಾಣಿ?

ಇಷ್ಟಕ್ಕೂ ಆತ ಯಾರು? ಯಾರ ಸ್ನೇಹಿತ? ನನಗೇಕೆ ಏನೇನೊ ಹೇಳಿದ?
ಅವನು ಹೇಳಿದ್ದಕ್ಕೆಲ್ಲಾ ಆಗ 'ಹೂಂ' ಗುಟ್ಟಿದ್ದೇನೇಕೆ?
ಏನನ್ನೂ ಕೊಂಚವೂ ಪ್ರಶ್ನಿಸಲಿಲ್ಲವೇಕೆ?
ಹೋಗಲಿ ಮರೆತು ತೆಪ್ಪಗಿರಲಾಗಲಿಲ್ಲವೇಕೆ?

ಈ ಆಕಸ್ಮಿಕಕ್ಕೇಕೆ ಇಷ್ಟೊಂದು ಒತ್ತಡ! ತಲೆ-ಬುಡವೆಲ್ಲಾ
ಬಿಸಿಯೇರಿಸಿ ಹೋದನೇ ಅವನು? ಸುಮ್ಮನಿರಲಾರೆ ನಾನು.....
..."neither be ignored... nor accepted"...

★ ದೊಡ್ಡರಂಗೇಗೌಡ

ಆದಿಪುರಾಣ ಮತ್ತು ಪ್ರಭುಲಿಂಗಲೀಲೆ

ಆದಿಪುರಾಣ ಜಿನಕವಿ ಪಂಪನ ಕೃತಿ ; ಪ್ರಭುಲಿಂಗಲೀಲೆ ಶಿವಕವಿ ಚಾಮರಸನ ಕೃತಿ. ಇವುಗಳಿಗೆ ಆಧಾರವಾದುವು ಜಿನಸೇನಾಚಾರ್ಯರ ಪೂರ್ವಪುರಾಣ, ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ.[೧] ಈ ಅರ್ಥದಲ್ಲಿ ಆದಿಪುರಾಣ ಕನ್ನಡದ ಪೂರ್ವಪುರಾಣ, ಪ್ರಭುಲಿಂಗಲೀಲೆ ಕನ್ನಡದ ಪದ್ಯಶೂನ್ಯಸಂಪಾದನೆಯೆನಿಸಿ-ಕೊಳ್ಳುತ್ತದೆ.

ಕಾವ್ಯಧರ್ಮ ದೃಷ್ಟಿಯಿಂದ ಜೈನಪುರಾಣಗಳಲ್ಲಿ ಆದಿಪುರಾಣ, ವೀರಶೈವ ಪುರಾಣಗಳಲ್ಲಿ[೨] ಪ್ರಭುಲಿಂಗಲೀಲೆ ಉಜ್ವಲಕೃತಿಗಳೆಂಬುದು ನಿಸ್ಸಂದೇಹ. ಅಲ್ಲಿ ಆದಿ ತೀರ್ಥಂಕರನ ಚರಿತ್ರೆ ಮತ್ತು ಜಿನಧರ್ಮಗಳ ನಿರೂಪಣೆಗಳಿದ್ದರೆ ಇಲ್ಲಿ ಅಲ್ಲಮ ಪ್ರಭುವಿನ ಚರಿತ್ರೆ ಮತ್ತು "ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗ"ವಾದ ವೀರಶೈವ ಧರ್ಮಗಳ ನಿರೂಪಣೆಯಿದೆ. ಮೇಲಾಗಿ "ನೆಗಬ್ದಾದಿ ಪುರಾಣದೊಳಱಿವುದು ಕಾವ್ಯಧರ್ಮಮುಂ ಧರ್ಮಮುಮಂ" ಎಂದು ಪಂಪನಂತೆ ಬಾಯಿಬಿಟ್ಟು ಹೇಳದಿದ್ದರೂ ಪ್ರಭುಲಿಂಗ ಲೀಲೆಯಲ್ಲಿ ಈ ಉಭಯ ಧೋರಣೆಗಳ ನಿಲವು ನಿಚ್ಚಳವಾಗಿ ನೆಲೆನಿಂತಿದೆ. ಆದುದರಿಂದ ಈ ಎರಡೂ ಕಾವ್ಯಗಳನ್ನು 'ಕಾವ್ಯಧರ್ಮ' 'ಧರ್ಮ' ದೃಷ್ಟಿಯಿಂದ ತೂಗಿನೋಡಿ ಬೆಲೆಕಟ್ಟುವುದು ಅವಶ್ಯವೂ ಸೂಕ್ತವೂ ಆಗಿದೆ.

ಆದಿಪುರಾಣದ ನಾಯಕವ್ಯಕ್ತಿ ಆದಿನಾಥ, ಪ್ರಭುಲಿಂಗಲೀಲೆಯ ನಾಯಕವ್ಯಕ್ತಿ ಪ್ರಭುದೇವ. ಇವರು ಜೈನ, ವೀರಶೈವ ಮತಗಳಲ್ಲಿ ಅಗ್ರವಂದ್ಯರು. ಜನ್ಮತಃ ಮರ್ತ್ಯ ವ್ಯಕ್ತಿಗಳಾದ ಇವರು ಸಾಧನೆಯಿಂದ ಮಹಾತ್ಮಪದವಿಗೇರಿದವರು. ಭೋಗದಿಂದ ಯೋಗಕ್ಕೆ ತಿರುಗಿದವರು. ಆದಿಪುರಾಣದಲ್ಲಿ ಈ ಭೋಗ–ಯೋಗಗಳ ಎರಡೂ ಚಿತ್ರಗಳಿದ್ದರೆ, ಪ್ರಭುಲಿಂಗಲೀಲೆಯಲ್ಲಿ ಭೋಗವನ್ನು ಬಿಟ್ಟು ಯೋಗವನ್ನು ಮಾತ್ರ ಚಿತ್ರಿಸಲಾಗಿದೆ.[೨] ಈ ಭೋಗ–ಯೋಗಗಳ ಮಧ್ಯ ಒಂದು ನರ್ತನ ಪ್ರಸಂಗ ಉಭಯಕಾವ್ಯಗಳಲ್ಲಿ ಬರುತ್ತದೆ. ಅಲ್ಲಿ ನೀಲಾಂಜನೆಯ ನೃತ್ಯದಿಂದ ಪುರುಪರಮೇಶ್ವರ ಭೋಗದಿಂದ ಯೋಗಕ್ಕೆ ತಿರುಗಿದರೆ, ಇಲ್ಲಿ ಮಾಯಾ ದೇವಿಯ ನೃತ್ಯದಿಂದ ಪ್ರಭುದೇವ ಯೋಗದಿಂದ ಭೋಗಕ್ಕೆ ತಿರುಗಲಿಲ್ಲ. ಈ ಸಂದರ್ಭ ಎರಡೂ ಕೃತಿಗಳಲ್ಲಿ ಮುಖ್ಯ ಸನ್ನಿವೇಶವೆಂ–

---

೧. ಹೀಗೆ ಭಾವಿಸುವುದು ಸೂಕ್ತವೆಂದು ತೋರುತ್ತದೆ. ಬಹುಜನ ವಿದ್ವಾಂಸರು ಒಪ್ಪಬಹುದಾದ ಅಂಶವಿದು.

೨. ವೀರಶೈವ ಪುರಾಣದ ಲಕ್ಷಣಗಳು ಎಲ್ಲಿಯೂ ಉಕ್ತವಾಗಿಲ್ಲ. ಶಿವ ಮತ್ತು ಶಿವಶರಣ ಕಥೆಗಳನ್ನು ಇವರು ಪುರಾಣಗಳೆಂದು ಮನ್ನಿಸುವ ಕಾರಣ ಪ್ರಭುಲಿಂಗಲೀಲೆಯನ್ನು ಪುರಾಣವೆಂದು ಕರೆಯಬಹುದು.

೩. ಪ್ರಭುದೇವ ಜನ್ಮತಃ ಯೋಗಿಯೆನ್ನುವುದಕ್ಕಿಂತ, ಭೋಗದಿಂದ ಯೋಗಕ್ಕೆ ತಿರುಗಿದ ವೈರಾಗ್ಯಮೂರ್ತಿಯೆಂದು ಭಾವಿಸುವುದು ಹೆಚ್ಚು ಸಮಂಜಸ. ಪ್ರಭುದೇವರ ರಗಳೆಯಲ್ಲಿ ಈ ದೃಷ್ಟಿಯ ನಿರೂಪಣೆಯನ್ನು ಗಮನಿಸಬೇಕು.

ಬಹುದು ಗಮನಿಸಬೇಕಾದ ಅಂಶ. ಅಲ್ಲಿ ಭರತನ ಕೈಗೊಂಡ ಗರ್ವರಸ ಸೋರುವುದು, ಇಲ್ಲಿ ಸಿದ್ಧರಾಮ ಗೋರಕ್ಷರು ಗಳಿತಗರ್ವರಾಗುವುದು. ಅಲ್ಲಿ ಶ್ರೀಮತಿ ವಜ್ರಜಂಘರನ್ನು ಕೂಡಿಸಲು ಪಂಡಿತೆಯೆಂಬ ದಾದಿ ಇಲ್ಲಿ ಮಾಯಾದೇವಿ ಪ್ರಭುವನ್ನು ಕೂಡಿಸಲು ಮದಯಾನಿಯೆಂಬ ಕೆಳದಿ ನೆರವು ನೀಡುವುದು. ಅಲ್ಲಿ ಪ್ರಿಯತಮ ಲಲಿತಾಂಗನ ಮರಣಕ್ಕೆ ಸ್ವಯಂಪ್ರಭೆ, ಇಲ್ಲಿ ಪ್ರಿಯ ಸೋದರ ಅಜಗಣ್ಣನ ಮರಣಕ್ಕೆ ಮುಕ್ತಾಯಿ ರೋದಿಸುವದು – ಇತ್ಯಾದಿ ಸಣ್ಣದೊಡ್ಡ ಪ್ರಸಂಗಗಳಲ್ಲಿ ತಕ್ಕ ಮಟ್ಟಿನ ಸಾಮ್ಯವಿದೆ.

ಆದಿಪುರಾಣದಲ್ಲಿ ಆದಿನಾಥನ ಕಥೆಯೊಂದಿಗೆ ಭವಾವಳಿಯ ಕಥೆ ಮತ್ತು ಬೇರೆ ಉಪಕಥೆಗಳೂ, ಪ್ರಭುಲಿಂಗಲೀಲೆಯಲ್ಲಿ ಪ್ರಭುವಿನ ಎಡ ಬಲಕ್ಕೆ ಬರಬೇಕಾದ ಮಾಯೆ, ಮಹಾದೇವಿಯರ ಕಥೆಗಳೊಂದಿಗೆ ಬಸವ, ಸಿದ್ಧರಾಮ, ಮುಕ್ತಾಯಿ, ಮರುಳಶಂಕರ ದೇವ ಮೊದಲಾದವರ ಉಪಕಥೆಗಳೂ ಬಂದಿವೆ. ಆದಿಪುರಾಣದಲ್ಲಿ ಪೂರ್ವ ಭವಾಳಿಯದು ಒಂದು ಭಾಗ. ತೀರ್ಥಂಕರ ಭವದ್ದು ಇನ್ನೊಂದು ಭಾಗ.[೪] ಇದೇ ರೀತಿ ಪ್ರಭುಲಿಂಗಲೀಲೆಯಲ್ಲಿ ಮಾಯಾಕೋಲಾಹಲ ಪ್ರಸಂಗದ ಮೊದಲಿನ ಏಳು ಗತಿಗಳು ಒಂದು ಭಾಗ. ಮುಂದಿನ ಬಸವಾದಿ ಪ್ರಮಥರೋದ್ಧಾರದ ಗತಿಗಳು ಇನ್ನೊಂದು ಭಾಗ. ಆದರೆ ಅಲ್ಲಿ ಖಂಡಕಥೆಗಳು ಪೂರ್ವಭಾಗದಲ್ಲಿ ಅಖಂಡಕಥೆಗಳು ಉತ್ತರಭಾಗದಲ್ಲಿ ಬಂದರೆ, ಇಲ್ಲಿ ಅಖಂಡಕಥೆ ಪೂರ್ವಭಾಗದಲ್ಲಿ ಖಂಡಕಥೆಗಳು ಉತ್ತರಭಾಗದಲ್ಲಿ ಬಂದಿವೆ. ಇಷ್ಟು ಸಾಮ್ಯದ ಹಿನ್ನೆಲೆಯಲ್ಲಿ ಈ ಉಭಯ ಕೃತಿಗಳಲ್ಲಿ ಒಡಮೂಡಿದ ಧರ್ಮ ಮತ್ತು ಕಾವ್ಯಧರ್ಮಗಳನ್ನು ಪರಿಶೀಲಿಸುವದು.

ಧರ್ಮ ನಿರೂಪಣೆ ಎರಡೂ ಕೃತಿಗಳಲ್ಲಿ ಪ್ರಧಾನ ಪಾತ್ರವಹಿಸಿದೆ. ಇಬ್ಬರೂ ಪರಮಭಕ್ತ, ನಿಸ್ಸೀಮನಿಷ್ಠೆಗಳಿಂದ ಈ ಕಾರ್ಯವನ್ನು ಪೂರೈಸಿದ್ದಾರೆ. ಆದರೆ 'ಸಂಸಾರ ಸಾರೋದಯ'ನಾದ ಪಂಪನೊಬ್ಬ ಉದಾತ್ತ ಗೃಹಸ್ಥ; 'ವೀರಶೈವ ಮತ ಸಾರೋದ್ಧಾರ'ನಾದ ಚಾಮರಸನೊಬ್ಬ ಮಹಾವಿರಕ್ತ. ಒಬ್ಬನಿಗೆ ಲೌಕಿಕ ಮೊದಲು, ಪಾರಮಾರ್ಥ ಆಮೇಲೆ. ಇನ್ನೊಬ್ಬನಿಗೆ ಪಾರಮಾರ್ಥ ಮೊದಲು ಲೌಕಿಕ ಆಮೇಲೆ. ಹೀಗಾಗಿ ಪಂಪನ ಧರ್ಮ ಅಭ್ಯಾಸದ ನಿರೂಪಣೆಯೆನಿಸಿದರೆ, ಚಾಮರಸನದು ಅನುಭವದ ಅಭಿವ್ಯಕ್ತಿಯೆನಿಸುತ್ತದೆ. ಪಂಪನದು ಶಾಸ್ತ್ರವೆನಿಸಿದರೆ ಚಾಮರಸನದು ದರ್ಶನವೆನಿಸುತ್ತದೆ.

ಇಷ್ಟಲಿಂಗದ ಗತಿ, ಸಾಧಕಾಂಗದ ಗತಿ, ಮುನಿಗಳಿಗೆ ಬೋಧಿಸಿದ ಗತಿ, ಮನೋಲಯದ ಗತಿಗಳ ಮೂಲಕ ನೇರವಾಗಿ, ಮರುಳಶಂಕರದೇವರ ಗತಿ (ಪ್ರಸಾದ ತತ್ವ), ಮಹಾದೇವಿಯಕ್ಕನ ಗತಿ (ಶರಣಸತಿ ಲಿಂಗಪತಿ ತತ್ವ) ಇತ್ಯಾದಿಗಳ ಮೂಲಕ ವ್ಯಂಜಕವಾಗಿ, ಮಿಕ್ಕಗತಿಗಳಲ್ಲಿ ಆನುಷಂಗಿಕವಾಗಿ ವಿವರಿಸುತ್ತ, ಕಾವ್ಯಪಥದಲ್ಲಿ

---

೪. "ತೀರ್ಥಂಕರಭವ"ದ ಭಾಗವನ್ನು ತೀರ್ಥಂಕರನ ಕಥೆ, ಚಕ್ರವರ್ತಿಯ ಕಥೆ ಎಂದು ಮತ್ತೆ ಭಾಗಿಸಬಹುದು.

ತತ್ತ್ವರಥವನ್ನು ಮುನ್ನಡೆಸಿದ್ದಾನೆ ಚಾಮರಸ. ಪಂಪನೂ ಧರ್ಮ ಕಾವ್ಯಧರ್ಮಗಳನ್ನು ಹೀಗೆಯೇ ಮೇಳಗೊಳಿಸಲು ಪ್ರಯತ್ನಿಸಿದ್ದಾನೆ. ಪೂರ್ವ ಭವಾವಳಿ, ಪಂಚಕಲ್ಯಾಣ, ಚಕ್ರವರ್ತಿಕಥನ ಮೊದಲಾದ ಜೈನಪುರಾಣದ ಪರಿಕರಗಳೂ ಲೋಕಸ್ವರೂಪ, ಚತುರ್ಗತಿ, ರತ್ನತ್ರಯ ಮೊದಲಾದ ಜೈನಧರ್ಮ ಪ್ರಕ್ರಿಯೆಗಳೂ ನೇರವಾಗಿ ಧುಮುಕಿ ತಮ್ಮ ಅಧಿಕಾರವನ್ನು ನಡೆಸಿವೆ. ಇದಲ್ಲದೆ ಮಹಾಬಲನೆಂಬ ವಿದ್ಯಾಧರರಾಜನಿಗೆ ಆತನ ನಾಲ್ವರು ಮಂತ್ರಿಗಳಲ್ಲಿ ಮಹಾಮತಿ, ಸಂಭಿನ್ನ ಮತ್ತು ಶತಮತಿಗಳು ಕ್ರಮವಾಗಿ ಬೋಧಿಸಿದ ಚಾರ್ವಾಕ, ಯೋಗಾಚಾರ ಮತ್ತು ಮಾಧ್ಯಮಿಕ ಮತಗಳನ್ನು ಇನ್ನೊಬ್ಬ ಮಂತ್ರಿ ಸ್ವಯಂಬುದ್ಧನು ಸಾಧಾರವಾಗಿ ಖಂಡಿಸಿ "ಬಲ್ವಿಡಿವಿಡಿದು ಶರಣ್ಬುಗು ಜಿನೇಂದ್ರಪದ ಸರಸಿಜಮಂ" ಎಂದು ಜೈನಪರವಾಗಿ ವಾದಿಸುತ್ತಾನೆ.

ಸ್ವರ್ಗಸುಖವನ್ನೂ ಸ್ವಯಂಪ್ರಭೆಯನ್ನೂ ಬಿಟ್ಟು ಸಾಯಲು ಗೋಗರೆವ ಲಲಿತಾಂಗನಿಗೆ ಸಾಮಾನಿಕ ದೇವತೆಗಳು ಜಿನತತ್ತ್ವದ ಮಹತಿಯನ್ನು ಚಿತ್ರಿಸುತ್ತಾರೆ. ಹೀಗೆ ಎರಡೂ ಕಾವ್ಯಗಳಲ್ಲಿ ಧರ್ಮ ಪ್ರಮುಖ ಅಂಶವಾಗಿ ಅವಶ್ಯವೆನಿಸಿದಷ್ಟೂ ಸಮರ್ಪಕವಾಗಿ ಹರಿದುಬಂದಿದೆ. ಆದರೆ ಪಂಪನು ಕೆಲವೊಮ್ಮೆ ಶಾಸ್ತ್ರಕಾರನಾಗಿ ಶುಷ್ಕ ವಿವರಣೆ ನೀಡಿರುವನೇ ಹೊರತು ಚಾಮರಸನಂತೆ ಆತ್ಮೀಯ ನಿರೂಪಣೆಯನ್ನು ನೀಡಿಲ್ಲ. ಅಲ್ಲಲ್ಲಿ ಭಿತ್ತಿ ಚಿತ್ರಗಳನ್ನು ಬಿಡಿಸಿರುವನೇ ಹೊರತು ಚಾಮರಸನಂತೆ ಬಯಲು ಚಿತ್ರಗಳನ್ನು ಬಿಡಿಸಿಲ್ಲ. ಹೀಗಾಗಿ ಉದ್ದಗಲ ಬೇಕಾದಷ್ಟು ವಿಹರಿಸಬಲ್ಲ ಪಂಪ, ಚಾಮರಸನಂತೆ ಆಳಕ್ಕೆ ಇಳಿದು ಗುಹೇಶ್ವರನ ದರ್ಶನ ಮಾಡಿಸಲಾರ ಎನಿಸುತ್ತದೆ.

ಕಾವ್ಯಧರ್ಮವೆನ್ನುವುದು ಕವಿತ್ವದ ಪರಿಪೂರ್ಣ ಮತ್ತು ಪರಿಪಕ್ವ ಸ್ಥಿತಿ. ಇದು ಪಂಪನಲ್ಲಿ ಪರಮಾವಧಿ ಮುಟ್ಟಿದಲ್ಲಿದ್ದುದಕ್ಕೆ, ನಾಗಚಂದ್ರನ 'ಅಭಿನವ ಪಂಪ' ಯೆಂಬ ಕಾವ್ಯನಾಮ ಸಾಕ್ಷಿ, ಆ ಕಾಲದ ಜನತೆ ಪಂಪನ ಕಾವ್ಯಧರ್ಮಕ್ಕೆ ತೋರಿಸುತ್ತಿದ್ದ ಮರ್ಯಾದೆಯ ದ್ಯೋತಕ. ವಿಕ್ರಮಾರ್ಜುನವಿಜಯದಲ್ಲಿ ಉಜ್ವಲವಾಗಿರುವ ಪಂಪನ ಈ ಕಾವ್ಯಧರ್ಮ, ಧರ್ಮದ ಅತಿಶಯತೆಯಿಂದಾಗಿ ಆದಿಪುರಾಣದಲ್ಲಿ ಕೆಲ ಮಟ್ಟಿಗೆ ಚ್ಯುತಿಗೊಂಡಿದೆ. "ಪೌರಾಣಿಕ ಆವರಣ. ಕಥೆಯ ಪರಿಮಿತಿ, ಮತಪ್ರಕ್ರಿಯೆಗಳ ಗೊಂದಲ, ಸಂಪ್ರದಾಯದ ಕಟ್ಟು, ಪಾಂಡಿತ್ಯದ ಠೀವಿ ಎಲ್ಲ ಸೇರಿ ಪಂಪನ ಅದ್ವಿತೀಯವಾದ ಕವಿತಾಶಕ್ತಿ ಉಕ್ಕಿ ಹರಿಯಲು ಇಲ್ಲಿ ಅವಕಾಶವಿಲ್ಲವಾಗಿದೆ. ತಡೆಯಿಲ್ಲದೆ ಭೋರ್ಗರೆದು ಹರಿಯುವ ಮಹಾನದಿ ಇಕ್ಕಟ್ಟಿನ ನಾಲೆಯಲ್ಲಿ ಸಿಕ್ಕಿ ಮುಂದುವರಿಯದಂತಾಗಿದೆ" ಎಂಬ ಶ್ರೀ ಎಲ್. ಗುಂಡಪ್ಪನವರ ಮಾತನ್ನು ಎಲ್ಲ ವಿಮರ್ಶಕರೂ ಒಪ್ಪಬಹುದಾಗಿದೆ. ಹೀಗಿದ್ದರೂ ಲಲಿತಾಂಗ – ಸ್ವಯಂಪ್ರಭೆ, ವಜ್ರಜಂಘ-ಶ್ರೀಮತಿಯರ ಪ್ರಣಯದ ರಮ್ಯತೆ, ತೀರ್ಥಂಕರನ ಜನ್ಮೋತ್ಸವದ ಭವ್ಯತೆ, ನೀಲಾಂಜಿಕೆಯ ನೃತ್ಯದ ಮೋಹಕತೆ, ಭರತ ಬಾಹುಬಲಿಗಳ ಲೌಕಿಕ ಸೋದರತೆ ಇವು ಪಂಪನ ಕಾವ್ಯಧರ್ಮಕ್ಕೆ ನಿದರ್ಶನಗಳೆನಿಸಿ ನಿಂತಿವೆ. ಇಲ್ಲಿ ಮಾತ್ರ ಪಂಪನು ಕಾವ್ಯವನ್ನು ಅನುಭವಿಸಿ ಬರೆದಿರುವನು. ಮಿಕ್ಕುದೆಲ್ಲ ಧರ್ಮನಿರೂಪಣೆ, ಜಿನಸೇನಾ

ಚಾರ್ಯರ ಅನುಸರಣೆ. ಆದರೆ ಪ್ರಭುಲಿಂಗಲೀಲೆ ಇಡಿಯಾಗಿ ಅನುಭವಶೀಲ ಕಾವ್ಯ. ಚಾಮರಸನ ಅಂತರ್ಯಕ್ಕೆ ಮುಟ್ಟದೆ ಒಂದು ಮಾತೂ ಅಭಿವ್ಯಕ್ತಗೊಂಡಿಲ್ಲ. ತತ್ವ ನಿರೂಪಣೆಯಲ್ಲಿಯೂ ಕಾವ್ಯತತ್ವ ಕಳಚಿ ಹೋಗಿಲ್ಲ. ಹೀಗಾಗಿ ಕಾವ್ಯದಲ್ಲೆಲ್ಲ ಚಾಮರಸತ್ವದ ಪ್ರಾಮಾಣಿಕತೆ ತುಂಬಿನಿಂತಿದೆ. ಈ ದೃಷ್ಟಿಯಿಂದ ಕಾವ್ಯಧರ್ಮ ಆದಿಪುರಾಣಕ್ಕಿಂತ ಪ್ರಭುಲಿಂಗಲೀಲೆಯಲ್ಲಿ ಮಹೋಜ್ವಲವಾಗಿದೆಯೆನ್ನಬಹುದು.

ಭವಾವಳಿಯ ತೊಡಕು, ಉಪಕಥೆಗಳ ಆಧಿಕ್ಯ ಆದಿಪುರಾಣದ ಏಕಮುಖತೆಯನ್ನು ಕವಲುಗೊಳಿಸಿವೆ. ಹೀಗಾಗಿ ಈ ಕೃತಿ ಪೂರ್ವಭವಾಳಿ ಚರಿತ್ರೆ, ಆದಿತೀರ್ಥಂಕರ ಚರಿತ್ರೆ, ಭರತ ಚಕ್ರವರ್ತಿ ಚರಿತ್ರೆ ಎಂದು ಮೂರು ಭಾಗಗಳಾಗಿ ಮುರಿದು ನಿಂತಿದೆ; ತೀರ್ಥಂಕರನ ಕಥೆ ಜೀವಂತ ತೊರೆಯಾಗಿ ಹರಿದುಬರದೆ ಆದ್ಯಂತಗಳನ್ನು ಬಿಟ್ಟು ಮಧ್ಯದಲ್ಲಿ ಮಾತ್ರ ಮಡುಗಟ್ಟಿ ನಿಂತಿದೆ. ಪ್ರಭುಲಿಂಗಲೀಲೆಯಲ್ಲಿ ಉಪಕತೆಗಳು ಬಂದು ಮಾಯಾ ಕೋಲಾಹಲ, ಪ್ರಮಥರೋದ್ಧಾರ ಎಂಬ ಎರಡು ಭಾಗಗಳು ಗೋಚರಿಸುತ್ತಿದ್ದರೂ ಎಲ್ಲ ಉಪಕತೆಗಳ ಒಡಲಲ್ಲಿ ಜಂಗಮಜ್ಯೋತಿಯಾಗಿ ಸಂಚರಿಸುತ್ತವೆ ಅಲ್ಲಮಲಿಂಗ. ಪ್ರತಿಯೊಂದು ಉಪಕಥೆಗೂ ಪ್ರಭುವನ್ನು ಬಿಟ್ಟರೆ ಗತಿಯಿಲ್ಲ ಎನ್ನುವಷ್ಟರ ಮಟ್ಟಿಗೆ ಈ ನಾಯಕಪಾತ್ರ ಕಥೆಯಿಂದ ಕಥೆಗೆ ಬೆಳಗುತ್ತ ಬೆಳೆಯುತ್ತ ನಡೆದಿದೆ. ಇಂಥ ಆಮೂಲಾಗ್ರವಾಗಿ ಬರುವ ನಾಯಕಸೂತ್ರ ಆದಿಪುರಾಣದಲ್ಲಿ ಕೊಂಡಿ ಕಡಿದು ಹೋಗಿದೆ.

ಧರ್ಮದ ಜಟಿಲತೆ, ಕಥೆಯ ಶರೀರಭಗ್ನತೆಗಳಲ್ಲದೆ ಸಂಸ್ಕೃತದ ಅತಿ ಬಳಕೆಯಿಂದಾಗಿ ಜಟಿಲವಾದ ಧರ್ಮ ಆದಿಪುರಾಣದಲ್ಲಿ ಇನ್ನೂ ಕ್ಲಿಷ್ಟಗೊಂಡಿದ್ದರೆ, ಸಹಜ ದೇಶಿಯಿಂದಾಗಿ ಗಹನವಾದ ಧರ್ಮ ಪ್ರಭುಲಿಂಗಲೀಲೆಯಲ್ಲಿ ತೀರ ಸರಳಗೊಂಡಿದೆ. ಪರಿಣಾಮಕಾರಿಯಾಗಿದೆ. (ಇಂಥ ಹಿರಿಮೆ ಕನ್ನಡದಲ್ಲಿ ಪ್ರಭುಲಿಂಗಲೀಲೆಯನ್ನು ಬಿಟ್ಟರೆ ಅನುಭವಾಮೃತಕ್ಕೆ ಸಲ್ಲುತ್ತದೆ).

ರಸ ಸನ್ನಿವೇಶದಲ್ಲಿ ಮೈಮುರಿದೇಳುವ ಪಂಪನ ಕಾವ್ಯಧರ್ಮ ಮತ ಸನ್ನಿವೇಶದಲ್ಲಿ ಸೋತು ನಿಲ್ಲುತ್ತದೆ; ಧರ್ಮಕ್ಕೆ ಒಂದು ತೆರನಾದ ಭಾಷಾ ಪ್ರಯೋಗ. ಕಾವ್ಯ ಧರ್ಮಕ್ಕೆ ಇನ್ನೊಂದು ತೆರನಾದ ಭಾಷಾಪ್ರಯೋಗ ಮಾಧ್ಯಮವಾಗಿ ಬರುತ್ತದೆ. ಚಾಮರಸನಿಗೆ ಮಾತ್ರ ರಸಸನ್ನಿವೇಶದ ಭಾಷೆ ಬೇರೆಯಲ್ಲ. ಮತಸನ್ನಿವೇಶದ ಭಾಷೆ ಬೇರೆಯಲ್ಲ. ಎರಡರಲ್ಲಿಯೂ ಕವಿತ್ವ ಸಮಪ್ರಮಾಣದಲ್ಲಿ ಮಿಡಿದು ಆತನ ಭಾಷಾ ಪ್ರಯೋಗದ ಸವ್ಯಸಾಚಿತ್ವ ಬೆರಳೆಂಕಟ್ಟಿಸುತ್ತದೆ. ವೀರಶೈವದ ಭೋಗ ಯೋಗಗಳ ಸಾಮರಸ್ಯದಷ್ಟೇ ಸಾರ್ಥಕವಾಗಿ ಅದು ಈ ಉಭಯ ಕ್ಷೇತ್ರಗಳಲ್ಲಿ ಬಳಕೆಗೊಂಡಿದೆ.

ಇವುಗಳಿಗಿಂತ ಮಿಗಿಲಾದ ಅಂಶವೆಂದರೆ ಆದಿಪುರಾಣ ಪುರಾಣಕಾವ್ಯವಾದರೆ, ಪ್ರಭುಲಿಂಗಲೀಲೆ ಒಂದು ರೂಪಕಕಾವ್ಯ. ತಾಮಸವರ್ಗದ ಮಮಕಾರ-ಮೋಹಿನಿ ಮಾಯೆ, ತಾತ್ವಿಕವರ್ಗದ ಸುಮತಿ-ನಿರ್ಮಲ-ಮಹಾದೇವಿ. ಇವುಗಳ ಮಧ್ಯದಲ್ಲಿ ದೈವೀವರ್ಗದ ನಿರಹಂಕಾರ-ಸುಜ್ಞಾನಿ-ಪ್ರಭುದೇವರ ಚಿತ್ರಣದಿಂದಾಗಿ ಇದು ಕೇವಲ

ಕಥೆಯಾಗದೆ. ಒಂದು ಧ್ವನಿಪೂರ್ಣ ರೂಪಕಕಾವ್ಯವಾಗಿ ಮಾರ್ಪಟ್ಟಿದೆ. ಬಹುಶಃ ಕನ್ನಡ ಸಾಹಿತ್ಯದಲ್ಲಿ ಇಂತಹ ಧ್ವನಿಪೂರ್ಣಕಾವ್ಯ ಬೇರೊಂದಿಲ್ಲವೆಂಬ ಕೀರ್ತಿಗಳಿಸಿದೆ. ಈ ನಿರ್ಣಯವನ್ನು ನೀಡುವಾಗ ಒಂದು ಮಾತನ್ನು ಅವಶ್ಯ ಗಮನಿಸಬೇಕಾಗುತ್ತದೆ. ಜೈನತತ್ವಗಳು ಪ್ರಶ್ನಾತೀತವೆನಿಸಿ, ಪುರಾಣಗಳ ರಚನಾಶಿಲ್ಪ ಪಡಿಯಚ್ಚುಯೆನಿಸಿದ ಪ್ರಸಂಗದಲ್ಲಿ ಪಂಪನು ಒಂದು ಬಗೆಯ ಪರತಂತ್ರ ಸ್ಥಿತಿಯಲ್ಲಿ ನಿಂತು ಆದಿಪುರಾಣವನ್ನು ಬರೆಯಬೇಕಾಯಿತು. ಆದರೆ ವೀರಶೈವವನ್ನು ಪುನರುಜ್ಜೀವನಗೊಳಿಸಲು, ಪುನರ್ವಿಮರ್ಶಿಸಲು ನಡೆದ ಪ್ರಗತಿಶೀಲ ಆಂದೋಲನೆಯ ಯುಗದಲ್ಲಿ ಬಾಳಿದ ಚಾಮರಸನಿಗೆ ಇಂತಹ ಪರಾಧೀನ ಪರಿಸ್ಥಿತಿ ಇರಲಿಲ್ಲ. ಹೀಗಾಗಿ ಸ್ವಾತಂತ್ರ್ಯವಹಿಸಿ ಅನುಭವ ಪ್ರಮಾಣದ ಒರೆಗಲ್ಲಿನ ಮೇಲೆ ಪ್ರಭುಲಿಂಗಲೀಲೆಯನ್ನು ಒಂದು ಕಲಾಕೃತಿಯನ್ನಾಗಿ ದಳಬಿಡಿಸಿ ಅರಳಿಸಿದ.

ಈ ಎಲ್ಲ ಕಾರಣಗಳಿಂದಾಗಿ ಪಂಪನಲ್ಲಿ ಕಾವ್ಯಧರ್ಮ, ಧರ್ಮಗಳು ವಿಷಮ ಪ್ರಮಾಣದಲ್ಲಿದ್ದರೆ, ಚಾಮರಸನಲ್ಲಿ ಈ ವಿಷಮತೆ ನೀಗಿ ಸಮಪಾಕ ಸಂಪ್ರಾಪ್ತವಾಗಿದೆ. ಅದಕ್ಕಾಗಿ 'ಕಾವ್ಯಧರ್ಮಮಂ ಧರ್ಮಮುಮಂ' ಸಾರೋದ್ಧಾರವಾಗಿ ಬೆಳಗಿಸಿದ ಕೀರ್ತಿ ಕನ್ನಡದಲ್ಲಿ ಆದಿಪುರಾಣಕ್ಕಿಂತ ಪ್ರಭುಲಿಂಗಲೀಲೆಗೆ ಹೆಚ್ಚು ಅನ್ವಯಿಸುವಂತೆ ತೋರುತ್ತದೆ.

★ ಎಂ. ಎಂ. ಕಲಬುರ್ಗಿ

ನೂತನ ಸಾಕ್ಷರರ ಸಹಾಯಕ ಸಾಹಿತ್ಯ ರಚನಾ ಸೂತ್ರಗಳು

ಮಾನವ ವರ್ಗಕ್ಕೂ ಮತ್ತು ಪ್ರಾಣಿವರ್ಗಕ್ಕೂ ಒಂದು ಅಂತರವಿದೆ. ಮಾನವನು ಆಲೋಚನೆ ಮಾಡುವ ಶಕ್ತಿ ಪಡೆದಿದ್ದಾನೆ. ತನ್ನ ಮನಸ್ಸಿನಲ್ಲಿರುವುದನ್ನು ಇನ್ನೊಬ್ಬರಿಗೆ ತಿಳಿಸಬಲ್ಲ. ಕೋಪ, ಪ್ರೀತಿ, ದ್ವೇಷ, ಅಸಮಾಧಾನ, ಆದರ, ನೋವು, ನಲಿವು ಮತ್ತು ಮನೋಲಹರಿ ಮುಂತಾದ ಭಾವನೆಗಳನ್ನು ಮುಖಚರ್ಯೆಯಲ್ಲಿ ತೋರುತ್ತಾನೆ. ಇಲ್ಲವೇ ಮಾತಿನಲ್ಲಿ ವ್ಯಕ್ತಪಡಿಸುವನು. ಕೆಲವರಿಗೆ ತಮ್ಮ ಅನುಭವಗಳನ್ನು ಪುಸ್ತಕ ರೂಪದಲ್ಲಿ ಬರೆದಿಡುವ ಶಕ್ತಿ ಇರುವುದು. ಅಂತಹವರು ತಮ್ಮ ವೈವಿಧ್ಯಪೂರ್ಣವಾದ ಅನುಭವಗಳನ್ನು ಸ್ವಾರಸ್ಯವಾಗಿ ಗ್ರಂಥರೂಪದಲ್ಲಿ ಬರೆದಿಟ್ಟಿದ್ದಾರೆ. ಅವುಗಳ ಪೈಕಿ ಕೆಲವು ಗ್ರಂಥಗಳು ಮುಂದಿನ ಅನೇಕ ತಲೆಮಾರುಗಳವರೆಗೂ ಉಪಯೋಗಕ್ಕೆ ಬರುವುವು. ಶತಮಾನದ ಹಿಂದೆ ಬರೆದ ಪುಸ್ತಕ ಇಂದಿಗೂ ಮತ್ತು ಮುಂದೆ ತಲತಲಾಂತರದವರೆಗೂ ಅವಲೋಕನ ಮಾಡಲು ಬರುವುದು. ಗ್ರಂಥಗಳು ಸರ್ವಕಾಲಿಕವಾದುವು. ಮಾನವನ ಇತಿಹಾಸ ಮತ್ತು ಸಂಸ್ಕೃತಿ ನಿರೂಪಣೆ ಗ್ರಂಥಗಳಲ್ಲಿ ಸಂಗ್ರಹಿಸಲಾಗಿದೆ.

ಒಂದು ಕಾಲಕ್ಕೆ ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದ ಶಿಕ್ಷಣ ಇಂದು ಎಲ್ಲರ ಸ್ವತ್ತು ಎಂಬ ಭಾವನೆ ಬೆಳೆದಿದೆ. ಈ ಕಾರಣದಿಂದಲೇ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಸಾರ್ವತ್ರಿಕವಾಗಿದೆ. ವಯಸ್ಕರು ಸಹ ಓದುಬರಹ ಕಲಿತು ಸುಶಿಕ್ಷಿತರಾಗಲು ಸರಕಾರಗಳು ಅವಕಾಶ ಕಲ್ಪಿಸಿವೆ. ಹೊಸದಾಗಿ ಅಕ್ಷರಸ್ಥರಾದ ವಯಸ್ಕರು ಮತ್ತು ಪ್ರಾಥಮಿಕ ಶಾಲೆಯಲ್ಲಿ ಓದಿ ಮುಂದಕ್ಕೆ ಶಿಕ್ಷಣ ಮುಂದುವರಿಸದಿದ್ದವರಿಗೂ ಸೂಕ್ತ ಸಾಹಿತ್ಯದ ಅವಶ್ಯಕತೆಯಿದೆ. ಈ ಕಾರ್ಯ ಅತಿ ಶೀಘ್ರವಾಗಿ ಆಗಬೇಕಾಗಿದೆ.

ಸಾಹಿತ್ಯ ರಚಿಸುವ ಮುನ್ನ ಕೆಲವು ಮುಖ್ಯವಾದ ಅಂಶಗಳ ಬಗ್ಗೆ ಆಲೋಚಿಸುವುದು ಒಳ್ಳೆಯದು. ರಚಿಸುವ ಸಾಹಿತ್ಯ ಯಾರಿಗಾಗಿ? ಓದುಗರ ವಿದ್ಯಾಮಟ್ಟ ಏನು? ಅವರು ಓದಲು ಬಯಸುವ ವಿಷಯಗಳು ಯಾವುವು? ಆ ವಿಷಯಗಳ ಬಗ್ಗೆ ಅವರಿಗೆ ಎಷ್ಟರಮಟ್ಟಿಗೆ ತಿಳುವಳಿಕೆಯಿದೆ ಮುಂತಾದ ಅಂಶಗಳನ್ನು ಚೆನ್ನಾಗಿ ಆಲೋಚಿಸಬೇಕು.

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಸಾಹಿತ್ಯದ ಅಗತ್ಯ ಇದೆ. ಕಾರಣ, ಅವರು ಕಲಿತ ಓದುಬರಹವನ್ನು ಉಳಿಸಿಕೊಳ್ಳಬೇಕು. ಮತ್ತು ಅದನ್ನು ಬೆಳೆಸಿಕೊಳ್ಳಬೇಕು. ಇದಕ್ಕೆ ಪೋಷಕವಾಗುವ ಸಾಹಿತ್ಯ ರಚನೆ ಅತ್ಯಾವಶ್ಯಕ. ರಚಿಸಿದ ಸಾಹಿತ್ಯ ಹೊಸದಾಗಿ ಓದುಬರಹ ಕಲಿತವರ ಕುತೂಹಲವನ್ನು ಕೆರಳಿಸುವಂತಿರಬೇಕು. ಅವರ ಆಸಕ್ತಿಗೆ ಅನುಗುಣವಾದ ವಸ್ತುವನ್ನು ಆಯ್ಕೆ ಮಾಡಬೇಕು. ಹೊಸದಾಗಿ ಅಕ್ಷರಸ್ಥರಾದ

ವಯಸ್ಕರು ಅನುಕ್ರಮವಾಗಿ ಧರ್ಮ ಮತ್ತು ಪುರಾಣ, ಜನಪದಸಾಹಿತ್ಯ, ಕಸುಬು, ತನ್ನ ಮತ್ತು ಸಂಸಾರದ ಆರೋಗ್ಯ, ಸರಕಾರದೊಡನೆ ಸಂಬಂಧ – ಈ ವಿಷಯಗಳನ್ನು ತಿಳಿಯಲು ಇಷ್ಟಪಡುವರು ಎಂಬ ಅಂಶ ಸಂಶೋಧನೆಯಿಂದ ವ್ಯಕ್ತವಾಗಿದೆ. ಹೀಗೆ ವಯಸ್ಕರ ಆಸಕ್ತಿಯನ್ನು ಅನುಸರಿಸಿ ವಸ್ತುವನ್ನು ಆಯ್ಕೆ ಮಾಡಬೇಕು. ಆಯ್ಕೆಯಾದ ವಸ್ತುವಿನ ನಿರೂಪಣೆಯನ್ನು ಓದುಗರ ಕುತೂಹಲ ಕೆರಳಿಸುವಂತೆ ಮಾಡುವುದು ಪರಿಣಾಮಕಾರಿ.

ಓದುವುದು ಕೇವಲ ಯಾಂತ್ರಿಕವಾದ ಕಾರ್ಯವಲ್ಲ. ಅದೂ ಒಂದು ಕಲೆ. ಓದುವ ಕ್ರಿಯೆಯಲ್ಲಿ ಸ್ಮರಣಶಕ್ತಿ, ವಿವೇಚನಾ ಶಕ್ತಿ, ತುಲನಾಶಕ್ತಿ, ಸಮಸ್ಯಾ ಪರಿಹಾರ ಮತ್ತು ಪ್ರಯೋಗ ಈ ಕೆಲವು ಹಂತಗಳಿವೆ. ಓದುವುದು ಒಂದು ಚಟುವಟಿಕೆಯೂ ಹೌದು. ಈ ಚಟುವಟಿಕೆಯಲ್ಲಿ ಮೂರು ಹಂತಗಳಿವೆ. ೧) ಓದುವುದು ೨) ಅರ್ಥಗ್ರಹಣ ೩) ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು – ಅಂದರೆ, ಬರವಣಿಗೆಯಲ್ಲಿ ಅಂಶಗಳನ್ನು ಒಪ್ಪಿಕೊಳ್ಳುವುದು, ಜೀವನದಲ್ಲಿ ಆಚರಣೆಗೆ ತರುವುದು, ಇಲ್ಲವೇ ಸಕಾರಣವಾಗಿ ತಿರಸ್ಕರಿಸುವುದು.

ಹೊಸದಾಗಿ ಓದು ಬರಹ ಕಲಿತಿರುವ ವಯಸ್ಕನ ಪರಿಸ್ಥಿತಿ ಹೇಗೆ? ಓದುಗನ ಕಣ್ಣಿಗೆ ಪದ ಇಲ್ಲವೇ ಪದಗಳ ಗುಂಪು ಬೀಳುವುದು. ಅನಂತರ ಅರ್ಥಗ್ರಹಣ ಆಗುವುದು. ಪ್ರಾರಂಭದಲ್ಲಿ ಕಣ್ಣುಗಳು ಪರಿಚಿತ ಪದಗಳನ್ನು ಹುಡುಕುವುವು. ಅಪರಿಚಿತ ವಾದ ಪದಗಳನ್ನು ಕಂಡಲ್ಲಿ ಕಣ್ಣುಗಳು ಹಿಂದಕ್ಕೆ ಚಲಿಸುವುವು. ಸುಲಭವಾಗಿ ಗುರುತಿಸ ಲಾಗದ ಪದಗಳು ದೃಷ್ಟಿಗೆ ಗೋಚರವಾದಾಗ ಕಣ್ಣಿನ ಓಟ ಹಿಂದಕ್ಕೆ ಮತ್ತು ಮುಂದಕ್ಕೆ ಹೆಚ್ಚಾಗಿ ಚಲಿಸುವುದು. ಓದುವ ಅಭ್ಯಾಸ ಬೆಳೆದಂತೆ ಕಣ್ಣಿನ ಚಲನೆ ಹಿಮ್ಮೆಟ್ಟುವ ಸಂದರ್ಭಗಳು ಕಡಿಮೆ. ಕಣ್ಣಿನ ನಿಲುಗಡೆ ಕಡಿಮೆ ಅದಷ್ಟು ಓದುಗಾರಿಕೆ ಸುಧಾರಿಸು ವುದು. ಆದ್ದರಿಂದ ಓದುಗಾರಿಕೆ ತೃಪ್ತಿಕರವಾಗಬೇಕಾದರೆ ಓದುವವನ ಅರ್ಥಗ್ರಹಣ. ಪದಸಂಪತ್ತು ಮತ್ತು ಭಾಷಾನುಭವದ ಮುನ್ನಡೆ – ಇವುಗಳಿಗೆ ಅನುಗುಣವಾಗಿ ಬರವಣಿಗೆ ಇರಬೇಕು. ಡಬ್ಲ್ಯು. ಎಸ್. ಗ್ರೇ ಎಂಬ ಶಿಕ್ಷಣ ತಜ್ಞರು ಓದುವ ಕಣ್ಣಿನ ಚಲನೆಯನ್ನು ಕ್ಯಾಮರಾದಿಂದ ಛಾಯಾಚಿತ್ರ ಹಿಡಿದಿರುವರು. ಓದುಗರು ವಿವಿಧ ಭಾಷೆಗಳನ್ನು ಓದುವಾಗ ಕಣ್ಣಿನ ಚಲನೆಯನ್ನು ಪ್ರಯೋಗಾಲಯದಲ್ಲಿ ಕಂಡು ಹಿಡಿದಿರುವರು. ಈ ಪ್ರಯೋಗ ಇಂಗ್ಲಿಷ್, ಫ್ರೆಂಚ್, ಥೈ, ಸ್ಪ್ಯಾನಿಷ್, ಹಿಂದಿ. ಉರ್ದು, ಜಪಾನಿ ಮುಂತಾದ ಭಾಷೆಗಳಲ್ಲಿ ನಡೆದಿರುತ್ತೆ.

ಬರವಣಿಗೆ ಒಂದು ಕಲೆ. ಈ ಕಲೆ ದೈವದತ್ತವಾದುದು ಎಂದು ಕೆಲವರ ಭಾವನೆ. ಈ ಕಲೆಯನ್ನು ಜೀವನದಲ್ಲಿ ಅಭ್ಯಾಸದಿಂದ ಸಾಧಿಸಬಹುದು ಎಂಬುದು ಕೆಲವರ ಅಭಿಪ್ರಾಯ. ಈ ಕಲೆ ಹುಟ್ಟಿನೊಂದಿಗೆ ಬರುವುದು. ಅಲ್ಲದೆ ಸಾಧನೆಯಿಂದಲೂ ಇದು ಸಾಧ್ಯ; ಎಂಬುದಾಗಿ ಬೆನ್‌ಜಾನ್ಸನ್ ತಿಳಿಸಿದ್ದಾನೆ. ಬರವಣಿಗೆ ವಾಚ್ಯ ಶಕ್ತಿಯಿಂದ ಕೂಡಿರಬೇಕು. ವಾಚನಶಕ್ತಿಯ ಮೌಲ್ಯಮಾಪನೆ ಬಗ್ಗೆ ಅನೇಕ ಸಂಶೋಧನೆಗಳು

ನಡೆದಿವೆ. ಪರಿಣಾಮವಾಗಿ ವಾಚ್ಯ ಶಕ್ತಿಯ ಅಳತೆಗೋಲನ್ನು ಕಂಡುಹಿಡಿಯಲಾಗಿದೆ. ಈ ಪ್ರಯೋಗವು ಇಂಗ್ಲಿಷ್, ಸ್ಪ್ಯಾನಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಹೆಚ್ಚಾಗಿ ನಡೆದಿದೆ. ಇದರ ಜೊತೆಗೆ ಬರಹ ಯಾವ ರೀತಿ ಇರಬೇಕು ಎಂಬ ಬಗ್ಗೆ ಕೆಲವು ಸೂತ್ರಗಳನ್ನು ಗೊತ್ತು ಮಾಡಿದ್ದಾರೆ. ಈ ಸೂತ್ರಗಳು ಬರಹಗಾರರಿಗೆ ಕೈ ಮರಗಳು ಮಾತ್ರ; ಆದರೆ ಬರವಣಿಗೆಯನ್ನು ನಿರ್ದೇಶಿಸುವ ಯಾವ ಕಾನೂನುಗಳೂ ಅಲ್ಲ. ಬರೆದಿದ್ದನ್ನು ಹೆಚ್ಚು ಸಾರಿ ತಿದ್ದಿ ಬರೆಯುವುದರಿಂದ ಮಾತ್ರ ಒಳ್ಳೆಯ ಬರಹ ಸಾಧ್ಯ ಎಂಬುದು ಬಹುಮಟ್ಟಿಗೆ ಸತ್ಯ.

ಬರವಣಿಗೆ ಯಾರಿಗಾಗಿ? ಓದುವವರಿಗಾಗಿಯೇ ಅಲ್ಲವೆ? ಗ್ರಂಥಕರ್ತನ ಬರಹವನ್ನು ಓದುಗರು ಅರ್ಥಮಾಡಿಕೊಳ್ಳಲು ಸಾಧ್ಯ ಆಗದಿದ್ದಲ್ಲಿ ಆತನ ಶ್ರಮ ವ್ಯರ್ಥವಾದಂತೆಯೇ ಸರಿ. ಆದ್ದರಿಂದ ಕೆಳಗೆ ಸೂಚಿಸಿರುವ ಸೂತ್ರಗಳನ್ನು ಬರಹಗಾರರು ಸಾಧ್ಯವಾದಷ್ಟು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಳ್ಳಬೇಕಾದುದು ಅಗತ್ಯ.

೧) ವಿಷಯ ಸಂಬಲು ಅರ್ಥವಾಗಿ ಅಧಿಕೃತವಾಗಿ ಇರಬೇಕು.
೨) ವಾಕ್ಯಗಳು ಚಿಕ್ಕದಾಗಿರಬೇಕು.
೩) ಸರಳ ವಾಕ್ಯಗಳಿಂದ ಕೂಡಿರಬೇಕು; ಸಮ್ಮಿಶ್ರ ವಾಕ್ಯಗಳು ಇರಕೂಡದು.
೪) ಪರಿಚಯವಾಗಿರುವ ಪದಗಳ ಬಳಕೆ.
೫) ಕಣ್ಣಿಗೆ ಕಟ್ಟುವಂತಹ ಪದಗಳ ಬಳಕೆ.
೬) ಮಾತನಾಡುವ ರೀತಿಯ ಬರವಣಿಗೆ.
೭) ಓದುಗನ ಅನುಭವವನ್ನು ಗಮನದಲ್ಲಿ ಇಟ್ಟುಕೊಳ್ಳುವುದು.
೮) ಅನಾವಶ್ಯಕ ಪದಗಳನ್ನು ಬಿಡುವುದು.
೯) ಸತ್ವಶಾಲಿಯಾದ ಕ್ರಿಯಾಪದದ ಬಳಕೆ.
೧೦) ಬರವಣಿಗೆಯಲ್ಲಿ ವೈವಿಧ್ಯತೆ.
೧೧) ಬರಹ ಅಭಿವ್ಯಕ್ತಿಯ ಮಾಧ್ಯಮ ಆಗಿರಬೇಕು. ಪ್ರಭಾವಮುದ್ರೆ ಇರಬಾರದು.
೧೨) ಪ್ರಪಂಚಕ್ಕೆಲ್ಲಾ ನೀತಿ ಬೋಧೆ ಮಾಡುವುದು ಸಲ್ಲದು. ಹೆಚ್ಚಾಗಿ ಒಬ್ಬ ವ್ಯಕ್ತಿಯನ್ನೇ ಕುರಿತು ಬರೆಯುವುದು ಒಳ್ಳೆಯದು.

ಬರಹಗಾರರು ಓದುಗರನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಬರಹಗಾರರ ಮತ್ತು ಓದುಗರ ಸಂಬಂಧ ಹತ್ತಿರವಾದಷ್ಟೂ ಉಭಯತ್ರರಿಗೂ ಅನುಕೂಲ. ವಯಸ್ಕರ ಆಸಕ್ತಿಯನ್ನು ಅನುಸರಿಸಿ ವಸ್ತುವಿನ ಆಯ್ಕೆ ಮಾಡಬೇಕಾದ್ದು ಅವಶ್ಯಕ. ಬರವಣಿಗೆ ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗಾಗಿ. ಆತನಿಗೆ ಪ್ರಪಂಚದ ಅನುಭವ ಇದೆ. ಜೊತೆಗೆ ವಸ್ತುವಿನ ಬಗ್ಗೆ ಆತನಿಗೆ ಸ್ವಲ್ಪಮಟ್ಟಿಗೆ ತಿಳಿದಿರಬಹುದು. ಮೇಲಾಗಿ ಅಂತಹ ಪುಸ್ತಕಗಳನ್ನು ಓದಲು ವಯಸ್ಕನಿಗೆ ಕುತೂಹಲ ಮೂಡದಿರಬಹುದು. ಕಾರಣ ಹೇಳಿದ ವಿಷಯ ಪುನರುಕ್ತಿ ಆಗುವುದರಿಂದ

ಈಗಾಗಲೇ ಗೊತ್ತಿರುವ ವಿಷಯಗಳಲ್ಲಿ ತಪ್ಪು ಭಾವನೆಗಳನ್ನು ಹೊಂದಿದ್ದರೆ ಆ ವಿಷಯ ಗಳ ಬಗ್ಗೆ ಸರಿಯಾದ ಮತ್ತು ಅಧಿಕೃತವಾದ ವಿಷಯಗಳನ್ನು ತಿಳಿಸಬೇಕು. ತಾಂತ್ರಿಕ ವಿಷಯಗಳ ಮೇಲೆ ಪುಸ್ತಕ ಬರೆಯುವುದಾದರೆ ಸಂಬಂಧಪಟ್ಟ ತಾಂತ್ರಿಕಜ್ಞರನ್ನು ಭೇಟಿ ಮಾಡಿ ಅವರಿಂದ ವಿಷಯ ಸಂಗ್ರಹ ಮಾಡಬೇಕು. ಜೊತೆಗೆ ಅವರು ಸೂಚಿಸುವ ಆಧಾರಿತ ಗ್ರಂಥಗಳ ಅವಲೋಕನ ಅಗತ್ಯ. ಈ ರೀತಿ ವಿಷಯ ಸಂಗ್ರಹ ಮಾಡಿದ ನಂತರ ಬರಹಗಾರನು ಒಂದು ಕರಡುಪ್ರತಿಯನ್ನು ತಯಾರಿಸಬೇಕು. ನಂತರ ಮೊದಲಬಾರಿಗೆ ಕಂಡ ತಾಂತ್ರಿಕಜ್ಞನಿಗೆ ಕರಡುಪ್ರತಿಯನ್ನು ತೋರಿಸಿ ಆತನ ಅಭಿ ಪ್ರಾಯವನ್ನು ಪಡೆಯುವುದು ಅಗತ್ಯ. ಇದರಿಂದ ವಿಷಯಗಳು ಸಂದೇಹಕ್ಕೆ ಎಡೆ ಯಿಲ್ಲದೆ ಆಧಾರಸಹಿತವಾಗಿರುವುದು. ಕರಡು ಪ್ರತಿಯಲ್ಲಿ ತಿಳಿಸಿರುವ ಅಭಿಪ್ರಾಯಗಳ ಬಗ್ಗೆ ತಾಂತ್ರಿಕಜ್ಞರು ಸೂಚಿಸುವ ಬದಲಾವಣೆಗಳನ್ನು ಮಾಡಬೇಕು. ಕಡೆಯಲ್ಲಿ ಭಾವಿ ಓದುಗರ ಹತ್ತಿರ ಹೋಗಿ ತಿದ್ದಿದ ಪ್ರತಿಯನ್ನು ಓದಬೇಕು. ಈ ರೀತಿ ಮಾಡುವುದ ರಿಂದ ಓದುಗರ ದೃಷ್ಟಿಯಿಂದ ಬರವಣಿಗೆ ಎಷ್ಟರ ಮಟ್ಟಿಗೆ ಸಮರ್ಪಕವಾಗಿದೆ? ಹೊಸ ವಿಷಯಗಳು ಏನಿವೆ? ಇನ್ನೂ ಉತ್ತಮಪಡಿಸುವುದು ಅಗತ್ಯವೆ? ಮುಂತಾದ ಅಂಶಗಳು ನಿರ್ಧಾರವಾಗುವುವು.

ಕೆಲವು ವೇಳೆ ಬರವಣಿಗೆಯಲ್ಲಿನ ಭಾಷೆ ಕ್ಲಿಷ್ಟವಾಗಿರಬಹುದು. ಆಗ ಆ ವಿಷಯ ಓದುಗನಿಗೆ ಅರ್ಥವಾಗದು. ಅರ್ಥಮಾಡಿಕೊಳ್ಳಲು ಕಾಲವ್ಯಯವಾಗುವುದು. ಅಷ್ಟೊಂದು ಕಾಲ ವಿನಿಯೋಗಿಸಲು ಓದುಗನಿಗೆ ತಾಳ್ಮೆ ಇರಲಾರದು. ಕ್ಲಿಷ್ಟವಾದ ಭಾಷಾ ಪ್ರಯೋಗ ಪಾಂಡಿತ್ಯದ ಕುರುಹು ಎಂಬುದು ಕೆಲವರ ಅಭಿಪ್ರಾಯ. ಆದರೆ ಭಾವಿ ಓದುಗನ ದೃಷ್ಟಿಯಿಂದ ಆ ವಸ್ತು ನಿಷ್ಪ್ರಯೋಜಕ. ಆದ್ದರಿಂದ ವಾಕ್ಯಗಳು ಚಿಕ್ಕದಾಗಿರಬೇಕು. ಈ ಬಗ್ಗೆ ಅಮೇರಿಕದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದ ಪುಸ್ತಕ ಗಳಲ್ಲಿ ವಾಕ್ಯಗಳ ಉದ್ದದ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ೧೮೯೩ ರಲ್ಲಿ ಮಿನ್ನೆಸ್ಸೊ ವಿಶ್ವವಿದ್ಯಾನಿಲಯದ ಡಾ. ಎ. ಎಲ್. ಶರ್ಮ್ಯಾನ್ ಆಂಗ್ಲೇಯ ಸಾಹಿತಿಗಳ ಬರಹಗಳಲ್ಲಿ ವಾಕ್ಯಗಳ ಸರಾಸರಿ ಉದ್ದವನ್ನು ಕಂಡು ಹಿಡಿದಿದ್ದಾರೆ. ಅವರ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

ಹೆಸರು	ಸರಾಸರಿ ಪದಗಳು	
ಮಿಲ್ಟನ್ ಅವರ ಗದ್ಯ	60.80	ಪದಗಳು
ಸ್ಪೆನ್ಸರ್	49.82	..
ಡೀಫೋ	68.00	,,
ಥಾಮಸ್ ಮೋರ್	52.00	..
ಡ್ರೈಡನ್	45.26	,,
ಥಾಮಸ್ ಬೇಕನ್	28.00	..

೧೯೫೦ ರ ಕಾಲದಲ್ಲಿ ವಾಕ್ಯಗಳಲ್ಲಿ ಸರಾಸರಿ ಪದಗಳ ಬಳಕೆ ೨೦ ಇದ್ದವು. ವಾಕ್ಯಗಳು ಚಿಕ್ಕದಾಗಿರಬೇಕು. ಹಾಗಾದರೆ ವಾಕ್ಯಗಳ ಉದ್ದ ಎಷ್ಟಿರಬೇಕು ? ವಾಕ್ಯಗಳಲ್ಲಿ ಸರಾಸರಿ ಎಷ್ಟು ಪದಗಳಿರಬೇಕು? ಸರಾಸರಿ ೫ ರಿಂದ ೧೦ ಪದಗಳು ಇರಬಹುದು ಎಂಬುದಾಗಿ ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡಳಿಯು ನಡೆಸಿದ ಸಂಶೋಧನೆಯಲ್ಲಿ ಗೊತ್ತುಮಾಡಲಾಗಿದೆ. ಸಮ್ಮಿಶ್ರವಾಕ್ಯಗಳಿದ್ದಲ್ಲಿ ಅವುಗಳನ್ನು ಒಡೆದು ಸಾಧ್ಯವಾದಷ್ಟು ಹೆಚ್ಚು ವಾಕ್ಯಗಳನ್ನಾಗಿ ಮಾಡಬಹುದು. ಉದಾಹರಣೆಗೆ: "ಈಗಲೂ ನಾವು ನೋಡುವ ಕೆರೆ, ಕುಂಟೆ, ಬಾವಿ, ತೋಪು ಮತ್ತು ದೇವಾಲಯ ಮುಂತಾದುವುಗಳು ಯಾವ ಸರಕಾರದ ನೆರವೂ ಇಲ್ಲದೆ ಊರೊಟ್ಟಿನ ಕೆಲಸದಿಂದಲೇ ಆಗಿವೆ." ಈ ವಾಕ್ಯದಲ್ಲಿ ೧೮ ಪದಗಳಿವೆ. ಇದನ್ನು ಎರಡು ವಾಕ್ಯಗಳನ್ನಾಗಿ ಮಾಡಬಹುದು. "ಈಗಲೂ ನಾವು ನೋಡುವ ಕೆರೆ, ಕುಂಟೆ, ಬಾವಿ. ತೋಪು ಮತ್ತು ದೇವಾಲಯ ಮುಂತಾದವುಗಳು ಊರೊಟ್ಟಿನ ಕೆಲಸದಿಂದಲೇ ಆಗಿವೆ. ಇವುಗಳಿಗೆ ಸರಕಾರ ಯಾವ ನೆರವನ್ನೂ ನೀಡಿಲ್ಲ." "ಇತ್ತೀಚೆಗೆ ನಿಂಬೆ ರಸದಿಂದ ಅನೇಕ ಬಗೆಯ ರಾಸಾಯನಿಕ ದ್ರವ್ಯಗಳೂ. ಸೌಂದರ್ಯವನ್ನು ಹೆಚ್ಚು ಮಾಡುವ ಸಾಮಗ್ರಿಗಳೂ ತಯಾರಾಗುತ್ತವೆ." ಈ ವಾಕ್ಯದಲ್ಲಿ ೧೨ ಪದಗಳಿವೆ. ಇದೇ ವಾಕ್ಯವನ್ನು ಎರಡು ವಾಕ್ಯಗಳನ್ನಾಗಿ ಮಾಡಬಹುದು. "ಇತ್ತೀಚೆಗೆ ನಿಂಬೆರಸದಿಂದ ಅನೇಕ ಬಗೆಯ ರಾಸಾಯನಿಕ ದ್ರವ್ಯಗಳು ತಯಾರಾಗುತ್ತವೆ. ಜೊತೆಗೆ ಸೌಂದರ್ಯವನ್ನು ಹೆಚ್ಚು ಮಾಡುವ ಸಾಮಗ್ರಿಗಳೂ ತಯಾರಾಗುತ್ತವೆ." ವಾಕ್ಯಗಳ ಉದ್ದ ಬೆಳೆದಂತೆ ಪದಗಳ ಗುಂಪೂ ಸಹ ಬೆಳೆಯುತ್ತದೆ. ಅವುಗಳ ಸಂಬಂಧ ಹೆಚ್ಚುತ್ತದೆ. ತತ್ಪರಿಣಾಮವಾಗಿ ವಾಕ್ಯಗಳನ್ನು ಅರ್ಥಮಾಡಿ ಕೊಳ್ಳಲು ಮಾನಸಿಕ ಶ್ರಮ ಹೆಚ್ಚುತ್ತದೆ. ಅದನ್ನು ತಪ್ಪಿಸಲು ವಾಕ್ಯದ ಉದ್ದವನ್ನು ಕಡಿಮೆ ಮಾಡಬಹುದು.

ಸಾಮಾನ್ಯವಾಗಿ ಉದಾತ್ತ ವ್ಯಕ್ತಿಗಳು ಮತ್ತು ಜ್ಞಾನಿಗಳು ತಮ್ಮ ಉದಾತ್ತ ಭಾವನೆಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ತಿಳಿಸುತ್ತಾರೆ. ಮಹಾತ್ಮ ಗಾಂಧಿ ಮತ್ತು ಚಕ್ರವರ್ತಿ ರಾಜಗೋಪಾಲಾಚಾರ್ಯರ ಬರವಣಿಗೆಗಳೇ ಇದಕ್ಕೆ ಸಾಕ್ಷಿ. ಅಬ್ರಹಾಂ ಲಿಂಕನ್ ಸಹ ಚಿಕ್ಕ ಚಿಕ್ಕ ವಾಕ್ಯಗಳನ್ನು ಉಪಯೋಗ ಮಾಡುವ ರೂಢಿಯನ್ನು ಇಟ್ಟುಕೊಂಡಿದ್ದನು. ಸರಳವಾಗಿ ಮತ್ತು ಸುಲಭವಾಗಿ ಚಿಕ್ಕ ಚಿಕ್ಕ ವಾಕ್ಯಗಳ ಮೂಲಕ ಓದುಗರಿಗೆ ಅರ್ಥವಾಗುವಂತೆ ಬರೆಯುವುದು ಪಾಂಡಿತ್ಯದ ಲಕ್ಷಣ. ಅಲ್ಲದೆ ಹೇಳುವುದನ್ನು ನೇರವಾಗಿ, ಸರಳವಾಗಿ, ಅರ್ಥವತ್ತಾಗಿ, ಮತ್ತು ಪರಿಣಾಮ ಕಾರಿಯಾಗಿ ಹೇಳುವುದು ಒಳ್ಳೆಯದು. ಹಾಗೂ ಈ ಕಾರ್ಯಕ್ರಮ ಶ್ರಮಸಾಧ್ಯವಾದುದು. ಇದು ಅಪಾರಸಾಧನೆಯಿಂದ ಮಾತ್ರ ಸಾಧ್ಯ.

ವಾಕ್ಯರಚನೆಯಲ್ಲಿ ಪರಿಚಿತವಾದ ಪದಗಳನ್ನೇ ಉಪಯೋಗಿಸಬೇಕು. ಆಗ ಮಾತ್ರ ಓದುಗನ ಕಣ್ಣಿನ ಓಟ ಸರಾಗವಾಗಿ ಓಡುತ್ತದೆ. ಕಣ್ಣಿನ ಚಲನೆ ಒಮ್ಮೆಟ್ಟದೆ ಸರಾಗವಾಗಿ ಹೋಗುವುದರಿಂದ ಶ್ರಮ ಇಲ್ಲದೆ ವಾಕ್ಯವನ್ನು ಅರ್ಥಮಾಡಿಕೊಳ್ಳ

ಬಹುದು. ಹೊಸದಾಗಿ ಅಕ್ಷರಸ್ಥನಾದ ವಯಸ್ಕನಿಗೆ ಪರಿಚಿತ ಪದಗಳು ಆತನ ಮನೋಭಿತ್ತಿಯಲ್ಲಿ ಇರುವುವು. ಪದಗಳಲ್ಲಿ ಹೆಚ್ಚೆಂದರೆ ೫-೬ ಅಕ್ಷರಗಳಿಗಿಂತ ಹೆಚ್ಚಾಗಿ ಇರಬಾರದು. ಸಾಧ್ಯವಾದಷ್ಟು ೨-೩ ಅಕ್ಷರಗಳಿಂದ ಕೂಡಿದ ಪದಗಳನ್ನೇ ಬಳಸಿದರೆ ಒಳ್ಳೆಯದು. ಕಾರಣ, ಅಂತಹ ಪದಗಳು ವಯಸ್ಕನ ನಿತ್ಯದ ವ್ಯವಹಾರದಲ್ಲಿ ಬಳಕೆ ಮಾಡುವ ಪದಗಳು. ಆದಷ್ಟು ಸಂಯುಕ್ತಾಕ್ಷರಗಳನ್ನು ಮತ್ತು ವಿಜಾತೀಯ ಒತ್ತಕ್ಷರ ಗಳನ್ನು ಬಿಟ್ಟರೆ ಒಳ್ಳೆಯದು. ಉದಾಹರಣೆಗೆ "ಬಹು ಜನೋಪಯುಕ್ತವಾದುದಾಗಿ ರುತ್ತದೆ." ಇದು ೧೪ ಅಕ್ಷರಗಳಿಂದ ಕೂಡಿದೆ. ಇವನ್ನು ಈ ರೀತಿ ಬರೆಯುವುದರಿಂದ ಬದಲು ಬಹಳ ಅನುಕೂಲ "ಬಹು ಜನಕ್ಕೆ ಉಪಯೋಗ ಆಗಿರುತ್ತದೆ." ನಭೋ ಮಂಡಲ, ಭಾಸ್ಕರ, ಮೃತ್ಯು, ಭೋಜನ, ಪಿತೃ ಮತ್ತು ಮಾತೃ-ಈ ಪದಗಳಲ್ಲಿ ೨ ರಿಂದ ೫ ಅಕ್ಷರಗಳಿವೆ. ಈ ಪದಗಳು ಪರಿಚಯವಾದ ಪದಗಳೇ. ಇವುಗಳೆಲ್ಲಾ ಸಂಸ್ಕೃತ ಪದಗಳು. ಈ ಪದಗಳ ಬದಲು ಆಕಾಶ, ಸೂರ್ಯ, ಸಾವು, ಊಟ, ತಂದೆ ಮತ್ತು ತಾಯಿ ಎಂಬ ಪದಗಳು ಇನ್ನೂ ಹೆಚ್ಚಿಗೆ ಪರಿಚಯ ಇರುವ ಮತ್ತು ಸುಲಭವಾಗಿ ಅರ್ಥವಾಗಬಲ್ಲ ಪದಗಳು. "ನಭೋಮಂಡಲದಲ್ಲಿ ತಾರೆಗಳು ಮಿನುಗುತ್ತಿವೆ." ಈ ವಾಕ್ಯದ ಬದಲು "ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿವೆ." ಸುಲಭವಾಗಿ ಅರ್ಥ ವಾಗುವ ವಾಕ್ಯ.

ಪದಗಳು ಸಾಹಿತಿಯ ಜ್ಞಾನಭಂಡಾರದಲ್ಲಿ ದೃನಾಣ್ಯಗಳಿದ್ದಂತೆ. ಚೆನ್ನಾಗಿ ಆಲೋಚಿಸಿ ನಾಣ್ಯಗಳನ್ನು ಹಿಡಿತವಾಗಿ ಖರ್ಚುಮಾಡುವಂತೆ ಪದಗಳನ್ನೂ ಸಹ ಉಪಯೋಗ ಮಾಡುವುದು ವಿವೇಕಯುತವಾದದ್ದು. ಉದಾಹರಣೆಗೆ "ಊಟ ಮಾಡಿ ಆಯಿತು." ಇದರ ಬದಲು "ಊಟ ಆಯಿತು." "ಮಲಗಿ ನಿದ್ರೆಮಾಡಿತು." ಇದರ ಬದಲು "ನಿದ್ರೆ ಮಾಡಿತು" ಎಂದು ಬಳಸಬಹುದು. ಮಾಡಿ ಮತ್ತು ಮಲಗಿ ಎಂಬ ಪದಗಳು ಅನಾವಶ್ಯಕವಾದ ಪದಗಳು.

ಇದು ವಿಜ್ಞಾನಯುಗ. ವಿಜ್ಞಾನ ಬೆಳೆದಂತೆಲ್ಲಾ ಭಾಷೆ ಬೆಳೆಯುವುದು. ಹೊಸ ಹೊಸ ಪದಗಳು ಸೃಷ್ಟಿಯಾಗುವವು. ಇದರ ಜೊತೆಗೆ ಇತರ ಭಾಷೆಗಳಿಂದ ಹೊಸ ಹೊಸ ಪದಗಳು ನಮ್ಮ ಭಾಷೆಯ ಶಬ್ದಕೋಶಕ್ಕೆ ಸೇರುವವು. ಬಸ್ಸು, ರೈಲು, ಟಿಕೆಟ್ ಮುಂತಾದ ಪದಗಳು ಇಂಗ್ಲಿಷ್ ಭಾಷೆಯಿಂದ ಕನ್ನಡ ಭಾಷೆಗೆ ಬಂದವು. ರಾಕೆಟ್, ಟೆಲಿವಿಷನ್, ರೇಡಿಯೋ ಮುಂತಾದ ಪದಗಳು ವಿಜ್ಞಾನದ ಬೆಳವಣಿಗೆಯೊಂದಿಗೆ ಕನ್ನಡ ಭಾಷೆಗೆ ಬಂದವು. ನಮ್ಮ ಭಾಷೆಯ ಮೇಲಿನ ಅಭಿಮಾನದಿಂದ ಈ ಪದಗಳಿಗೆ ಅಚ್ಚ ಕನ್ನಡಪದಗಳನ್ನು ಹುಡುಕಲು ಪ್ರಯತ್ನಿಸುವುದು ಉಚಿತವಾಗಲಾರದು. ಕಾರಣ ಅವು ಆಂಗ್ಲ ಪದಗಳಾದರೂ ನಮ್ಮ ಜನರಿಗೆ ಚಿರಪರಿಚಿತವಾದ ಮತ್ತು ಬಳಕೆಯಲ್ಲಿನ ಪದಗಳು. ಅವುಗಳಿಗೆ ಬದಲಾಗಿ ಅಚ್ಚ ಕನ್ನಡ ಪದಗಳನ್ನು ಬಳಸಿದಲ್ಲಿ ಅವು ಓದುಗ ರಿಗೆ ಅರ್ಥವಾಗದೆ ಹೋಗಬಹುದು.

ಅಮೇರಿಕದಲ್ಲಿ ಜನಪ್ರಿಯವಾಗಿ ಹಾಗು ಹೆಚ್ಚಿಗೆ ಮಾರಾಟವಾಗುವ ಪುಸ್ತಕಗಳ

ವಾಕ್ಯರಚನೆಯಲ್ಲಿ ಬಳಸಿರುವ ಪದಗಳ ಉದ್ದವನ್ನು ಕಂಡುಹಿಡಿದಿದ್ದಾರೆ. ಅವುಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ. ಪದದಲ್ಲಿ ಸರಾಸರಿ ಅಕ್ಷರಗಳ (syllable) ಸಂಖ್ಯೆಯನ್ನು ಸೂಚಿಸುವುದು.

ಹೆಚ್ಚಿಗೆ ಮಾರಾಟವಾದ ಪುಸ್ತಕಗಳು	ಅಕ್ಷರಗಳು (syllables)
1) ಗಾನ್ ವಿತ್ ದಿ ವಿಂಡ್	4.96%
2) ಆಲಿವರ್ ಟ್ವಿಸ್ಟ್	5·97%
3) ಬೆನ್ ಹರ್	5·69%
4) ಐವಾನ್ ಹೋ	6·86%

ಮೇಲ್ಕಂಡ ಪುಸ್ತಕಗಳ ಪೈಕಿ ಗಾನ್ ವಿತ್ ದಿ ವಿಂಡ್, ಬೆನ್ ಹರ್, ಐವಾನ್ ಹೋ ಪುಸ್ತಕಗಳಲ್ಲಿ ಪ್ರತಿಯೊಂದು ೨೫ ಲಕ್ಷ ಪ್ರತಿಗಳು ಖರ್ಚಾಗಿದೆ.

ಕಾಲಬದಲಾದಂತೆ ಶಬ್ದಕೋಶ ವಿಸ್ತಾರವಾಗುವುದು. ಈ ಅಂಶವನ್ನು ಆಂಗ್ಲ ಭಾಷೆಯ ನಿಘಂಟಿನಿಂದ ಗೊತ್ತುಮಾಡಬಹುದು. ೧೮೨೮ ರಲ್ಲಿ ನೋವಾ ವೆಬ್‌ಸ್ಟರ್ (Noah Webster) ರಚಿಸಿದ ನಿಘಂಟಿನಲ್ಲಿ ೭೦,೦೦೦ ಪದಗಳಿದ್ದವು. ೧೮೬೪ ರಲ್ಲಿ ೧,೧೪೦೦೦ ಪದಗಳಾಗಿವೆ. ೧೯೦೯ ರಲ್ಲಿ ೪,೦೦,೦೦೦ ಕ್ಕೆ ಏರಿದೆ. ಪ್ರಾಯಶಃ ಇತ್ತೀಚೆಗೆ ಪ್ರಕಟವಾದ ನಿಘಂಟಿನಲ್ಲಿ ಒಂದು ಲಕ್ಷಕ್ಕೆ ಕಡಿಮೆಯಿಲ್ಲದೆ ಹೊಸ ಪದಗಳು ಸೇರಿವೆ. ಅಂದರೆ ಕಳೆದ ನೂರು ವರ್ಷಗಳಲ್ಲಿ ಆಂಗ್ಲ ಭಾಷೆಯ ನಿಘಂಟು ಸಾಕಷ್ಟು ಬೆಳೆದಿದೆ. ಅಂತೆಯೇ ಎಲ್ಲಾ ಭಾಷೆಗಳೂ ಸಹ. ಇದು ಮಾನವನ ಪ್ರಗತಿಯ ಲಕ್ಷಣ.

ನಿಘಂಟಿನಲ್ಲಿರುವ ಎಲ್ಲಾ ಪದಗಳನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಲು ಸಾಧ್ಯವೆ? ಅಷ್ಟೊಂದು ಶಬ್ದ ಸಂಪತ್ತು ವ್ಯಕ್ತಿಯ ನಿತ್ಯ ವ್ಯವಹಾರಕ್ಕೆ ಬೇಕೆ? ಬಳ್ಳಿನ ಶಬ್ದ ಸಂಪತ್ತು ಯಾವ ರೀತಿ ಬೆಳೆಯುವುದು ಎಂಬುದನ್ನು ಕೆಳಗೆ ಕೊಟ್ಟಿದೆ. ಇದು ಶಾಲೆಗೆ ಹೋಗುವ ಮಕ್ಕಳಿಗೆ ಸಂಬಂಧಪಟ್ಟಿದ್ದು. ಮೆಡೋರಾ ಇಸ್ಮಿತ್ ಎಂಬಾಕೆ ೬ ವರ್ಷದಿಂದ ೧೯ ವಯಸ್ಸಿನ ೮೬೭ ವಿದ್ಯಾರ್ಥಿಗಳ ಶಬ್ದಕೋಶವನ್ನು ಪರಿಶೀಲಿಸಿದಳು. ಈ ಸಂಶೋಧನೆಯಿಂದ ಹಲವು ಮಕ್ಕಳ ಶಬ್ದಕೋಶದ ಪರಿಮಾಣಗಳು ಕೆಳಗೆ ಕಂಡಂತೆ ಇದ್ದುವೆಂದು ಕಂಡುಬಂದಿದೆ.

ವಯಸ್ಸು	ಶಬ್ದಗಳು	ವಯಸ್ಸು	ಶಬ್ದಗಳು
6	2000	13	5400
7	2750	14	5500
8	3800	15	6000
9	4300	16	7000
10	4500	17	6900
11	5100	18	6800
12	5500	19	7300

ಶಿಕ್ಷಣ ತಜ್ಞರ ಅಂದಾಜಿನ ಪ್ರಕಾರ ಒಬ್ಬ ವಯಸ್ಕನ ಶಬ್ದ ಸಂಪತ್ತು ೨೦೦೦ ಪದಗಳಿಂದ ೨೦,೦೦೦ ಪದಗಳಿರಬಹುದು. ಒಂದೇ ಪದಕ್ಕೆ ಹಲವು ಅರ್ಥಗಳನ್ನು ಸೂಚಿಸುವ ಪದಗಳು ಈ ಪಟ್ಟಿಯಲ್ಲಿ ಸೇರಿವೆ. ಈ ಅಂದಾಜು ಪಾಶ್ಚಾತ್ಯ ಭಾಷೆಗಳಿಗೆ ಕೊಟ್ಟಿರುವ ಪ್ರಮಾಣ. ಉದಾಹರಣೆಗೆ ವಿವಿಧ ಅರ್ಥಗಳನ್ನು ನೀಡುವ ಕನ್ನಡ ಪದಗಳನ್ನು ಕೊಟ್ಟಿರುತ್ತೆ. 'ಎತ್ತು' ಎಂಬ ಪದಕ್ಕೆ ಎರಡು ಅರ್ಥಗಳಿವೆ. ಒಂದು, ಪ್ರಾಣಿ. ಎರಡು, ಭಾರವನ್ನು ಎತ್ತು. ಹೈಸ್ಕೂಲಿನ ಒಬ್ಬ ಸಾಮಾನ್ಯ ವಿದ್ಯಾರ್ಥಿಯ ಶಬ್ದ ಸಂಪತ್ತು ೧೦೦೦೦–೧೫೦೦೦ ಪದಗಳ ಪರಿಮಿತಿಯಲ್ಲಿರುವುದು. ಆದರೆ ಸಾಮಾನ್ಯವಾಗಿ ಮನುಷ್ಯನ ಸಂಭಾಷಣೆ ೩೦೦೦ ಪರಿಚಯ ಪದಗಳಿಗಿಂತ ಮೀರಲಾರದು ಎಂದು ಅಂದಾಜು ಮಾಡಲಾಗಿದೆ.

ಆಂಗ್ಲ ಭಾಷೆಯಲ್ಲಿ ಕೆಲವು ಪದಗಳು ಹೆಚ್ಚಾಗಿ ಬಳಕೆಯಲ್ಲಿ ಕಾಣಬರುತ್ತವೆ. ಆ ಭಾಷೆಯಲ್ಲಿ ಚಿಕ್ಕದಾದ the, of, and, to, a, in, that, it, is, ಮತ್ತು y ಪದಗಳು ಮಾತನಾಡುವ ಮತ್ತು ಬರವಣಿಗೆಯ ಸಂಪತ್ತಿನ ¼ ಭಾಗ ಎಂದು ಕಂಡು ಬಂದಿವೆ. ಅವುಗಳಂತೆಯೇ ಕನ್ನಡ ಭಾಷೆಯಲ್ಲೂ ಅದು, ಆ, ಇದು, ಈ, ಇವನು, ಅವನು ಎಂಬ ಪದಗಳು ಹೆಚ್ಚಿನ ಬಳಕೆಯಲ್ಲಿ ಇರುವುದಾಗಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ತಯಾರು ಮಾಡಿರುವ ಪದಪಟ್ಟಿಯಿಂದ ಕಂಡುಬಂದಿದೆ.

ಜನಸಾಮಾನ್ಯರಲ್ಲಿ ಆಯಾ ಕಾಲದಲ್ಲಿ ಬಳಸುವ ಶೇಕಡ ೮೦ ಪದಗಳು ಚಿರಪರಿಚಿತವಾದ ೧೦೦೦ ಪದಗಳು. ಅಂತೆಯೇ ಬರವಣಿಗೆಯಲ್ಲಿ ಉಪಯೋಗ ಆಗುವ ಶೇಕಡ ೯೮ ಪದಗಳು ಹೆಚ್ಚಿಗೆ ಬಳಕೆಯಲ್ಲಿರುವ ೧೦,೦೦೦ ಪದಗಳು. ಟೈಮ್ಸ್ ಪತ್ರಿಕೆ ಅಮೇರಿಕದಲ್ಲಿ ಜನಪ್ರಿಯ ಪತ್ರಿಕೆ. ಈ ಪತ್ರಿಕೆ ಮೇಲ್ಕಂಡ ೧೦.೦೦೦ ಪದಗಳ ಚೌಕಟ್ಟಿನಲ್ಲಿರುವ ಪದಗಳನ್ನೇ ಬಳಸುವುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಕೂಡ ಶೇಕಡಾ ೧ಕ್ಕೆ ಮೀರಿ ಹೊಸ ಪದಗಳನ್ನು ಬಳಸುವುದಿಲ್ಲ.

ಪ್ರತಿಯೊಂದು ಪದಕ್ಕೂ ಅರ್ಥವಿದೆ. ಪದಗಳಿಗೆ ಬಹಳ ಬೆಲೆ ಇದೆ. ಮಾತೇ ಮುತ್ತು ; ಮಾತೇ ಮೃತ್ಯು ಎಂಬ ನಾಣ್ಣುಡಿ ಕೇಳಿದ್ದೇವೆ. ಓದುಗರ ಕಾಲ ಮತ್ತು ಅಚ್ಚು ಹಾಕುವ ಕಾಗದಕ್ಕೂ ಬೆಲೆ ಇದೆ. 'ನುಡಿದರೆ ಮುತ್ತಿನ ಹಾರದಂತಿರಬೇಕು.' ಎಂಬೆಲ್ಲ ಮಾತುಗಳು ಪದಸಂಪತ್ತಿನ ಹಾಗೂ ಅದರ ವ್ಯಯದ ಬಗ್ಗೆ ತಿಳಿಸುವ ಮಾತುಗಳಿವೆ. ಆದ್ದರಿಂದ ಹೇಳುವುದನ್ನು ಆದಷ್ಟು ಕಡಿಮೆ ಪದಗಳಲ್ಲಿ ಹೇಳುವುದು ಒಳ್ಳೆಯದು. ಕೆಲವು ಪದಗಳು ಸವಕಲು ನಾಣ್ಯದಂತೆ ಬಳಕೆಗೆ ಬಾರದಂತಹವು. ಉದಾಹರಣೆಗೆ: ' ಕಾಸು '. ಮಾರ್ಕ್‌ಟ್ವೈನ್ ಒಮ್ಮೆ ತನ್ನ ಸ್ನೇಹಿತನಿಗೆ "ನೀನು ಸರಳ ಮತ್ತು ನೇರವಾದ ಭಾಷೆ, ಪುಟ್ಟ ಪುಟ್ಟ ಪದಗಳು ಮತ್ತು ಚಿಕ್ಕ ಚಿಕ್ಕ ವಾಕ್ಯಗಳನ್ನು ಉಪಯೋಗಿಸುವೆ. ಇಂಗ್ಲಿಷ್ ಭಾಷೆ ಬರೆಯುವ ರೀತಿಯೇ ಅದು. ಇದು ಅತ್ಯುತ್ತಮವಾದ ಆಧುನಿಕ ಪದ್ಧತಿ. ಇದೇ ಕ್ರಮವನ್ನು ಅನುಸರಿಸು" ಎಂಬುದಾಗಿ ತಿಳಿಸಿದನು. ಈ ಮಾತು ಎಲ್ಲಾ ಭಾಷೆಗಳಿಗೂ ಅನ್ವಯಿಸುವುದು.

ಕ್ರಿಯಾಪದವೇ ವಾಕ್ಯದ ಜೀವಾಳ. ವಾಕ್ಯ ಪರಿಣಾಮಕಾರಿಯಾದ ಪ್ರಭಾವ ಬೀರಬೇಕಾದರೆ ಕ್ರಿಯಾಪದ ಸತ್ವಶಾಲಿ ಆಗಿರಬೇಕು. ಕರ್ತರಿ ಪ್ರಯೋಗದಿಂದ ಕೂಡಿದ ವಾಕ್ಯಗಳು ಸತ್ವಶಾಲಿಯಾಗಿರುವುವು. ಕರ್ಮಣಿ ಪ್ರಯೋಗದ ಬಳಕೆಯಿಂದ ವಾಕ್ಯಕ್ಕೆ ಅಷ್ಟೊಂದು ಶಕ್ತಿ ಬರಲಾರದು. ಉದಾಹರಣೆಗೆ 'ಆದ್ದರಿಂದ ನಮ್ಮ ಮುಂದುವರಿಕೆ ಆಗಲೇಬೇಕು.' 'ತಾವು ಭೋಜನ ಮಾಡೋಣಾಯಿತೆ'. ಇವುಗಳ ಬದಲಾಗಿ 'ಆದ್ದರಿಂದ ನಾವು ಮುಂದುವರಿಯಲೇ ಬೇಕು;' 'ತಾವು ಭೋಜನ ಮಾಡಿದಿರಾ'? ಇವು ನೇರವಾಗಿ ಅರ್ಥವನ್ನು ಕೊಡುವ ವಾಕ್ಯಗಳು.

ಬರವಣಿಗೆ ಮಾತನಾಡಿದಂತೆ ಸರಳವಾಗಿದ್ದರೆ ಆಕರ್ಷಣೀಯವಾಗಿರುವುದು. ಬರಹ ಓದುಗನಿಗೇ ಅಲ್ಲವೆ ? ಮಾತನಾಡುವ ಭಾಷೆ ಓದುಗನ ಸ್ವಂತ ಭಾಷೆ. ಅದನ್ನು ಅಚ್ಚಿನಲ್ಲಿ ನೋಡಿದಾಗ ಅವನು ಸುಲಭವಾಗಿ ಅರ್ಥಮಾಡಿಕೊಳ್ಳುವನು. ಮಾತನಾಡುವಾಗ ಎದುರಿಗೆ ಇರುವ ವ್ಯಕ್ತಿಯ ಪ್ರತಿಕ್ರಿಯೆಯನ್ನು ಪರಿಶೀಲಿಸಿ ಮಾತನಾಡಬಹುದು. ಆತನ ಮುಖಚರ್ಯೆ ನಮ್ಮ ಕಣ್ಣಿಗೆ ಬೀಳುವುದು. ಮಾತಿನ ಕಡೆಗೆ ಆತನ ಗಮನ ಇದೆಯೋ ? ಅಥವಾ ಇಲ್ಲವೆ ಎಂಬುದನ್ನು ಕಾಣುವ ಅವಕಾಶ ಇದೆ. ಆದರೆ ಗ್ರಂಥಕರ್ತ ತನಗೆ ಕಾಣದಿರುವ ಓದುಗರೊಡನೆ ಬರಹದ ಮೂಲಕ ಮಾತನಾಡುವನು. ಆದ್ದರಿಂದ ಮುಖತಃ ಸಂಭಾಷಣೆ ಮಾಡಿದಷ್ಟೇ ಪರಿಣಾಮಕಾರಿಯಾದ ಬರಹ ಅವಶ್ಯಕ. ಇದರಲ್ಲಿ ಒಂದು ಸಮಸ್ಯೆ ಸಹಜವಾಗಿ ಏಳುವುದು. ಆಡುವ ಭಾಷೆಯನ್ನು ಬರವಣಿಗೆಯಲ್ಲಿ ಎಷ್ಟರಮಟ್ಟಿಗೆ ಅಳವಡಿಸಬಹುದು. ಮಾತನಾಡುವಾಗ ಬಳಸುವ ಪದಗಳು ಕೆಲವು ವೇಳೆ ಗ್ರಾಮ್ಯ ಶಬ್ದಗಳು ಮತ್ತು ವ್ಯಾಕರಣಬದ್ಧವಲ್ಲದವೂ ಆಗಿರುವುವು. ಅವುಗಳನ್ನು ಬರವಣಿಗೆಯಲ್ಲಿ ಬಳಸಬಹುದೆ ? ಎಷ್ಟರಮಟ್ಟಿಗೆ ? ಸಂಭಾಷಣೆಯ ಸನ್ನಿವೇಶ ಬಂದಾಗ ಗ್ರಾಮ್ಯ ಶಬ್ದಗಳನ್ನು ಉಪಯೋಗ ಮಾಡಿದಲ್ಲಿ ಬರವಣಿಗೆಯ ಸೊಗಸು ಹೆಚ್ಚುವುದು. ಆದರೆ ಅವುಗಳನ್ನು ಗ್ರಾಮಸ್ಥರ ಬಾಯಿಯಿಂದಾಗಲಿ ಅಥವಾ ಸಂಭಾಷಣೆಯಲ್ಲಿ ತೊಡಗಿರುವ ವ್ಯಕ್ತಿಯ ಮೂಲಕವಾಗಲೀ ಹೇಳಿಸುವುದು ಒಳ್ಳೆಯದು. ಆಗ ಅದು ಸ್ವಾಭಾವಿಕವಾಗಿ ಕಾಣುವುದು. ಕೆಲವು ಮಾತನಾಡುವ ಶಬ್ದಗಳನ್ನು ಬರವಣಿಗೆಯಲ್ಲಿ ಬಳಸುವುದು ಕಷ್ಟ. ಕಾರಣ ಆ ಪದಗಳನ್ನು ಓದಲು ಕಷ್ಟವಾಗುವುದು. ಯಾಕೆಂದರೆ ಆ ಪದಗಳು ಹೆಚ್ಚಿನ ಸಂಯುಕ್ತಾಕ್ಷರಗಳಿಂದ ಕೂಡಿರುವುವು. ಉದಾಹರಣೆಗೆ: ಹೈಕಳು. ಹ್ಯಾದ. ಬತ್ತ್ಯಾರೆ. ಹೊಂಟ್ಯಾರೆ. ವಯಸ್ಕರಿಗೆ ಕಾಲಕ್ರಮೇಣ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಬೇಕು. ಆದ್ದರಿಂದ ಹೊಸದಾಗಿ ಅಕ್ಷರಸ್ಥರಾದವರ ಸಲುವಾಗಿ ರಚಿಸಿದ ಸಾಹಿತ್ಯದಲ್ಲಿ ಬಳಸಿದಷ್ಟು ಗ್ರಾಮ್ಯಶಬ್ದಗಳನ್ನು ಮುಂದುವರಿಸುವ ಸಾಹಿತ್ಯದಲ್ಲಿ ಬಳಸದಿರುವುದು ಒಳ್ಳೆಯದು.

ಬಳಕೆಯಲ್ಲಿರುವ ಪದಗಳು ಓದುಗರಿಗೆ ಪರಿಚಯವಾದ ಪದಗಳೇ. ಅವುಗಳು ಓದುಗರಿಗೆ ಹೆಚ್ಚಾಗಿ ಕಣ್ಣಿಗೆ ಕಟ್ಟುವಂತೆ ಇದ್ದರೆ ಉತ್ತಮ. ಆಗ ವಿಷಯ ಚೆನ್ನಾಗಿ ಅರ್ಥವಾಗುವುದು. ಮೇಲಾಗಿ ಓದುಗರ ಮನಸ್ಸನ್ನು ಸೆಳೆಯುವುದು. ಬಳಸುವ ಪದ

ಗಳು ಓದುಗರ ಕಣ್ಣಿಗೆ ಮತ್ತು ಕಿವಿಗೆ ಆಪ್ಯಾಯಮಾನವಾಗಿ ಇರಬೇಕು. ಮೂಗಿಗೆ ವಾಸನೆ ಬಂದಂತೆ, ಸ್ಪರ್ಶಮಾಡಿದ ಭಾವನೆ ಬರುವಂತಹ ಪದಗಳು ಅವಶ್ಯಕ. ಓದುಗನ ಮನಸ್ಸನ್ನು ಹಿಡಿದು ನಿಲ್ಲಿಸುವಂತಹ ಪದಗಳಿದ್ದರೆ ಒಳ್ಳೆಯದು. ಉದಾಹರಣೆಗೆ 'ಮಾತು ಹತ್ತಿಯಂತೆ ಮೃದು,' 'ಶ್ರೀಗಂಧದ ವಾಸನೆಯಂತೆ ಹಿತ' 'ಕಿವಿಗೆ' ಗೆಜ್ಜೆ ಸದ್ದಿನಂತೆ, ಕಿತ್ತಲೆಹಣ್ಣಿನ ಬಣ್ಣದಂತೆ ರಂಜಿಸಬೇಕು.

ಬರವಣಿಗೆ ಓದುಗನ ದೃಷ್ಟಿಯಿಂದ ಸಾರ್ಥಕವಾಗಬೇಕು. ಹಾಗೆ ಇರಬೇಕಾದರೆ ಭಾವಿ ಓದುಗನ ಹಾಲಿ ಅನುಭವವನ್ನು ಅರಿಯುವುದು ಸೂಕ್ತ. ಓದುಗನಿಗೆ ವಸ್ತುವಿನ ಬಗ್ಗೆ ಈಗಾಗಲೆ ನಿರ್ದಿಷ್ಟವಾಗಿ ತಿಳಿದಿರುವುದು ಏನು ? ಅವನಿಗೆ ಹೆಚ್ಚಾಗಿ ಏನು ತಿಳಿಸಬೇಕು ? ತಿಳಿಸುವ ಬಗೆ ಹೇಗೆ ? ಇವುಗಳನ್ನು ಕೂಲಂಕಷವಾಗಿ ವಿಚಾರ ಮಾಡಿ ಓದುಗನ ಮಟ್ಟಕ್ಕೆ ಮೀರದಂತೆ ಬರೆಯಬೇಕು. ಉದಾಹರಣೆಗೆ, ಹಳ್ಳಿಗಾಡಿನ ರೈತರಿಗೆ ಕೋಳಿಸಾಕಣೆ ಸ್ವಲ್ಪಮಟ್ಟಿಗೆ ತಿಳಿದಿರುವ ವಿಷಯ. ಆದರೆ ಅದನ್ನು ಹಿಂದಿನ ಪದ್ಧತಿಯಲ್ಲೇ ಸಾಕುವರು. ಆಹಾರ ತಿನ್ನಲು ಕೋಳಿಗಳನ್ನು ಬಿಡುವರು. ಇದರಿಂದ ಕೋಳಿಗಳ ಆರೋಗ್ಯಕ್ಕೆ ಧಕ್ಕೆ ಆಗುವದು ಎಂಬ ವಿಷಯ ಅವರಿಗೆ ತಿಳಿಯದು. ಜೊತೆಗೆ ಸೀಮೆ ಕೋಳಿಗಳನ್ನು ಸಾಕಿದರೆ ಮನೆ ಊರ್ಜಿತವಾಗುವದಿಲ್ಲವೆಂಬ ಮೂಢನಂಬಿಕೆ ಅವರಲ್ಲಿ ಇರುವದು. ಬರಹದಲ್ಲಿ ಈ ತಪ್ಪು ಅಭಿಪ್ರಾಯಗಳನ್ನು ನಿರ್ಮೂಲಿಸಿ ಸರಿಯಾದ ತಿಳಿವಳಿಕೆ ಉಂಟಾಗುವಂತೆ ಬರೆಯಬೇಕು.

ನಾವು ಬಳಕೆ ಮಾಡುವ ಪದಗಳೇ ಓದುಗನ ಮನಸ್ಸಿಗೆ ಕಲ್ಪನೆ ತಂದು ಕೊಡುವುವು. ಆ ಕಲ್ಪನೆಯನ್ನು ಅವನು ತನ್ನ ಅನುಭವದ ಒರೆಗಲ್ಲಿಗೆ ತಿಕ್ಕಿ ನೋಡುವನು. ಬರಹಗಾರ ಒಂದು ರೀತಿಯಲ್ಲಿ ಓದುಗರ ಪರಕಾಯ ಪ್ರವೇಶ ಮಾಡಿ ಅವನನ್ನು ಅರಿಯುವುದು ಸೂಕ್ತ ಮತ್ತು ಸಾಧು. ಪದದ ಅರ್ಥವ್ಯಾಪ್ತಿ ಒಬ್ಬರಿಂದ ಇನ್ನೊಬ್ಬರಿಗೆ ವ್ಯತ್ಯಾಸವಾಗಬಹುದು. ಈ ಬದಲಾವಣೆ ಆಯಾ ಓದುಗನ ಶಕ್ತಿಯನ್ನು ಅವಲಂಬಿಸುವುದು. ವಿಷಯದ ವಿವರಣೆ ಬೇಕು. ವಿವರಣೆ ನೀಡುವ ಸಂದರ್ಭದಲ್ಲಿ ಪ್ರಾಮುಖ್ಯವಾಗಿ ಹೇಳಬೇಕಾದ ಅಂಶಗಳನ್ನು ಮರೆಯಬಾರದು. ಕಾಲ್ಚೆಂಡಿನ ಆಟಗಾರ ಚೆಂಡಿನ ಕಡೆಗೂ ಮತ್ತು ಆಟದ ಮೈದಾನದ ಕಡೆಗೂ ಗಮನ ನೀಡುವನು. ಅಂತೆಯೇ ಬರಹಗಾರನು ಬರವಣಿಗೆಯ ಕಡೆಗೂ ಮತ್ತು ಓದುಗನ ಕಡೆಗೂ ಗಮನ ಕೊಡಬೇಕು.

ಬರವಣಿಗೆ ಓದುಗನ ದೃಷ್ಟಿಯಿಂದ ಆಕರ್ಷಕವಾಗಿ ಪ್ರಭಾವಯುತವಾಗಿ ಇರಬೇಕು. ಬಳಸುವ ಭಾಷೆ, ಶೈಲಿ, ವಿಷಯ ನಿರೂಪಣೆಯಲ್ಲಿ ಒಂದೇ ಧಾಟಿಯನ್ನು ಅನುಸರಿಸಿದಲ್ಲಿ ಓದುಗನಿಗೆ ಬೇಸರಿಕೆ ಬರಬಹುದು. ಇಂದು ಹಾಕಿದ ಬಟ್ಟೆಯನ್ನು ನಾಳೆಯೂ ಧರಿಸಲು ಇಚ್ಛಿಸುವದಿಲ್ಲ. ಹಾಗೆಯೇ ದಿನವೂ ಒಂದೇ ಬಗೆಯ ಊಟ ಮಾಡಲು ಬಯಸುವುದಿಲ್ಲ. ಇದೇ ಮಾದರಿಯಲ್ಲಿ ಬರವಣಿಗೆಯೂ ಸಹ ಇರಬೇಕು. ವಾಕ್ಯರಚನೆ, ಪದಗಳ ಬಳಕೆ, ವಿಷಯ ನಿರೂಪಣೆಯಲ್ಲಿ ವೈವಿಧ್ಯತೆ ಬರಲು ಆಳವಾದ ಓದುಗಾರಿಕೆಯಿಂದ ವಿಷಯ ಸಂಗ್ರಹ ಮಾಡಬೇಕು. ಸಂಗ್ರಹಿಸಿದ ವಿಷಯವನ್ನು ನಿರೂಪಿ

ಸುಪದರಲ್ಲಿ ಹೆಚ್ಚಿನ ಅಭ್ಯಾಸಬೇಕು. ಬರವಣಿಗೆ ಅಭ್ಯಾಸ ಮಾಡುತ್ತಾ ಕುದುರುವುದು. ಇದರೊಡನೆ ಓದುಗನ ಮನಸ್ಸನ್ನು ತಿಳಿಯುವ ಶಕ್ತಿಯೂ ಹೆಚ್ಚುವುದು. ಬರವಣಿಗೆಯ ಮೂಲಕ ಕಣ್ಣಿಗೆ ಕಾಣದಿರುವ ಓದುಗನೊಡನೆ ಸಂಪರ್ಕ ಬೆಳೆಸುತ್ತೇವೆ. ಇನ್ನೊಬ್ಬನೊಡನೆ ಮಾತನಾಡುವಾಗ ಎದುರಿಗೆ ಇರುವವನ ಮನಸ್ಸು ಮತ್ತು ಮುಖಚರ್ಯೆಯನ್ನು ತಿಳಿದು ಮಾತಿನ ಧಾಟಿಯನ್ನು ಬದಲಾಯಿಸುವಂತೆ ಬರವಣಿಗೆಯಲ್ಲೂ ಕೂಡ ಸರಿಮಾಡಿಕೊಳ್ಳಬಹುದು.

ವಿಶ್ವಸಂಸ್ಥೆಯ ೨೬ನೇ ಪ್ರಣಾಳಿಕೆಯ ಪ್ರಕಾರ ಓದುಬರಹ ಕಲಿಯುವುದು ಪ್ರತಿಯೊಬ್ಬನ ಅಜನ್ಮಸಿದ್ಧ ಹಕ್ಕು. ಭಾರತ ಸರಕಾರದ ವಿದ್ಯಾಮಂತ್ರಿಗಳಾಗಿದ್ದ ಡಾ|| ವಿ. ಕೆ. ಆರ್. ವಿ. ರಾವ್ ಭಾರತದ ರಾಜ್ಯಾಂಗದಲ್ಲಿ ಈ ಅಂಶವನ್ನು ಅಳವಡಿಸಬೇಕೆಂದು ಅಭಿಪ್ರಾಯಪಟ್ಟಿದ್ದರು. ಇಂದು ಎಲ್ಲರೂ ಓದುಬರಹ ಕಲಿತು ಸುಶಿಕ್ಷಿತರಾಗಬೇಕು ಎಂಬ ಭಾವನೆ ಬೆಳೆದಿದೆ. ಹಾಗೂ ಬೆಳೆಯುತ್ತಲಿದೆ. ಈ ಪರಿಸ್ಥಿತಿಯಲ್ಲಿ ಸಾಮಾನ್ಯ ಮಟ್ಟದ ಓದುಗರಿಗೂ ಸಹ ರಚಿಸಿದ ಸಾಹಿತ್ಯ ಅರ್ಥವಾಗಬೇಕು. ಬೈಬಲ್ಲು ಸಾಮಾನ್ಯ ಜನರಿಗೂ ಸಹ ಅರ್ಥವಾಗುವಂತಹ ಗ್ರಂಥ. ಅಂತೆಯೇ ಕನ್ನಡ ಭಾಷೆಯಲ್ಲಿ ರಚಿತವಾಗಿರುವ ಗದುಗಿನ ನಾರಣಪ್ಪನ ಭಾರತವೂ ಸಹ ಬರಹ. ಕೇವಲ ಪಂಡಿತರಂಜನೀಯವಾಗಿದ್ದರೆ ಸಾಲದು ; ಪಾಮರ ರಂಜನೀಯವಾಗಿಯೂ ಇರಬೇಕು. ಆದ್ದರಿಂದ ವಸ್ತುವನ್ನು ಸರಳವಾದ ಮತ್ತು ಸುಲಭವಾದ ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಬರೆಯಬೇಕು.

ಓದುವ ಅಭ್ಯಾಸ ಬೆಳೆದಂತೆ ಓದುವುದರಲ್ಲಿ ಆಸಕ್ತಿ ಉಂಟಾಗುವುದು. ಕುತೂಹಲ ಕೆರಳುವುದು. ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿ ಸ್ವಾಭಾವಿಕವಾಗಿ ಮೂಡುವುದು. ಸಾಹಿತ್ಯ ಪ್ರೇಮ ಬೆಳೆಯುವುದು. ಆದ್ದರಿಂದ ಈ ದೆಸೆಯಲ್ಲಿ ಓದುಗನಿಗೆ ಆಸಕ್ತಿ ಹುಟ್ಟುವಂತೆ ಪ್ರಾರಂಭದಲ್ಲಿನ ಬರವಣಿಗೆ ಇರುವುದು ಸೂಕ್ತ. ಪ್ರಾರಂಭದಲ್ಲೇ ಬರಹಗಾರರು ಅಲಂಕಾರ ಮುಂತಾದ ವಿಶ್ಲೇಷಣೆಗಳಿಂದ ಪ್ರಭಾವ ಬೀರಲು ಯತ್ನಿಸಿದಲ್ಲಿ ಬರಹ ಬೇಸರ ತರಬಹುದು. ವಿಷಯ ಮನಸ್ಸನ್ನು ಹಿಡಿಯದು ಮನಸ್ಸನ್ನು ಹಿಡಿಯದಿರಬಹುದು.

ಕ್ರಮಪಟ್ಟು ರಚಿಸಿದ ಸಾಹಿತ್ಯ ಓದುಗರ ಆಸಕ್ತಿಗೆ, ಅಭಿರುಚಿಗೆ ಮತ್ತು ಅವರ ಮಟ್ಟಕ್ಕೆ ಇದೆಯೋ ಎಂದು ಪರಿಶೀಲಿಸುವುದು ಅವಶ್ಯಕ. ಇದಕ್ಕೆ ಸಾಹಿತ್ಯದ ಮೌಲ್ಯಮಾಪನ ಎಂದು ಹೆಸರು. ವಾಚ್ಯಶಕ್ತಿಯನ್ನು ಅಳೆಯುವ ಕಾರ್ಯ ಪಾಶ್ಚಾತ್ಯ ದೇಶಗಳಲ್ಲಿ ನಡೆದಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆದಿವೆ. ಈ ಕಾರ್ಯ ಮೊದಲು ಅಮೇರಿಕದಲ್ಲಿ ೧೯೨೦ ರಲ್ಲಿ ಪ್ರಾರಂಭವಾಯಿತು. ಇಂತಹ ಸಂಶೋಧನೆಗಳನ್ನು ಕೈಕೊಳ್ಳಲು ಮೂರು ಕಾರಣಗಳಿವೆ. ೧) ಪುಸ್ತಕವನ್ನು ಓದುಗರ ದೃಷ್ಟಿಯಿಂದ ಬರೆಯಲಾಗಿದೆಯೇ ? ೨) ಶಾಲಾ ಮಕ್ಕಳ ವಾಚನ ಮಟ್ಟಕ್ಕೆ ಇದೆಯೆ ? ೩) ಕಡ್ಡಾಯ ಪ್ರಾಥಮಿಕ ಶಿಕ್ಷಣದ ದೆಸೆಯಿಂದ ಶಿಕ್ಷಣ ಕ್ಷೇತ್ರ ವಿಸ್ತಾರವಾಯಿತು. ಈ ಸಂದರ್ಭದಲ್ಲಿ ಅಚ್ಚಾದ ಪುಸ್ತಕಗಳು ಶಾಲಾ ಮಕ್ಕಳ ವೈಯಕ್ತಿಕ ಅಭಿ

ರುಚಿಗಳನ್ನು ಪೋಷಿಸಬಲ್ಲವೆ? ಈ ಮೂರು ಕಾರಣಗಳಿಂದ ಪುಸ್ತಕಗಳ ಮೌಲ್ಯ ಮಾಪನದ ಆವಶ್ಯಕತೆ ತೋರಿತು.

೧೯೫೦ ರಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ರಚಿಸಿದ ಸಾಹಿತ್ಯದ ವಾಚನ ಶಕ್ತಿಯನ್ನು ಅಳತೆ ಮಾಡುವ ಪ್ರಯತ್ನ ನಡೆಯಿತು. ರಚಿಸಿದ ಪುಸ್ತಕ ವಯಸ್ಕ ಓದುಗರ ಮಟ್ಟಕ್ಕೆ ಮತ್ತು ಅಭಿರುಚಿಗೆ ತಕ್ಕಂತೆ ಇದೆಯೇ? ಎಂಬುದನ್ನು ಅಳತೆ ಮಾಡುವುದೇ ಮುಖ್ಯ ಉದ್ದೇಶ. ಗ್ರೇ ಮತ್ತು ಲೀರಿ ಎಂಬುವರು ವಯಸ್ಕರಿಗಾಗಿ ಬರೆದ ೩೫೦ ಪುಸ್ತಕಗಳ ವಾಚನ ಶಕ್ತಿಯನ್ನು ಅಳತೆ ಮಾಡಿದರು. ಸಂಶೋಧನೆಯಿಂದ ಕಂಡುಬಂದ ಅಂಶಗಳನ್ನು ಕ್ರೋಢೀಕರಿಸಿ ಉಪಾಧ್ಯಾಯರಿಗೂ ಮತ್ತು ಪುಸ್ತಕ ಭಾಂಡಾರದ ಅಧಿಕಾರಿಗಳಿಗೂ ಸಹ ಹೇಳಿದರು. ಫ್ಲಷ್, ಗ್ರೇ ಮತ್ತು ಲೀರಿ ಅವರ ಮೌಲ್ಯಮಾಪಕಗಳನ್ನು ನೂತನ ವಯಸ್ಕ ಸಾಕ್ಷರಸ್ಥರಿಗೆ ಬರೆದ ಪುಸ್ತಕಗಳ ಬಗ್ಗೆ ಪ್ರಯೋಗ ಮಾಡಿದರು. ಹಾಗೂ ಆ ಪುಸ್ತಕಗಳ ಮಟ್ಟವನ್ನು ಗೊತ್ತು ಮಾಡಿ ಒಂದು ಪಟ್ಟಿಯನ್ನು ರಚಿಸಿದರು. ಕೊಲಂಬಿಯ ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಕಾಲೇಜಿನ ಪ್ರಯೋಗಾಲಯ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಅರಿಯುವ ಸಾಮಾನ್ಯ ವಯಸ್ಕ ಓದುಗರಿಗೆ ಜನತಾ ಪುಸ್ತಕ ಭಂಡಾರದ ಮಾಲೆಯಲ್ಲಿ ಸೂಕ್ತ ಪುಸ್ತಕಗಳನ್ನು ರಚಿಸಿದ್ದಾರೆ. ಹೊಸದಾಗಿ ಆಂಗ್ಲ ಭಾಷೆಯನ್ನು ಕಲಿಯುವ ವಯಸ್ಕರಿಗೆ 'ಬ್ರೌನ್ ಸಂಸಾರ ಮಾಲೆ' (Brown family series)ಯಲ್ಲಿ ವಿವಿಧ ಹಂತದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸೈನ್ಯದಲ್ಲಿ ಕೆಲಸ ಮಾಡುವ ಮಾಧ್ಯಮ ವರ್ಗದ ಓದುವ ಶಕ್ತಿಯುಳ್ಳ ಸೈನಿಕರಿಗೆ ಸೂಕ್ತ ಪುಸ್ತಕಗಳ ರಚನೆ ಆಗಿದೆ.

ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಬಹಳ. ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಹೆಚ್ಚಿನ ಜ್ಞಾನ ನೀಡಲು ಸರಳ ಮತ್ತು ಸುಲಭವಾದ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ಬರೆಸಿ ಪ್ರಕಟಿಸಬೇಕಾಗಿದೆ. ವಾಚನ ಶಕ್ತಿಯನ್ನು ಕುದುರಿಸಲು ವಸ್ತುವಿನ ಆಯ್ಕೆ, ನಿರೂಪಣೆ, ಭಾಷಾ ಸಂಪತ್ತು, ವಾಕ್ಯರಚನೆ, ಪದಗಳ ಬಳಕೆ, ಆಕಾರ, ಮುದ್ರಣ ಮತ್ತು ಚಿತ್ರಗಳು ಮುಂತಾದ ಅಂಶಗಳು ಸಹಾಯಕ ಆಗುವವು. ಈ ಅಂಶಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಭಾರತದಲ್ಲಿ ಇದುವರೆವಿಗೆ ವಿವಿಧ ಭಾಷೆಗಳಲ್ಲಿ ಸುಮಾರು ಹತ್ತು ಸಾವಿರ ಪುಸ್ತಕಗಳು ಪ್ರಕಟವಾಗಿವೆ. ಆದರೆ ಅವುಗಳನ್ನು ಶಾಸ್ತ್ರೀಯರೀತ್ಯಾ ಮೌಲ್ಯಮಾಪನ ಮಾಡಬೇಕಾಗಿದೆ. ೧೯೬೮ ರ ನವಂಬರು ಮಾಹೆಯಲ್ಲಿ ಬ್ಯಾಂಕಾಕಿನಲ್ಲಿ ಒಂದು ಸಾಹಿತ್ಯ ರಚನಾಲಯ ನಡೆಯಿತು. ರೈತರ ಮತ್ತು ಕಾರ್ಮಿಕರ ಕ್ರಿಯಾತ್ಮಕ ಸಾಕ್ಷರತೆಗೆ ಪೋಷಕವಾಗುವಂತಹ ಸಾಹಿತ್ಯ ರಚನೆ ರಚನಾಲಯದ ಉದ್ದೇಶವಾಗಿತ್ತು. ಶಾಸ್ತ್ರೀಯವಾಗಿ ರಚಿತವಾದ ವಯಸ್ಕರ ಪಠ್ಯ ಪುಸ್ತಕಗಳಿಗೂ ಮತ್ತು ವಯಸ್ಕರ ಶಿಕ್ಷಣ ಸಾಹಿತ್ಯ ಕ್ಷೇತ್ರದಲ್ಲಿ ಸಾಮಾನ್ಯ ಬರಹಗಾರರಿಂದ ರಚಿತವಾದ ಸಾಹಿತ್ಯಕ್ಕೂ ಬಹಳ ಅಂತರವಿದೆ. ಅದ್ದರಿಂದ ಅಂತ

ನುರಿತ ಬರಹಗಾರರಿಂದ ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಸಹಾಯವಾಗುವಂತಹ ಸಾಹಿತ್ಯವನ್ನು ಶಾಸ್ತ್ರೀಯರೀತ್ಯಾ ರಚಿಸಬೇಕು ಎಂಬ ಅಭಿಪ್ರಾಯ ಪಡಲಾಗಿದೆ. ಪಾಶ್ಚಾತ್ಯ ಭಾಷೆಯಲ್ಲಿ ರಚನೆಯಾದ ಸಾಹಿತ್ಯದ ಮೌಲ್ಯಮಾಪಕಗಳನ್ನು ಭಾರತೀಯ ಭಾಷೆಗಳಿಗೆ ಹೊಂದಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಹೆಚ್ಚಿನ ಸಂಶೋಧನ ಆಗಬೇಕಾಗಿದೆ. ಇದೊಂದು ಮಹತ್ತರವಾದ ಕಾರ್ಯ ಆಗುವುದರಲ್ಲಿ ಸಂದೇಹವಿಲ್ಲ.

1) The technique of clear writing — *Robert Gunning*

2) Readability — *Jeane S. Chall*

3) Word List in Kannada for neo-literates — *State Adult Edn. Council, Mysore*

4) Survey of reading neads and interest of adult new literates in Mysore State — *-do-*

5) Work oriented Fenchorial Literacy — *Unesco, Bangkok 1961*

೬) ಶಿಕ್ಷಣತತ್ವ — ಶ್ರೀ ಟಿ. ವಿ. ತಿಮ್ಮೇಗೌಡ.

★ ಟಿ. ಆರ್. ನಾಗಪ್ಪ

ಪೆರಿಯಪುರಾಣದ ಕಥೆಗಳು

ಎರಿಪತ್ತನಾಯನಾರ್

ಅನಪಾಯನೆಂಬ ಚೋಳರಾಜನ ಪೂರ್ವಜರಿಗೆ ಕರುವೂರ್ ಎಂಬುದು ಒಂದು ಕಾಲದಲ್ಲಿ ರಾಜಧಾನಿಯಾಗಿತ್ತು. ಆ ನಗರದ ಮದಿಲುಗಳ ಮೇಲೆ ಮುಗಿಲುಗಳು ಹಾದು ಹೋಗುವುವು. ಅರಮನೆಯ ತಲೆಬಾಗಿಲಲ್ಲಿ "ಆರಾಯ್ಚಿ" ಗಂಟೆ ಕಂಗೊಳಿಸುತ್ತಿರುವುದು. ಹೂದೋಟಗಳಲ್ಲಿ ಪರಿಮಳ ಸೂಸುತ್ತಿರುವುದು. ವನಿತೆಯರ ಕೇಶಪಾಶಗಳಲ್ಲಿ ಬಿರಿಮಲರ್ಗಳು ಬೆಳಗುತ್ತಿರುವುವು. ತೊರೆಗಳಲ್ಲಿ ಆನೆಗಳು ನೀರಾಟವಾಡುತ್ತಿರುವುವು. ಪುಷ್ಪವಾಟಿಕೆಗಳಲ್ಲಿ ನವಿಲುಗಳು ಕೇಕೆ ಹಾಕುತ್ತ ನೃತ್ಯವಾಡುತ್ತಿರುವುವು. ರಂಗಮಂಟಪಗಳಲ್ಲಿ ಉಲಿವ ಗೆಜ್ಜೆಗಳಾಡುವುವು. ಸುವಾಸಿನಿಯರ ವೇಣಿಗಳಲ್ಲಿ ದುಂಬಿಗಳು ಸುಳಿದಾಡುವುವು, ಹಾದಿಬೀದಿಗಳಲ್ಲಿ ಬೆಳಕು ಚೆಲ್ಲಾಡುವುದು.

ಬಾಂದಳವಂ ಪೆಳಂಜಲೆಸೆವ ಚೋಳನ ಕೋಡಿಗಳಲ್ಲಿ ಹುಲಿಯಾಡುವುದು.* ಆ ನಗರದ ಅಂದ ಇಂತಹದು, ಇಂದ್ರನ ಅಮರಾವತಿಯೂ ಸಹ ಅದಕ್ಕೆ ಎಣೆಯಾಗಲಾರದು.

ಆ ನಗರದ ನಟ್ಟನಡುವೆ ಬಂಗಾರದಂಥ ಪ್ರಾಕಾರಗಳಿಂದ ಮೆರೆವ ಪಶುಪತೀಶ್ವರನ ಸುಂದರವಾದ ದೇಗುಲ ನಲ್ಮೆಯಿಂದ ಶೋಭಿಸುತ್ತಿರುವುದು. ಅಲ್ಲಿ ನೆಲೆನಿಂದ ಹರನಲ್ಲಿ ಎರಿಪತ್ತನಾಯನಾರ್ ಎಂಬ ಶಿವಶರಣರು ಅಸದೃಶವಾದ ಭಕ್ತಿಯನಿಟ್ಟಿದ್ದರು. ಪರಶಿವನನ್ನು ಪೂಜಿಸುವ ಹರಭಕ್ತರ ಎಡರುತೊಡರುಗಳನ್ನು ತೊಡೆದು ಹಾಕುವುದೇ ಎರಿಪತ್ತ ನಾಯನಾರರ ಕಾಯಕವಾಗಿತ್ತು. ಶಿವಭಕ್ತರ ಸಂಕಷ್ಟಗಳನ್ನು ಕೊಚ್ಚಿಹಾಕಲು ಕೊಡ್ಲಿಯನ್ನೇ ಅವರು ಕೈದಾಗಿ ಹಿಡಿದಿದ್ದರು.

ಪಶುಪತೀಶ್ವರನಲ್ಲಿ ದೃಢಭಕ್ತಿಯನ್ನಿಟ್ಟಿದ್ದ ಶಿವಕಾಮಿಯಾಂಡಾರ್ ಎಂಬ ಒಬ್ಬ ಮುದಿಬ್ರಾಹ್ಮಣ ಆ ನಗರದಲ್ಲಿ ವಾಸವಾಗಿದ್ದರು. ಮುಕ್ಕಣ್ಣನಿಗೆ ಅಲರ್ಮಾಲೆ ತೊಡಿಸುವುದೇ ಅವರ ಕಾಯಕವಾಗಿದ್ದಿತು. ಒಂದು ದಿನ ಅವರು ಉಷಃ ಕಾಲದಲ್ಲೆದ್ದು ಎಂದಿನಂತೆ ತೊರೆಯಲ್ಲಿ ಮಿಂದು ಪರಿಶುದ್ಧರಾಗಿ ಬಾಯಿ ಕಟ್ಟಿಕೊಂಡು ಹೂದೋಟವನ್ನು ಸೇರಿದರು. ದುಂಬಿಗಳು ಮುಟ್ಟದೆ ಆಗತಾನೆ ಅರಳುವ ಸ್ಥಿತಿಯಲ್ಲಿದ್ದ ಮೊಗ್ಗುಗಳನ್ನು ಕೊಯ್ದು ತೆಗೆದರು. ಹೂವಿನ ಬುಟ್ಟಿಯನ್ನು ತುಂಬಿಕೊಂಡರು. ಜೊತೆಯಲ್ಲಿ ತನ್ನ ಹೃದಯದಲ್ಲಿ ನಿರ್ಮಲ ಭಕ್ತಿಯನ್ನೂ ಸಹ ತುಂಬಿಕೊಂಡರು. ಒಂದು ಕೈಯಲ್ಲಿ ಲಗುಡವನ್ನು ಹಿಡಿದರು. ನೊಸಲುಗಣ್ಣನಾದ ಮಹಾದೇವನಿಗೆ ಮುಡಿಸಲು ಮುಂಜಾನೆಯಲ್ಲೇ ಹೂವಿನ ಹಾರವನ್ನು ಸಮರ್ಪಿಸಲು ದೇಗುಲದತ್ತ ಧಾವಿಸಿ ಬಂದರು.

---

* ಚೋಳರ ಬಾವುಟದಲ್ಲಿ ಹುಲಿಯ ಲಾಂಛನವಿರುವುದು.

ಅಂದು ಮಹಾನವಮಿಯ ಹಿಂದಿನ ದಿನ. ಆಗ ರಾಜನಾಳುತ್ತಿದ್ದ ಪುಗಳ್ ಚೋಳನ ಪಟ್ಟದಾನೆಯನ್ನು ಮಾವಟಿಗರು ಹೊಳೆಯಲ್ಲಿ ಮೀಯಿಸಿ ಕರೆತರುತ್ತಿದ್ದರು. ಅದಕ್ಕೆ ಹಠಾತ್ತಾಗಿ ಮದಹಿಡಿಯಿತು. ಮೇಲೆ ಕುಳಿತಿರುವ ಮಾವಟಿಗರ ವಶವಾಗದೆ ಬಳಿ ಬಂದ ಕುತ್ತುಕೋಲಿನವರನ್ನು (ಕೊಂತಕಾರರನ್ನು) ಅಟ್ಟಿಸಿ ಓಡುತ್ತಿತ್ತು. ಶಿವಕಾಮಿಯಾಂಡಾರ್ ತಮ್ಮ ದಂಡದಲ್ಲಿ ನೇತುಹಾಕಿದ್ದ ಹೂವಿನ ಬುಟ್ಟಿ ಸಮೇತರಾಗಿ ಆ ದಾರಿಯಲ್ಲಿ ನಡೆಯುತ್ತಿದ್ದರು. ಮದಿಸಿದ ಆನೆ ಆ ಬುಟ್ಟಿಯನ್ನು ಹಿಡಿದೆಳೆದು ಹೂಗಳನ್ನೆಲ್ಲಾ ನೆಲಕ್ಕೆ ಚೆಲ್ಲಾಡಿತು. ಆನೆಯ ಮೇಲಿದ್ದ ಮಾವಟಿಗರು ಆನೆಯ ಈ ವರ್ತನೆಯನ್ನು ತಡೆಯದೆಯೇ ಅದನ್ನು ವೇಗವಾಗಿ ನಡೆಸಿಕೊಂಡು ಹೋಗುತ್ತಿದ್ದರು. ಶಿವಕಾಮಿಯಾಂಡಾರರಿಗೆ ತನ್ನ ಪ್ರಾಣವೇ ನೆಲದ ಮೇಲೆ ಚೆದರಿ ಬಿದ್ದಂತಾಯಿತು. ರೇಗಿದರು. ಕೈಯಲ್ಲಿದ್ದ ಕೋಲಿನಿಂದ ಆನೆಯನ್ನು ಹೊಡೆಯಲು ಅದನ್ನು ಅಟ್ಟಿಸಿಕೊಂಡು ಹೋದರು. ಮುದುಕರಾದ ಶಿವಕಾಮಿಯಾಂಡಾರ್ ಅಷ್ಟು ವೇಗವಾಗಿ ಓಡಲು ಯತ್ನಿಸಿ ಮುಗ್ಗರಿಸಿದರು. ನೆಲಕ್ಕೆ ಬಿದ್ದು ತಲೆ ನೆಲಕ್ಕೆ ಬಡಿಯಿತು. ದುಃಖವು ಸಮುದ್ರದಂತೆ ಉಕ್ಕಿ ಹರಿಯಿತು.

"ಆನೆಯ ಚರ್ಮವ ಧರಿಸಿದ ಅದ್ವಿತೀಯ ವೀರನೇ! ನಿಮಗೆಂದು ತಂದ ಈ ಹೂವುಗಳನ್ನು ಆನೆ ಚೆಲ್ಲುವುದೇ? ತೊರೆಯನ್ನೂ ಹೆರೆಯನ್ನೂ ಧರಿಸಿದ ನಿಮ್ಮ ಜಡೆಯ ಮೇಲೆ ಧರಿಸಲೆಂದು ತಂದ ಹೂಗಳನ್ನು ಈ ಆನೆಯು ಕೆಳಕ್ಕೆ ಚೆಲ್ಲುವುದೇ? ಶಿವಧೋ! ಶಿವಧೋ!" ಎಂದು ಗೋಳಿಟ್ಟರು. ಆಗ ಇದಿರಿನಲ್ಲಿ ಬರುತ್ತಿದ್ದ ಎರಿಪತ್ತನಾಯನಾರರ ಕಿವಿಯನ್ನು ಈ ಆರ್ತನಾದ ಮುಟ್ಟಿತು. ಅವರು ಕೆಂಡದಂತೆ ಹಾರಿ ಕೇಳಿದರು. "ಕರಿಯು" ಅಂಬುದಲ್ಲಾಡಿದವನಿಗೆ ಬಾಣಗಳಿಂದಲೂ ಹಗೆ ಎಂಬುದು ದಿಟ. ಅದನ್ನು ಈಗಲೇ ಕೊಂದು ಕೆಡಹುವೆನು" ಎಂದು ನುಡಿದು, ಕೈಕೊಡಲಿ ಸಮೇತರಾಗಿ ಶಿವಕಾಮಿಯಾಂಡಾರರ ಬಳಿ ಸಾರ್ದು "ಆ ಮತ್ತಗಜ ಎತ್ತ ಸರಿಯಿತು" ಎಂದು ಪ್ರಶ್ನಿಸಿದರು. "ಶಿವನ ಅಡಿಗಳ್ಗೆ ಅರ್ಪಿಸಲು ತಂದಿದ್ದ ಹೂವನ್ನು ಕೆಡಹಿ ನೆಲದ ಮೇಲೆ ಚೆಲ್ಲಾಡಿ ಈ ಬೀದಿಯಲ್ಲಿ ಮುಂದೆ ಸಾಗುತ್ತಿದೆ." ಎಂದು ಶಿವಕಾಮಿಯಾಂಡಾರ್ ನೊಂದ ಹೃದಯದಿಂದ ನುಡಿದರು. ಈ ಮಾತುಗಳನ್ನು ಆಲಿಸಿದರು ಎರಿಪತ್ತನಾಯನಾರ್.

"ಇನ್ನು ಅದು ಬದುಕಲಾರದು" ಎಂದು ಚೀರಿ ಎದ್ದರು. ಕೈಯಲ್ಲಿ ಹಿಡಿದ ಪರಶು ಕಡೆಕಾಲದಲ್ಲಿ ಗಜವನ್ನಟ್ಟಿಸಿಕೊಂಡು ಬರುವ ಶಿವನಂತೆ ತಾವು ವಾಯುವೇಗದಲ್ಲಿ ಮುಂಬರಿದು ಪಟ್ಟದಾನೆಯನ್ನು ಅಡ್ಡಗಿದರು. ಅಂದು ಮಹಾದೇವನು ಸುಲಿದ ಆನೆಯಂತೆಯೇ ಇದೂ ಆಗುವುದು! ಅಮರರು ಬಂದು ತಡೆದರೂ ಈ ಕರಿಯನ್ನು ಕೊಲ್ಲದೆ ಬಿಡಲಾರೆನು ಎಂದು ಹೇಳುತ್ತ ಆನೆಯ ಮೇಲೆರಗಿದರು.

ಆನೆಯೂ ಸಹ ಘೀಳಿಡುತ್ತಾ ಎರಿಪತ್ತನಾಯನಾರರ ಮೇಲೆ ಎರಗಿಬಂತು. ನೋಡಿದವರೆಲ್ಲರೂ ನಡುಗಿದರು. ಎರಿಪತ್ತರು ಸ್ವಲ್ಪವೂ ಅಳುಕಲಿಲ್ಲ. ಮಹಾಭಕ್ತರು ಶಿವ

ಶರಣರಲ್ಲಿಟ್ಟ ಅನುರಾಗವು ಆನೆಗೆ ಅಂಜುವುದೇ ? ಮುಂತು ನಿಂತು ಮೋರಿ ತನ್ನ ಕೊಡ್ಲಿಯಿಂದ ಗಜದ ಸೊಂಡಿಲನ್ನು ತುಂಡರಿಸಿದರು. ಸಮುದ್ರದಂತೆ ಘೀಳಿಡುತ್ತ ಆ ಪೇರಾನೆ ನೆಲಕ್ಕುರುಳಿತು. ಕುತ್ತುಕೋಲಿನವರೂ ಜೋದರು ಐವರು ಹತ್ತಿರ ಬಂದರು. ಎರಿಪತ್ತರು ಅವರೆಲ್ಲರನ್ನೂ ಕೊಂದು ಪರಲೋಕಕ್ಕಟ್ಟಿದರು. ಇತರರು ಓಡುತ್ತಾ ಅರಮನೆಗೆ ಹೋಗಿ ಅರಸನಿಗೆ ಈ ಸುದ್ದಿಯನ್ನು ಮುಟ್ಟಿಸುವಂತೆ ಬಾಗಿಲು ಕಾಯುವವರಲ್ಲಿ ಮೊರೆಯಿಟ್ಟರು.

ಕಾವಲುಗಾರರು ಅರಸನಿದ್ದಲ್ಲಿಗೆ ಬಂದು ನಮಸ್ಕರಿಸಿ ಈ ಸುದ್ದಿಯನ್ನು ತಿಳಿಸಿದರು. "ಪಗೆಯನ್ನರಿಯದ ತಮ್ಮ ಪಟ್ಟದಾನೆಯನ್ನು ಯಾರೋ ಕಡಿದುಕೊಂದು ಹಾಕಿದರಂತೆ! ಬಾಳ್ಗೆ" ಎಂದು ನಡುನಡುಗುತ್ತ ನುಡಿದರು. ಇದನ್ನು ಕೇಳಿದ ಪುಗಳ್ ಚೋಳನು ಆನೆಯನ್ನು ಕೊಂದವರು ಯಾರು ಎಂಬುದನ್ನು ಕೇಳದೆಯೇ ಕೆರಳಿ ಸಿಂಹದಂತೆ ಚಿಮ್ಮಿ ಹೊರಮಟ್ಟನು. ಸೇನಾಧಿಪತಿಗಳು ಅರಸನ ಈ ಸಿಟ್ಟನ್ನು ನೋಡಿ ಸೈನ್ಯ ಸಮೇತ ಅರಸನನ್ನು ಹಿಂಬಾಲಿಸಿದರು. ಚತುರಂಗ ಬಲವು ಸುಸಜ್ಜಿತವಾಗಿ ಬೀದಿಗಳು ಕಿಕ್ಕಿರಿತುಂಬುವಂತೆ ಮುಂದೆ ಸಾಗಿತು. ಶಂಖ, ತಾರೆ, ಕಹಳೆ. ತುತ್ತೂರಿ. ಕಂಬಟ್ಟೆ. ಡಿಂಡಿಮ, ಭೇರಿ, ಢಕ್ಕ. ಮೊದಲಾದ ವಾದ್ಯಂಗಳು ಗಗನವನ್ನೇ ಭೇದಿಸುವಂತೆ ಮೊಳಗಿದವು. ಅರಸನು ಕುದುರೆಯ ಮೇಲೇರಿ ಸೇನೆಯು ಹಿಂಬಾಲಿಸುತ್ತಿರಲು ತಾನು ಮುಂಬರಿಯುತ್ತಿದ್ದನು.

ಆನೆಯೂ, ಮಾವಟಿಗರೂ ಸತ್ತುಬಿದ್ದಿರುವ ಎಡೆಯನ್ನು ತಲುಪಿ ನೋಡಿದನು. ಯಾರೂ ಪಗೆ ಅಲ್ಲಿರಲಿಲ್ಲ. ಕೊಡ್ಲಿಯನ್ನು ಕೈಹಿಡಿದು ಆನೆಯಂಥ ದೇಹದ ಶಿವಶರಣರು– ಎರಿಪತ್ತನಾಯನಾರರು ಅಲ್ಲಿ ನಿಂತಿರುವುದನ್ನು ಕಂಡರು. ಅವರನ್ನು ಕೊಲೆಗಡುಕರೆಂದು ತಿಳಿಯಲಿಲ್ಲ. "ಆನೆಯನ್ನೂ ಮಾವಟಿಗರನ್ನು ಈ ಪರಿ ನೆಲಕ್ಕೆ ಕೆಡಹಿದವರಾರ್" ? ಎಂದು ಗುಡುಗಿದರು. ಸಾಯದೇ ಬದುಕಿದ್ದ ಕೆಲವರು ಹತ್ತಿರದಲ್ಲಿದ್ದ ಜೋದರು ಹೇಳಿದರು "ನಮ್ಮೊಡೆಯ ! ನಿಮಗೆ ಹಗೆ ಎನ್ನುವವರು ಯಾರೂ ಇಲ್ಲ. ಆನೆಯನ್ನು ಕೊಂದವರು ಇವರೇ" ಎಂದು ಕೊಡ್ಲಿ ಹಿಡಿದು ನಿಂತಿದ್ದ ಎರಿಪತ್ತನಾಯನಾರರನ್ನು ತೋರಿಸಿದರು. ಅವರನ್ನು ದಿಟ್ಟಿಸಿ ನೋಡಿದ ಅರಸರು "ಯಾವದೋ ಪ್ರಮಾದ ನಡೆದಿರಬೇಕು. ಅಪಚಾರ ನಡೆದ ಹೊರತು ಮೃಡನ ಶರಣರು ಕೊಲ್ಲಲಾರರು." ಎಂದೆಣಿಸಿ. ಸೈನ್ಯವನ್ನು ಹಿಂದಕ್ಕೆ ಕಳುಹಿಸಿಕೊಟ್ಟು ಕುದುರೆಯ ಮೇಲಿಂದ ಕೆಳಕ್ಕಿಳಿದರು. ಅವರ ಹೃದಯ ಅಳುಕಿತು. "ಆನೆಯು ಮುಂದೆ ಹೋಗುತ್ತಿದ್ದಾಗ ಈ ಹಿರಿಯರಿಗೆ ಯಾವ ವಿಧವಾದ ಕೆಡಕೂ ಸಂಭವಿಸದೆ ಇವರು ತಪ್ಪಿದ್ದು ನಾನು ಮಾಡಿದ ಪುಣ್ಯವೇ ಸರಿ. ಏನು ತಪ್ಪು ನಡೆಯಿತೋ. ಕಾಣೆ" ಎಂದು ಕಳವಳಗೊ–ಳ್ಳುತ್ತ ಎರಿಪತ್ತರ ಬಳಿ ಸಾರ್ದು ಅವರ ಮುಂದೆ ಮೈಯಿಕ್ಕಿ ತಲೆಬಾಗಿ ನಿಂತರು. "ಇಲ್ಲಿ ನಡೆದದ್ದನ್ನು ನಾನರಿಯೆ; ನಾನು ಕೇಳಿದ್ದಂತೂ ಬೇರೆಯಾಗಿದೆ. ಅದಿರಲಿ. ಮಾವಟಿಗರ ಸಮೇತ ಇದನ್ನು ಕೆಡಹುವಂತಹ ಶಿಕ್ಷಾರ್ಹವಾದಷ್ಟೇ ಆನೆ ಮಾಡಿದ ಅಪರಾಧವಾಗಿತ್ತೇ ? ಅನುಗ್ರಹಿಸಬೇಕು." ಎಂದು ಬೇಡಿದರು.

"ಪೆರೆಸೂಡಿದ ಪರಶಿವನಿಗೆ ಅರ್ಪಿಸಲೆಂದು ಶಿವಕಾಮಿಯಾಂಡಾರ್ ತಂದಿದ್ದ ಮಲರ್ಗಳನ್ನು ಈ ಕರಿ ಕಿತ್ತೊಗೆದು ನೆಲದ ಮೇಲೆ ಚೆಲ್ಲಾಡಿತು. ಆದುದರಿಂದ ನಾನು ಇದನ್ನು ಕೊಂದು ಹಾಕಿದೆ. ಮಾವಟಿಗರೂ ಕುತ್ತು ಕೋಲಿನವರು ಆನೆಯನ್ನು ತಡೆಯದೆ ಇದ್ದರು. ಕಾರಣ ಅವರನ್ನೂ ಕೊಂದೆನು. ಇದೇ ನಡೆದ ಸಂಗತಿ" ಎಂದು ಎರಿಪತ್ತನಾಯನಾರರು ಉತ್ತರವಿತ್ತರು.

ಈ ನುಡಿಗಳನ್ನು ಕೇಳಿ ಅರಸನು ತಳಮಳಗೊಂಡನು. ಅಳುಕುತ್ತ ಎರಿಪತ್ತನಾಯನಾರರ ಕಾಲ್ಗಳಿಗೆರಗಿದನು. "ಈ ಕರಿ ನನ್ನದು. ಅದನ್ನು ತಪ್ಪು ಮಾಡದೇ ತಡೆಯಬೇಕಾದವನು ನಾನೇ. ಅದು ಮಾಡಿದ ತಪ್ಪಿಗೆ ನಾನೇ ಹೊಣೆ. ಆದ್ದರಿಂದ ನೀವು ನನ್ನನ್ನೂ ಕೊಲ್ಲಬೇಕು. ನಿಮ್ಮ ಪವಿತ್ರವಾದ ಕೊಡಲಿಯಿಂದ ಈ ಪಾಪಿಯನ್ನು ಕೊಲ್ಲುವುದು ಯುಕ್ತವಲ್ಲ. ಆದಕಾರಣ ಕರವಾಳದಿಂದ ನನ್ನನ್ನು ಕೊಲ್ಲಿರಿ" ಎಂದು ಹೇಳಿ ತನ್ನ ಬಾಳನ್ನು ನೀಡಿದನು. ಅರಸನ ಈ ಪ್ರೀತಿಯ ಮಾತುಗಳನ್ನು ಕೇಳಿದ ನಾಯನಾರರಿಗೆ ಅಂಜಿಕೆಯಾಯಿತು. "ಅಕಟಕಟ ! ನಾನು ಕೆಟ್ಟೆನು. ಅಪ್ರತಿಮ ಪ್ರೀತಿಯ ಈತನ ನಡತೆಗೆ ನಾನು ಏನುಮಾಡಲಿ ? " ಎನ್ನುತ್ತಾ ದಿಕ್ಕು ತೋಚದೆ ಪರದಾಡಿದರು. ಬಾಳನ್ನು ತಾನು ತೆಗೆದುಕೊಳ್ಳದಿದ್ದರೆ, ಅರಸನು ಆತ್ಮಹತ್ಯೆ ಮಾಡಿಕೊಂಡಾನು ಎಂಬ ಭೀತಿಯುಂಟಾಯಿತು. ಆದ್ದರಿಂದ ಅರಸನು ನೀಡಿದ ಬಾಳನ್ನು ತೆಗೆದುಕೊಂಡರು. ಆಗ ಅರಸನು "ತಮ್ಮಿಂದ ನನ್ನ ಅಪರಾಧ ತೀರುವಂಥ ಭಾಗ್ಯವನ್ನು ಪಡೆದೆನು" ಎಂದು ಹರ್ಷಚಿತ್ತರಾಗಿ ಅವರಿಗೆ ನಮಿಸಿ ತಲೆಬಾಗಿ ನಿಂತರು.

ಎರಿಪತ್ತರ ಅಚ್ಚರಿ

ಇದನ್ನು ನೋಡಿ ಎರಿಪತ್ತನಾಯನಾರರಿಗೆ ಅಚ್ಚರಿಯೂ ಅಂಜಿಕೆಯೂ ಒಮ್ಮೆಲೆ ಮೂಡಿಬಂದುವು. "ಈ ವೀರರಸನ ಪಟ್ಟದಾನೆಯನ್ನೂ ಜೋವರನ್ನೂ ಕೊಂದೆನು. ಅದಕ್ಕಾಗಿ ಈತನು ಮುನಿಸುಗೊಳ್ಳಲಿಲ್ಲ. ತಮ್ಮನ್ನೂ ಕೊಲ್ಲಬೇಕೆಂದು ಹರ್ಷಚಿತ್ತರಾಗಿ ನಿಂತಿರುವರು. ಇಂಥ ಧಾರಾಳ ಮನಸ್ಸಿನ ಧರ್ಮನಿಷ್ಠನಿಗೆ ನಾನು ಕೆಡುಕು ಬಗೆದೆನಲ್ಲಾ!" ಎಂದು ಚಡಪಡಿಸಿದರು. ಕೊನೆಗೆ ತಾನು ಸಾಯುವುದೇ ಹಿತವೆಂದು ತೀರ್ಮಾನಿಸಿದರು. ತನ್ನ ಕೈಯಲ್ಲಿದ್ದ ಬಾಳಿಂದ ತನ್ನ ಕೊರಳನ್ನು ಕೊಯ್ಯಲುದ್ಯುಕ್ತರಾದರು. ಇದನ್ನು ಕಂಡು ಅರಸನು ತತ್ತರಿಸುತ್ತ "ಗುರುಹಿರಿಯರ ವರ್ತನೆ ಇಂತವುದೇ"? ಎಂದುಕೊಳ್ಳುತ್ತ ಥಟ್ಟನೆ ಹಾರಿಬ್ಬ ಅವರ ಕೈಯನ್ನೂ ಬಾಳನ್ನೂ ಹಿಡಿದು ತಡೆದರು. "ಈ ತೆರನಾದ ಪ್ರೀತಿಯನ್ನು ಕಂಡ ಪರಶಿವನ ಅನುಗ್ರಹದಿಂದ ಎರಿಪತ್ತರ ಪ್ರೀತಿಯನ್ನು ತೋರಿಸುವುದಕ್ಕಾಗಿಯೇ ಈ ಘಟನೆಯನ್ನು ಹರನು ನಡೆಯಿಸಿದನು. ಆನೆಯು ಹೂಗಳನ್ನು ಚೆಲ್ಲಾಡಿದ್ದೂ ಹರನ ಕೃಪೆಯಿಂದಲೇ" ಎಂಬುದಾಗಿ ಬಾನುಲಿ ಕೇಳಿಸಿತು. ಕೂಡಲೇ ಆನೆಯೂ ಎದ್ದಿತು. ಮಾವಟಿಗರೂ ಎದ್ದರು. ಹೂಬುಟ್ಟಿಯಲ್ಲಿ ಮಲರ್ಗಳು ತುಂಬಿದುವು. ಇದನ್ನೆಲ್ಲಾ ಕಂಡವರ ಮನಸ್ಸು ಅಚ್ಚರಿಯಿಂದ ತುಂಬಿತು.

ಸ್ನೇಹ

ಎರಿಪತ್ತನಾಯನಾರ್ ಬಾಳನ್ನು ಬಿಸುಟು ಚೋಳರಸನ ಪಾದಕ್ಕೆರಗಿದರು. ಅರಸನೂ ನಾಯನಾರರ ಅಡಿಗಳಿಗೆ ಎರಗಿದನು. ಇಬ್ಬರ ಮೇಲೂ ಬಾನಿಂದ ಅಲರ್ಮಳೆಗರೆಯಿತು. ಇಬ್ಬರೂ ಎದ್ದು ಆಕಾಶವಾಣಿಯತ್ತ ಬಾಗಿ ನಮಿಸಿದರು. ಎರಿಪತ್ತರು ಅರಸನನ್ನು ನೋಡಿ, "ತಾವು ಪಟ್ಟದಾನೆಯ ಮೇಲೆ ಮುಂಡಿಸಿ ಅರಮನೆಗೆ ಹಿಂತಿರುಗಬೇಕು. ಆಗಲೇ ನನ್ನ ಮನಸ್ಸು ಸಂತಸಗೊಳ್ಳುವುದು." ಎಂದು ಬಿನ್ನವಿಸಿಕೊಂಡರು. ಈ ಮಾತನ್ನು ಮೀರಲಾಗದೆ, ಅವರಿಗೆ ತಲೆಬಾಗಿ ಅರಸನು ಆನೆಯ ಮೇಲೇರಿ ಮುಂಡಿಸಿದನು. "ಶಿವನಡಿಯಾರರ ಪ್ರೀತಿಗೆ ಮಿತಿಯಿಲ್ಲ" ಎಂದು ಚೋಳನ ಹಿರಿಮೆಯನ್ನು ನೆನೆಯುತ್ತ ಎರಿಪತ್ತರು ಹೋದರು. ಶಿವಕಾಮಿಯಾಂಡಾರ್ ಬಲು ಸೋಜಿಗಪಡುತ್ತ ಪಶುಪತೀಶ್ವರನ ದೇಗುಲಕ್ಕೆ ನಡೆದರು. ಶಿವಭಕ್ತರ ಎಡರು ತೊಡರುಗಳನ್ನು ತೊಡೆದುಹಾಕುವ ಕಾಯಕದಲ್ಲೇ ಎರಿಪತ್ತರು ನಿರತರಾಗಿದ್ದು, ಕೊನೆಗೆ ಹರನ ಬಳಿಸಾರ್ದು ಶಿವಗಣಗಳ ಅಧಿಪತಿಯಾಗಿ ನಿತ್ಯಾನಂದವನ್ನು ಪಡೆದರು.

(ಮುಂದುವರಿಯುವುದು)

★ ಎಂ. ವಿ. ಜಂಬುನಾಥನ್

ಕರ್ನಾಟಕದ ಅಗ್ರಹಾರಗಳು

ಅಗ್ರಹಾರ ತಿಳಿವಳ್ಳಿ

ಹಾನಗಲ್ ತಾಲೂಕಿನಲ್ಲಿಯ ಒಂದು ಹಳ್ಳಿಯಾದ ಈಗಿನ ತಿಳಿವಳ್ಳಿಯು ಹಿಂದೆ ಪ್ರಸಿದ್ಧವಾದ ಸ್ಥಳವಾಗಿತ್ತು. ಇದು ಒಂದು ಅಗ್ರಹಾರವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇದನ್ನು ಮಹಾಗ್ರಹಾರವೆಂದು[೧] ಒಂದು ಶಾಸನವು ಕರೆದಿದೆ. ತಿಳಿವಳ್ಳಿ ಅಗ್ರಹಾರದ ಪ್ರಾಚೀನತೆಯ ಬಗೆ ಹೇಳಲು ಸಾಧ್ಯವಿಲ್ಲವಾದರೂ ಕ್ರಿ. ಶ. ೧೦೭೨ ರ[೨] ಒಂದು ಶಾಸನದಲ್ಲಿ ಇದು ಅಗ್ರಹಾರ ವೆಂದು ವರ್ಣಿತವಾಗಿದೆ. ಇದರಿಂದ ಈ ಕಾಲಕ್ಕಿಂತ ಮೊದಲೇ ಇದು ಅಗ್ರಹಾರ ವೆಂದು ಹೆಸರಾಗಿತ್ತೆಂದು ಹೇಳಬಹುದು. ಅಲ್ಲದೆ ಇದನ್ನು ಅನಾದಿ ಅಗ್ರಹಾರ[೩] ವೆಂದು ಶಾಸನಗಳು ವರ್ಣಿಸಿರುವುದರಿಂದ ತಿಳಿವಳ್ಳಿ ಅಗ್ರಹಾರವು ಸಾಕಷ್ಟು ಪ್ರಾಚೀನತೆಯನ್ನು ಪಡೆದ ಅಗ್ರಹಾರವಾಗಿತ್ತೆಂದು ಹೇಳಬಹುದು.

ತಿಳಿವಳ್ಳಿಯು ನಾಗರಖಂಡ-೭೦ ಎಂಬ ವಿಭಾಗದಲ್ಲಿ ನೆಲೆಗೊಂಡಿದ್ದಿತು. ಈಗಿನ ಶಿವಮೊಗ್ಗ, ಧಾರವಾಡ ಜಿಲ್ಲೆಗಳ ಹಲವು ಭಾಗಗಳನ್ನೊಳಗೊಂಡಿದ್ದ ಈ ನಾಗರಖಂಡವು ಹೆಸರಾಂತ ಬನವಾಸಿ ೧೨೦೦೦ ಎಂಬ ಪ್ರದೇಶದ ಒಂದು ಮುಖ್ಯವಾದ ಪ್ರಾಂತವಾಗಿತ್ತು.[೪] ಈ ನಾಗರಖಂಡದ ವರ್ಣನೆಯು ನಮಗೆ ಶಾಸನಗಳಲ್ಲಿ ದೊರಕುತ್ತದೆ. ಇದು ಪ್ರಕೃತಿ ಸೌಂದರ್ಯದಿಂದ ಕಂಗೊಳಿಸು ತ್ತಿತ್ತೆಂದು ಶಾಸನಗಳು ವರ್ಣಿಸುತ್ತವೆ. ಭೂಕಾಂತೆಯ ಹಾರದಂತೆ ಇದು ಹರ್ಷಪ್ರದವಾಗಿತ್ತೆಂದು[೫] ಶಾಸನದಲ್ಲಿ ಇದರ ವರ್ಣನೆ ಬರುತ್ತದೆ. ತುಂಗಾ ವರದಾ ನದಿಗಳ ನಡುವಣ ಈ ಪ್ರದೇಶವು ಸುಂದರವಾದ, ಸಮೃದ್ಧವಾದ ಮತ್ತು ಫಲವತ್ತಾದ ಪ್ರದೇಶವಾಗಿತ್ತೆಂದು ಕವಿಗಳು ವರ್ಣಿಸುವುದರಲ್ಲಿ

---

೧. K. I. Vol. V, P. 84

೨. K. I. Vol. II, P. 22

೩. ಅದೇ ಪು. 78
K. I. V. P. 173

೪. ಅದೇ. ಪು. 183

ಶ್ರೀಮನ್ನಾಗರಖಂಡ ಮಂಡಳಮಿದಂ ವಿಶ್ವಂಭರಾ ಭಾಮಿನೀಭಾ
ಭಾತಿ ಲಲಾಮವತ್ಸಲಲಿತೈರ್ನಾನಾ[ಗು]ಣಾನಾಂ ಗಣೈಃ ತನ್ಮಧ್ಯೇ
ತಿಳಿವಳ್ಳಿರಗ್ರಗಣಿತಾಂ......

೫. ಅದೇ ಪು. 168.

ಉತ್ಪ್ರೇಕ್ಷೆಯಿಲ್ಲವೆಂದು ಹೇಳಬಹುದು. ಇಲ್ಲಿನ ಒಂದು ಶಾಸನದ ಕವಿಯು ಅದನ್ನು ಹೀಗೆ ವರ್ಣಿಸುತ್ತಾನೆ–

ನಾನಾ ಧಾನ್ಯ ಫಳೋಪಭೋಗ ಸುಭಗಂ ಪೂಗೀವನಾಳಂಕೃತಂ
ಮಾನಾತೀತ ತಟಾಕಸಂಕುಳವಿಳತು ಕೂಲ್ಯಾಸಮ್ಯುದ್ಧಾರಕಂ
ಭೂನಾರೀಕುಚಭೂಷಣಂ ಮಧುಕರೋದ್ಧಾನಾಢ್ಯವನ್ಯಾವೃತಂ
ಪೀನಂ ನಾಗರಖಂಡದೇಶವೆಸೆಗುಂ ವಿಶ್ವಂಭರಾಭಾಗದೊಳು ‖ ಕ್ರೀ-

ಡ ಚ್ಚಾರುಮರಾಳ ಸಾರಸ ಬಕ ಕ್ರೌಂಚ[ಂ]ಪಯೋದ್ಭಾಸಿತಂ
ತಾಡಾಗಂ ಬಹು ಚಕ್ರವಾಕಮಿಥುನಂ ಕಲುಹಾರ ಪದ್ಮೋತ್ಪಳಾ
ಪೀಡಂ ಬರು ಹಿಣ ಸಾರಿಕಾ ಶುಕಪಿಕ ಧ್ವಾನಭಿರಂಮ್ಯಾಂತರಂ
ನಾಡೊಳು ನಾಗರಖಂಡದೇಶಮೆಸೆಗುಂ ಸರ್ವ್ವತ್ರ ಸೌಖ್ಯಾಸ್ಪದಂ[೬] ‖

ಇಂಥ ರಮ್ಯವಾದ ನಾಗರಖಂಡ-೭೦ ಎಂಬ ಪ್ರಾಂತದಲ್ಲಿ ತಿಳಿವಳ್ಳಿಯು ನೆಲೆಗೊಂಡಿತ್ತು. ಇದು ನಾಗರಖಂಡದ ಮುಕುಟಮಣಿಯಂತೆ ಶೋಭಾಯಮಾನವಾಗಿತ್ತೆಂದು ಕವಿಯ ವರ್ಣನೆ ಇದೆ.[೭]

ಇದು ಧಾರ್ಮಿಕ ಕ್ಷೇತ್ರವಾಗಿತ್ತೆನ್ನಬಹುದು. ಇಲ್ಲಿ ಅನೇಕ ದೇವಾಲಯಗಳಿದ್ದವು. ಅವುಗಳಲ್ಲಿ ಸೋಮಯಾಜಿ, ಜನಾರ್ಧನ, ಮಾಲೇಶ್ವರ, ಅಭಿನವ ಶಂಕರದೇವ, ವೀರನಾರಾಯಣ, ಬಸವೇಶ್ವರ, ಸಾಮಂತೇಶ್ವರ, ಬಂಟೇಶ್ವರ ಮುಂತಾದವು ಹಲವು. ಅವುಗಳಲ್ಲಿ ಮುಖ್ಯವಾದುದು ಸಾಮಂತೇಶ್ವರ. ಈ ಎಲ್ಲಾ ದೇವಾಲಯಗಳಿಗಾಗಿ, ಅಲ್ಲಿನ ಅಧಿಕಾರಿಗಳು ಹಾಗೂ ಜನರು, ಹೇರಳವಾಗಿ ದಾನಗಳನ್ನು ಕೊಡುತ್ತಿದ್ದರು. ಉದಾಹರಣೆಗೆ—ರುದ್ರ ಚಟ್ಟೋಪಾಧ್ಯಾಯ ಹಾಗೂ ಆತನ ಪತ್ನಿ ಮಾಚಿಯಬ್ಬೆ ಇವರು ಅಲ್ಲಿನ ಗ್ರಾಮದ-ಧಿದೈವವಾದ ಯಾಲೇಶ್ವರ ದೇವಾಲಯಕ್ಕೆ ೨೫೦ ಗದ್ಯಾಣಗಳನ್ನು ಕೊಟ್ಟರೆಂದು ಒಂದು ಶಾಸನವು ತಿಳಿಸುತ್ತದೆ.[೮] ಮಹಾಸಾಮಂತಾಧಿಪತಿ ಮಾಣಿಕ ಭಂಡಾರಿಗ ದಂಡನಾಯಕ ವಿಷ್ಣುದೇವರಸನು, ಈ ಮಾಳೇಶ್ವರ ದೇವರ ನಂದಾದೀವಿಗೆಗೆ, "ತಮಗೆ ನಡೆವ ಗಾ[ಣಾ]ಈತಿಯುಲೊಂದು ಗಾಣದ ಮಾನ್ನಣೆಯು"ನ್ನು ಬಿಟ್ಟರೆಂದು ಅದೇ ಶಾಸನದಿಂದ ತಿಳಿದುಬರುತ್ತದೆ. ದೇವದಾಸ ಭಟ್ಟಯ್ಯ ಹಾಗೂ ಆತನ ತಮ್ಮ ಕೇಶವದೇವ ಇವರು ಅಭಿನವ ಶಂಕರದೇವರಿಗೂ ಮತ್ತು ಅಲ್ಲಿನ ಒಂದು ಸತ್ರಕ್ಕೂ, ಭೂಮಿಯನ್ನು

೬. ಅದೇ, ಪು, 168
೭. ಅದೇ,
೮. ಅದೇ, ಪು. 61
೯. ಅದೇ. ಪು 62

ದಾನವಾಗಿ ಕೊಟ್ಟ ವಿಚಾರವು ಒಂದು ಶಾಸನದಲ್ಲಿ ಬರುತ್ತದೆ.[೧೦] ಕ್ರಿ. ಶ. ೧೧೩೦ ಒಂದು ಶಾಸನವು, ಗೋವಿಂದಮಯ್ಯ ಎನ್ನುವವನು ಜನಾರ್ಧನ ದೇವರ ಅಂಗಭೋಗ, ಜೀರ್ಣೋದ್ಧಾರ, ಹಾಗೂ ಪೂಜೆ ಪುನಸ್ಕಾರಗಳಿಗಾಗಿ ೪೫ ಗದ್ಯಾಣಗಳನ್ನು ಕೊಟ್ಟನೆಂದು, ಹೇಳುತ್ತದೆ.[೧೧] ಕಲಿದೇವ ಮತ್ತು ರನ್ನಗಿ ಎನ್ನುವವರು ಹರನನ್ನು ಕೂಡಿದ ತಮ್ಮ ತಂದೆಯ ಹೆಸರಿನಲ್ಲಿ ಸಾವಂತೇಶ್ವರ ದೇವರ ಪ್ರತಿಷ್ಠೆ ಮಾಡಿ ಆ ದೇವಾಲಯಕ್ಕೆ ದಾನವನ್ನು ಕೊಟ್ಟ ವಿಚಾರವನ್ನು ಒಂದು ಶಾಸನವು ಸ್ಪಷ್ಟಪಡಿಸುತ್ತದೆ.[೧೨]

ಇಲ್ಲಿನ ಒಂದು ಕೆರೆಯ ವಿಚಾರವಾಗಿ ಅಲ್ಲಿನ ಶಾಸನಗಳು ಹೇಳುತ್ತವೆ. ಈ ಕೆರೆ ಪಿರಿಯಗೆಱೆ ಎಂದು ಹೆಸರುಗೊಂಡಿದ್ದಿತು. ಈ ಕೆರೆಯನ್ನು ಸುವ್ಯವಸ್ಥ ರೀತಿಯಲ್ಲಿಡಲು ಅಲ್ಲಿನ ಅಧಿಕಾರಿಗಳು ಹಾಗೂ ಊರಿನ ಇತರರು ಶ್ರಮ ವಹಿಸುತ್ತಿದ್ದರು. ಈ ಕೆರೆಯ ಕಟ್ಟಡದ ಕೆಲಸಕ್ಕೆ ಅಲ್ಲಿನ ಒಂದು ಸಾವಿರ ಬಂಟರು ವರ್ಷಕ್ಕೊಂದು ಹಣವನ್ನು[೧೩] ಕೊಡಬೇಕೆಂದು ನಿಗದಿಯಾಗಿತ್ತು. ಅಡಿಕೆಯ ಮೇಲಿನ ಸುಂಕವನ್ನು, ಈ ಕೆರೆಯ ಸಲುವಾಗಿ ಅಲ್ಲಿನ ಕರಣಂಗಳು[೧೪] ಬಿಟ್ಟರೆಂದು ತಿಳಿದು ಬರುತ್ತದೆ. ಮಲ್ಲಹಾಣೆ ಹಾಗೂ ಪ್ರೋಲಿಯಮ ಗಾವುಣ್ಡರು, ಸರವಿಯ ನಾಕಯ್ಯನ ಹೇಳಿಕೆಯ ಮೇರೆಗೆ, ಎರಡು ಲಕ್ಷ ಅಡಕೆಯ ಮೇಲಿನ ತೆರಿಗೆಯನ್ನು ಈ ಕೆರೆಯ ಕಲ್ಲು ಕಟ್ಟಡದ ಸಲುವಾಗಿ ಬಿಟ್ಟರೆಂದು ಶಾಸನದಲ್ಲಿ ಬರುತ್ತದೆ.[೧೫] ಅಲ್ಲಿನ ಕೆರೆಯನ್ನು ಸಂರಕ್ಷಿಸುವ ಸಲುವಾಗಿ ಅವರು ದಾನಗಳನ್ನು ಹೇರಳವಾಗಿ ಕೊಡುತ್ತಿದ್ದುದಷ್ಟೇ ಅಲ್ಲದೆ ಅದರ ಮೇಲ್ವಿಚಾರಣೆಗಾಗಿ ಒಬ್ಬನನ್ನು ನಿಯಮಿಸಿದ್ದರು. ಇವನನ್ನು ಜಾರಿಕ[೧೬]ನೆಂದು ಒಂದು ಶಾಸನವು ಕರೆದಿದೆ. ಈ ಜಾರಿಕನ ಜೀವನೋಪಾಯಕ್ಕಾಗಿ "ಮನೆದೆಱೆ ಬಿಟ್ಟ ಬೆಸ ಕೊಳ್ದೆಱೆ" ಮುಂತಾದುವನ್ನು ಅಲ್ಲಿನ ೧೦೦೦ ಬಂಟರು ಸರ್ವಮಾನ್ಯವಾಗಿ[೧೭] ಕೊಟ್ಟರೆಂದು ಅದೇ ಶಾಸನದಿಂದ ತಿಳಿದು ಬರುತ್ತದೆ. ಇದರಿಂದ ನೀರಿನ ಪೂರೈಕೆಗೆ ಅವರು ಕೊಡುತ್ತಿದ್ದ ಮಹತ್ವವೆಷ್ಟೆಂದು ತಿಳಿದು ಬರುತ್ತದೆ.

---

೧೦. ಅದೇ, ಪು. 87

೧೧. K. I, II, P. 76

೧೨. K. I. V, P. 173

೧೩. K. I II, P. 22

೧೪. ಅದೇ, ಪು. 22

೧೫. ಅದೇ, ಪು. 23

೧೬. ಅದೇ, (ಜಾರಿಕ ಎಂದರೆ ಸರದಿಯ ಪ್ರಕಾರ ಕೆರೆಯನ್ನು ಕಾಯುವವನೆಂದು ವಿದ್ವಾಂಸರ ಅಭಿಪ್ರಾಯವಿದೆ. ಅದೇ, ಪು. ೨೧

೧೭. ಅದೇ ಪು. 23

ಈ ಅಗ್ರಹಾರದಲ್ಲಿ ೧೦೦೦ ಮಹಾಜನರಿದ್ದರು. ಈ ಮಹಾಜನರ ಈ ಸಂಖ್ಯೆಯನ್ನು ನೋಡಿದರೆ ಇದು ಒಂದು ದೊಡ್ಡ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿನ ಮಹಾಜನರ ವರ್ಣನೆಯು ಹೇರಳವಾಗಿ ನಮಗೆ ಶಾಸನಗಳಲ್ಲಿ ದೊರಕುತ್ತದೆ. ಇವರನ್ನು " ಯೋಗಿಗಳು ವೇದವಿದ್ವಿಜರಾಗವು ಶಾಸ್ತ್ರಜ್ಞರು"[೧೮] ಎಂದು ಒಂದು ಶಾಸನವು ಕರೆಯುತ್ತದೆ. " ಬನವಾಸಿ ಲಲಾಟ ಪಟ್ಟತಿಳಕ"[೧೯] ರಂತಿದ್ದ ಇವರು ವಶಿಷ್ಟ, ಗಾರ್ಗ್ಯ, ಗೌತಮ, ಸನಕ, ಸನಂದನ, ಸನತು, ಸುಜಾತ ಮುಂತಾದ ಮುನಿಗಳಿಗೆ ಸಮಾನ[೨೦]ರಾಗಿದ್ದರೆಂದು ಒಂದು ಶಾಸನವು ವರ್ಣಿಸುತ್ತದೆ. ಇವರ ಪಾಂಡಿತ್ಯದ ಬಗ್ಗೆ ವಿವರಿಸುತ್ತಾ ಇವರು "ಪದಾರ್ಥ" ಹಾಗೂ "ವಾಕ್ಯಾರ್ಥ"ಗಳಲ್ಲಿ ಪರಿಣತರಿದ್ದುದಷ್ಟೆ ಅಲ್ಲದೆ ಇವರು ವೇದ, ವೈಶೇಷಿಕ, ನಯ್ಯಾಯಿಕ, ಲೋಕಾಯುತ, ಸಾಂಖ್ಯ, ಬೌದ್ಧ, ತರ್ಕ, ವ್ಯಾಕರಣ ಮುಂತಾದ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರೆಂದು ತಿಳಿಸುತ್ತದೆ.

ತಿಳಿವಳ್ಳಿಯು ವಿದ್ಯಾಕೇಂದ್ರವಾಗಿತ್ತು. ಆದರೆ ಅಲ್ಲಿನ ವಿದ್ಯಾಭ್ಯಾಸ, ಉಪಾಧ್ಯಾಯರು, ವಿದ್ಯಾರ್ಥಿಗಳ ಬಗ್ಗೆ ಸಂಪೂರ್ಣವಾದ ವಿವರಗಳು ಈಗ ದೊರೆತಿರುವ ಶಾಸನಗಳಿಂದ ತಿಳಿದು ಬರುವುದಿಲ್ಲ. ಆದರೆ ಒಂದು ಶಾಸನದಲ್ಲಿ ರುದ್ರಚಟ್ಟೋಪಾಧ್ಯಾಯ ಮತ್ತು ಆತನ ಪತ್ನಿ ಮಾಜಿಯಬ್ಬೆ ಎನ್ನುವವರು ೨೫೦ ಗದ್ಯಾಣಗಳನ್ನು ಸೋಮಯಾಜಿ ದೇವಾಲಯಕ್ಕೆ ಬಿಟ್ಟರೆಂದು ಮೇಲೆ ಹೇಳಿದೆ. ಈ ೨೫೦ ಗದ್ಯಾಣಗಳನ್ನು ವಿಭಾಗಿಸಿ ನಂದಾದೀವಿಗೆಗೆ ೫೦ ಗದ್ಯಾಣ, ಆತಿಥ್ಯಕ್ಕೆ ೫೦ ಗದ್ಯಾಣ, ಪುರಾಣ ವೃತ್ತಿಗೆ ೫೦ ಗದ್ಯಾಣ ಹಾಗೂ ಖಂಡಿಕಕ್ಕೆ ೧೦೦ ಗದ್ಯಾಣಗಳನ್ನು ಕೊಟ್ಟರೆಂದು[೨೨] ನಾವು ಅದೇ ಶಾಸನದಲ್ಲಿ ನೋಡುತ್ತೇವೆ. ಇದರಿಂದ ೧೦೦ ಗದ್ಯಾಣಗಳನ್ನು ಖಣ್ಡಿಕದ ಸಲುವಾಗಿ ಬಿಟ್ಟರೆಂದು ತಿಳಿದು ಬರುತ್ತದಾದರೂ ಯಾವ ವಿಷಯದ ಖಣ್ಡಿಕಕ್ಕೆ[೨೩] ಬಿಟ್ಟರೆಂದು ತಿಳಿದು ಬರುವುದಿಲ್ಲ. ಹೀಗಾಗಿ ವಿದ್ಯಾಭ್ಯಾಸದ ಬಗೆಗೂ ಹಾಗೂ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಬಗ್ಗೆ ಸಂಪೂರ್ಣವಾದ ವಿವರಗಳು ದೊರಕುವುದಿಲ್ಲ. ಅಲ್ಲಿನ ಮಹಾಜನರ ಅನೇಕ ವಿಷಯಗಳಲ್ಲಿ ಪಾಂಡಿತ್ಯವನ್ನು ನೋಡಿದರೆ

೧೮. K. IV ಪು. 168

೧೯. ಅದೇ, ಪು. 169

೨೦. ಅದೇ.

೨೧. ಅದೇ. ಪು. 168

೨೨. ಅದೇ, ಪು. 61

೨೩. ಖಣ್ಡಿಕ ಎಂದರೆ ಒಂದು ವಿಷಯವನ್ನು ಕಲಿಸುವ ವರ್ಗ ಎಂದು ಹೇಳಬಹುದು.

ಆ ವಿಷಯಗಳಲ್ಲಿ ಹಲವನ್ನಾದರೂ ಇಲ್ಲಿ ಕಲಿಸುತ್ತಿದ್ದಿರಬಹುದೆಂದು ಹೇಳಬಹುದು. ಸಾಮಾನ್ಯವಾಗಿ ಅಗ್ರಹಾರಗಳೆಂದರೆ ವಿದ್ಯಾಕೇಂದ್ರಗಳಾಗಿರುತ್ತಿದ್ದವು. ಇದರಿಂದಾಗಿ ತಿಳಿವಳ್ಳಿಯು ಒಂದು ವಿದ್ಯಾಸಂಸ್ಥೆಯಾಗಿತ್ತೆಂದು ಹೇಳಬಹುದು.

ತಿಳಿವಳ್ಳಿಯು ವೀರರ ಮನೆಯಾಗಿತ್ತೆನ್ನಬಹುದು. ಇಲ್ಲಿನ ತುರುಗಳನ್ನು ಕದ್ದುಕೊಂಡು ಹೋಗುವುದು ಸ್ವಾಭಾವಿಕವಾಗಿತ್ತು. ಮತ್ತು ಇಂಥ ಕಳ್ಳರನ್ನು ಎದುರಿಸಲು ವೀರರು ಹೋರಾಡಿ ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದರು. ಇದಕ್ಕೆ ಇಲ್ಲಿ ಹಾಗೂ ಇದರ ಸುತ್ತ ಮುತ್ತಲು ದೊರೆತಿರುವ ವೀರಗಲ್ಲುಗಳು ಸಾಕ್ಷಿಯಾಗಿವೆ. ಉದಾಹರಣೆಗೆ ಮನ್ನೆಯ ಮಹಾರಾಜನೆನ್ನುವವನು ತುರುಗಳನ್ನು ಕೊಂಡೊಯ್ಯುವಾಗ, ಸಾಸಿರ ಬಂಟರ ಬಂಟನಾದ ಮೊಸಳೆಯ ಬೊಮ್ಮ ಎನ್ನುವವನು ಕಾದಾಡಿ ಸ್ವರ್ಗಸ್ಥನಾದನು.[೨೪] ಇವನ ಮಕ್ಕಳಿಗೆ ಉಂಬಳಿಯಾಗಿ ಗದ್ದೆಯು ಕೊಡಲ್ಪಟ್ಟಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ೧೭ನೆಯ ಶತಮಾನದ ಒಂದು ಶಾಸನವು ಕಾಳೆಯ ಮುಸಣ ಎನ್ನುವವನು ಒಂದು ಜಗಳದಲ್ಲಿ ಹೋರಾಡಿ ಸತ್ತನೆಂದು ತಿಳಿಸುತ್ತದೆ.[೨೫] ಆದರೆ ಎರಡನೆಯ ಸೇವುಣ ಸಿಂಘಣನ ಒಂದು ಶಾಸನವು[೨೬] ಸ್ವಾರಸ್ಯಪೂರ್ಣವಾದ ಅಂಶವನ್ನು ತಿಳಿಸುತ್ತದೆ.

ಸಾವಂತ ತಕ್ಕರ ಎನ್ನುವವನು ಸೇವುಣರ ಕಾಲದಲ್ಲಿ ಪಿಂಗಲಿ ದೇಶದ ಅಧಿಕಾರಿಯಾಗಿದ್ದನು. ಅವನು, ವೈರಿಗಳು ದಂಡೆತ್ತಿ ಬಂದಾಗ ಅವರೊಂದಿಗೆ ಹೋರಾಡಿದರೂ ತನ್ನ ಅಸುವನ್ನು ನೀಗಬೇಕಾಯಿತು. ಅಲ್ಲದೆ, ಮಡಿದ ಈ ಸಾವಂತ ತಕ್ಕರನನ್ನು ಸುರವಧುಗಳು ಇಕ್ಕೆಲಗಳಲ್ಲಿ ಚಾಮರವಿಡುತ್ತಿರಲು, ರತ್ನಖಚಿತವಾದ ವಿಮಾನವು ಬರಲು ಅದನ್ನು ಏರಿಹೋಗಿ ಶಂಕರನನ್ನು ಕೂಡಿಕೊಂಡನೆಂದು ಮೇಲೆ ಹೇಳಿದ ಶಾಸನವು ತಿಳಿಸುತ್ತದೆ. ಹೀಗೆ ಹರನನ್ನು ಕೂಡಿಕೊಂಡ ತಮ್ಮ ತಂದೆಯ ಹೆಸರಿನಲ್ಲಿ, ಅವನ ಮಕ್ಕಳಾದ ಕಲಿದೇವ ಹಾಗೂ ರನ್ನುಗಿ ಎನ್ನುವವರು ಒಂದು ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಸಾವಂತೇಶ್ವರ ದೇವರನ್ನು ಪ್ರತಿಷ್ಠೆ[೨೭] ಮಾಡಿದರೆಂದು ಮೇಲೆ ಹೇಳಿದೆ.

---

೨೪. K. I. II ಪು 72, K. VI. v. ಪು. 84

೨೫. ಅದೇ, ಪು. 331

೨೬. ಅದೇ, ಪು. 170–73.

೨೭. ಅದೇ ಪು. ೧೭೩

ಹರನಂ ಕೂಡಿದ ತಂದೆಯ ಚರಣಕ್ಕೆರಗುವತೆ ಜೇರೆ ದೊರೆಯ್ಕ್ಕಂಕರನಲ್ಲಿಂದೆಂದು ಪೆಸರಿಂ ಪರಿಕಿಸಿ ಮಾಡಿಸಿದನಲ್ಲಿ ದೇವಾಲಯಮುಮಂ ಅಂತು ತನ್ನ ತಂದೆಯ ಪೆಸರಿಂದಂ ಶ್ರೀ ಸಾವಂತೇಶ್ವರ ದೇವರ ಪ್ರತಿಷ್ಠೆಯುಮಂ ಮಾಡಿ ಆ ದೇವರ ಶ್ರೀಕಾರ್ಯಕಂ...

ತಿಳಿವಳ್ಳಿಯು ರಾಜಕೀಯರಂಗದಲ್ಲೂ ಪ್ರಮುಖವಾದ ಪಾತ್ರವನ್ನು ವಹಿಸಿತ್ತೆನ್ನಬಹುದು. ಕ್ರಿ. ಶ. ೧೫೮೧ ರ ಒಂದು ಶಾಸನವು ಇದನ್ನು ಪೇಂಟೆ ಎಂದು ಕರೆದಿದೆ.[೨೮] ಅದಕ್ಕೂ ಮುಂಚೆ ಅಂದರೆ ೧೦೫೩[೨೯] ಹಾಗೂ ೧೦೭[೩೦] ರಲ್ಲಿ ಇದು ಒಂದು ಠಾಣೆ[೩೧]ಯಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇದು ಸೈನಿಕಠಾಣೆಯಾಗಿದ್ದುದು ಇದರ ವೈಶಿಷ್ಟ್ಯವೆಂದು ಹೇಳಬಹುದು. ಇದಕ್ಕೆ ಕಾರಣಗಳಿಲ್ಲದಿಲ್ಲ. ತಿಳಿವಳ್ಳಿಯು ಸೇವುಣರ ರಾಜ್ಯಕ್ಕೆ ಸೇರಿತ್ತಾದರೂ ಅದು ಆ ರಾಜ್ಯದ ಗಡಿಪ್ರದೇಶದಲ್ಲಿತ್ತು. ನೆರೆಯ ರಾಜರಾದ ಹೊಯ್ಸಳರಿಗೂ ಹಾಗೂ ಸೇವುಣರ ನಡುವೆ ಯುದ್ಧಗಳು ಸರ್ವೇಸಾಮಾನ್ಯವಾಗಿದ್ದವು. ಇದರಿಂದಾಗಿ ತಿಳಿವಳ್ಳಿಯು ಆ ಯುದ್ಧಗಳನ್ನು ವೀಕ್ಷಿಸಬೇಕಾಗುತ್ತಿತ್ತು. ಇದರಿಂದಾಗಿ ಅದು ಒಂದು ಸೈನಿಕ ಠಾಣೆಯಾಗಿದ್ದುದು ಸಹಜವಾಗಿದೆ.

ಹೀಗೆ ತಿಳಿವಳ್ಳಿಯು ವೈವಿಧ್ಯತೆಯನ್ನು ಪಡೆದ ಅಗ್ರಹಾರವಾಗಿದುದಲ್ಲದೆ ಇದು ಸುಮಾರು ೧೧ನೆಯ ಶತಮಾನದಿಂದ ೧೩ ನೆಯ ಶತಮಾನದವರೆಗೆ ಪ್ರಮುಖವಾದ ಪಾತ್ರವನ್ನು ವಹಿಸಿದ್ದ ಒಂದು ಅಗ್ರಹಾರವಾಗಿತ್ತು ಎಂದು ಹೇಳಬಹುದು.

★ ಎಸ್. ಎಲ್. ಶಾಂತಕುಮಾರಿ

೨೮. K- I. IV, p 23

೨೯. S. I. I. XX No 34

೩೦. K- I. II P 22

೩೧. ಅದೇ. ಪು. VIII

ಉದಯಾದಿತ್ಯಾಲಂಕಾರ—ಕರ್ತೃವಿಚಾರ

ಉದಯಾದಿತ್ಯಾಲಂಕಾರದ ವಿಷಯವಾಗಿ 'ಸೂಕ್ತಿಸುಧಾರ್ಣವ' ಒಂದನ್ನು ಬಿಟ್ಟರೆ ಉಳಿದ ಯಾವ ಬಾಹ್ಯಪ್ರಮಾಣವು ಇದ್ದಂತೆ ಕಂಡು ಬರುವುದಿಲ್ಲ. ಅಷ್ಟಾದಶವರ್ಣನೆಗಳನ್ನು ಹೇಳುವ ಒಂದು ಪದ್ಯವನ್ನು (ಪ. ೧೩), ಉದಯಾದಿತ್ಯ ಅಲಂಕಾರದಿಂದ ಮಲ್ಲಿಕಾರ್ಜುನನು (ಕ್ರಿ. ಶ ೧೨೪೫) ತನ್ನ ಸೂಕ್ತಿಸುಧಾರ್ಣವದಲ್ಲಿ ಎತ್ತಿಕೊಂಡಿದ್ದಾನೆ. ಸಾಳ್ವನು (ಕ್ರಿ. ಶ. ೧೫೫೦) ರಸರತ್ನಾಕರದಲ್ಲಿ ಉದಯಾದಿತ್ಯನ ಹೆಸರನ್ನು ಹೇಳುತ್ತಾನೆ. ಪರಸ್ಪರ ವಿರುದ್ಧ ರಸಗಳ ನಿರೂಪಣೆಯ ಕಾಲಕ್ಕೆ ಒಂದು ಪದ್ಯದ ಕೆಳಗೆ "ಇದು ದಯಾದಿತ್ಯನ ಮತಂ" ಎಂದು ಬರುತ್ತದೆ. ರಸರತ್ನಾಕರದ ಸಂಪಾದಕರು ಆ ಪದ್ಯದ ಅಡಿಟಿಪ್ಪಣಿಯಲ್ಲಿ "ಇದು ಕವಿಕಾಮನ ಶೃಂಗಾರರತ್ನಾಕರದಲ್ಲಿದೆ. ಉದಯಾದಿತ್ಯನ ಅಲಂಕಾರದಲ್ಲಿ ವಿರೋಧರಸಗಳ ವಿಚಾರವೇ ಇಲ್ಲ." ಆದುದರಿಂದ "ಇದು ಕವಿಕಾಮನ ಮತಂ" ಎಂದಿರಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇದನ್ನು ಕೈಬಿಡಬೇಕಾಗುತ್ತದೆ.

ಇನ್ನು ಈ ಗ್ರಂಥದ ವಿಷಯವನ್ನು ತಿಳಿದುಕೊಳ್ಳಲು ಆಂತರಿಕವಾದ ಪ್ರಮಾಣಗಳನ್ನೇ ಮೊರೆಹೋಗಬೇಕಾಗುತ್ತದೆ.

೧) ಕರ್ತೃವಿನ ಕಾಲ

ಉದಯಾದಿತ್ಯಾಲಂಕಾರವು ೭೬ ಪದ್ಯಗಳಿಂದ ಕೂಡಿದ ಒಂದು ಚಿಕ್ಕ ಗ್ರಂಥ. ಅದರಲ್ಲಿಯೂ ೭೧, ೭೩, ೭೫, ೭೬ ಈ ಪದ್ಯಗಳು ಪ್ರಕ್ಷಿಪ್ತಗಳೆಂದು ಊಹಿಸಲು ಅವಕಾಶವಿದೆ.[2] ಕವಿಚರಿತೆಕಾರರೂ ೭೨ ಪದ್ಯಗಳನ್ನೇ ಅಂಗೀಕರಿಸಿದ್ದಾರೆ.[3] ಆದ್ದರಿಂದ ೭೨ ಪದ್ಯಗಳೇ ಗ್ರಂಥದ ಮೂಲ ಸೊತ್ತುಗಳೆಂದು ಹೇಳಬಹುದು.

ಈ ಚಿಕ್ಕ ಗ್ರಂಥವನ್ನು ಸಂಸ್ಕೃತದ ಆಲಂಕಾರಿಕರಾದ ಭಾಮಹ, ದಂಡಿ ಮುಂತಾದವರನ್ನು, ಕನ್ನಡದ ಕವಿರಾಜ ಮಾರ್ಗ. ಕಾವ್ಯಾವಲೋಕನಕಾರರನ್ನು ಆಧಾರವಾಗಿಟ್ಟುಕೊಂಡು ಬರೆದಂತೆ ತೋರುತ್ತದೆ. ಆದ್ದರಿಂದ ಇವನು ಕ್ರಿ. ಶ. ೧೧೪೫ ರಿಂದ ಈಚೆಗೆ ಇರಬೇಕೆಂದು ವಿದಿತವಾಗುತ್ತದೆ. ಇನ್ನು ಸೂಕ್ತಿಸುಧಾರ್ಣವದಲ್ಲಿ ಇವನ ಪದ್ಯವು (೧೩) ಉದಾಹೃತವಾಗಿರುವುದರಿಂದ

---

೧. ರಸರತ್ನಾಕರ : ಮದ್ರಾಸ ವಿಶ್ವವಿದ್ಯಾಲಯದ ಪ್ರಕಟನೆ : ಸಂ. ಎ. ವೆಂಕಟರಾವ ಮತ್ತು ಎಚ್. ಶೇಷಯ್ಯಂಗಾರ್. ೧೯೩೨. ಸೂ. ೬೯ ಪು. ೪೯.

೨. ಎಂ. ವಿ. ಸೀ. ಉದ. ಪೀಠಿಕೆ

೩. ಕ. ಚ. ಭಾಗ ೧ ಪುಟ ೧೬೮

ಕ್ರಿ. ಶ. ೧೨೪೫ ರಿಂದ ಹಿಂದೆ ಇದ್ದಿರಬೇಕೆಂದು ಸಿದ್ಧವಾಗುತ್ತದೆ. ಅಂದರೆ ಈ ೭೦ ವರುಷಗಳ ಹಂತದಲ್ಲಿ ಉದಯಾದಿತ್ಯಾಲಂಕಾರವು ನಿರ್ಮಾಣವಾಗಿರಬೇಕೆಂದು ಹೇಳಬಹುದು.

೨) ಆಲಂಕಾರಿಕನ ಮತ

ಕವಿಯು ತನ್ನ ಮತವನ್ನು ಗ್ರಂಥದ ಯಾವ ಪದ್ಯದಲ್ಲಿಯೂ ಹೇಳಿಕೊಂಡಿಲ್ಲ. ಪ್ರಾರಂಭದಲ್ಲಿ ಸರಸ್ವತಿಯನ್ನುಳಿದು ಯಾವ ದೇವತಾ ಸ್ತೋತ್ರವೂ ಇಲ್ಲ. ಬರಿಯ ಸರಸ್ವತಿಯ ಸ್ತವನದಿಂದ ಮತವಿಚಾರವಾಗಿ ಏನನ್ನೂ ಹೇಳಲು ಬರುವುದಿಲ್ಲ.

ಆದರೆ, ಗ್ರಂಥದುದ್ದಕ್ಕೂ ಅಲ್ಲಲ್ಲಿ ಬರುವ ಉದಾಹರಣೆಗಳನ್ನೂ ಕೂಲಂಕಷವಾಗಿ ವಿಚಾರಿಸಿದರೆ ಕೆಲವು ಕಿಡಿಗಳು ಕಂಡುಬರುತ್ತವೆ. ಕವಿಯು ವೈದಿಕಮತಾನುಯಾಯಿಯೆಂದು ಹೇಳಲು ಅವು ಸಹಾಯಕವಾಗುತ್ತವೆ.

ಕ್ರಮಾಲಂಕಾರಕ್ಕೆ ಉದಾಹರಣೆಯನ್ನು ಕೊಡುವಲ್ಲಿ (೪೫) "ಹರಂ ಹರಿ ಬೊಮ್ಮಂ ನೆಜೆವರವನೀಗೆ. ನಿನಗಿಂದೆಱಿಕದೆ ಗಿರಿಸುತೆಗೆ ಸಿರಿಗೆ ಸರಸತಿಗೆರೆಯರ್" ಎಂದಿದ್ದಾನೆ. ಸಮಯೋಗಕ್ಕೆ (೫೬) 'ಸೇವ್ಯಮಾಮರುನ್ನದಿಯುಮುದೆಗ ನಿನ್ನಯ ಸಿರಿಯುಂ' ಎಂದು ಉದೆಗನನ್ನು ಗಂಗಾನದಿಗೆ ಹೋಲಿಸಿದ್ದಾನೆ. 'ಜಗತ್ರಯುಮಂ ಪರ್ವಿದುದು ಜಸಮೆಂದು ಗರ್ವಿಸಲದೇಕೆ ಪೇೞ್ ಜಗಮನಿತ್ತು ಹರಿಯುದರಗತಂ' ಎಂದು ವ್ಯಾಜಸ್ತವಕ್ಕೆ (೫೯) ಉದಾಹರಣೆ ಕೊಟ್ಟಿದ್ದಾನೆ. 'ಅಮರಪುರಮನಹಿತಧರಿತ್ರೀಶ್ವರರ್ಗಿತ್ತು.....' (೬೪) ಇದು ಪರಿವೃತ್ತಿಗೆ ನಿದರ್ಶನವಾಗಿದೆ. ಒಡಪಂತಕ್ಕೆ (ಪ್ರಹೇಳಿಕೆ) ಅಂದರೆ ಒಡವಿಗೆ ಸದಾಶಿವನನ್ನು ಮುಂದಿರಿಸಿದ್ದಾನೆ (೭೩). ಇಲ್ಲಿ ಹರ, ಹರಿ, ಬ್ರಹ್ಮ, ಗಂಗಾನದಿ, ಅಮರಲೋಕ ಈ ಮುಂತಾದ ಶಬ್ದಗಳು ಬಂದಿರುವದರಿಂದ ಇವನು ವೈದಿಕ ಸಾಂಪ್ರದಾಯಕ್ಕೆ ಸೇರಿದವನಾಗಿರಬೇಕೆಂದು ಊಹಿಸಲು ಸಾಧ್ಯವಿದೆ.

೩ ಉದಯಾದಿತ್ಯಾಲಂಕಾರದ ಕರ್ತೃ

ಈ ಗ್ರಂಥದ ಹೆಸರನ್ನು ನೋಡಿದಾಗ ಇದನ್ನು ಬರೆದವನು "ಉದಯಾದಿತ್ಯ" ಎಂದು ಸಕೃದ್ದರ್ಶನಕ್ಕೆ ಹೊಳೆಯುವ ಮಾತು.

> ಎಸೆವೀ ಕಾವ್ಯಶರೀರಮಂ ಪೊಸಯಿಸಿರ್ದಪ್ಪಾವಶಾಂಗಂಗಳಂ
> ರಸರೀತಿಕ್ರಮದಿಂದಮೊಂದಿದಶ ಪ್ರಾಣಂಗಳೊಂದಂದಮಂ
> ವಸುಧಾನಾಥನ ಸೋಮನಾಥನ ಸುತಂ ಜೋಡೋದಯಾದಿತ್ಯ ನಿಂ-
> ತುಸಿರ್ದಂ ಪೇೞ್ದಪನಿನ್ನಲಂಕೃತಿಗಳಂ ಸಾಹಿತ್ಯರತ್ನಾಕರಂ ॥೨೪॥

ಎಂದು ಕಾವ್ಯಭೇದ,ರಸ,ರೀತಿ,ಗುಣಗಳನ್ನೂ ಹೇಳಿದ ಮೇಲೆ ಸೋಮನಾಥನೆಂಬ ರಾಜನ ಮಗನಾದ ಚೋಳೋದಯಾದಿತ್ಯನು ಅಲಂಕಾರಗಳನ್ನು ಹೇಳುತ್ತಾನೆ ಎಂದಿದ್ದಾನೆ. ಅಪಹ್ನುತಿಗೆ ಉದಾಹರಣೆಯನ್ನು ಕೊಡುವಲ್ಲಿ "ಜಗಕ್ಕೆ ಸೋಮ ಮಹೀಭೃನ್ನಂದನನೇಂ ನರನೇ ಪುಸಿ ಮಂದಾನಿಲನಿಂದು ರತಿಕಳತ್ರ ಚೈತ್ರಂ ||೫೩||" ತನ್ನನ್ನು ಪ್ರಶಂಸಿಸಿಕೊಂಡಿದ್ದಾನೆ. ತನ್ನನ್ನು 'ಸಾಹಿತ್ಯ ರತ್ನಾಕರ (೨೪)' ರಾಜಸುಕವಿರತ್ನಾಭರಣ (೩೨, ೪೬, ೭೫), ಕವಿರತ್ನಶೇಖರ (೬೯), ಸಾಹಿತ್ಯವಿದ್ಯಾಧರ (೭೪), ಕವಿರಾಜಶೇಖರ (೭೬), ಕವಿಶಿಖಾಮಣಿ (೭೬). ಇವುಗಳಿಂದ ಸಂಬೋಧಿಸಿಕೊಂಡಿರುವನು.[3] ಅಲ್ಲಲ್ಲಿ ಉದಯನೃಪ, ಉದಯಾದಿತ್ಯ, ಉದೇಗನರೇಶ, ಉದೆಗ, ಎಂದೂ ಸಂಬೋಧನೆಗಳು ಬರುತ್ತಿವೆ.

ಇದರಿಂದ ಉದಯಾದಿತ್ಯಾಲಂಕಾರವನ್ನು ಬರೆದವನು ಉದಯಾದಿತ್ಯನೆಂದೂ ಅವನು ಸೋಮನಾಥನೆಂಬ ಚೋಳದೊರೆಯ ಮಗನೆಂದೂ ಅವನಿಗೆ ಸಾಹಿತ್ಯರತ್ನಾಕರಾದಿ ಬಿರುದುಗಳಿದ್ದುವೆಂದೂ ಉದೆಗ, ಉದಯನೃಪ, ಉದೆಗನರೇಶ ಮುಂತಾಗಿಯೂ ಹೆಸರುಗಳಿದ್ದುವೆಂದೂ ತಿಳಿದು ಬರುತ್ತದೆ.

ಎಂ. ವಿ. ಸೀತಾರಾಮಯ್ಯನವರ ವಿಚಾರ

ಈ ಉದಯಾದಿತ್ಯಾಲಂಕಾರಕ್ಕೆ ಬರೆದ ಪೀಠಿಕೆಯಲ್ಲಿ ಎಂ. ವಿ. ಸೀತಾರಾಮಯ್ಯನವರು ಉದಯಾದಿತ್ಯನು ಗ್ರಂಥದ ಕರ್ತೃವಲ್ಲ; ನಾಗವರ್ಮ–೧ ನೆಂದು ಪ್ರತಿಪಾದಿಸಿದ್ದಾರೆ. ಅದಕ್ಕಾಗಿ ಅವರು ಕೊಟ್ಟ ಕಾರಣಗಳು.

೧) ಕವಿಗಳು ಸ್ವವಿಷಯವನ್ನು ಪ್ರಥಮ ಪುರುಷದಲ್ಲಿಯೂ ಉತ್ತಮ ಪುರುಷದಲ್ಲಿಯೂ ತಿಳಿಸುವ ಸಂಪ್ರದಾಯವುಂಟು. ಆದರೆ ಸಂಬೋಧನೆ ಹಾಗೂ ವಿಧ್ಯರ್ಥಗಳನ್ನುಳ್ಳ ಮಧ್ಯಮಪುರುಷ ಪ್ರಯೋಗವು ಸ್ವವಿಷಯ ನಿರೂಪಣೆಯಲ್ಲಿ ಸಂಭಾವ್ಯವೆನಿಸದು.

೨ ಅವರಸವಾದೊಡಂ ನಿಜ-
ಭಾವದಿನೆಸೆವಂತು ಪೇಟ ರಸವತ್ತಂ ಸೋ-
ಡಾವಗಮುದೆಗನ ರೂಪಂ
ಭಾವಿಸುತ್ತೊಡೆ ಕೆಳದಿ ತನ್ಮಯಂ ಜಗಮೆಲ್ಲಂ ||೪೭||

ಉದೆಗನೊಳಾಂ ಪರಾರ್ ಮುಳಿದೊಡಂತಕನಾಂತೊಡೆ ಕಾಂಡ
ದಿಂಡೆಯಂ

ಕೆದರುವನೊತ್ತಿ ದಾನಿಗಳನಿಕ್ಕಿ ದಿವಾಡುವನಾತನೂರ್ಜಿತಂ
ಬೆದಱದವಾರ ಪೋಡಿನದು ದಾರನಭೀಷ್ಟವತೀವದೈನ್ಯದೊಳ್
ಪುದಿಯದವಾರನಾಗಿನದು ತಾಪಸವೃತ್ತಿಯನಬ್ಜಲೋಚನೇ||೪೮||

೩. ಇವು ಉದಯಾದಿತ್ಯನ ಬಿರುದುಗಳಾಗಿರಬೇಕು.

ಈ ಪದ್ಯಗಳಲ್ಲಿ ಕೆಳದಿ, ಅಬ್ಜಲೋಚನೇ ಎಂದು ತನ್ನ ಪ್ರಿಯೆಯನ್ನು ಕುರಿತು ಹೇಳಿದಂತೆಯೂ ಸಂಬೋಧನೆ ನುಸುಳಿದೆ.

ಮೊದಲನೆಯ ಕಾರಣಕ್ಕೆ,

೧) ನಿನ್ನುದಯದಿಂದಂ, ಉದಯಧರಿತ್ರೀಕಾಂತ, ದಿನಕಾಂತನಂತೆ ಕೇಳ್
ಈ ಲೋಕವೇ ಕೃತಾರ್ಥಂ || ೨೨ ||

೨) ಬಡತನಮುಂ ಬಿದಿ ಬುಧರೊಳ್ ಪಡೆದಂ;
ಪೊರೆದವರನುದೆಗ ನೀನವರೆಡರಂ ಕೆಡಿಸಲುದಯಿಸಿದೆ || ೩೫ ||

೩) ಸರಿವಿತರಣಗುಣದೊಳ್ ಸುರತರುವುಂ ನೀನುಂ;
ವಿವೇಕಿ ನೀನ್ ಉದಯನರೇಶ್ವರ || ೩೭ ||

೪) ಸವಿಶೇಷವಚನಮೂರ್ತಿಯುಂ ಅವಧರಿಸು ಉದಯಕ್ಷಿತೀಶ || ೪೦ ||

೫) ಪ್ರಿಯ ವಚನಂ ಪ್ರೇಯಂ....ಮತ್ತ್ರಿಯುಮಿನ್ನೊಂದುಂಟೆ?
ಕಾವ್ಯಕನ್ನೆಗೆ ನಿನ್ನಂ ಪ್ರಿಯನಂ ಪಡೆದಂ ರಾಜಾನ್ವಯದೊಳಗೆಲೆ ರಾಜಸುಕ
ವಿರತ್ನಾಭರಣಾ || ೪೬ ||

೬) ಸೇವ್ಯಮಾ ಮರುನ್ನದಿಯುಂ ಉದೆಗ ನಿನ್ನಯ ಸಿರಿಯುಂ || ೫೬ ||

೭) ಉದೆಗ, ನಿನ್ನಂ ಪೊರೆಗಿಂತಾ ಶಿವನಾ ದಾನವರಿಪುವಾ ಶತದಳ ಆಗರ್ಭರ್
|| ೬೭ ||

೮) ಒದವಿದ ಮುಂಜನ ಭೋಜನ ವಿದಿತ ಶ್ರೀಹರ್ಷನುದಯ ಮತ್ಕೃತಿಯೊಳ್
ತಳ್ತುದಯಮಲಂಕರಿಪುದಱಿಂದುದಯನೃಪಂ ರಾಜಸುಕವಿರತ್ನಾಭರಣಂ
|| ೭೫ ||

ಈ ಉದಾಹರಣೆಗಳನ್ನು ಕೊಟ್ಟಿದ್ದಾನೆ.

ಇಡೀ ಗ್ರಂಥವನ್ನು ನೋಡಿದರೆ ಎಲ್ಲೆಡೆಗೂ ಇಂತಹ ಸಂಬೋಧನೆಗಳೇ ಇಲ್ಲದಿರುವುದು ಕಂಡುಬರುತ್ತದೆ. ಒಂದು ವೇಳೆ ಉದಯಾದಿತ್ಯನ ಆಸ್ಥಾನದಲ್ಲಿದ್ದ ಆಸ್ಥಾನ ಪಂಡಿತನೊಬ್ಬನು ಈ ಗ್ರಂಥವನ್ನು ಬರೆದಿದ್ದುದಾಗಿದ್ದರೆ ಎಲ್ಲೆಡೆಗೂ ಈ ರೀತಿಯನ್ನು ಅನುಸರಿಸುತ್ತಿದ್ದನು. ಎಲ್ಲ ಅಲಂಕಾರಗಳಿಗೂ ತನ್ನ ರಾಜನನ್ನು ಕುರಿತೇ ಉದಾಹರಣೆಗಳನ್ನು ಕೊಡುತ್ತಿದ್ದನು. ಹಾಗೆ ಇಲ್ಲಿ ಕಂಡು ಬರುವುದಿಲ್ಲ. ಅಲ್ಲದೆ ತನ್ನನ್ನು ತಾನು ಸಂಬೋಧಿಸಿಕೊಂಡಾಗಲಾಗಲಿ, ವಿಧ್ಯರ್ಥಿಸಿಕೊಂಡಾಗಲಾಗಲಿ ಯಾವ ದೋಷವೂ ಇಲ್ಲ; ಬದಲು ಪ್ರಥಮ-ಉತ್ತಮ ಪುರುಷಗಳಿಗಿಂತ ಮಧ್ಯಮ ಪುರುಷಕ್ಕೆ ಬಲವೂ ಬರುತ್ತದೆ. ಇದಲ್ಲದೆ ಸಂದರ್ಭಕ್ಕನುಸರಿಸಿ ವಿಧ್ಯರ್ಥವನ್ನೋ ಸಂಬೋಧನೆಯನ್ನೋ ಸಾಮಾನ್ಯಾರ್ಥವನ್ನೋ ಬಳಸಿ ಉಚಿತತೆಯನ್ನು ಕಾಯ್ದುಕೊಂಡಿದ್ದಾನೆ ಉದಯಾದಿತ್ಯ.

೪೬ನೆಯ ಪದ್ಯದಲ್ಲಿ ಕಾವ್ಯಕನ್ನೆಗೆ ಪ್ರಿಯನನ್ನು ಪಡೆದ ವಿಷಯವನ್ನು ಹೇಳುತ್ತಾನೆ. ಆ ಪ್ರಿಯನು ರಾಜವಂಶೀಯನೇ ಆಗಿದ್ದಾನೆ. ಅಂದ ಮೇಲೆ ಇನ್ನೊಬ್ಬನು ಈ ಗ್ರಂಥದ ಕರ್ತೃವಾಗುವುದು ಸಾಧ್ಯವಿಲ್ಲದ ಮಾತೇ ಸರಿ. ಇನ್ನು ೨೪ನೆಯ ಪದ್ಯದಲ್ಲಿಯಂತೂ ತನ್ನ ಕರ್ತೃತ್ವವನ್ನು ನಿಚ್ಚಳವಾಗಿಯೇ ಹೇಳಿದ್ದಾನೆ. ಅಲ್ಲದೆ 'ಒದವಿದ ಮುಂಜನ....||೭೫||' ಎಂಬ ಪದ್ಯದಲ್ಲಿ ಮುಂಜ, ಭೋಜ, ಶ್ರೀಹರ್ಷ ಇವರ ಉದಯವು ತನ್ನ ಕೃತಿಗೆ ಉಂಟಾಗಿ ಆ ಉದಯವು ಅಲಂಕಾರಪ್ರಾಯವಾಗಿರುವುದರಿಂದ ಉದಯನೃಪಾಲನು "ರಾಜಸುಕವಿರತ್ನಾಭರಣ"ನಾದನು ಎಂದು ಹೇಳಿರುವಲ್ಲಿ ತಾನು ಸಹಾಯವನ್ನು ಪಡೆದ ದಂಡಿ, ಭಾಮಹ, ಕವಿರಾಜಮಾರ್ಗಕಾರ, ನಾಗವರ್ಮ ಇವರಾರನ್ನೂ ನೆನೆಯದೆ ಕೇವಲ ಮುಂಜ, ಭೋಜ, ಶ್ರೀಹರ್ಷರನ್ನು ನೆನೆಯುವುದರಲ್ಲಿಯೂ ಒಂದು ಔಚಿತ್ಯವಿದೆ. ಇವರೆಲ್ಲರೂ ರಾಜರು; ಜೊತೆಗೆ ಕವಿಗಳು. ಅದರಂತೆಯೇ ಉದಯಾದಿತ್ಯನೂ ರಾಜ ಹಾಗೂ ಕವಿ.[೪]

ಎರಡನೆಯ ಕಾರಣವಾದ ತನ್ನ ಪ್ರಿಯತಮೆಯನ್ನು ಕುರಿತಿರುವ ಸಂಬೋಧನೆಯೂ ಅಷ್ಟೇ ಅಸಮಂಜಸವೆಂದು ತೋರುತ್ತದೆ. ರಸವದಲಂಕಾರಕ್ಕೆ ಉದಾಹರಣೆಯಾಗಿ ಈ ಎರಡು ಪದ್ಯಗಳನ್ನು ಕವಿ ಕೊಟ್ಟಿದ್ದಾನೆ. ನೃಪಾಲನು ತನ್ನ ಹೆಂಡತಿಗೆ ಈ ಮಾತುಗಳನ್ನು ಹೇಳಿದನೆಂಬುದು ಸಮಂಜಸವೆ ಹೊರತು ಬೇರೊಬ್ಬನು ತನ್ನ ಪ್ರಿಯತಮೆಗೆ ಹೀಗೆ ಹೇಳಿದನೆಂಬುದು ಸಮರ್ಪಕವಾಗಲಾರದು. ಯಾವ ಸ್ತ್ರೀಯು ಮುಂದೆಯೇ ಆಗಲಿ ತನ್ನ ಪತಿಯು ಪರಪುರುಷನನ್ನು ಹೊಗಳಿದರೆ ಅಲ್ಲಿ ರಸ ಹೊರಹೊಮ್ಮದೆ ವಿರಸವೇ ತಲೆದೋರುತ್ತದೆ. ಇದೂ ಅಲ್ಲದೆ ಒಂದೊಮ್ಮೆ ರಾಜನಿಗೆ ಸಂಬೋಧಿಸುವಂತೆ ಪ್ರಿಯತಮೆಗೆ ಸಂಬೋಧಿಸಿ ಕಲಬೆರಕೆ ಮಾಡಿದರೆ, ಅವರಿಬ್ಬರನ್ನು ಒಂದೇ ಸಮನಾಗಿ ಕಂಡಹಾಗೆ ಆಗುತ್ತದೆ. ಇದು ರಾಜನಾದವನಿಗೆ ಅಪಮಾನಕಾರಕವೆಂಬುದನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ. ಈ ಸಂಶಯ ಸೀತಾರಾಮಯ್ಯನವರಿಗೂ ಇದ್ದೇ ಇದೆ. ಆದರೆ ಉದಯಾದಿತ್ಯದ ಕರ್ತೃ ನಾಗವರ್ಮನೆಂಬುದು ಅವರ ತಲೆಯಲ್ಲಿದ್ದುದರಿಂದ, 'ಇದು ಅಭ್ಯಾಸಬಲದಿಂದ ಆದುದೇ ಹೊರತು ಯಾರೊಬ್ಬರ ಅನುಕರಣೆಯಿಂದಲ್ಲವೆಂದು' ಹೇಳಿ ದೂರೀಕರಿಸಲು ಪ್ರಯತ್ನಿಸಿದ್ದಾರೆ. ಆದರೆ ನಿಜಸ್ಥಿತಿ ಹಾಗಿಲ್ಲ. ಉದಯಾದಿತ್ಯಾಲಂಕಾರದ ಕರ್ತೃ ಉದಯಾದಿತ್ಯನೇ ಹೊರತು ನಾಗವರ್ಮನಲ್ಲ.

ಮೊದಲನೆಯ ಕಾರಣದಿಂದ ಉದಯಾದಿತ್ಯಾಲಂಕಾರದ ಕರ್ತೃ ಬೇರೆ ಎಂಬುದನ್ನು ಪ್ರತಿಪಾದಿಸಿ, ಎರಡನೆಯದರಲ್ಲಿ ಅವನು ನಾಗವರ್ಮನೇ ಆಗಿರ

[೪ ಈತನ ಬಿರುದುಗಳನ್ನೂ ರಚನಾಚಾತುರ್ಯವನ್ನೂ ನೋಡಿದರೆ ಇನ್ನೂ ಗ್ರಂಥಗಳನ್ನು ಬರೆದಿರುವಂತೆ ತೋರುತ್ತದೆ. ಕವಿ ಚ. ೧-ಪು. ೧೭೬]

ಬೇಕೆಂದು ಪ್ರತಿಷ್ಠಿಸಲು ಹೊರಟಂತಿದೆ. ಆದಕ್ಕಾಗಿಯೇ 'ಅಸಂ ರಕ್ಕಸ ಗಂಗಂ......' ಎಂಬ ಆ ಎರಡು ಪದ್ಯಗಳು ಪ್ರಕ್ಷಿಪ್ತಗಳೆಂದೂ ಛಂದೋಂಬುಧಿಯನ್ನು ಬರೆದ ನಾಗವರ್ಮನ ಕಾಲವು ಕ್ರಿ. ಶ. ೯೯೦ ಅಲ್ಲವೆಂದೂ ಹೇಳಿ ಅವನ ಕಾಲವನ್ನು ಮುಂದಕ್ಕೆ ದಬ್ಬಿಕೊಂಡು ಹೋಗಿದ್ದಾರೆ. ಉದಯಾದಿತ್ಯ, ನಾಗವರ್ಮ–೧, ಭೋಜ ಇವರ ಕಾಲಗಳನ್ನು ಒಂದುಗೂಡಿಸಲು ಗಣಗಾಡಿದ್ದಾರೆ. ಆದಕ್ಕಾಗಿ ಕವಿಚರಿತೆಕಾರರ ಎರಡನೆಯ ಅಭಿಪ್ರಾಯವಾದ ಧಾರಾನಗರದ ಭೋಜನು ಕ್ರಿ. ಶ. ೧೦೧೦ ರಲ್ಲಿ ಆಳಲು ಪ್ರಾರಂಭಿಸಿದನೆಂಬ ಆಧಾರವನ್ನು ಗ್ರಹೀತವಾಗಿಟ್ಟುಕೊಂಡು ಆ ದಿಶೆಯಲ್ಲಿ ಮುನ್ನಡೆದಿದ್ದಾರೆ.

ಇದಕ್ಕೆ ಪೋಷಕವಾಗುವಂತೆ ಕಾಕತೀಯ ರುದ್ರದೇವನ ಅನಮಗೊಂಡ ಶಾಸನವನ್ನು ಉದ್ಧರಿಸುತ್ತಾರೆ. (೧೧೬೨–೬೩). ಆದಕ್ಕೆ ಸಾಕ್ಷೀಭೂತವೆನ್ನುವಂತೆ ಮಾಮಿಳ್ಳಪಳ್ಳಿ (೧೧೩೮) ಪಾನುಗಲ್ (೧೧೨೪) ಶಾಸನಗಳನ್ನು ಎತ್ತಿತೋರಿಸಿರುತ್ತಾರೆ. ಆದರೆ ಅವರ ಸಾಕ್ಷಿ ಅವರಿಗೇ ತಿರುಗಿ ಬೀಳುತ್ತವೆ. ಉದಯಾದಿತ್ಯಾಲಂಕಾರದ ಉದಯಾದಿತ್ಯನ ತಂದೆಯು ಸೋಮದೇವಕ್ಷಿತಿಪನೆಂಬುದು ಸುಸ್ಪಷ್ಟವಿದೆ. ಒಂದಲ್ಲದೆ ಎರಡು ಕಡೆಗೆ ಈ ವಿಷಯ ಗ್ರಂಥದಲ್ಲಿ ಬರುತ್ತದೆ. (ಪ. ೨೪, ೫೩) ಆದರೆ ಸೀತಾರಾಮಯ್ಯನವರು ಹೇಳಿದ ಈ ಉದಯಾದಿತ್ಯನ ತಂದೆಯ ಹೆಸರು ಮಾಮಿಳ್ಳಪಳ್ಳಿಯಲ್ಲಿ "ಗೋಕರ್ಣ"ನೆಂದೂ ಪಾನುಗಲ್ಲಿನಲ್ಲಿ "ತೊಂಡ"ನೆಂದೂ ಬರುತ್ತದೆ. 'ತಂದೆ ಮಾತ್ರ ಬೇರೆ' ಎಂದು ಇಷ್ಟು ಹಗುರವಾಗಿ ತೇಲಿಸಿ ಹೇಳುವುದು ವಿವೇಕಿಗಳ ಮನಸ್ಸಿಗೆ ಒಪ್ಪುವ ಮಾತಲ್ಲ. ಯಾರದೋ ತಂದೆಯನ್ನು ಯಾರಿಗೋ ಸೇರಿಸಿದರೆ ಅವನ ಹುಟ್ಟಿನ ಗತಿಯೇನು?

ಉದಯಾದಿತ್ಯ

ಸೀತಾರಾಮಯ್ಯನವರ ಈ ಎಲ್ಲ ವಿಚಾರಗಳಿಗೂ ಸಮಾಧಾನ ಹೇಳುವಂತೆ ಶಾಡಪತ್ರಿ ರಾಮೇಶ್ವರ ದೇವಸ್ಥಾನದಲ್ಲಿ ಒಂದು ಶಾಸನ ದೊರೆಯುತ್ತದೆ.[೫]

ಶಾಡಪತ್ರಿ ರಾಮೇಶ್ವರ ದೇವಸ್ಥಾನದ ಶಾಸನ – ಕ್ರಿ.ಶ. ೧೧೯೯[೬]

ಉದಯಾದಿತ್ಯ

ಮದವದ್ವೈರಿಸ್ವಪಾಳಸ್ವೈಸ್ಯತಿಮಿರಪ್ರಧ್ವಂಸನಂಗೆಯ್ದು ಪೆ–
ರ್ಚಿಪರಾನಂ ನಿಜಮಂಡಳಕ್ಕೆಸೆಯೆ ದಿಕ್ಕಾಕ್ರಾಂತಮಂ ತನ್ನ ತೇ–
ಜಪಗುರ್ವಿಂ ಸಮುದಿತ್ತುಮಭ್ಯುದಯಮಂ ಕೈಕೊಂಡ ಸಯ್ಪಿಂದಮಿಂ–
ತುದಯಾದಿತ್ಯಕುಮಾರನಪ್ರತಿಹತೋದಗ್ರ ಪ್ರತಾಪೋದಯಂ ‖ ೧ ‖

೫. [ys. I. IV 796].
೬. (ದಕ್ಷಿಣ ಇಂಡಿಯಾ ಶಾಸನಗಳು – IV ಸಂಖ್ಯೆ – 798.)

ಪ್ರತ್ಯರ್ಥಿನೃಪ ತಿ– ಬಳ ತಿಮಿ –
ರಾತ್ಯಯಮಂ ಮಾಳ್ಪ ತೇಜದಿಂ ಸೋಮನೃಪಾ –
ಪತ್ಯಮೆನಿಸಿದ ಕುಮಾರಂ
ಪ್ರತ್ಯಕ್ಷ ಕಾನೆ ನೋಟ್ಪೊಡುದಯಾದಿತ್ಯಂ ॥ ೨ ॥

ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಕಾನೀನನಂ ದಾನದೊಳ್
ಹರಿಯಂ ವಿಕ್ರಮಶಕ್ತಿಯೊಳ್ ಯಮಸುತನಂ ಸತ್ಯೋಕ್ತಿಯೊಳ್ ತೀವ್ರ ಭಾ–
ಸ್ಕರನಂ ತೇಜದೊಳಂಬುಜಪ್ರಭವನಂ ಚಾತುರ್ಯದೊಳ್ ಹೇಮ ಭೂ–
ಧರಮಂ ಧೈರ್ಯದೊಳೆಯ್ದೆ ಪೋಲ್ವನುದಯಾದಿತ್ಯೋರ್ವರಾವಲ್ಲಭಂ ॥ ೩ ॥

ಉದಯಾದಿತ್ಯ ಕುಮಾರಂ
ಕದನದೊಳದಿರಾದ ಮದವದಹಿತ ಮಹೀಭೃ–
ತ್ಸುದತಿಯರ ವದನವನಜ–
ಕ್ಕವಬಿಲಂ ಮಾಡುವಂದಮಿಂದು ಬಿಸಪಂದಂ ॥ ೪ ॥

ಈ ಶಾಸನವನ್ನು ಅವಲೋಕಿಸಿದರೆ, ಉದಯಾದಿತ್ಯನ ಶೌರ್ಯ, ಧೈರ್ಯ, ಔದಾರ್ಯ, ಸೌಂದರ್ಯ, ವೈಭವ ಮುಂತಾದವುಗಳು ವಿದಿತವಾಗುತ್ತವೆ. ಉದಯಾದಿತ್ಯಾಲಂಕಾರದಲ್ಲಿಯೂ 'ಜಡಿಯೆ ನಿನ್ನ ಕೃಪಾಣಂ ರಣದೊಳ್ ಕಂಪಿಸುವುದು ರಿಪುಗಣದೊಡನೆ ಗಜೇಂದ್ರ ವೈರಿ ವಿಕ್ರಮ ನಿಳಯಾ೬೨ 'ಚರಣದೊಳೊಂದು ಪರತ್ಯಜ್ಯ ರಣದೊಳ್ ಅಹಿತಾವನೀಶರ್ ಉದೇಗನರೇಶಾ೭೩ 'ಉದೆಗನೊಳಾಂ ಪರಾರ್....೮೮' ಈ ಮುಂತಾದೆಡೆಗಳಲ್ಲಿ ಅವನ ಪರಾಕ್ರಮದ ವಿಷಯವೇ ಬರುತ್ತದೆ. ಉದಯಾದಿತ್ಯಾಲಂಕಾರದಲ್ಲಿ ಉದಯಾದಿತ್ಯನು 'ಸೋಮದೇವನೆಂಬ ರಾಜನ ಮಗನು, ಎಂದಿದೆ. ಇಲ್ಲಿಯೂ ಎರಡನೆಯ ಪದ್ಯದಲ್ಲಿ 'ಸೋಮ ನೃಪಾಪತ್ಯನೆನಿಸಿದ.... ಉದಯಾದಿತ್ಯಂ' ಎಂದು ಸ್ಪಷ್ಟವಾಗಿಯೇ ಇದೆ.

ಈ ಶಾಸನದಲ್ಲಿ ಉದಯಾದಿತ್ಯನನ್ನು 'ಉದಯಾದಿತ್ಯ ಕುಮಾರ' ಎಂದು ಹೇಳಲಾಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಇಷ್ಟು ಪರಾಕ್ರಮಿಯಾಗಿದ್ದನೆಂದು ಇದರಿಂದ ತಿಳಿಯುವುದು. ಪ್ರೌಢಾವಸ್ಥೆಗಾಗಲಿ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿ, ವೈರಿಗಳನ್ನು ನಿರ್ಮೂಲಗೊಳಿಸಿ ರಾಜ್ಯವನ್ನು ಸುಭಿಕ್ಷವನ್ನಾಗಿ ಮಾಡಿರಬೇಕು. ಅಂತೆಯೇ ಅವನಿಗೆ ಉದಯಾದಿತ್ಯಾಲಂಕಾರದಂತಹ ಲಾಕ್ಷಣಿಕ ಗ್ರಂಥವನ್ನು ಬರೆಯಲು ಸಾಧ್ಯವಾಯಿತು. ಈ ಗ್ರಂಥದಲ್ಲಿ ಶೃಂಗಾರ–ವೀರ ವಿಷಯಗಳು ಹೆಚ್ಚಾಗಿ ಬರುವುದರಿಂದ ತಾರುಣ್ಯಾವಸ್ಥೆಯಲ್ಲಿಯೇ ಈ ಗ್ರಂಥವನ್ನು ಬರೆದಿರಬೇಕು. ತಾಡಪತ್ರಿ ಶಾಸನವು ಕ್ರಿ. ಶ. ೧೧೯೯ ರಲ್ಲಿ ನಿರ್ಮಾಣ

ವಾಗಿದೆಯಾದ್ದರಿಂದ ಕ್ರಿ.ಶ. ೧೨೦೦ ರ ಸುಮಾರಿಗೆ ಈ ಗ್ರಂಥ ನಿರ್ಮಾಣ ವಾಗಿರಬೇಕು. ಇದರಿಂದ ನಾಗವರ್ಮನ ಕಾವ್ಯಾವಲೋಕನವನ್ನು ಉದಯಾ ದಿತ್ಯನು ನೋಡಲು ಸಾಧ್ಯವಾಗುತ್ತದೆ. ಮತ್ತು ಸೂಕ್ತಿಸುಧಾರ್ಣವದಲ್ಲಿ ಇವನ ಪದ್ಯವು ಸೇರಲು ಸಂಭವನೀಯವಾಗುತ್ತದೆ.

'ರಣದೊಳ್ ಕಂಪಿಸುವುದು ರಿಪುಗಣದೊಡನೆ ಗಜೇಂದ್ರವೈರಿ ವಿಕ್ರಮ ನಿಳಯಾ' ಎನ್ನುವಲ್ಲಿಯ 'ಗಜೇಂದ್ರ' ಎಂಬುದು ಕೇವಲ ಸಿಂಹವನ್ನಷ್ಟೇ ಹೇಳದೆ ಶ್ಲೇಷರೂಪವಾಗಿ ಯಾವುದೋ ಒಬ್ಬ ಅರಸನನ್ನು ಹೇಳುತ್ತಿರಬೇಕೆಂದು ಭಾಸವಾಗುತ್ತದೆ. 'ಕಾಂತ'ಗುಣಕ್ಕೆ ಇರುವ ಉದಾಹರಣೆಯಲ್ಲಿ 'ದಿನಕಾಂತ ಕುಲ ಕೇಳ್' ಎಂದಿದೆ. ಇದರಿಂದ ಉದಯಾದಿತ್ಯನು ಸೂರ್ಯವಂಶೀಯ- ನೆಂಬುದು ವಿದಿತವಾಗುವುದು.

ಈ ಎಲ್ಲ ವಿವೇಚನೆಯಿಂದ—ಈ ಸಂಗತಿಗಳು ವಿದಿತವಾಗುತ್ತವೆ.

೧) ಉದಯಾದಿತ್ಯಾಲಂಕಾರವನ್ನು ಬರೆದ ಕವಿಯು ಉದಯಾದಿತ್ಯ ಪೃಥಿ ಪಾಲನು

೨) ಸೋಮದೇವರಾಜನ ಮಗನು.

೩) ಸೂರ್ಯಕಾಲದಲ್ಲಿ ಹುಟ್ಟಿದ ಕ್ಷತ್ರಿಯವೀರನು.

೪) ಕ್ರಿ.ಶ. ಸು. ೧೨೦೦ ರಲ್ಲಿ ತನ್ನ ಉದಯಾದಿತ್ಯಾಲಂಕಾರವನ್ನು ರಚಿಸಿದನು.

ಸುಮಾರು ಕ್ರಿ.ಶ. ೯೯೦ ರಲ್ಲಿದ್ದ ನಾಗವರ್ಮನಿಗೂ ಕ್ರಿ.ಶ. ೧೨೦೦ರಲ್ಲಿದ್ದ ಉದಯಾದಿತ್ಯನಿಗೂ ೨೧೦ ವರ್ಷಗಳ ಅಂತರವಾಗುವುದರಿಂದ ನಾಗವರ್ಮ- (೧)ನಿಗೂ ಉದಯಾದಿತ್ಯಾಲಂಕಾರಕ್ಕೂ ಯಾವ ನಂಟೂ ಇಲ್ಲ. ಆದ್ದರಿಂದ ಉದಯಾದಿತ್ಯಾಲಂಕಾರದ ಕರ್ತೃ ಉದಯಾದಿತ್ಯನಾಗಿರದೆ ನಾಗವರ್ಮ (೧) ನೆಂದು ಹೇಳುವಲ್ಲಿ ಯಾವ ತಥ್ಯಾಂಶವೂ ಇಲ್ಲವೆಂದು ನಿಷ್ಪೃಷ್ಟವಾಗಿ ಹೇಳ ಬಹುದು.

★ ಸಂಗನೇಶ ಬಿರಾದಾರ

ಸುಭಾಷಿತಗಳು

ನಮ್ರತ್ವೇನೋನ್ನಮಂತಃ ಪರಗುಣಕಥನಾತ್ಸ್ವಾನ್ಗುಣಾನ್ಖ್ಯಾಪಯಂತಃ ।
ಸ್ವಾರ್ಥಾನ್ಸಂಪಾದಯಂತೋವಿತತಪೃಥುತರಾರಂಭಯತ್ನಾಃ ಪರಾರ್ಥೇ ॥
ಕ್ಷಾಂತ್ಯೈವಾಕ್ಷೇಪರೂಕ್ಷಾಕ್ಷರಮುಖರಮುಖಾನ್ದುರ್ಮುಖಾನ್ದೂಷಯಂತಃ ।
ಸಂತಃಸಾಶ್ಚರ್ಯಚರ್ಯಾಜಗತಿಬಹುಮತಾಃಕಸ್ಯನಾಭ್ಯರ್ಚನೀಯಾಃ

ಪರಗುಣಾಣುವ ಪೊಗಳಿ ತಮ್ಮ ।
ಲ್ಲಿರುವ ಗುಣವನು ತೋರ್ಪ ಸ್ವಾರ್ಥವ ।
ಪರಹಿತಾರ್ಥವ ಮಾಡಿ ಗಳಿಸುವ ನಮ್ರತನದಿಂದೆ ।
ನಿರುತ ಮುನ್ನತರೆನಿಪ ಕ್ಷಮಿಸುತ ।
ಪೊರೆಯ ದೂಷಿಕರನ್ನು ನಿಂದಿಪ
ಧರೆಯ ಬಹುಮತ ಪೂಜ್ಯ ಸಂತರ ಚರಿತವಚ್ಚರಿಯೈ ॥ ೧ ॥

ಪ್ರಾಣಾಘಾತಾನ್ನಿವೃತ್ತಿಃ ಪರಧನಹರಣೇ ಸಂಯಮಃ ಸತ್ಯವಾಕ್ಯಂ ।
ಕಾಲೇಶಕ್ತ್ಯಾಪ್ರಧಾನಂ ವರಯುವತಿಕಥಾ ಮೂಕಭಾವಃ ಪರೇಷಾಂ ॥
ತೃಷ್ಣಾಸ್ರೋತೋವಿಭಂಗೋಗುರುಷುಚವಿನಯಃ ಸರ್ವಭೂತಾನುಕಂಪಾ ।
ಸಾಮಾನ್ಯಃಸರ್ವಶಾಸ್ತ್ರೇಷ್ವನುಪಹತವಿಧಿಃ ಶ್ರೇಯಸಾಮೇಷ ಪಂಥಾಃ ॥

ಪರರವಿತ್ತದೆ ಸಂಯಮಂ ತೃಷೆ ।
ದೊರೆಯ ಭಂಗಂ ಭೂತದೊಳ್ದಮೆ ।
ಪರಸತಿಯ ಕಥನದಲಿ ಮೌನವಹಿಂಸೆ ಜೀವಿಗಳೊಳ್ ॥
ಗುರುವಿನೊಳು ನಯ ನನ್ನಿವಚನದೆ ।
ವರವಿತರಣಂ ಯೋಗ್ಯಕಾಲ
ಕ್ಕುರುವ ಶಾಸ್ತ್ರಕೆ ಮಾನ್ಯಮಾರ್ಗವಿವೆಲ್ಲ ಶ್ರೇಯಸಿಗೆ ॥ ೨ ॥

ಸ್ಥಾಲ್ಯಾಂ ವೈಡೂರ್ಯಮಯ್ಯಾಂ ಪಚತಿ ತಿಲಖಲೀಮಿಂಧನೈಶ್ಚಂದನಾದ್ಯೈಃ ।
ಸೌವರ್ಣೈರ್ಲಾಂಗಲಾಗ್ರೈರ್ವಿಲಿಖತಿ ವಸುಧಾ ಮರ್ಕಮೂಲಸ್ಯ ಹೇತೋಃ ॥
ಛಿತ್ವಾ ಕರ್ಪೂರಖಂಡಾನ್ವೃತಿಮಿವ ಕುರುತೇ ಕೋದ್ರವಾಣಾಂ ಸಮಂತಾತ್ ।
ಪ್ರಾಪ್ಯೈಮಾಂ ಕರ್ಮಭೂಮಿಂ ನಚರತಿ ಮನುಜೋ ಯಸ್ತಪೋಮಂದಭಾಗ್ಯಃ

ತಿಲದ ಹಿಂಡಿಯ ವಜ್ರಭಾಂಡದೊ ।
ಳೊಲೆಗೆ ಚಂದನವುರಿಸಿ ಕುಚ್ಚುವ ।
ಲಲಿತ ಹೇಮದ ಮಂಜಣಾಗ್ರದಿ ನೆಕ್ಕಿಬೇರಗಿವ ।
ಬಳೆಸಿ ಬೇಲಿಯ ಗೈಯ್ವ ರಾಗಿಯ ।
ಹೊಲಕೆ ಕಪ್ಪುರ ಬರ್ಲಿನಿಂದವೆ ।
ತಳೆದು ಜನ್ಮವ ಕರ್ಮಭುವಿಯೊಳು ತಪಿಸದಿಹ ಮೂಢ ॥ ೩ ॥

ಪುಣ್ಯೇಗ್ರಾಮೇ ವನೇವಾ ಮಹತಿಸಿತಪಟಚ್ಛನ್ನಪಾಲೀ ಕಪಾಲೀಂ ।
ಮಾದಾಯನ್ಯಾಯಗರ್ಭದ್ವಿಜಹುತ ಹುತಭುಗ್ಧೂಮ್ರಧೂಮ್ರೋಪಕಂಠಂ ॥
ದ್ವಾರಂ ದ್ವಾರಂ ಪ್ರವೃತ್ತೋ ವರಮುದರದರೀ ಪೂರಣಾಯ ಕ್ಷುಧಾರ್ತೋ ।
ಮಾನೀಪ್ರಾಣೇ ಸ್ವದೇಶೇ ನಪುನರನುದಿನಂ ತುಲ್ಯಕುಲ್ಯೇಷು ದೀನಃ

ತನ್ನಪುರದಲಿ ಬಂಧು ಜನರೊಳು ।
ದೈನ್ಯ ಜೀವನದಿಂದಲನುದಿನ ।
ಪುಣ್ಯವಂತರ ಗ್ರಾಮದೊಳಗಥವಾ ವನಂಗಳಲಿ
ಚನ್ನವೆನಿಪುದು ಬಿಕ್ಕೆ ಕರದಲಿ ।
ಛಿನ್ನಬೋಕಿಯ ಪಿಡಿದು ಮಾನಿಗೆ ।
ಸನ್ನುತದ್ವಿಜ ಗ್ರಹಕೆ ಪೋಗುತ ಹೊಟ್ಟೆ ತುಂಬಲಿಕೆ ॥ ೪ ॥

ವೃಕ್ಷಂ ಕ್ಷೀಣಫಲಂ ತ್ಯಜಂತಿ ವಿಹಗಾಃ ಶುಷ್ಕಂ ಸರಃ ಸಾರಸಾಃ ।
ನಿರ್ದ್ರವ್ಯಂ ಪುರುಷಂ ತ್ಯಜಂತಿ ಗಣಿಕಾ ಭ್ರಷ್ಟಂ ನೃಪಂ ಮಂತ್ರಿಣಃ ॥
ಪುಷ್ಪಂ ಪರ್ಯುಷಿತಂ ತ್ಯಜಂತಿ ಮಧುಪಾದಗ್ಧಂ ವನಾಂತಂ ಮೃಗಾಃ ।
ಸರ್ವಃಕಾರ್ಯವಶಾಜ್ಜನೋಭಿರಮತೇ ತತ್ಕಸ್ಯಕೋವಲ್ಲಭಃ

ಫಲಗಳಿಲ್ಲದ ತರುವ ವಿಹಗಂ ।
ಸಲಿಲವಿಲ್ಲದ ಸರವ ಸಾರಸ ।
ಗಳಿತಧನಮನುಜನನ ವೇಶ್ಯೆಯು ಕುನೃಪನಂ ಮಂತ್ರೀ
ಬಳಲ್ದಪುಷ್ಪವ ಭೃಂಗವೇಣನ ।
ಕುಲವು ಸುಟ್ಟಡವಿಯನು ತೋರೆವವು ।
ಸಲೆ ಜನರು ನಿಜಕಾರ್ಯವರ್ತಿಗಳಾರ ವಶವಲ್ಲೈ ॥ ೫ ॥

ಇಂದುಂ ನಿಂದತಿ ತಸ್ಕರೋ ಗೃಹಪತಿಂ ಜಾರಃ ಸುಶೀಲಂ ಖಲಃ ।
ಸಾಧ್ವೀಮಪ್ಯಸತೀ ಕುಲೀನಮಕುಲೋ ಜಿಹ್ಮಾಜ್ಜರಂತಂ ಯುವಾ ॥
ವಿದ್ಯಾವಂತಮನಕ್ಷರೋ ಧನಪತಿಂ ನೀಚಶ್ಚ ರೂಪೋಜ್ವಲಂ ।
ವೈರೂಪ್ಯೇಣ ಹತಃ ಪ್ರಬುದ್ಧಮಬುಧೋಕಷ್ಟಂ ನಿಕೃಷ್ಟೋಜನಃ

ಚೋರನಿಂದುವ ಮುದಕನಂ ಯುವ ।
ಜಾರನಾ ಗೃಹಪತಿಯ ಸಾಧ್ವಿಯ ।
ಜಾರೆ ದುಃಶೀಲನು ಸುಶೀಲನ ಹೀನಕುಲದವನು ।
ದೂರುವನು ಕುಲಮುತನ ರೂಪವಿ ।
ದೂರನಾ ಚೆಲುವನನು ಪದವೀ ।
ಧಾರಿಯನ್ನಕ್ಷರವಿಹೀನನು ಬಡವ ಧನಿಕನನು ॥ ೬ ॥

ಸೂನುಃ ಸಚ್ಚರಿತಃ ಸತೀ ಪ್ರಿಯತಮಾ ಸ್ವಾಮೀಪ್ರಸಾದೋನ್ಮುಖಃ ।
ಸ್ನಿಗ್ಧಂ ಮಿತ್ರಮವಂಚಕಃ ಪರಿಜನೋ ನಿಷ್ಕ್ಲೇಶಲೇಶಂ ಮನಃ ॥
ಆಕಾರೋ ರುಚಿರಃ ಸ್ಥಿರಶ್ಚ ವಿಭವೋ ವಿದ್ಯಾವದಾತಂ ಮುಖಂ ।
ತುಷ್ಟೇ ವಿಷ್ಟಪ ಕಷ್ಟಹಾರಿಣಿ ಹರೌ ಸಂಪ್ರಾಪ್ಯತೇ ದೇಹಿನಾ

ಚಲಿಸದರ್ಥವು ಸ್ನೇಹಪೂರಿತ ।
ಗೆಳೆಯನುಂ ನಗೆಮೊಗದೊಡೆಯನು ।
ಸಲೆ ಸುಚರಿತಾತ್ಮಜನು ಭಾರ್ಯೆಯು ಪ್ರೇಮಪೂರ್ಣಮಯೂ ।
ಚಲುವಿನಾಕಾರವು ಸುವಿದ್ಯೆಯ ।
ಕಳೆಯ ಮುಖವುಂ ಕ್ಲೇಶವಿಲ್ಲದ ।
ಬಲುಮನವು ಸಂಪ್ರಾಪ್ತಮಪ್ಪವು ತುಷ್ಟನಾಗೆ ಹರಿ ॥ ೭ ॥

ದೌರ್ಮಂತ್ರ್ಯಾನ್ನೃಪತಿರ್ವಿನಶ್ಯತಿ ಯತಿಃ ಸಂಗಾತ್ಸುತೋ ಲಾಲನಾ
ದ್ವಿಪ್ರೋನಧ್ಯಯನಾತ್ಕುಲಂ ಕುತನಯಾಚ್ಛೀಲಂ ಖಲೋಪಾಸನಾತ್ ॥
ಹ್ರೀರ್ಮದ್ಯಾದನವೇಕ್ಷಣಾದಪಿ ಕೃಷಿಃ ಸ್ನೇಹಃ ಪ್ರವಾಸಾಶ್ರಯಾ ।
ನ್ಮೈತ್ರೀ ಚಾಪ್ರಣಯಾತ್ಸಮೃದ್ಧಿರನಯಾ ತ್ತ್ಯಾಗಾತ್ಪ್ರಮಾದಾದ್ಧನಂ

ಅರಸ ದುರ್ಮಂತ್ರದೊಳು ದುಷ್ಟು ।
ತ್ರರೊಳು ಕುಲ ಸಂಗದೊಳು ಯತಿ ಭೂ ।
ಸುರರನಧ್ಯಾಯದೊಳು ನೇಹ ಪ್ರವಾಸ ಮಾಡುವನೊಳ್ ।
ದುರುಳ ಚಾಕರಿಯೊಳಗೆ ಶೀಲವು ।
ಸುರೆಯ ಸೇವಿಸುವರೊಳು ಮಾನವು ।
ನೆರೆ ಕೃಷಿಯು ದುರ್ಲಕ್ಷ್ಯತನದೊಳು ನಷ್ಟವಾಗುವವೈ ॥ ೮ ॥

ನಭೋಭೂಷಾ ಪೂಷಾ ಕಮಲವನಭೂಷಾ ಮಧುಕರೋ ।
ವಚೋಭೂಷಾ ಸತ್ಯಂ ವರವಿಭವಭೂಷಾ ವಿತರಣಂ ॥
ಮನೋಭೂಷಾ ಮೈತ್ರೀ ಮಧುಸಮಯಭೂಷಂ ಮನಸಿಜಃ ।
ಸದೋಭೂಷಾ ಸೂಕ್ತಿಃ ಸಕಲಗುಣಭೂಷಾ ಚ ವಿನಯಃ

ಭೂಷಣಂ ವಚನಕ್ಕೆ ಸತ್ಯವು ।
ಭೂಷಣಂ ವಿಭವಕ್ಕೆ ವಿತರಣ ।
ಭೂಷಣಂ ಕಮಲಕ್ಕೆ ಮಧುಕರವಾಗಸಕ್ಕೆ ರವಿ ॥
ಭೂಷಣಂ ಸಂತರ್ಗೆ ಸೂಕ್ತಿಯು ।
ಭೂಷಣಂ ಗುಣಗಳಿಗೆ ವಿನಯಂ ।
ಭೂಷಣಂ ಕಾಮನು ವಸಂತಗೆ ಮನಸಿಗಂ ಮೈತ್ರೀ ॥ ೯ ॥

ವರಂಮೌನಂಕಾರ್ಯಂ ನಚ ವಚನಮುಕ್ತಂ ಯದನೃತಂ
ವರಂಕ್ಲೈಬ್ಯಂ ಪುಂಸಾಂ ನಚಪರಕಲತ್ರಾಭಿಗಮನಂ।
ವರಂ ಪ್ರಾಣ ತ್ಯಾಗೋ ನಚಪಿಶುನ ವಾಕ್ಯೇಷ್ವಭಿರುಚಿ।
ವರಂ ಭಿಕ್ಷಾಶಿತ್ವಂ ನಚಪರಧನಾಸ್ವಾದನಸುಖಂ

ಉಸಿಕನಿರ್ಪಂದು ಲೇಸು ವಚನದಿ।
ಹುಸಿಯನಾಡುವ ಕಾರ್ಯದಿಂ ಪರ।
ಬಿಸರುಹಾಕ್ಷಿಯ ಕೂಟದಿಂ ಷಂಡತ್ವವೇ ಲೇಸು।
ಪಿಶುನವಾಕ್ಯವ ಬಳಸುವದಕಿಂ।
ತಸುವ ತೊರೆವುದೆ ಬಹಳ ಲೇಸೈ।
ಹಸನವೆನಿಪುದು ಭಿಕ್ಷೆ ಪರಧನರುಚಿಯ ಮನದಿಂದೆ ॥ ೧೦ ॥

★ ವೈಲಾರಗೌಡ ಪಾಟೀಲ

‘ ತಕರಾರಿನವರು ’ — ಒಂದು ಸಮೀಕ್ಷೆ

ಅಡಿಗರಿಂದೀಚೆಗೆ ಕನ್ನಡ ಕಾವ್ಯ ಹೊಸ ತಿರುವನ್ನು ಪಡೆದುಕೊಂಡಿದ್ದು, ಹೊಸ ಪ್ರಜ್ಞೆಯಿಂದ ಕಾವ್ಯ ರಚಿಸುತ್ತಿರುವ ಯುವ ಕವಿಗಳಲ್ಲಿ ಶ್ರೀ ಚಂದ್ರ-ಶೇಖರ ಕಂಬಾರ ಅವರ ಕಾವ್ಯಕೃಷಿ ಗಮನಾರ್ಹವಾಗಿದೆ. ಶ್ರೀ ಬೇಂದ್ರೆಯವರ ತರುವಾಯದಲ್ಲಿ ಜಾನಪದ ಭಾಷೆಯ ಸತ್ವ ಹಾಗೂ ಶ್ರೀಮಂತಿಕೆಗಳೆರಡನ್ನೂ ಅರಿತುಕೊಂಡು ಅದರ ಹದಕ್ಕೆ ತಕ್ಕಂತೆ ಭಾಷೆಯನ್ನು ಬಳಸಬಲ್ಲ ಸಾಮರ್ಥ್ಯವಿರುವುದನ್ನು ‘ಹೇಳ್ತೆನಿ ಕೇಳ್’ ಹಾಗೂ ‘ ತಕರಾರಿನವರು ’ ಸಂಕಲನದಲ್ಲಿರುವ ಕವಿತೆಗಳು ಸಾಕ್ಷ್ಯ ಒದಗಿಸುತ್ತವೆ. ಭಾಷೆಯ ಸಾಧ್ಯತೆಗಳನ್ನು ವಿಸ್ತರಿಸಿ, ಕಾವ್ಯಕ್ಕೆ ಒಗ್ಗುವ ರೀತಿಯಲ್ಲಿ ಹೊಸ ತಿರುವು ಕೊಡಬಲ್ಲ ವಿಶಿಷ್ಟತೆ ಕಂಬಾರರ ಕಾವ್ಯಕ್ಕಿದೆ.

‘ತಕರಾರಿನವರು’ ಸಂಕಲನದ ಕವಿತೆಗಳನ್ನು ನೋಡಿದರೆ ಅವರ ಪ್ರೌಢತ್ವ ಯಾವ ಮಟ್ಟದ್ದೆಂಬುದು ಕಣ್ಣಿಗೆ ಹೊಡೆಯುವ ಹಾಗೇ ಇದೆ. ಈ ಸಂಕಲನಕ್ಕೆ ಮುನ್ನುಡಿ ಕಟ್ಟಿದ ಶ್ರೀ ಬಿ. ಟಿ. ದೇಸಾಯಿ ಅವರು ‘ಅಡಿಗರಿಗಿದ್ದ ಪ್ರತ್ಯೇಕತೆ ಇವರಿಗೂ ಇದೆ’ ಎಂಬುದನ್ನು ಲಕ್ಷಿಸಿದ್ದು ಯಥೋಚಿತ. ‘ಬೇಂದ್ರೆ, ಕುವೆಂಪು ಮಧುರ ಚೆನ್ನರಂತೆ ವಿಷಯದಲ್ಲಿ ಮಗ್ನರಾಗಿ, ತನ್ಮಯರಾಗಿ ಇವರು ಹಾಡುವುದಿಲ್ಲ’ –ಹೀಗೆಂದು ಶ್ರೀ ದೇಸಾಯರು ಯಾವ ಅರ್ಥದಿಂದ ಹೇಳಿದ್ದಾಗಿರಬೇಕು ? ಈ ಹೇಳಿಕೆ ಅನವಶ್ಯಕವಾಗಿತ್ತು ಎನ್ನಿಸುತ್ತದೆ. ಏಕೆಂದರೆ ಸದರೀ ನಮೂದಿಸಿದವರಿಗಿಂತಲೂ ಒಂದು ತೂಕ ಹೆಚ್ಚಿನ ತನ್ಮಯತೆ ಹಾಗೂ ವಿಷಯದೊಂದಿಗಿನ ತಾದಾತ್ಮ್ಯತೆ ಕಂಬಾರರಿಗೆ ಇರುವುದನ್ನು ಅವರೇ ಧಾಟಿ ತೆಗೆದು ಹಾಡು ಹೇಳುವುದನ್ನು ಕೇಳಿರುವ ಅನೇಕರಿಗೆ ಗೊತ್ತಿರುವ ವಿಷಯ. ಈ ವಿಷಯವನ್ನು ಇದ್ದಕ್ಕಿದ್ದ ಹಾಗೆ ಎತ್ತಿ ಹೇಳಿದರೆ ಕಂಬಾರರಿಗೆ ಅಪಚಾರವೇನಿಲ್ಲ. ಜಾನಪದ ಭಾಷೆಯ ಗುಟ್ಟು ಕಂಬಾರರಿಗೆ ಗೊತ್ತಿದ್ದು ಅದನ್ನು ಹೇಗೆ ನುಡಿಸಬೇಕು ಎನ್ನುವ ಜಾಣ್ಮೆ ಅವರಲ್ಲಿದ್ದುದರಿಂದ ಭಾಷೆಗೆ ಅದರಿಂದ ಉಪಕಾರವೇ ಆದೀತು. ಬೇಂದ್ರೆಯವರ ತರುವಾಯದಲ್ಲಿ ಪದ್ಯಗಳಿಗೆ ಜಾನಪದ ಧಾಟಿ ಹಚ್ಚಿ, ಹಾವಭಾವಯುಕ್ತವಾಗಿ ಹಾಡಿ ಸಭೆಯನ್ನು ರಸಸ್ರೋತದಲ್ಲಿ ಮುಳುಗಿಸುವ ಜಾಣ್ಮೆ ಹಾಗು ಆಕರ್ಷಣೆ ಕಂಬಾರರಿಗಿದೆ ಎಂದು ಹೇಳಿದರೆ ಅದು ಹೆಮ್ಮೆಯನ್ನು ಹೆಚ್ಚಿಸುವುದೇ. ಜಾನಪದ ಚುಕ್ಕಾಣಿ ಕಂಬಾರರ ಕೈಗೆ ಸಿಕ್ಕಿರುವುದರಿಂದ ಅದನ್ನು ಬೇಕಾದ ಹಾಗೆ ತಿರುಗಿಸಿ ಅನುಭವಗಳನ್ನು ನವ್ಯೋನವವಾಗಿ ಪ್ರದರ್ಶಿಸಬಲ್ಲ ಸಾಮರ್ಥ್ಯ ಕಂಬಾರರ ಪ್ರತಿಭೆಗಿದೆ.

"ತಕರಾರಿನವರು" ಸಂಕಲನದಲ್ಲಿ ಪ್ರಯೋಗಗೊಂಡ ಭಾಷೆಯ ವಿಷಯಕ್ಕೆ ಒಂದಿಷ್ಟು ಆಲೋಚಿಸಬೇಕಾಗುತ್ತದೆ. "ಹೇಳ್ತಿನಿ ಕೇಳ್"ದ ಜಾನಪದ ಮಟ್ಟ ಇಲ್ಲಿಯ ಎಲ್ಲಾ ಕವಿತೆಗಳಲ್ಲಿಲ್ಲದ್ದು ಗಮನಾರ್ಹ. "ತಕರಾರಿನವರು" "ನಾಯಕನ ಪ್ರೇಮಗೀತೆ" ಕವಿತೆಗಳಲ್ಲಿ ಸುಸಂಸ್ಕೃತ ಪ್ರಜ್ಞೆಯ ಭಾಷೆಯ ಉಪಯೋಗ, ಇನ್ನುಳಿದ ಕವಿತೆಗಳಲ್ಲಿ ಅನುಭವದ ಅಭಿವ್ಯಕ್ತಿಗೆ ಸರಳವಾಗುವ ಹಾಗೆ ಭಾಷೆಯನ್ನು ದುಡಿಸಿಕೊಳ್ಳುವುದು ಕಂಡುಬರುತ್ತದೆ. ಋಷ್ಯಶೃಂಗನ ಹಾಡುಗಳಲ್ಲಿಯ ಹಾಗೆ ಜಾನಪದ ಭಾಷೆ ತನ್ನ ಸಹಜ ಗತಿ ಗತ್ತುಗಳಿಂದ ಅಲಂಕೃತವಾಗಿದೆ. ಜಾನಪದ ಶ್ರುತಿ ಹಿಡಿಯುವ ಕಂಬಾರರ ಭಾಷೆ ನಮ್ಮ ಸಂಸ್ಕೃತಿಯ ಮೂಲದ ಸತ್ವ, ಸೌಂದರ್ಯ ಹಾಗೂ ವೈಭವಗಳನ್ನು ಒಡ್ಡಿನಿಂತು ಬೆರಗುಗೊಳಿಸುವುದು ಅನುಭವವೇದ್ಯವಾಗುತ್ತದೆ. ಆದರೆ ಒಮ್ಮೊಮ್ಮೆ ಕಂಬಾರರ ಕಾವ್ಯ ಆವೇಶಕ್ಕೂ ಗುರಿಯಾಗುತ್ತದೆ. "ಏ ಬೋಳಿಮಗನೆ, ಘುಸ್ಸೂಳೆಮಗನೆ; ನಿನಗೆ ಕೆತ್ತಿಸಿ ಬಡದೇನು ಗೂಟಾ" —ಇಂಥ ಬೈಗಳನ್ನು ಬಳಸದೆ ಹೋಗಿದ್ದರೆ ಕಾವ್ಯಕ್ಕೆ ನಷ್ಟವೇನೂ ಇಲ್ಲ. ಶ್ರೀ ಲಂಕೇಶ್ ಅವರ "ದೇಶ ಭಕ್ತ ಸೂಳೆಮಗನ ಗದ್ಯಗೀತೆ"ಯ ತರುವಾಯ ಅದೇ ಶ್ರುತಿ ಹಿಡಿದು ಹೊರಡುವುದನ್ನು ಕಂಬಾರರಂಥ ಕವಿಯಿಂದ ಯಾರೂ ಅಪೇಕ್ಷಿಸಲಾರರು.

'ತಕರಾರಿನವರು' ಪದ್ಯದ ಲಯಗಾರಿಕೆ ಒಮ್ಮೆಲೆ ಮನಸ್ಸನ್ನು ಹಿಡಿಯುವಂತಹದು. ಮಾತುಗಳು ಭಾವವಾಹಿಯಾಗಿ ಅವುಗಳೊಳಗಿನ ವ್ಯಂಜಕತೆ ಸ್ಫೋಟಗೊಳ್ಳುತ್ತ 'ಇಬ್ಬರ ತಕರಾರಿಗೆ ಹುಟ್ಟಿ, ಹಲವರ ತಕರಾರಿನಲ್ಲಿ ಬೆಳೆದವರ'ನ್ನು ಅತ್ಯಂತ ನಯವಾದ ರೀತಿಯಲ್ಲಿ ಟೀಕಿಸುತ್ತದೆ. 'ನಾವು ತಕರಾರಿನವರು' ಎಂದು ಹೇಳಿದಾಗ ಕವಿತೆಯ ಅರ್ಥ ಹಿಗ್ಗಿಕೊಂಡು ಸಾರ್ವತ್ರಿಕತೆಯನ್ನು ಪಡೆಯುತ್ತವೆ. ಎಲಿಯಟ್ಟನ We are hollow men ಧಾಟಿಯನ್ನು ಅನುರಣನಗೊಳಿಸುತ್ತದೆ.

'ಖಾಂಡವ ದಹನ'ದಲ್ಲಿ ಬರುವ 'ಸಂದೆಂಬೋ ಸಂದಿಗೂ
ಗೊಂದೆಂಬೊ ಗೊಂದಿಗೂ ಬಣಿವೆಗೂ ಹಕ್ಕಿಗೂ ಅಲ್ಲೆ ಪಕ್ಕದ ಮನೆಗೂ–'
ಹೋಳಿ ಹುಣ್ಣಿಮೆ ಬೂದಿಯೊಟ್ಟಿರುವದನ್ನು
'ನರೆಗೂದಲ ತೆರೆ ಚರ್ಮದ
ಸುಕ್ಕಡೆಸಿದ ಪರೆ ಹಾವದೊ'
ಸುಟ್ಟರ್ಧದೇಹವನೆತ್ತಿತ್ತೋ ಮತ್ತೂ
ಎಳೆಯುತ್ತಾ ಹೊರಟಿದೆ ಹೊಸಬತ್ತಳಿಕೆಯನರಸುತ್ತಾ'

ಕಂಬಾರರು ಸಾಧಿಸುವ ಹೊಸ ಲಯಗಾರಿಕೆಗೆ ಈ ಸಂಕಲನದಲ್ಲಿ ಹಲವು ಉದಾಹರಣೆಗಳು ಸಿಕ್ಕುತ್ತವೆ. ಭಾಷೆಯನ್ನು ಬೇಕಾದ ಹಾಗೆ ಅರೆದೊರೆದು

ಮುರಿದು ತೊಡಿಗೆಯನ್ನು ಮಾಡಬಲ್ಲ ಕೌಶಲ್ಯ ಕಂಬಾರರಿಗಿದೆ. ಕಂಬಾರ ಕಾವ್ಯದ ವೈಶಿಷ್ಟ್ಯ ಅವರು ಬಳಸುವ Sprung Rythem ನಲ್ಲಿದೆಯೆಂದು ಹೇಳಬಹುದು. ಪರಂಪರಾಗತ ಲಯಕಟ್ಟುಗಳನ್ನು ಒಡೆದು ಅಭಿವ್ಯಕ್ತಿಗೆ ಅನುಕೂಲಿಸುವ ಹಾಗೆ ಪ್ರಯೋಗಿಸುವ ಧೈರ್ಯ ಕಂಬಾರರ ಕಾವ್ಯಕ್ಕಿದೆ.

ಹಸಿರು ಕೈಕೊಟ್ಟ ವಟವೃಕ್ಷ ನಮ್ಮಜ್ಜ
ಮುಂದೆ ಅಂಗಳ ತುಂಬ ಹಿಂದೆ ಹಿತ್ತಲತುಂಬ
ಮೈಕೈ ನೆರಳ ಚೆಲ್ಲಿ ಕೂರುತ್ತಾನೆ

ಹಿಂದು-ಮುಂದುಗಳನ್ನು ವ್ಯಾಪಿಸಿ ಕೂತಿರುವ ಅಜ್ಜನ ಪ್ರತಿಮೆಯನ್ನು ಶಬ್ದಾರ್ಥಗಳಲ್ಲಿ ಸಮರ್ಥವಾಗಿ ಪೇಂಟ್ ಮಾಡಲಾಗಿದೆ.

ಹಿತ್ತಲದ ಹಳೆಬಾವಿಯೊಳಗೆಲ್ಲ ಬೇರುಗಳು
ಕೆಳಗೆ ನೀರಿನ ತುಂಬ ಹಸಿರು ಬಿಂಬ

ಹೀಗೆ ಒಂದೊಂದು ಸಲ ರೋಮ್ಯಾಂಟಿಕ್ ಚಿಲುಮೆಯೂ ಉಕ್ಕುತ್ತದೆ. ರೋಮ್ಯಾಂಟಿಕ್ ವಾಸನೆಯಿಂದ ಮುಕ್ತಗೊಳ್ಳಬೇಕೆನ್ನುವ ಪ್ರವೃತ್ತಿ ಮೂಲತಃ ಇದ್ದರೂ – ಅದನ್ನು ಒಮ್ಮೆಲೆ ಬಿಟ್ಟುಕೊಡಲು ಶಕ್ಯವಾಗುವುದಿಲ್ಲವೆನ್ನಿಸುತ್ತದೆ.

ಅವನೊಮ್ಮೆಯೂ ತಪ್ಪಿಯೂ
ಮರೆತು ಸಹ ಕನಿಷ್ಠ ಪಕ್ಷ ಅಳಲಿಲ್ಲ
ಕಬ್ಬಿಣದ ಭಾವ ಭಂಗಿಗಳ ಬದಲಿಸಲಿಲ್ಲ

ಕಾವ್ಯಕ್ಕೆ ಉಕ್ಕಿನ ಗಟ್ಟಿಗತನ ತರಬಲ್ಲ ಸಾಮರ್ಥ್ಯಕ್ಕೆ ಇಂಥ ಸಾಲುಗಳನ್ನು ನಿದರ್ಶಿಸಬಹುದು.

ಈ ಸಂಕಲನದಲ್ಲಿಯ 'ಆಸ್ಪತ್ರೆಯಲ್ಲಿ' 'ದೇವರ ಬಂಗಾರದ ಕುದುರೆ' 'ಪ್ರಭು' 'ಮಾವೊತ್ಸೆ ತುಂಗನಿಗೆ' 'ಗಂಗಾ ಮಾಯಿ' ಇವು ಯಶಸ್ವೀ ಕವಿತೆಗಳು. ಒಂದು ವಿಶಿಷ್ಟ ರೀತಿಯಲ್ಲಿ ಅನುಭವ ಸಂಕೀರ್ಣಗೊಳ್ಳುತ್ತಿರುವುದನ್ನು ಈ ಕವನಗಳು ಸಿದ್ಧಪಡಿಸುತ್ತವೆ. ಆಡು ಮಾತಿನ ಲಯವನ್ನು ಹಾಗೂ ಜಾನಪದ ನುಡಿಗಟ್ಟನ್ನು ಸಮರ್ಥವಾಗಿ ಕಾವ್ಯದಲ್ಲಿ ಬಳಸುವುದರಿಂದ ಕಂಬಾರರ ಕಾವ್ಯ ಒಡೆದು ಕಾಣುವ ಗುಣವನ್ನು ಪಡೆದುಕೊಳ್ಳುತ್ತದೆ. 'ದೇವರ ಬಂಗಾರದ ಕುದುರೆ'ಯ ಕಥನ ರೀತಿ ಹೊಸ ಮಾದರಿಯದ್ದು. ಯಶೋಧರ–ಅಮೃತಮತಿಯರ ಪ್ರೇಮ ಪ್ರಕರಣದ ಹಿನ್ನೆಲೆಯಲ್ಲಿ —

'ಹೀಗೆ ಉದ್ದೋ ಉದ್ದ ರಸ್ತೆ ಹೋಗಿದೆ ನೋಡು'

ಅಲ್ಲಿ 'ಗುಹ್ಯಾತ್ ಗುಹ್ಯತರವಾದ ಗಹನಗವಿ' ಎಂದು ಉದ್ದೋಉದ್ದ ಹಿಗ್ಗಿಸಿ ಹೇಳುವಲ್ಲಿ ವಿಶಿಷ್ಟ ಗತಿ ಸಾಧ್ಯವಾಗಿದೆ.

'ಶಿಶಿರದಲ್ಲಿ ಮಂಡೆ ಬೋಳಿಸಿದೊಂದು ಎಳೆಯ ಮರ'

'ಗವಿಯ ಒಳಗಡೆಯಿಂದ ಸೀಳು ನಾಲಗೆ ಚಾಚಿ ಬಂತು ಕತ್ತಲೆ' ಕುತೂಹಲ ಕೆರಳಿಸುವ ಪ್ರತಿಮೆಗಳ ಒಡಲಿನಲ್ಲಿ ಹುದುಗಿರುವ ಅರ್ಥವೈಭವ ವನ್ನು ತೆರೆದು ತೋರುವ ಜಾಣ್ಮೆ ಕಂಬಾರರ ಕಾವ್ಯದಲ್ಲಿದೆ.

ಘುಮ ಘುಮಾ ನಾರಿದಳು ಮೂಗ ತುಂಬಾ.

ಕತ್ತಲೆಯ ಪ್ರತಿಮೆ ವಿಸ್ತಾರಗೊಂಡು ಅದು ಜೀವಂತ ಅನುಭವಕ್ಕೆ ಸಂಕೇತ ವಾಗಿ ಕುತೂಹಲ ಹುಟ್ಟಿಸಲು ಕಾರಣವಾಗುತ್ತದೆ. ಸೀಳು ನಾಲಗೆ ಚಾಚಿ ಬಂದ ಕತ್ತಲೆ ಅಷ್ಟಕ್ಕೆ ನಿಲ್ಲದೆ ಉಧೋ ಎಂದು 'ಬಯಲು ಬಯಲನು ತುಂಬಿ ಟೊಂಗೆಗಳ ತುದಿ ತಬ್ಬಿ ಅದನಳಿಸಿ ಇದನುಂಗಿ ತಿರುಗಿ ತಿರುಗಣಿಯಾಗಿ ಬರಿ ಎರಡನುಳಿಸಿತ್ತು' ಮಾತುಗಳಿಗೆ ಅರ್ಥ ಕೊಂಡಿಕೊಂಡಿಯಾಗಿ ಸೇರಿಕೊಳ್ಳುತ್ತ ವಿಶಿಷ್ಟಾನುಭವವನ್ನು ತಟ್ಟಿಸುವ ಕಾವು ಪಡೆಯುತ್ತದೆ.

ಕಾಲೇಜಿನ ಮೇಷ್ಟ್ರು ಹಾಗೂ ವಿದ್ಯಾರ್ಥಿನಿಯರ ಮಧ್ಯೆ ನಡೆದ ಮಾತು ಕತೆ ಇನ್ನೊಂದು ಕಥೆಯಾಗಿ ಬೆಳೆದದ್ದು ಗಮನಕ್ಕೆ ಬರುತ್ತದೆ. ಅದರ ಅಭಿ ವ್ಯಕ್ತಿಯಲ್ಲಿ ಎಲ್ಲಿಯೂ ಚ್ಯುತಿ ಬಂದದ್ದಿಲ್ಲ ಅಮೃತಮತಿ ಕಥೆಯೊಡಲಿನ ಲ್ಲಿಯ ಪ್ರಶ್ನೆಯೊಂದನ್ನು ಎಳೆದುಕೊಂಡು ಅದರ ಸುತ್ತು ಇನ್ನೊಂದು ಅನುಭ ವದ ವ್ಯೂಹ ರಚಿಸಲಾಗಿದೆ.

ಬೆಳೆದಂತೆ ಭವ ಭವಾ ಹೊಸ ಹೊಸ ಅನುಭವಾ !
ಮುಕ್ತಿಗಿನ್ನೆಷ್ಟು ಭವ ಹೇಳಿ ಸಾರ್?

–ಎಂಬ ವಿದ್ಯಾರ್ಥಿನಿಯ ಪ್ರಶ್ನೆ ಬದುಕು – ಭವಗಳನ್ನು ಅಲ್ಲಾಡಿಸುತ್ತದೆ. ವಿದ್ಯಾರ್ಥಿನಿ – ಅದೃಶ್ಯವಾಗಿ – ಅಮೃತವಾಗಿಯೇ ಸಾಕ್ಷಾತ್ತಾಗಿ ನುಡಿದಂತೆ ಅನುಭವಕ್ಕೆ ಬರುತ್ತದೆ. ಕವನದ ಉದ್ದಕ್ಕೂ ಸಂಭಾಷಣೆಯ ಚಾತುರ್ಯ ಸಹಗತವಾಗಿದ್ದು ಕವನ ನಾಟಕೀಯದ ನಮೂನೆಯಾಗಿ ಗಮನ ಸೆಳೆಯುತ್ತದೆ. ಕವನದ ಪ್ರಾರಂಭದಲ್ಲಿ 'ಮೂರೆ ಟೊಂಗೆ ಆರೆ ಎಲೆ' ಎಂದು ಹೇಳಿದ್ದು 'ಇರುವ ಆರೂ ಎಲೆಯನಲುಗಾಡಿದ' – ಹೀಗೆ ಕಂಬಾರರು ವೈಚಾರಿಕ, ವಿಷಯುಕ, ರೂಪಕ ಹಾಗೂ ಸಂಕೇತಗಳನ್ನು ಬಳಸಬಲ್ಲರು. ಕತೆ ಹೇಳು-ಕೇಳುವ ರೀತಿಯಿಂದ ಇಡೀ ಕವಿತೆ ನಾಟಕೀಯ ಆವರಣವನ್ನು ಕಟ್ಟಿಕೊಂಡು ಕ್ರಿಯಾ– ತ್ಮಕವಾಗಿ ಮುಂದುವರಿಯುತ್ತದೆ.

'ಪ್ರಭು' ಕವನದಲ್ಲಿ ಅನುಭವ ಸಂಕೀರ್ಣವಾಗಿ ವ್ಯಾಪ್ತವಾಗಿದ್ದು ಹೊಸ ಅರ್ಥಗಳನ್ನು ಬಿಡಿಸಿ ತೋರುತ್ತದೆ. ಪ್ರಭುವಿನ ಉದಾಹರಣೆಯಲ್ಲಿ ಬೆರಗಿನ ಲೋಕವೆನ್ನುವ ಕನಸು ಕೈಗೂಡಿದೆ. ಆರಂಭದ ಏಳುಸಾಲುಗಳಲ್ಲಿ ಕಾವ್ಯಕ್ಕೆ ಅವಶ್ಯಕವೆನ್ನಿಸುವ ಹಿನ್ನೆಲೆಯನ್ನು ರಚಿಸಿಕೊಳ್ಳಲಾಗಿದೆ. ಮಳೆ ಬೀಳುವ ಸಂಕೇತದಿಂದ ಕವಿತೆ ಶುರೂವಾಗುತ್ತದೆ. ಹಾಗೆ ಮಳೆ ಬೀಳುವುದರಿಂದ ನೆಲದೆದೆಯು ಮೇಲಾಗುವ ಪರಿಣಾಮವೇನೆಂಬುದನ್ನು ಬಣ್ಣಿಸಲಾಗಿದೆ. 'ವಾಸನೆ'ಯ ತೀಕ್ಷ್ಣತೆ ಮೂಗಿಗೆ ಹೊಡೆಯುವ ಹಾಗಿದೆ. ದೇವರ ಬಂಗಾರದ ಕುದುರೆಯ ಥಾಟಿಗೂ ಇದಕ್ಕೂ ಒಂದು ಬಗೆಯ ಸಂಬಂಧವಿದೆ. ಮುಂದಿನ ಹತ್ತು ಸಾಲುಗಳಲ್ಲಿ ಭೂಮಿ ಸ್ಫುರದ್ರೂಪಿಯಾಗಿ ತನ್ನ ಜಾಲವನ್ನು ಒಡ್ಡಿರು–ವುದು ಕಣ್ಣು ಸೆಳೆಯುತ್ತದೆ. ಭೂಮಿ ಹೆಣ್ಣಿನ ಸಂಕೇತವಾಗಿದೆ 'ಉಬ್ಬಿಹಾ! ತಗ್ಗಿಹಾ! ಮಿದುವಹಾ!' – ಇಂಥ ಉದ್ಗಾರಗಳು ಹೆಣ್ಣಿನ ಸುಪ್ತ ಕಾಮನೆ ಹಾಗೂ ಸುಖೋದ್ರೇಕವನ್ನು ಚೆನ್ನಾಗಿ ಪ್ರತಿಬಿಂಬಿಸಿವೆ. 'ಗರುಡನೆದೆ ತೊಡೆ-ಗಳಲ್ಲಿ ತೊಡರಿ ರೇಗಿತು ಹಾವು ಹೆಡೆ ಬಿಚ್ಚಿತು' – ಈ ರೀತಿ ಸಾಂಕೇತಿಕವಾಗಿ ಕಾಮುಲತೆಯ ಅವಸ್ಥೆ ನಿರೂಪಿತವಾಗಿದೆ.

ಪುಟ್ಟ ಮುಖ, ಇಷ್ಟೆ ತುಟಿ, ನನ್ನ ಚಿಟಗುಬ್ಬಿಯೇ

ಹೀಗೆ ಉಕ್ಕಿ ಬಂದ ಮಾತುಗಳಲ್ಲಿನ ಸ್ವರಗಳ ಏರಿಳಿತದಿಂದ ಭಾವುಕತೆ ಹಾಗೂ ತೀವ್ರತೆಯ ಅರಿವಾಗುತ್ತದೆ. ಮಣ್ಣುಹದದಲ್ಲಿ ಬೆಳೆದ ಕಾಮುಲತೆಯನ್ನು ಕಂಡು ಒಳಗೆ ಕಸಿವಿಸಿಗೊಳ್ಳುತ್ತಿದ್ದ ಭಾವ ಹೊರಗುಕ್ಕಿದೆ. ಪ್ರಭುವಿಗೆ ಕ್ರೌರ್ಯವೂ ಇಲ್ಲಿ ಒಂದು ಬಗೆಯ ರುಚಿಯಾಗಿ ಕಂಡಿದೆ. ಕಾಮುಲತೆಯನ್ನು ತೊಡಗಿಸಿಕೊಂಡು ಹೊಸ ಅನುಭವಕ್ಕೆ ಪಕ್ಕಾಗಬೇಕೆನ್ನುವ ಪ್ರಭುವಿನ ಮಾನಸಿಕ ಸಿದ್ಧತೆಯನ್ನು ಗಮನಿಸಬೇಕು. ಇಲ್ಲಿಯ ಕಾಮುಲತೆ ಮಾಯೆಯ ಪ್ರತೀಕ. ಪ್ರಭು ಜ್ಯೋತಿರ್ಲಿಂಗದ ಪ್ರತೀಕ. ಕಾಮುಲತೆಗೆ ತನ್ನನ್ನು ಒಡ್ಡಿಕೊಂಡ ಪ್ರಭುವಿನ ಅನುಭವ ಅನುಭಾವದ ಸೀಮೆಯಲ್ಲಿ ಕೆಲಸ ಮಾಡುತ್ತದೆ.

ಕೃಷ್ಣನೀ ಸೊನ್ನೆಗಳ ರೂಪ್ಯ ಸಿಂಹಾಸನದ ಸುತ್ತ
ಮಂಡಲ ಕೊರೆದು ಮಂಡಿಸಿದೆ
.... ಮತ್ತು
ಪ್ರತಿಯೊಂದು ಮತ್ತನ್ನು ಅಂಗಾಂಗಕಂಟಿಸಿದೆ.
ಮೈತುಂಬ ಕಣ್ಣ ಹಾ!

ಒಂದೊಂದು ಸಾಲಿನಲ್ಲೂ ಅರ್ಥ ಸಮೃದ್ಧವಾಗಿ ಹಬ್ಬಿಕೊಳ್ಳುತ್ತದೆ. ಮಾಯೆಯು ಸಾಮರ್ಥ್ಯವೇನೆಂಬುದನ್ನು ಇಲ್ಲಿ ಬಣ್ಣಿಸಲಾಗಿದೆ. ಪ್ರಭು ಶೂನ್ಯ ಸಿಂಹಾಸನವನ್ನು ಅಲಂಕರಿಸುವ ಸಾಮರ್ಥ್ಯವುಳ್ಳವನಾಗಿದ್ದರೂ ಕಾಮಲತೆ ತನ್ನನ್ನೂ ತೊಡಕಿತೆಂದು ಹೇಳಿದ್ದು, 'ಮತ್ತು ಪ್ರತಿಯೊಂದು ದುಡ್ಡನ್ನು ಅಂಗಾಂಗಕಂಟಿಸಿದೆ.' ಇಲ್ಲಿಯ 'ಮತ್ತು' ಉನ್ಮತ್ತತೆಗೆ ಸಂಕೇತವಾಗಿ ಪ್ರಯೋಗ ಗೊಂಡಿದೆ. ಮಾಯೆಯ ಸ್ಪರ್ಶ ಸುಖದ ತೀವ್ರಾನುಭವಕ್ಕೆ ಇವೆಲ್ಲಾ ಸಹಾ ಯಕವಾಗಿವೆ. ಉತ್ತರ ಕರ್ನಾಟಕದ ಕೆಲವು ದೇವಾಲಯಗಳ ಬಾಗಿಲ ಚೌಕಟ್ಟು ಹಾಗೂ ಹೊರಸಿಗೆ ಕೆಲವು ದೇವತೆಗಳ ಮೈಕೈಗೆ ಬೆಳ್ಳಿ ಬಂಗಾರ ಇಲ್ಲವೆ ತಾಮ್ರದ ದುಡ್ಡುಗಳನ್ನು ಕೀಲಿಸುವ ಸಂಪ್ರದಾಯವಿದೆ. ಇಂಥ ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಈ ಸಂಕೇತ ನಿರ್ಮಾಣಗೊಂಡಿದೆ. ದುಡ್ಡನ್ನು ಅಂಗಾಂಗಕ್ಕೆ ಅಂಟಿಸಿಕೊಳ್ಳುವ ಸಂಪ್ರದಾಯವೂ ಒಂದೊಂದು ಕಡೆಗೆ ಉಂಟು. ಈ ಅರ್ಥವನ್ನು ಸಮರ್ಥಿಸುವುದಕ್ಕೆಂದು 'ಝುಣ್ ಝುಣಿಸಿ' ಎಂಬುದು ಪ್ರಯೋಗಗೊಂಡದ್ದು. ಹಾಗೆ ಮೈಗೆ ದುಡ್ಡನ್ನು ಅಂಟಿಸಿ ಕೊಂಡದ್ದು ಮೈತುಂಬ ಕಣ್ಣಾಗಿ ಕಂಡಿದೆ. ಸುಖಾನುಭವದ ಉನ್ಮಾದವನ್ನು ಹಾಗು (ಸಹಸ್ರಾಕ್ಷ) ಮೈತುಂಬ ಕಣ್ಣಾದ ಇಂದ್ರನ ಪ್ರತಿಮೆಯನ್ನೂ ಒಟ್ಟಿಗೆ ನೆನಪಿಗೆ ತಂದು ಅನುಭವದ ಇನ್ನೊಂದು ಸ್ತರವನ್ನು ಬಿಚ್ಚಿ ತೋರುತ್ತದೆ. ಮಾಯೆ ತನ್ನ ಬಣ್ಣಬಣ್ಣದ ವೈಭವ ತೋರಿ ನವಿಲಾಗಿ ನರ್ತಿಸಿದ್ದನ್ನು ಮುಂದಿನ ಸಾಲುಗಳು ನಿವೇದಿಸುತ್ತವೆ. ಮುಂದೆಬರುವ ಸಾಲುಗಳಲ್ಲಿ ಮಾಯೆ ಹಾಗೂ ಅವಳ ಛಾಯೆಗಳೆಲ್ಲವೂ ಪ್ರಭುವಿನ ಮೇಲೆ ದಾಳಿ ಮಾಡುತ್ತವೆ. ಆದರ ಪರಿ ಣಾಮವಾಗಿ ಹಾಳುರಂಡೇರ ಹರಿತದೃಷ್ಟಿ ಚುಚ್ಚಿ ತಾನು ಇಂದ್ರನ (ಸಹಸ್ರಾಕ್ಷನ) ಅವಸ್ಥೆಗೆ ಗುರಿಯಾಗಬೇಕಾಯ್ತೆಂಬ ಪ್ರಜ್ಞೆ ಪ್ರಭುವಿಗೆ ಇದ್ದೇ ಇದೆ. ಈ ಪ್ರಜ್ಞೆಯಲ್ಲಿಯೇ ಪ್ರಭುವಿನ ಜೀವಂತಿಕೆ ಅಭಿವ್ಯಕ್ತವಾಗಿದೆ. ಶೂನ್ಯ ಸಿಂಹಾಸನ ಹತ್ತಿ ಮೆರೆದ ಧೀರನೂ ಪತನಗೊಳ್ಳುವುದು ಹೇಗೆ ಅನಿವಾರ್ಯ ವಾಯಿತೆಂಬುದನ್ನು ಮುಂದಿನ ಕಾವ್ಯ ಭಾಗದಲ್ಲಿ ಸಮರ್ಥವಾಗಿ ಬಣ್ಣಿಸಲಾಗಿದೆ.

ಜಾರುಗುಂಡಿಯ ಏಣಿ ಹತ್ತಿ ಜರ್‍ರನೆ ಜರಿದು ಬಿದ್ದ ಅನುಭವದ ನೆನಪು ಇನ್ನೂ ಮಾಸಿಲ್ಲ. ಕವನದ ಎರಡನೆಯ ಭಾಗ ಇನ್ನೊಂದು ತಿರುವನ್ನು ಪಡೆದು ಕೊಳ್ಳುತ್ತದೆ. 'ಭೂಮಿಗೀತದ ನಾಯಕನ ಪ್ರಜ್ಞೆಯನ್ನು' ನೆನಪಿಗೆ ತರುವ ಹಾಗೆ ಇಲ್ಲಿಯ ಮಾತುಗಳು ಧ್ವನಿಸುತ್ತವೆ.

ತ್ರಿಶಂಕು ನಡೆ ಸ್ವರ್ಗಕ್ಕೆ

ಎಂದ ಹಾಗೆ ಇಲ್ಲಿಯೂ 'ನಡೆಯಿನ್ನು ನೆರಳ ಕಳಚಿ ಬತ್ತಲಾಗು' ನೆರಳು ಹಾಗೂ ಬೆಳಕಿನ ದ್ವಂದ್ವವನ್ನು ಬಿಡಿಸಿ ತೋರುವ ಕ್ರಿಯೆ ಸಮರ್ಥ ಅಭಿವ್ಯಕ್ತಿ ಪಡೆದಿದೆ.

ಸುಖ, ಸಂತೋಷ, ಆಶೆ, ವಿಭ್ರಮ ಇತ್ಯಾದಿ ಆವರಣ ನೆರಳಿನ ಪ್ರತೀಕ. ಅವುಗಳಿಂದ ಮುಕ್ತಗೊಳ್ಳುವುದರಲ್ಲಿ ತನ್ನ ಅಸ್ತಿತ್ವದ ಅರ್ಥವನ್ನು ಕಂಡುಕೊಳ್ಳುವ ತಿಳಿವಳಿಕೆಯುರುವುದು ಗಮ್ಯವಾಗುತ್ತದೆ. ಎದುರಿಗಿನ ಮಣ್ಣನ್ನು ಕೆದರಿದರೆ ಸ್ವರ್ಣಗುಡಿ ಹಾಗೂ ಅದರ ಸ್ವರ್ಣಕಳಸ ಗೋಚರಿಸುತ್ತವೆ.

ಬಂಗಾರದಿಟ್ಟಿಗೆಯ ಗೋಡೆ ಮೂಡಣ ಬದಿಗೆ ಮುಚ್ಚಿರುವ ಬಾಗಿಲು ಒಂದು ಕ್ಷಣದ ದಿವ್ಯಾನುಭವವನ್ನು ಮೂರ್ತವಾಗಿ ಹೇಳುವ ರೀತಿ ತುಂಬ ಕುತೂಹಲಕರವಾಗಿದೆ. ದಂತಕಥೆಯ ಗೋಪುರವೊಂದನ್ನು ಅಗೆದು ತೋರಿ ಆಧ್ಯಾತ್ಮಿಕವೆನ್ನಬಹುದಾದ ಅನುಭವದ ಜಾಡಿನಲ್ಲಿ ಈ ಕವಿತೆ ಸಾಗಿದೆ. ಸ್ವರ್ಣಸದೃಶ ಅನುಭವವನ್ನು ಪಡೆಯುವದಕ್ಕೂ ಪೌರುಷವಿಲ್ಲದೆ ನಡೆಯುವದಿಲ್ಲ. ಕತ್ತಲೆಯ ಪಥದಲ್ಲಿ ನುಗ್ಗುವ ಧೈರ್ಯವಿದ್ದವನಿಗೆ ಮಾತ್ರ ಅದರ ಮುಂಗಡೆಗೆ ಇರುವ ಬೆಳಕು ಕಂಡೀತು ಎನ್ನುವ ಕಲ್ಪನೆಯಲ್ಲಿ ಅರ್ಥವಿಲ್ಲದಿಲ್ಲ. ಆಗ 'ಮಾಣಿಕ್ಯದಂಥಾದ್ದೊಂದು ದೀಪ್ತಿ' ಹೊಳೆಯುವದೆಂಬ ವಿಚಾರ. ಹಾಗೆ ಪ್ರವಹಿಸುವ ಬೆಳಕನ್ನು ಗುಡಿಯಲ್ಲಿ ತುಂಬಿರುವದರಿಂದಲೇ ನೆರಳು ಕಳೆದ ನಂತರದ ಬೆಳಕಿನ ಅನುಭವ ಬುದ್ಧಿಗಮ್ಯವಾಗುವಂತಹದು. ಬೆಳಕಿನಲ್ಲಿ ಕ್ರಮಿಸುವ ಸೂಚನೆ ಇಲ್ಲಿದೆ.

ಕವನದ ಮೂರನೆಯ ಭಾಗದಲ್ಲಿ ನಾಯಕನ ಮನಸ್ಸಿನ ತುಡಿತವೇನೆಂಬುದು ಸ್ಪಷ್ಟವಾಗುತ್ತದೆ.

ಕಾಲಿಟ್ಟ ಕಡೆಗೆ ಹಾವಸೆ ಬೆಳೆದ ಜವುಗು ನೆಲ

ಆತ್ಮದ ಸುತ್ತು ಬೆಳೆದಿರುವ ಕತ್ತಲೆ ಹಾಗು ಅಜ್ಞಾನದ ಆವರಣವನ್ನು ಸಂಕೇತಿಸುತ್ತದೆ. ತನ್ನ ನೆರಳುಗಳು ಗೂಢ ಕತ್ತಲೆಯಾಗಿ ಇಡೀ ಮನೆಯನ್ನು ವ್ಯಾಪಿಸಿ ರೋಮ ರೋಮದ ಕಣ್ಣುಗಳನ್ನು ಅತ್ತಿತ್ತ ಎಳೆದಾಡುವ ರೂಪಕ ಅತ್ಯಂತ ಅರ್ಥಪೂರ್ಣವಾಗಿದೆ. ಮಾಯೆ ಬೀಸಿದ ಕತ್ತಲೆಯಿಂದ ಬಿಡಿಸಿಕೊಳ್ಳುವುದು ಅಶಕ್ಯವಾಗಿ ಎಲ್ಲ ಕ್ರಿಯೆ ವರ್ತನೆಗಳನ್ನು ಬಿಟ್ಟು ನಿಂತಿರುವ ಸೆಳೆತಗಳ ತೆಕ್ಕೆಯಲ್ಲಿ ಸಿಕ್ಕು ಕ್ರಿಯೆ ವರ್ತನೆಗಳನ್ನೆಲ್ಲ ಹರಳುಪ್ಪಿನ ಹಾಗೆ ನೀರಿಗರ್ಪಿಸಿ ನಿಂತಿರುವಲ್ಲಿ ಒಂದು ತರಹದ ಸೋಲು ಪ್ರಾಪ್ತವಾಗಿರುವುದು ಸ್ಪಷ್ಟವಾಗಿದೆ. ತಾನು ಗೆದ್ದೆನೆಂಬ ಉನ್ಮಾದದಲ್ಲಿ ಮುಳುಗಿದ ಮಾಯೆಗಾದ ಸಂತೋಷ ಅಷ್ಟಿಷ್ಟಲ್ಲ. ನಾಯಕ ಪಟ್ಟ ಸುಖಕ್ಕೂ ಮೇರೆಯಿಲ್ಲ. ಅಲಾಬಿ ಹುಲಿಯಾಗಿ ಕುಣಿಯುವುದು, ಮೀನ ಘಟ್ಟು ಗಾಳ ಹಾಕಿ ಹಿಡಿಯುವುದು, ತೂತಿನಲ್ಲೊಂದೊಂದು ರೋಮಾಂಚನ ನೆಟ್ಟು ಪ್ರದಕ್ಷಿಣೆ ಹಾಕುವುದು....ಹೀಗೆ ನಾಯಕನ ಚರ್ಯೆಯು ಪರವಿ ಒಡೆದು ನೂರು ತೂತುಗಳಾಗಿವೆ. 'ಧರಿಸಲೆ, ಕುಣಿಯಲೆ? ಓಡಿಯಲೇ? ಹಾಕಲೆ?' ಎನ್ನುವ ಉನ್ಮಾದ ಚರಮ ಸೀಮೆ ಮುಟ್ಟಿದೆ. ತನ್ನ

ಬಿಡ್ಡಿ ಬೇರುಗಳನ್ನು ಅಲುಗಾಡುವ ಸಾಮರ್ಥ್ಯ ಸೆಳೆತಕ್ಕೆ ಇರುವುದು ಗಮನಕ್ಕೆ ಬಂದಿದೆ.

ಮಾಯೆಯೊಡ್ಡಿದ ಬೆಂಕಿಯಲ್ಲಿ ಸುಟ್ಟು ಬೇಯಬೇಕೆನ್ನುವ ಆಸೆ ಬಲಿತು ಅದು ಕಾರ ಹುಣ್ಣಿಮೆ ಹೋರಿಯ ರೂಪಕದಲ್ಲಿ ಪರಿವರ್ತಿತವಾಗಿದೆ. ಕಂಬಾರರ "ಹೋರಿ" ಎನ್ನುವ ಪದ್ಯವನ್ನೂ ಇದರೊಟ್ಟಿಗೆ ಓದಿದರೆ ಇವರು ಸೃಷ್ಟಿಸಿಕೊಳ್ಳುವ ಪ್ರತಿಮೆಯ ಅರ್ಥ ತಿಳಿದುಕೊಳ್ಳಲು ಪ್ರಯೋಜನವಾಗುತ್ತದೆ. ತನ್ನೆಲ್ಲ ಶಕ್ತಿ, ಸಾಮರ್ಥ್ಯವನ್ನು ವ್ಯಯ ಮಾಡಿ ಹೊಸ ಅರ್ಥವನ್ನು ಶೋಧಿಸುವ ದೃಷ್ಟಿ ಇಲ್ಲಿದೆ. 'ಮಣ್ಣಿನಲ್ಲಿಯೇ ಹೊನ್ನ'ನ್ನು ಅರಸುವ ದೃಷ್ಟಿಯೇ ಮುಖ್ಯವಾಗಿದ್ದು ಆಕಾಶದ ಎಳೆಬಿಸಿಲ ಸೋಂಕಿನಲ್ಲಿ ಧೂಳಿಕಣವೂ ಬಂಗಾರವಾಗಿ ದೃಗ್ಗೋಚರವಾಗುತ್ತದೆ. ಹತ್ತಂಗುಲ ಹಬ್ಬಿ ವ್ಯಕ್ತಿತ್ವ ವಿಸ್ತಾರಗೊಳ್ಳುವುದಕ್ಕೆ ಮಣ್ಣಿನೊಡನೆಯ ಸಂಬಂಧ ಇಲ್ಲಿಯ ನಾಯಕನಿಗೆ ಹೊಸ ಅನುಭವವಾಗಿ, ಹೊಸ ಸಂವೇದನೆಯಾಗಿ ಪರಿಣಮಿಸಿ ಅದು ಪ್ರಭುವನ್ನು 'ಪ್ರಭು'ತ್ವಕ್ಕೇರಿಸುವ ಮಹತ್ವದ ಮೆಟ್ಟಿಲು ಆಗುತ್ತದೆ. ಕಂಬಾರರ ವೈಚಾರಿಕ ನೆಲೆಯನ್ನು ತಿಳಿದುಕೊಳ್ಳುವುದಕ್ಕೆ 'ಪ್ರಭು' ಪದ್ಯ ಅತ್ಯುತ್ತಮವಾಗಿದೆ. ಪ್ರಭುವಿನ ಸಿದ್ಧಿ-ಸಾಧನೆಗಳಿಗಿಂತ ಪ್ರಭು ಎದುರಿಸುವ ಸೋಲಿನಿಂದ ಪದ್ಯ ಹೊಸ ಅರ್ಥದಲ್ಲಿ ಪುನರ್ಜನ್ಮ ಪಡೆದಿರುವುದು ಗಮನಾರ್ಹವಾಗಿದೆ.

'ಮಾವೊತ್ಸೆ ತುಂಗನಿಗೆ' ಪದ್ಯದ ಭಾಷೆಯಲ್ಲಿ, ರೂಪಕಗಳಲ್ಲಿ ಸ್ವಂತದ ಕಸುವು ಸಾಕಷ್ಟು ಇದ್ದರೂ ಲಂಕೇಶ್ ಅವರ ದೇ.ಥ.ಸೂ. ಗದ್ಯಗೀತೆಯ ಹಾಗೆ ಅವಾಚ್ಯವೆನ್ನಬಹುದಾದ ರೀತಿಯನ್ನು ಅನುಸರಿಸುವುದರಿಂದ ಸ್ವಂತತನಕ್ಕೆ ಧಕ್ಕೆ ತರುತ್ತದೆ. ಅವಾಚ್ಯ ಪದಾವಲಿ ಉಪಯೋಗಿಸುವುದಕ್ಕೆಂದು 'ಮಾವೊತ್ಸೆ ತುಂಗನಿಗೆ' ರಚಿತವಾದಂತೆನ್ನಿಸುತ್ತದೆ. ಅದರಲ್ಲಿ ವ್ಯಂಗ್ಯ, ವಕ್ರೋಕ್ತಿ ಸಾಕಷ್ಟಿದ್ದರೂ ಬೈಗುಳ ಪ್ರಯೋಗದಿಂದ ಕವಿತೆಯ ಮಟ್ಟ ಇಳಿದುಬಿಡುತ್ತದೆ.

ದುಷ್ಟಾ ಕೆತ್ತಿಸಿ ಬಡದೇನು ಗೂಟಾ,
ಲಂಡ ಭಂಡತನ, ಲಬೋ ಲಬೋ ಹೊಯ್ಕೊಂಡು,
ಮೂಢಾ, ಧಡ್ಡಾ, ಬಚ್ಚಾ ನೀ ಇನ್ನೂ ಅಕ್ಕಲ್ ಕಾ ಕಚ್ಚಾ

ಹೀಗೆ ಕಂಬಾರರ ಶೈಲಿ ಹೈಬ್ರಿಡ್ ಜೋಳದ ಹಾಗೆ ಕಣ್ಣಿಗೆ ಹೊಡೆಯುತ್ತದೆ. ಎಂಥದೋ ತಿರುವಿಗೆ ಸಿಕ್ಕು ಶೈಲಿ ' ಭಾವಾನುಭಾವ ಸಂಚಾರಿ ವಿಭಾವಾ'ದಿಗಳ ಮಿಸಳ ಭಾಜಿಯೆನ್ನಿಸಿ ಒಮ್ಮೊಮ್ಮೆ ತೀರಾ ರಫ್ ರೀತಿಯನ್ನು ಅನುಸರಿಸುತ್ತದೆ.

'ಗಂಗಾಮಾಯಿ' ಹಲವರ ಗಮನ ಸೆಳೆದಿರುವ ಕವಿತೆ. ಸ್ಥಳ ಪುರಾಣದ ರೀತಿಯಲ್ಲಿ ಕವಿತೆ ಬೆಳೆದು ಸಾಂಸ್ಕೃತಿಕ ಅರ್ಥವನ್ನು ಬಿಚ್ಚಿ ತೋರುವಲ್ಲಿ ತುಂಬ

ಯಶಸ್ವಿಯಾದದ್ದು. ಗಂಗಾಮಾಯಿಯ ಪರಿಸರ, ನಿತ್ಯದ ವ್ಯವಹಾರ, ಚಮತ್ಕಾರಗಳು – ವರ್ಣನೆ ಜೀವಂತವಾಗಿವೆ. ಹಲವರಿಗೆ ಹಲವು ರೀತಿಯಿಂದ ಕಂಡ ಗಂಗಾಮಾಯಿಯ ಅನುಭವ ಸಂಕೀರ್ಣವಾಗಿ ಮಡುಗಟ್ಟಿ ನಿಲ್ಲುತ್ತದೆ. ಜನದ ನಂಬಿಕೆ, ನಿಷ್ಠೆ, ರೂಢಿ ಇತ್ಯಾದಿ ಸಹಜ ಅಭಿವ್ಯಕ್ತಿ ಪಡೆದಿವೆ. ಋಷ್ಯಶೃಂಗ ನಾಟಕದ ಹಾಡುಗಳು ಜಾನಪದ ಭಾಷೆ ಹಾಗೂ ಲಯದ ಮೇಲಿರುವ ಸ್ವಾಮ್ಯವನ್ನು ಎತ್ತಿ ತೋರುತ್ತವೆ. 'ತಕರಾರಿನವರು' ಸಂಕಲನದ ಕವಿತೆಗಳು ಜಾನಪದ ಭಾಷೆಯ ಸತ್ವಕ್ಕೆ ನಿದರ್ಶನವೆಂಬುದರಲ್ಲಿ ಯಾವ ತಕರಾರೂ ಇಲ್ಲವೆನ್ನಬಹುದು.

★ ಬಂದ್ದಣ್ಣ ಹಿಂಗಮಿರೆ

ವೈದಿಕ ಅಪ್ರಕಟಿತ ಗ್ರಂಥಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

.ಅ ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
414	ಪಟಹಸ್ತನ ಚರಿತ್ರೆ	ಆದಿಯಪ್ಪ	1700	ಸಾಂ., 107	II 555
415	ಪಟ್ಟಾಭಿಷೇಕ	ಅ. ವೆಂ. ಸುಬ್ಬ	19. ಶ.	ಯ.	ಯ ಬ. 187
416	ಪತಿವ್ರತಾ ಸ್ತ್ರೀ ಧರ್ಮ	?	18. ಶ	?	III. 425
417	ಪತಿವ್ರತೆಯ ಚರಿತ್ರೆ (ಲೋಪಾಮುದ್ರೆ)	?	?	?	III. 424
418	ಪದ್ಮಗಂಧೀ ಸ್ವಯಂವರ	ಭೀಮಾಜಿ ಶ್ರೀನಿವಾಸ ಅಡಬತ್ತಿ	1860-94	ನಾ	ಸಿಗ್ರಂಚಕೋ. 103
419	ಪದ್ಮಪುರಾಣ	?	?	ಗ	GOML II ಸಂ. 211-12
420	ಪದ್ಮಪುರಾಣದ ಟೀಕು	ಚಿಕುಪಾಧ್ಯಾಯ	1672	ಟೀ	K. 533
421	ಪದ್ಮ ಗಣಸಹಸ್ರನಾಮ	ನರಸಾರ್ಯ	1600	ಕಂ+ಷ., 8 191	II 563-64
422	ಪದ್ಮಿನೀ ಕಲ್ಯಾಣ	ಶೃಂಗಾರಮ್ಮ	1685	ಸಾಂ., 189	II.516-17
423	ಪದ್ಮಿನೀ ಚರಿತ್ರೆ	K. ರಾಘವಾಚಾರ್ಯ	19. ಶ.	?	III. 232
424	ಪದ್ಮಿನೀ ಪರಿಣಯ	ಚೆನ್ನಯ್ಯ	1720	ಸಾಂ. 18. 2500	III. 12-4

425	ಪರತತ್ತ್ವಸಾರ	ಪುರಂದರದಾಸ	16. ಶ.	?	ಕ. ನು., 2.16 (255)
426	ಪರಬ್ರಹ್ಮ ಪ್ರಕಾಶಿಕೆ	?	19. ಶ.	?	III. 425
427	ಪರಮಾರ್ಥ ತತ್ತ್ವಬೋಧೆ	?	17. ಶ.	?	III. 425
428	ಪರವಸ್ತು ಸ್ವರೂಪ ನಿರ್ಣಯ ಟೀಕೆ	?	17. ಶ.	ಟೀ	III. 425
429	ಪರಶುರಾಮ ಚರಿತ್ರ	ನಂಜುಂಡ ಭಾಗವತ	1847–1906	?	ಹರಿ. ಕ (ಪೀಠಿಕೆ)
430	ಪರಶುರಾಮ ರಾಮಾಯಣ*	ಬಬ್ಬೂರು ರಂಗ	17 0	ವಾ. ಷ; 43.1543	III. 62-3, 65-6
431	ಪರಾಶರ ಧರ್ಮ ಶಾಸ್ತ್ರ ಟೀಕೆ	?	17. ಶ.	ಟೀ.	III. 425
432	ಪಶ್ಚಿಮ ರಂಗನಾಥ ಮಹಾತ್ಮ್ಯೆಯ ಟೀಕು	?	?	ಟೀ	KB. 261
433	ಪಶ್ಚಿಮ ರಂಗನಾಯಕ ಸ್ತೋತ್ರ	?	17. ಶ.	?	III. 425
434	ಪಶ್ಚಿಮ ರಂಗನಾಯಕ ಸ್ತೋತ್ರ ಟೀಕೆ	?	?	ಟೀ	III. 425
435	ಪಶ್ಚಿಮ ರಂಗ ಮಾಹಾತ್ಮ್ಯ	ಚಿಕುಪಾಧ್ಯಾಯ	1672	ಸಾಂ., 5. 317	II. 485
436	ಪಶ್ಚಿಮ ರಂಗ ಮಾಹಾತ್ಮ್ಯ	ತಿಮ್ಮಕವಿ	1677	ಚಂ., ಆ. 5	II. 492-93,96
437	ಪಶ್ಚಿಮ ರಂಗ ಮಾಹಾತ್ಮ್ಯ	?	?	ಗ	III. 425
438	ಪಶ್ಚಿಮ ರಂಗ ಸಾಂಗತ್ಯ	ಚಿಕುಪಾಧ್ಯಾಯ	1672	ಸಾಂ., 101	II. 486
439	ಪಂಚಕೋಶ ನಿರ್ಣಯ	?	15. ಶ	ಗ	III. 424
440	ಪಂಚಕೋಶ ನಿರ್ಣಯ	?	17. ಶ.	ಸಾಂ	III. 424
441	ಪಂಚ ಮಹಾಭೂತಗಳ ಉತ್ಪತ್ತಿ	?	17. ಶ.	ಗ	III. 424
442	ಪಂಚ ವಿಂಶತಿ ಪದ್ಧತಿ ವ್ಯಾಖ್ಯಾ	ಕೋ. ರಾಘವಾಚಾರ್ಯ	1800	ಟೀ	KB. 324/1

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
443	ಪಂಚ ಶಿಬಾ ಸ್ತೋತ್ರ	?	17. ಶ	?	III. 424
444	ಪಂಚಾಂಗ ಗಣಿತ ಟೀಕೆ	?	17. ಶ.	ಟೀ	III. 424
445	ಪಂಚೀಕರಣ ಟೀಕೆ	?	?	ಟೀ	III. 424
446	ಪಂಚೀಕರಣ ಪದಗಳ ಟೀಕೆ	?	17. ಶ.	ಟೀ	III. 425
447	ಪಂಪಾ ವಿರೂಪಾಕ್ಷ ಶತಕ	ಹಿರಿಯೂರು ರಂಗ	1650	ಛಾ. ಷ., 108	II. 407-08; III. 429
448	ಪ್ರಜಾಮೃತ ಸಂಜೀವಿನಿ	ಶ್ರೀ ರಂಗದಾಸ	19. ಶ.	ಗ	ಮ ಸಂ ಪಾ. ಸಂ. 3424
449	ಪ್ರಜ್ಞಾವತೀ ವಿಜಯ	ಅ. ನಾ. ಸುಬ್ಬರಾಯ	19. ಶ.	ನಾ?	III. 236
450	ಪ್ರಜ್ಞಾಸೂತ್ರ ಪ್ರಸನ್ನ	ತಾಳೂರು ವೆಂಕಟರಮಣ	?	ಯ	K B. 83; III. 425
	ಕೃಷ್ಣವಿಲಾಸಾಭಿಜ್ಞಾನ				
451	ಪ್ರತಾಪಸಿಂಹ ಚರಿತ್ರೆ	ಅಯ್ಯಾಶಾಸ್ತ್ರಿ	19. ಶ.	ನಾ	K B. 105
452	ಪ್ರಪನ್ನಾಮೃತ	ರಾಯಸದ ವರದಾರ್ಯ	18. ಶ	ಗ ?	III. 425
453	ಪ್ರಬೋಧ ಚಂದ್ರೋದಯ	ದೇ. ಶ್ರೀನಿವಾಸಯ್ಯಂಗಾರ್	19. ಶ.	ನಾ ?	III. 226
454	ಪ್ರಬೋಧ ಚಂದ್ರೋದಯ	ವೋ. ರಾಮಶೇಷಶಾಸ್ತ್ರಿ	19. ಶ.	ನಾ	ಸಿ ಗ್ರಂಚಕೋ. 127
455	ಪ್ರಭಾವತೀ ಸ್ವಯಂವರ	ಪರಮೇಶ್ವರ ಭಟ್ಟ	19. ಶ.	ಯ	III. 462
456	ಪ್ರಭಾವ ದೀಪಿಕೆ	?	18. ಶ.	?	III. 425
457	ಪ್ರಮೇಯ ಮುಕ್ತಾವಳಿ ಟೀಕೆ	?	?	ಟೀ	K. 517

458	ಪ್ರಸನ್ನ ಕೃಷ್ಣಕೊರವಂಜಿ	?	?	ಯ	III. 425
459	ಪ್ರಸನ್ನ ಕೃಷ್ಣಕೊರವಂಜಿ	?	1830	?	III. 325
460	ಪ್ರಹ್ಲಾದ ಚರಿತೆ	ಚೆನ್ನಿಗ	1700	ಸಾಂ., 13–915	III. 530
461	ಪ್ರಹ್ಲಾದ ಚರಿತೆ	ವಿಷ್ಣು ಸಭಾಹಿತ	19. ಶ.	ಯ	ಯಕ್ಷಗಾನ., 1.1 (8)
462	ಪ್ರಹ್ಲಾದ ಚರಿತ್ರೆ	ಅಂ/ ‘ ಗರುಡಾದ್ರಿ ಗಿರಿವಾಸ ನರಸಿಂಹ ’	?	ಯ	K B. 86/1
463	ಪ್ರಹ್ಲಾದ ಚರಿತ್ರೆ	ಗೋ. ಅನಂತಾಚಾರ್ಯ	19. ಶ.	ಯ	ಕ ಸಾ ವಾ. 107
464	ಪ್ರಹ್ಲಾದ ಚರಿತ್ರೆ	ದೇ. ಶ್ರೀನಿವಾಸಯ್ಯಂಗಾರ್	19. ಶ.	ನಾ ?	III. 226
465	ಪ್ರಹ್ಲಾದ ಚರಿತ್ರೆ	ನಂಜುಂಡ ಭಾಗವತ	1847-1906	?	ಹರಿ. ಕ (ಪೀಠಿಕೆ)
466	ಪ್ರಹ್ಲಾದ ಚರಿತ್ರೆ	ರಂಗಾಚಾರ್ಯ	1800	ಯ	III. 156
467	ಪ್ರಹ್ಲಾದ ಚರಿತ್ರೆ	ವೆಂಕಟ	19 ಶ.	ಯ	III. 239; ಯ ಬ. 251
468	ಪ್ರಹ್ಲಾದ ಚರಿತ್ರೆ	ಶ್ರೀನಿವಾಸ	1881	ಯ	K A. 8 7/2
469	ಪ್ರಹ್ಲಾದ ಚರಿತ್ರೆ	ಹೇಮರೆಡ್ಡಿ	19. ಶ.	?	III. 229
470	ಪ್ರಹ್ಲಾದ ಚರಿತ್ರೆ	?	?	ಯ	K B. 44/1
471	ಪ್ರಹ್ಲಾದ ಟೀಕೆ	ರಂಗಶಾಸ್ತ್ರೀ	1849	ಟೀ	III. 197
472	ಪಾಠಶಾಲಾ ವರ್ಣನೆ	ನೃಹರಿ	19. ಶ.	?	III. 425
473	ಪಾರಿಜಾತ	ಅ. ವೆಂ. ಸುಬ್ಬ	19. ಶ.	ಯ	K. 404
474	ಪಾರಿಜಾತ ಯಕ್ಷಗಾನ	?	?	ಯ	ಕ ತಾ ಸೂ. 252

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
475	ಪಾರ್ವತಿ ಕೊರವಂಜಿ	ಟಂಕಸಾಲೆ ರಾಘವ	?	ಯ	III. 425
476	ಪಾರ್ವತಿಗೆ ಬಳೆ ತೊಡಿಸಿದ ಸೋಬಾನೆ	?	19. ಶ.	ಹಾ	III. 425
477	ಪಾರ್ವತಿಗೆ ಬಳೆ ತೊಡಿಸಿದುದು	?	18. ಶ.	ಹಾ	III. 425
478	ಪಾರ್ವತಿಯನ್ನು ಹಸೆಗೆ ಕರೆದ ಸೋಬಾನೆ	?	19. ಶ	ಹಾ	III. 425
479	ಪಾರ್ವತಿಯ ಸೋಬಾನೆ	ರಾಮಚಂದ್ರ	1700	ಹಾ., 27	II. 556–57
480	ಪಾರ್ವತಿಯ ಹಸೆಗೆ ಕರೆದ ಸೋಬಾನೆ	?	1825	ಹಾ., 11	III. 324
481	ಪಾರ್ವತೀ ಕಲ್ಯಾಣ	?	1825	ಹಾ., 47	III. 324, 425
482	ಪಾರ್ವತೀ ಕಲ್ಯಾಣ	?	18. ಶ.	ಸಾಂ	III. 425
483	ಪಾರ್ವತೀ ಮಹಾತ್ಮ್ಯೆ	ಚಿದಾನಂದಾವಧೂತ	1750	ಹಾ., 43	ಡಾ. ಎಲ್. ಬಿ. ಅವರ ಸಂಗ್ರಹ
484	ಪಾಂಡವಾಶ್ವಮೇಧ	ರಾಮಕೃಷ್ಣಯ್ಯ ಸಜೀಪ	19. ಶ	ಯ ?	ಸಿಗ್ರಂಚಕೋ 116
485	ಪ್ರಾಕ್ತನ ಮಂಜರಿ	ರಘುನಾಥಯ್ಯ	?	?	K. 237
486	ಪ್ರಾಣೇಶ ಶತಕ	ಅಂ/ 'ಕರಿಗಿರಿ ನರಹರಿ'	1700	ಭಾ. ಷ.	III. 303-04
487	ಪಿಂಗಲಾಮತ ಸಂಗ್ರಹ ಟೀಕೆ (ಮೂಲ- ರೇಚ ರಾಜೀಯ)	?	?	ಟೀ	III. 425
488	ಪುತ್ರಕಾಮೇಷ್ಟಿ	ದೇವದಾಸ	1700	ಯ., ಸಂಧಿ. 10	III. 326
489	ಪುತ್ರಕಾಮೇಷ್ಟಿ	ಕೇಶವ ಯತಿ ಶಿಷ್ಯ	?	ಯ	KB. 352/2

490	ಪುತ್ರಕಾಮೇಷ್ಟಿ ನಾಟಕ	?	?	ನಾ	III. 425
491	ಪುರಂದರ ಸಾಂಗತ್ಯ	?	17. ಶ.	ಸಾಂ	III. 425
492	ಪುರೂರವ ಚರಿತ್ರೆ	ನಂಜುಂಡ ಭಾಗವತ	1847-1906	?	ಹರಿ. ಕ (ಪೀಠಿಕೆ)
493	ಪುಷ್ಕರ ಖಂಡ	?	?	ಗ	KB. 351/7
494	ಪುಷ್ಪ ಬಾಣ ವಿಲಾಸ	ಶಾಂತಕವಿ	1856–1920	ಷ	III. 467
495	ಪುಂಡರೀಕ ಚರಿತ್ರೆ	ವಿಷ್ಣುದಾಸ	19. ಶ.	?	III 239
496	ಪೂರ್ವಾಚಾರ್ಯರ ಕಿವಿಮಾತುಗಳು	?	18. ಶ	ಗ	III. 425
497	ಬತ್ತೀಸ ಪುತ್ಥಳಿ ಕಥೆ	ದೀನ	1725	ಚಂ.	III. 31–3
498	ಬರ್ಥೋಲ್ಡನ ಕಥೆ	ವೆಂಕಟ ರಂಗೋ ಕಟ್ಟಿ	1833–1909	ಗ	III. 224
499	ಬಭ್ರುವಾಹನ ಕಾಳಗದ ಹರಕೆ	?	18. ಶ	ಹಾ	III 426
500	ಬರಗಾಲರಸ	ಶಾಂತಕವಿ	1856–1920	?	III. 467
501	ಬಲಿಚಕ್ರವರ್ತಿಯ ಕಥೆ	ನಂಜುಂಡ ಭಾಗವತ	1847–1906	ಯ ?	III. 331
502	ಬಲಿಚರಿತ್ರೆ	?	?	?	III. 426
503	ಬ್ರಹ್ಮ ಕೊರವಂಜಿ	ತೆ. ಗಿರಿಯಮ್ಮ	1750	ಹಾ	ಕಕ. 288–59, III. 426
504	ಬ್ರಹ್ಮ ಗೀತೆ	ವಿದ್ಯಾಮಾಧವ ಪಂಡಿತ	17. ಶ.	ಭಾ. ಷ., 12. 464	III. 426; N. K. ಹೆಗಡೆ ಅವರ ಸಂಗ್ರಹ
505	ಬ್ರಹ್ಮಗೀತೆಯ ಟೀಕೆ	?	18. ಶ.	ಟೀ	III 426
506	ಬ್ರಹ್ಮದೇವರ ಪದಗಳು	?	?	ಹಾ	III. 426

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
507	ಬ್ರಹ್ಮಯ್ಯನ ಸುವ್ವಿ	ಮುರದಳಿಯ ರಾಮಯ್ಯ	17. ಶ.	ಹಾ	III. 426
508	ಬ್ರಹ್ಮಾಂಡ ಪುರಾಣ ಟೀಕೆ	?	?	ಟೀ	III. 426
509	ಬ್ರಹ್ಮೋತ್ತರ ಖಂಡಾರ್ಥ	ಏಕಾಮ್ರದೀಕ್ಷಿತ	?	ಗ	K. 427
510	ಬಾಣಾಸುರನ ಕಾಳಗ	ಸುಬ್ಬ	19. ಶ.	ಯ	III. 426
511	ಬಾಣಾಸುರ ವಿಜಯ	ಚೌಂಡರಸ	1300	?	I. 456 [ಅಲಭ್ಯ]
512	ಬಾರವಮಾಸ	?	?	ಹಾ., 30	O U L ಸಂ. 238
513	ಬಾಲ ರಾಮಾಯಣ	?	17. ಶ.	?	III. 426
514	ಬಾಹಟೋಕ್ತ ಗಣಪಾಠ	?	?	ಶ್ಲೋ + ಟೀ	K. 274/3
515	ಬಿಳಿಗಿರಿ ರಂಗನಾಥನ ಪಾರಿಜಾತ	ರಾಯಪಯ್ಯ	18. ಶ.	ಯ	III. 426
516	ಬಿಳಿಯಕಲ್ಲ ರಂಗಸ್ವಾಮಿಯ ಪಾರಿಜಾತ ಪ್ರಸಂಗ	ಸಾಮಿಕವಿ	1750	ಯ	III. 101; GOML VI. ಸಂ. 1202
517	ಬೃಹಜ್ಜಂಬೂ ಚರಿತ್ರೆ	ಶಾಂತಕವಿ	1856–1920	ನಾ	III. 467
518	ಬೀಹಾರ ಗಣಿತ	ಭಾಸ್ಕರ	1650	ಕಂ + ಸಾಂ + ಷ.,	II. 375-77 ಅಧಿ. 8
519	ಭಕ್ತಿ ವಿಜಯ	?	?	ಗ	K A. 82-3
520	ಭಗವದ್ಗೀತಾ ಟೀಕು	ಚಿಕುಪಾಧ್ಯಾಯ	1672	ಟೀ	K. 466

521 ಭಗವದ್ಗೀತಾ ಟೀಕು	ವೆಂಕಟಕೃಷ್ಣ ?	?	ಟೀ	K. 147
522 ಭಗವದ್ಗೀತಾ ಟೀಕು	?	?	ಟೀ	K. 91
523 ಭಗವದ್ಗೀತಾ ಟೀಕೆ	ರಾಜಕಂಠೀರವ	?	ಟೀ	III. 426
524 ಭಗವದ್ಗೀತಾ ಟೀಕೆ	ಶ್ರೀನಿವಾಸಾಚಾರ್ಯ	?	ಟೀ	III. 426
525 ಭಗವದ್ಗೀತಾ ಟೀಕೆ	?	?	ಟೀ	K R I III. ಸಂ. 20
526 ಭಗವದ್ಗೀತೆ	?	?	?	GOML II. ಸಂ. 314
527 ಭಗವದ್ಗೀತೆ	ವಾಧನ	1750	ಭಾ. ಷ., 17.629	III. 110-11; M A R. PP. 24 (1920)
528 ಭಗವದ್ಗೀತೆ (ನಾಗರಸ)	?	?	ಟೀ	K. 228
529 ಭಗವದ್ಗೀತೆ	ಕೆ.ಪಿ. ಅಪ್ಪಯ್ಯ	19. ಶ.	?	ಪಿಗ್ರಂಚಕೆಸೂ. 6
530 ಭಗವದ್ಗೀತೆ	ಹರಿದಾಸ	18. ಶ.	?	III. 426
531 ಭಗವದ್ಗೀತೆ	ಮೈಸೂರು ಕೃಷ್ಣರಾಯ	19. ಶ ?	ಭಾ. ಷ.,	ಶ್ರೀ ಕರ್ನಾಟಕ ಭಕ್ತ ವಿಜಯ ಪು. 666 (1963)
532 ಭಗವನ್ನಾಮ ಸಂಕೀರ್ತನಾವಳಿ	ಜೊಳಾರ ವಾಸುದೇವಯ್ಯ	19. ಶ.	ಹಾ	III. 396
533 ಭರ್ತೃಹರಿ ಶೃಂಗಾರ ಶತಕ ಟೀಕೆ	?	?	ಟೀ	III. 426
534 ಭರ್ತೃಹರಿ ಸುಭಾಷಿತ ಟೀಕೆ	?	18. ಶ.	ಟೀ	III. 426
535 ಭವನ ಭಿಕ್ಷಾಟನ	ಅಂ 'ಗಮಗಿನ ವೀರನಾರಾಯಣ'	1430 ?	ಭಾ. ಷ., 3.170	K. 543

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
536	ಭವಿಷ್ಯೋತ್ತರ ಪುರಾಣ	ಜಯರಾಯಾಚಾರ್ಯ	19. ಶ.	ಚಂ	III. 466
537	ಭಸ್ಮಾಸುರನ ಕಾಳಗ	ಅಂ/ 'ವೇಲಾಪುರ ಚೆನ್ನಕೇಶವ'	1800	ಯ	III. 323
538	ಭಾಗವತ	ಚಿಕದೇವರಾಜ	1672–1704	ಟೀ	II. 459
539	ಭಾಗವತ	ಯಗ್ಗನ್ಮ	19. ಶ.	ಹಾ	ಕ ನಂ. 3.6 (7)
540	ಭಾಗವತ	ವಿಷ್ಣುಸಭಾಹಿತ	19. ಶ.	ಯ	ಯ ಬ. 253
541	ಭಾಗವತ	ಅಂ/ ' ವೇಣುಗೋಪಾಲಕೃಷ್ಣ '	?	ಯ	K A. 262
542	ಭಾಗವತ	?	?	ಗ	GOML II. ನಂ. 192–96; K B. 418
543	ಭಾಗವತ ಶ್ರೀ ಕೃಷ್ಣಲೀಲೆ	ಸರಗೂರು ರಾಮಾನುಜಾಚಾರ್ಯ	19. ಶ.	?	III–239
544	ಭಾಗವತ ಕಥೆ	?	?	ಸಾಂ	GOML II. ನಂ. 191
545	ಭಾಗವತ ಟೀಕು	?	?	ಟೀ	K. 37
546	ಭಾಗವತ ಟೀಕೆ	ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ	19. ಶ.	ಟೀ	III. 226
547	ಭಾಗವತ ಟೀಕೆ	?	1750	ಹಾ	III. 318-19
548	ಭಾಗವತ ಪೂಜಾತಿಶಯ	?	17 ಶ.	?	III. 426
549	ಭಾಗವತ ಮಹಾತ್ಮ್ಯ	ಶಾಂತಕವಿ	1856-1920	?	?
550	ಭಾಗವತ ಮಹಾಪುರಾಣ	?	?	ಟೀ	K B. 152

551	ಭಾಗವತ ಸಂಹಿತಾರ್ಥ	ನಾರಾಯಣ ಕವಿ	1450	ಗ	II. 95
552	ಭಾಗವತ ಸಾರ	?	18. ಶ.	?	III. 426
553	ಭಾಗವತ ಸೋಭಾನೆ	?	1830	ಹಾ., 17	III. 325
554	ಭಾಗವತ ಸೋಭಾನೆ	?	?	ಹಾ	III. 426
555	ಭಾರ್ಗವ ಜಾತಕ ಟೀಕೆ	?	?	ಟೀ	III. 426
556	ಭಾರತ	ಲಕ್ಷ್ಮೀಕವಿ	1723	ವಾ. ಷ.,	III. 15–20 (ಅಸಮಗ್ರ)
557	ಭಾರತ	ಚಿಕದೇವರಾಜ	1672–1704	ಟೀ	II. 459
558	ಭಾರತ ವಚನ	?	?	ಗ	III. 426
559	ಭಾರತ ಸಾವಿತ್ರಿ	?	1650	ಗ	III. 299
560	ಭಾರತ ಸ್ತ್ರೀಪರ್ವ	ಶ್ರೀನಿವಾಸ ಕವಿ	1700	ಭಾ. ಷ., 4.243	II. 550–51
561	ಭಾಷಾ ಮಂಜರಿ	?	17. ಶ.	?	III. 427
562	ಭಾಸ್ಕರ ಗಣಿತ	?	?	ಶ್ಲೋ + ಪ + ಟೀ.	K. 213
563	ಭೀಮಸೇನ ವಿಲಾಸ	ನಂಜಶೆಟ್ಟಿ	?	ಯ	K. 531/1; III. 427 ?
564	ಭೀಷ್ಮಪರ್ವ	ಗೀ. ಶಾಂತಯ್ಯ	1830	ಯ	III. 188
565	ಭೀಷ್ಮಪರ್ವ	ಎ. ವೆಂಕಟರಮಣಯ್ಯ	1850	ಯ	ಯ ಬ. 255
566	ಭೀಷ್ಮ ಪ್ರಾಣತ್ಯಾಗ ವೃತ್ತಾಂತ	?	17. ಶ.	ಗ	III. 427
567	ಭೀಷ್ಮ ಶರತಲ್ಪ	?	18. ಶ.	ಗ	III. 427
568	ಭುಜಂಗರೋಪದೇಶ	ಶಾಂತಕವಿ	1856–1920	ನಾ	III. 467

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
569	ಭೋಜನ ರಗಳೆ	ಅಂ/ 'ವನ್ನಿಪುರದ ರಘುರಾಮ'	1650	ರ	III. 299
570	ಭೋಜ ಪ್ರಬಂಧ	ವಿದ್ವಾನ್ ವೆಂಕಟಾಚಾರ್ಯ	19. ಶ.	?	III. 239
571	ಮಣಿ ಹರಣ	ತಿ. ಶ್ರೀನಿವಾಸಯ್ಯಂಗಾರ್	19. ಶ.	ನಾ	ಕ ನಂ. 3.5 (8)
572	ಮದನ ಪ್ರದೀಪಿಕೆ	?	19. ಶ.	ಚಂ	III. 427
573	ಮದನ ಮೋಹಿನಿಯ ಕಥೆ	ನರಸಿಂಹ	1650	ಸಾಂ., 11.860	II. 435-36; 490
574	ಮದನ ಮೋಹನ ನಾಟಕ	ಶಾಮರಾಯ ವೆಂಕಟಾದ್ರಿ	1848-1917	ನಾ	ಸಿಗ್ರಂಚಿಕೋ. 173-74
575	ಮದನ ಸುಂದರಿ	?	?	ಯ	ಯಃಬ. 282
576	ಮದುವೆಯ ಹಾಡು	ಗಣಪಕ್ಕ	1870	ಹಾ	ಕಕ. 327
577	ಮನ್ಮಥ ಚರಿತೆ	ರಾಮಚಂದ್ರ	?	ಸಾಂ	K. 743
578	ಮನ್ಮಥ ವಿಜಯ	ತಿ. ಶ್ರೀನಿವಾಸಯ್ಯಂಗಾರ	19. ಶ.	ನಾ	ಕನಂ. 3.5 (8)
579	ಮನಸ	?	?	?	III. 427
580	ಮನೀಷಾ ಪಂಚಕ ಟೀಕೆ	?	18. ಶ.	ಟೀ	III. 427; KB. 196
581	ಮನು ಚರಿತ್ರೆ	ಚಂದ್ರಶೇಖರ ಶಾಸ್ತ್ರಿ	17. ಶ.	ನಾ ?	III. 226
582	ಮನೋರಮ ನಾಟಕ	ಶಾಂತಕವಿ	1856–1920	ನಾ	III. 221
583	ಮಯಮತ ಟೀಕೆ	?	18. ಶ.	ಟೀ	III. 427
584	ಮಯೂರ ಧ್ವಜ ಪ್ರತಾಪ	ಶಾಂತಕವಿ	1856–1920	ನಾ	III. 467

585	ಮಲ್ಲಿಕಾರ್ಜುನ ಚರಿತೆ	ಕಾಶೀರಾಮ	1750	ಯ	III. 102
586	ಮಹಾಬಧಿರ ಪ್ರಹಸನ	ಜಯರಾಮಾಚಾರ್ಯ	19. ಶ.	ನಾ	III. 221
587	ಮಹಾಭಕ್ತಿ ವಿಜಯ	ಕೊ. ರಾಮಸ್ವಾಮಿ ಅಯ್ಯಂಗಾರ	19. ಶ.	ಗ	III. 465
588	ಮಹಾಭಾರತ ವಚನ	?	?	ಗ	III. 427
589	ಮಹಾವಾಕ್ಯ	?	17. ಶ.	ಗ	III. 427
590	ಮಹಾ ಶೃಂಗಾರ ನಾಟಕ	ವೆಂ・ಟ	19. ಶ.	ನಾ	III. 239
591	ಮಂಡನ ಮಿಶ್ರ ಚರಿತ್ರ	?	18. ಶ.	ಗ	III. 427
592	ಮಂತ್ರ ಶಾಸ್ತ್ರ ಟೀಕೆ	?	17. ಶ.	ಟೀ	III. 427
593	ಮಂದಾರವಲ್ಲೀ ಪರಿಣಯ	ನಂಜುಂಡ ಭಾಗವತ	1847–1906	ನಾ	ಹರಿ ಕ (ಪೀಠಿಕೆ)
594	ಮಂದಾರವಲ್ಲೀ ಪರಿಣಯ	ಚಂದ್ರಶೇಖರ ಶಾಸ್ತ್ರಿ	19. ಶ.	ನಾ	III. 226
595	ಮಾರ್ಕಂಡೇಯ	ಭೀಮಾಜಿ ಶ್ರೀನಿವಾಸ ಅಡಬದ್ದಿ	1860–94	ನಾ ?	ಸಿಗ್ರಂಚಕೋ. 103
596	ಮಾರ್ಕಂಡೇಯ ಚರಿತ್ರೆ	ಅಂ/ ' ಮಾರಪುರ ನರಸಿಂಹ	?	ಯ	KB. 540
597	ಮಾರ್ಕಂಡೇಯ ನಾಟಕ	ಅಪ್ಪಾಭಟ್ಟ	19. ಶ.	ನಾ	III. 228
598	ಮಾರ್ಕಂಡೇಯ ರಾಮಾಯಣ	ತಿಮ್ಮರಸ	1650	ಮಾ. ಷ ,	II. 408–11; KB. 50
599	ಮಾನಸ ಚರಿತ್ರೆ	ವೆಂಕಣ್ಣ	1750	ಯ	ಯಬ 224
600	ಮಾಳವಿಕಾಗ್ನಿಮಿತ್ರ	ನಂ. ಸುಬ್ಬಾಶಾಸ್ತ್ರ	19. ಶ.	ನಾ ?	III. 467
601	ಮಾಂಡೂಕ್ಯೋಪನಿಷತ್ತಿನ ಟೀಕೆ	?	?	ಟೀ	III. 427

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
602	ಮೀನಾಕ್ಷಿ ಕಲ್ಯಾಣ	?	19. ಶ.	ಯ	ಯಬ. 257
603	ಮುಕುಂದ ಮಾಲಾ ಸ್ತೋತ್ರ	ಕೊ. ರಾಮಸ್ವಾಮಿ ಅಯ್ಯಂಗಾರ್	19. ಶ.	ಷ+ವ+ಚೌ	III. 465
604	ಮುಕುಂದ ಮಾಲಾ ಸ್ತೋತ್ರ	ಚಿಕುಪಾಧ್ಯಾಯ	1672	ಟೀ	K. 732
605	ಮುಕುಂದ ಮಾಲೆ	ದೇ. ಶ್ರೀನಿವಾಸಯ್ಯಂಗಾರ	19. ಶ.	?	III. 226
606	ಮುಕುಂದಮಾಲೆಯ ಟೀಕೆ	?	18) ಶ.	ಟೀ	III. 427
607	ಮೂಲಬಲರಾಮಾಯಣ	ಹರಿದಾಸ	1750	ಭಾ. ಷ., 13 726	III. 103–04
608	ಮೂಲಿಕಾಸುರ ಕಾಳಗ	ರಾಮ	1700	ಯ	ಯಬ. 162, 221
609	ಮೃಚ್ಛಕಟಿಕ	ಶಾಂತಕವಿ	1856-1920	ನಾ	III. 467
610	ಮೃಚ್ಛಕಟಿಕ	ನಂ. ಸುಬ್ಬಾಶಾಸ್ತ್ರಿ	19. ಶ.	ನಾ	III. 467–
611	ಮೈಸೂರು ರಾಜರ ಚರಿತ್ರೆ	ಶಾ. ವೆಂಕರಮಣಯ್ಯ	1790	ಗ	III. 144–45
612	ಮೋಹವಿವೇಕ ಕಾಳಗ	ನಂಜುಂಡ ಭಾಗವತ	1847-1906	ಯ ?	III. 331

(ಮುಂದುವರೆಯುವುದು.)

★ ಎಸ್. ಶಿವಣ್ಣ

ಒರೆಗಲ್ಲು

ಲಕ್ಕುಂಡಿ ಶಾಸನದ ಒಂದು ಪದ್ಯ ಮತ್ತು "ಭಗವತಿಯೇೞು"

ರನ್ನನೇ ಬರೆದಿರುವನೆಂದು ಪ್ರೊ. ತೀ. ನಂ. ಶ್ರೀಕಂಠಯ್ಯನವರು ಸಕಾರಣವಾಗಿ ಊಹಿಸಿರುವ ಲಕ್ಕುಂಡಿ ಶಾಸನದಲ್ಲಿ (BKI. I. i. 52, 1007 A.D.) ಪಡೆವಳ ತೈಲನನ್ನು ಹೊಗಳುವ ಸಂದರ್ಭದಲ್ಲಿ ಕೆಳಗಿನ ಪದ್ಯವಿದೆ. ಆ ಪದ್ಯದ ಪಾಠವನ್ನು ಪದಗಳಾಗಿ ವಿಂಗಡಿಸಿ ಕೆಳಗೆ ಕೊಟ್ಟಿದೆ.

ಪಗರಣಮಣ್ಣ ಮೆಚ್ಚುಪಸಿ ಘೃಷ್ಟಿಯೆ ಬೂದಿಯುಂ(ಂ) ಬೊಟ್ಟುಗಂಡವಾ ।
ತುಗಿ ಬಗಿ ಕೀರ್ತಿಕುಪ್ಪಕುೞಿ ಮುತ್ತರ ಮೂವಲೆ ಪೆಂಪು ವಿಕ್ರಮಂ
ಭಗವತಿಯೇೞು ಶೌಚಗುಣಮತ್ತಿಯ ಪಣ್ಣೇ ಸಿ ಪೇೞ ಪುಂಡರಂ ।
ತೆಗೞ್ವುದುದಾರ ಚಾರು ಚರಿತ ಪ್ರಭೆಯಿಂ ಪಡೆವಳ್ಳ ತೈಲನ ॥

ಇದು ಶಾಸನದ ಪದ್ಯವಾದುದರಿಂದ, ಇಲ್ಲಿ ಲಿಪಿಕಾರ ದೋಷದಿಂದಾಗಿರುವ ಕೆಲವು ತಪ್ಪುಗಳನ್ನು ತಿದ್ದಲು ಪಾಠಾಂತರಗಳ ಸಹಾಯ ಸಿಗುವುದಿಲ್ಲ. ಆ ಕಾರಣ ನಾವು ಊಹಾತ್ಮಕ ಪರಿಷ್ಕರಣಕ್ಕೆ ಅನಿವಾರ್ಯವಾಗಿ ಶರಣು ಹೋಗಬೇಕಾಗುತ್ತದೆ. ಅಂತಹ ಪರಿಷ್ಕರಣದ ಸಹಾಯದಿಂದ 'ಅಣ್ಣ' ಎಂಬುದನ್ನು 'ಅಣ್ಮು' ಎಂಬುದಾಗಿ 'ಬೂದಿಯುಂ' ಎಂಬಲ್ಲಿ ಮೂರನೆಯ ಅಕ್ಷರ ಒಟ್ಟು ಛಂದಸ್ಸಿನ ದೃಷ್ಟಿಯಿಂದ ಲಘುವಾಗಬೇಕಾದ್ದರಿಂದ 'ಬೂದಿಯು' ಎಂದು ತಿದ್ದಿಕೊಂಡು ಓದಬೇಕಾಗುತ್ತದೆ. ಮೇಲಿನ ಪದ್ಯವನ್ನು ಈಗ ಹೀಗೆ ಬಿಡಿಸಿ ಬರೆಯಬಹುದು.

ಪಗರಣಂ ಅಣ್ಮು, ಮೆಚ್ಚು ಪಸಿ, ಘೃಷ್ಟಿಯೆ ಬೂದಿಯ ಬೊಟ್ಟು, ಗಂಡವಾ ।
ತು ಉಗಿಬಗಿ, ಕೀರ್ತಿ ಕುಪ್ಪಕುೞಿ, ಮುತ್ತರ ಮೂವಲೆ ಪೆಂಪು, ವಿಕ್ರಮಂ ।
ಭಗವತಿಯ ಏೞು, ಶೌಚಗುಣಂ ಅತ್ತಿಯ ಪಣ್ - ಎನಿಪ ಪೞಪುಂಡರಂ ।
ತೆಗೞ್ವುದು ಉದಾರ ಚಾರು ಚರಿತ ಪ್ರಭೆಯಿಂ ಪಡೆವಳ್ಳ ತೈಲನಾ ॥

ಇಲ್ಲಿ ಕವಿ ಮೇಲ್ನೋಟಕ್ಕೆ ಶೂರರಂತೆ, ಸದ್ವ್ಯಕ್ತಿಗಳಂತೆ ತೋರಿ ವಾಸ್ತವವಾಗಿ ಅದಕ್ಕೆ ತದ್ವಿರುದ್ಧವಾಗಿರುವ ವ್ಯಕ್ತಿಗಳನ್ನು ವಿಡಂಬನೆ ಮಾಡಿದ್ದಾನೆ. ಅವರು ತಮ್ಮಲ್ಲಿದೆಯೆಂದು ಹೇಳಿಕೊಳ್ಳುವ ಅಥವಾ ತೋರಿಸಿಕೊಳ್ಳುವ ಗುಣಗಳೆಲ್ಲವೂ ಪೊಳ್ಳು, ಹಾಸ್ಯಾಸ್ಪದ ಎಂಬುದನ್ನು ಕವಿ ಇಲ್ಲಿ ಹೇಳುತ್ತಿದ್ದಾನೆ. **ಅಣ್ಮು ಪಗರಣಂ :** ಅವರ ಸಾಹಸವೆಲ್ಲವೂ ಬರಿಯ ವೇಷ, ಹಳ್ಳಿಯ ಬಯಲು ನಾಟಕ; **ಮೆಚ್ಚು ಪಸಿ :** ಅವರ ಪ್ರಶಂಸೆ ಅಥವಾ ಔದಾರ್ಯ ಹಸಿರಿನ ಹಾಯಂತೆ ಬಹು ಚಿಕ್ಕದು ಮತ್ತು ತಾತ್ಕಾಲಿಕವಾದುದು: **ಘೃಷ್ಟಿಯೆ ಬೂದಿಯ ಬೊಟ್ಟು :** ಅವರ ಸ್ಪರ್ಧೆ ಅಥವಾ ಹೋರಾಟ ಬರಿಯ ಬೂದಿಯ ಬೊಟ್ಟು (ಬೂದಿ-ವ್ಯರ್ಥವಾದುದು; ಅದರಿಂದ ಹಣೆಗೆ ಇಟ್ಟುಕೊಳ್ಳುವ ಬೊಟ್ಟು ಬೇಗ ಅಳಿಸಿ ಹೋಗುತ್ತದೆ); **ಗಂಡವಾತು ಉಗಿ ಬಗಿ :** ಅವರ

ಶೌರ್ಯಾಲಾಪ ಗಾಯಗೊಳಿಸಬಲ್ಲುದೇ ಹೊರತು ಅದಕ್ಕೆ ಹೆಚ್ಚಿನ ಶಕ್ತಿಯಿಲ್ಲ ('ಶಬ್ದಮಣಿದರ್ಪಣ'ದಲ್ಲಿ 'ಉಗಿ' ಎಂಬ ಧಾತುವಿಗೆ 'ನಿಷ್ಕಾಸ' ಎಂಬರ್ಥವನ್ನು ಕೊಟ್ಟಿದೆ. 'ಬಗಿ' ಎಂಬ ಧಾತುವಿಗೂ ಬೇರ್ಪಡಿಸು, ಹರಿ, ಗಾಯಗೊಳಿಸು ಎಂಬರ್ಥಗಳಿವೆ. 'ಉಗಿ ಬಗಿ' ಎಂಬ ಮಾತು ಪಂಪ ಭಾರತ, ಆದಿಪುರಾಣ, ಶಾಂತಿಪುರಾಣ ಮುಂತಾದ ಕಾವ್ಯಗಳಲ್ಲೂ ಬರುತ್ತದೆ); **ಕೀರ್ತಿ ಕುಪ್ಪ ಕುಱಿ:** ಅವರ ಕೀರ್ತಿ ಎಂಬುದು (ಸ್ವಪ್ರಶಂಸೆಯ) ಮಕ್ಕಳ ಆಟದಂತೆ, ನೋಡಿ–ಧರ್ಮಾಮೃತ, ೧.೭೭.-"ಜಿನಭಕ್ತಂ ಹರಿಕಾಂತನಂತೆ ಮುಯ್ಯಂ ನೋಡದೆ ಕುಪ್ಪ ಕುಱಿಯಾಡುವ ಮಕ್ಕಳಂತೆ ತನ್ನಂ ಪೊಗಳ್ದುಕೊಳ್ಳದೆ ನವಿಲಂತೆ ತನ್ನಾಟಕ್ಕೆ ತಾನೆ ನಲಿಯದೆ ಸಮುದ್ರದಂತೆ ಗಂಭೀರನಾಗಿರ್ಪುದುಂ..."[೧] 'ಕುಪ್ಪ ಕುಱಿ'ಯೆಂಬುದು ಉತ್ತರ ಕರ್ನಾಟಕದಲ್ಲಿದ್ದ ಯಾವುದೋ ಮಕ್ಕಳ ಆಟವನ್ನು ಹೇಳುವಂತೆ ಕಾಣುತ್ತದೆ. 'ಧರ್ಮಾಮೃತ'ದ ಮಾತನ್ನು ನೋಡಿದರೆ ಆ ಆಟದಲ್ಲಿ ಮಕ್ಕಳು ತಮ್ಮನ್ನು ತಾವು ಹೊಗಳಿಕೊಳ್ಳುತ್ತಿದ್ದಂತೆ ಕಾಣುತ್ತದೆ. ಈ ಅರ್ಥ ಲಕ್ಕುಂಡಿ ಶಾಸನಕ್ಕೂ ಚೆನ್ನಾಗಿ ಅನ್ವಯವಾಗುತ್ತದೆ– "ಅವರ ಕೀರ್ತಿಯೆಲ್ಲವೂ ಮಕ್ಕಳ ಸ್ವಪ್ರಶಂಸೆಯಂತೆ"– ಎಂದರೆ ಅವರು ತಮ್ಮನ್ನು ತಾವು ಹೊಗಳಿಕೊಂಡು ಕೀರ್ತಿಯನ್ನು ಅನುಭವಿಸಬೇಕೇ ಹೊರತು ಬೇರೆಯವರು ಯಾರೂ ಹೊಗಳುತ್ತಿರಲಿಲ್ಲ); **ಪೆಂಪು ಮುತ್ತರ ಮೂದಲೆ:** ಅವರ ವೈಭವ ಮುದುಕರ ಮೂದಲಿಕೆಯಂತೆ ಪ್ರಭಾವ ಹೀನವಾದುದು, ವ್ಯರ್ಥವಾದುದು. ಮುದುಕರ ವೈಗುಳದಲ್ಲಿ ಮಾತು ಇರುತ್ತದೆಯೇ ಹೊರತು ಪರಿಣಾಮವೇನೂ ಇರುವುದಿಲ್ಲ (ಅಥವಾ ಮುದುಕರು ತಮ್ಮ ಹಿಂದಿನ ಕಾಲದ ವೈಭವವನ್ನು ಜ್ಞಾಪಿಸಿಕೊಂಡು ಈಗಿರುವುದನ್ನು ಮೂದಲಿಸುವ ಸಂಗತಿಯೂ ಇಲ್ಲಿ ಸೂಚಿತವಾಗಿರಬಹುದು); **ವಿಕ್ರಮಂ ಭಗವತಿಯೇಱು:** ಅವರ ಪರಾಕ್ರಮ ಭಗವತಿಯ 'ಏಱು' ಇದ್ದಂತೆ. 'ಭಗವತಿಯ ಏಱು' ಎಂಬ ಉಕ್ತಿ ಲಕ್ಕುಂಡಿ ಶಾಸನಕ್ಕಿಂತ ಹಿಂದೆ 'ಪಂಪ ಭಾರತ'ದಲ್ಲಿ ಕಾಣಿಸಿಕೊಂಡಿದೆ. ಅದರ ಸಂದರ್ಭ ಹೀಗಿದೆ. ಮುದುಕರಾದ ಭೀಷ್ಮರಿಗೆ ವೀರಪಟ್ಟವನ್ನು ಕಟ್ಟಿದ್ದು ಕರ್ಣನಿಗೆ ಅಸಹನೀಯವಾಗಿ ಅವರನ್ನು ನಿಂದಿಸಿ ಹೀಗೆ ಹೇಳುತ್ತಾನೆ:

> ಭಗವತಿಯೇಱುವೇಟ್ವ ತೆಱದಿಂ ಕಥೆಯಾಯ್ತುವಱೇಱು ನೀನಿದಂ ।
> ಬಗೆದಿವರಿನ್ನುಮಾಂತಿಱಿವರೆಂದು ವಿಮೋಹಿಸಿ ವೀರಪಟ್ಟಮಂ ।
> ಬಗೆಯದೆ ಕಟ್ಟಿದೈ ಗುರುಗಳಂ ಕುಲವೃದ್ಧರನಾಜಿ ಗುಯ್ದು ಕೆ –।
> ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ ।

ಇಲ್ಲಿ ಬರುವ 'ಭಗವತಿಯೇಱು' ಎಂಬುದಕ್ಕೆ ಸಮರ್ಪಕವಾಗಿ ಅರ್ಥೈಸಲು ಇನ್ನೂ

---

೧. 'ಧರ್ಮಾಮೃತ'ದ ಈ ಆಕರದ ಕಡೆಗೆ ನನ್ನ ಗಮನ ಸೆಳೆದವರು ಕನ್ನಡ-ಕನ್ನಡ ನಿಘಂಟಿನ ಸಂಪಾದಕರಾದ ಶ್ರೀ ಎಸ್. ಬಸವಾರಾಧ್ಯರು. ಅವರು ತಮ್ಮ ಕಾಗದದಲ್ಲಿ ನಿಘಂಟಿನ ಸಮಿತಿ ನಿರ್ಣಯಿಸಿದ ಅರ್ಥವನ್ನೂ ತಿಳಿಸಿ ಉಪಕಾರ ಮಾಡಿದ್ದಾರೆ. (ಪತ್ರ–೧೯-೧೦-೧೯೭೧)

ಸಾಧ್ಯವಾಗಿಲ್ಲ. ದಿ. ಡಾ॥ ಡಿ. ಎಲ್. ನರಸಿಂಹಾಚಾರ್ಯರು ಅದರ ಬಗ್ಗೆ ಲೇಖನವನ್ನು ಬರೆದು "ಚಾಮುಂಡಿ ಮಾಡಿದ ಯುದ್ಧಗಳೆಲ್ಲವೂ ಪುರಾಣ ಕಥೆಗಳಾಗಿ ಪರಿಣಮಿಸಿವೆ : ಹಾಗೆಯೇ ಭೀಷ್ಮರು ಮಾಡಿದ ಯುದ್ಧಗಳೂ ಪ್ರಾಚೀನ ಕಾಲಕ್ಕೆ ಸೇರಿದುವು. ಈಗ ಅವರಿಂದ ಯುದ್ಧವನ್ನು ಮಾಡಲಾಗುವುದಿಲ್ಲ" ಎಂಬುದು ಕರ್ಣನ ಅಭಿಪ್ರಾಯವೆಂದು ವ್ಯಾಖ್ಯಾನಿಸಿದ್ದಾರೆ.[೨] 'ಪಜಿಱ' ಎನ್ನುವ ಮಾತಿಗೆ ಅವರು 'ಯುದ್ಧ' ವೆನ್ನುವ ಅರ್ಥವನ್ನಿಟ್ಟುಕೊಂಡಿರುವುದು ಸರಿಯಾಗಿರುವಂತೆ ತೋರುತ್ತದೆ. 'ಇನ್ನುಂ' (= ಈಗಲೂ) ಎನ್ನುವ ಮಾತು ಅವರ ವ್ಯಾಖ್ಯಾನವನ್ನು ಸಮರ್ಥಿಸುವಂತೆಯೂ ತೋರುತ್ತದೆ. ಆದರೆ ಅವರ ವ್ಯಾಖ್ಯಾನ ಲಕ್ಕುಂಡಿ ಶಾಸನದಲ್ಲಿ ಬರುವ ಉಕ್ತಿಗೆ ಹೊಂದಿಕೆಯಾಗುವುದಿಲ್ಲ. ಏಕೆಂದರೆ, ಅವರ ವ್ಯಾಖ್ಯಾನವನ್ನು ಒಪ್ಪಿಕೊಂಡರೆ, ಆ ಶಾಸನದಲ್ಲಿ ವಿಡಂಬನೆಗೆ ಒಳಗಾಗಿರುವವರು ಒಂದು ಕಾಲದಲ್ಲಿ ಯುದ್ಧವನ್ನು ಮಾಡಿ ತೋರಿಸಿಕೊಂಡು ಈಗ ಕೈಲಾಗದ ಮುದುಕರಾಗಿದ್ದಾರೆ ಎಂದು ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಅಲ್ಲಿ ವಿಡಂಬನೆ ಮಾಡುತ್ತಿರುವುದು ವಾಸ್ತವವಾಗಿ ಹೇಡಿಗಳನ್ನು, ದುರ್ಬಲರನ್ನು, ಬೊಗಳೆಯುವರನ್ನು, ವೇಷಧಾರಿಗಳನ್ನು. ಆದ್ದರಿಂದ ಡಾ. ಡಿ. ಎಲ್. ನರಸಿಂಹಾಚಾರ್ಯರ ವ್ಯಾಖ್ಯಾನ ಎಷ್ಟೇ ಆಕರ್ಷಕವಾಗಿದ್ದರೂ ಸಮರ್ಪಕವೆನಿಸುವುದಿಲ್ಲ. ಒಂದು ಉಕ್ತಿಗೆ ನಾವು ಹೇಳಿದ ಅರ್ಥ ಎಲ್ಲ ಸಂದರ್ಭಗಳಿಗೂ ಅನ್ವಯವಾಗುವಂತಿರಬೇಕು ತಾನೇ ?

'ಪಂಪಭಾರತ'ದ ಇದೇ ಪದ್ಯದಲ್ಲಿ 'ಭಗವತಿಯೇಱು' ರೂಪಕದ ವಿಸ್ತರಣೆಯಿರುವಂತೆ ಕಾಣುತ್ತದೆ. ವೀರನಲ್ಲದವನಿಗೆ ವೀರಪಟ್ಟವನ್ನು ಕಟ್ಟುವುದು, ಅವ ಮುದುಕನಾಗಿರುವುದು, ಅತನನ್ನು ನೋಡಿ ಜನರು ನಗುವುದು, ಇವೆಲ್ಲ ಭೀಷ್ಮನಿಗೂ ಭಗವತಿಯ ವೇಷವನ್ನು ಧರಿಸಿದವನಿಗೂ ಸಮಾನವಾಗಿ ಅನ್ವಯವಾಗುವಂತೆ ಕಾಣುತ್ತದೆ. 'ಭಗವತಿಯೇಱು' ಎಂಬುದು ಪಂಪನೇ ಸೃಷ್ಟಿಸಿದ ಉಕ್ತಿಯಾಗಿರುವುದಕ್ಕಿಂತ ಆ ಕಾಲದ ಗಾದೆಯ ಮಾತಾಗಿರುವಂತೆ ಕಾಣುತ್ತದೆ. ಅದು ದುರ್ಗಿಯ ವೇಷವನ್ನು ಧರಿಸಿದವನು ಮಾಡುವ ಕುಣಿತ. ಯುದ್ಧದ ಅಭಿನಯಗಳನ್ನು ಸೂಚಿಸುತ್ತದೆಯೆಂದು ಭಾವಿಸಲವಕಾಶವಿದೆ. ದುರ್ಗಿಯ ವೇಷವನ್ನು ಧರಿಸಿದವನು– ಅರ್ಚಕ, ಎಷ್ಟೋ ಸಾರಿ ಮುದುಕನಾಗಿರುವ ಅರ್ಚಕ ಅಥವಾ ಭಕ್ತ – ದುರ್ಗಿಯಂತೆ ನಟಿಸಿದಾಗ ಜನರು ಸಹಜವಾಗಿಯೇ ನಗುತ್ತಾರೆ, ಹುಲಿ ವೇಷದವನನ್ನು ಕಂಡು ನಗುವಂತೆ. ಪ್ರಾಚೀನ ಕರ್ನಾಟಕದ 'ಪಗರಣ'ಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.[೩]

ಕರ್ನಾಟಕದಲ್ಲಿ ಹಿಂದೆ 'ಭಗವತಿ' ದೇವಾಲಯಗಳಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ, ಭಗವತೀ ದೇವಿಗೆ ದೇವಾಲಯವನ್ನು ಮಾಡಿ

---

೨. ಪೀಠಿಕೆಗಳು, ಲೇಖನಗಳು (ಮೈಸೂರು ೧೯೭೧), ಪು. ೯೪೪-೭.
೩. 'ಪಗರಣ'ದ ವಿವರಗಳಿಗೆ, ನೋಡಿ– ಎಂ. ಚಿದಾನಂದ ಮೂರ್ತಿ: ಸಂಶೋಧನ ತರಂಗ, ಸಂಪುಟ ೨ (ಬೆಂಗಳೂರ 1971), ಪು. ೧೦೧-೨.

ಸಿದ ವಿಷಯ ಶಾಸನವೊಂದರಲ್ಲಿದೆ.[೪] ಅಯ್ಯಾವೊಳೆಯ ಐನೂರ್ವರೆಂಬ ವರ್ತಕರು 'ಭಗವತೀ ಲಬ್ಧ ವರಪ್ರಸಾದ' ರಾಗಿದ್ದರು.[೫] ಒಂದನೆಯ ಮಾಂಡಳಿಕ ಸೋಮಿ-ದೇವ ಎಂಬಾತನಿಗೆ 'ಭಗವತಿಯಂಕಕಾಱ' ಎಂಬ ಬಿರುದಿತ್ತು.[೬] ಇಂತಹ ಅನೇಕ ನಿದರ್ಶನಗಳನ್ನು ಕೊಡಬಹುದು. ಕೇರಳದ 'ಪರೈಯ (= ಹರಿಜನರು) ಎಂಬ ಜನರಿಗೆ ಭಗವತಿ ಅಧಿ ದೈವವಾಗಿದ್ದು, ಅವಳಿಗಾಗಿ ಜಾತ್ರೆಯನ್ನು ಮಾಡುತ್ತಾರೆ. ಆ ಜಾತ್ರೆಗೆ ಸಂಬಂಧಿಸಿದಂತೆ ಥರ್ಸ್ಟನ್ ಹೀಗೆ ಹೇಳುತ್ತಾರೆ– "In every small village in the rural parts, is a small Bhagavati temple' to the deity of which Paraiyas are devotedly attached, and look to it for protection in times of cholera, small-pox, or other calamities. Kodungalur Bhagavati is their guardian deity, and they take part in the festivals (yēla) at the shrine. A few days before the festival, a piece of cloth is given to the Velichapād (oracle), who dresses himself in it, wears a piece of red cloth round his neck, a peculiar dress around his loins, and ties a few small bells (chelamba) round his legs. Accompanied by others with drums and fife and a basket, he goes to every Nayar house daily for seven days, and receives presents of paddy, wherewith to defray the expenses of the festival. During the celebration thereof, the Velichapād and others go to a shed at a distance from the temple (Kãvu), some dressed up as ghosts, and dance and sing, to the accompaniment of a band, in honour of the deity"[೭]. ಇಲ್ಲಿ ಬರುವ ರಾಕ್ಷಸ ಕುಣಿತವನ್ನು. 'ಯೇಲ' (festival) ಎಂಬ ಮಾತನ್ನು ಗಮನಿಸಬೇಕು. ತಮಿಳು, ಮಲಯಾಳಗಳಲ್ಲಿ 'ಯುದ್ಧ ಮಾಡು' ಎಂಬ ಅರ್ಥದಲ್ಲಿ ಏಲ್-ಏಱ್ ಎಂಬ ಎರಡು ರೂಪಗಳೂ ಇವೆ.[೮] ಚಾಮುಂಡಿಗೂ ರಾಕ್ಷಸರಿಗೂ ನಡೆದ ಯುದ್ಧಾಭಿನಯವೇ 'ಯೇಲ' ಆಗಿರಬಹುದೇ ?

ಭಗವತೀ ಹಬ್ಬವು ಕೊಡುಗಿನಲ್ಲಿ ಸಾಕಷ್ಟು ಪ್ರಖ್ಯಾತವಾದುದು. ಮಳೆಗಾಲಕ್ಕಿಂತ ಎರಡು ತಿಂಗಳ ಹಿಂದೆ ನಡೆಯುವ ಹಬ್ಬದಲ್ಲಿ ದುರ್ಗೆಯ ಮೆರವಣಿಗೆಯ ಜೊತೆ 'ತಾಂತ್ರಿಕ ನೃತ್ಯಗಳು' ನಡೆಯುತ್ತವೆ.[೯]

---

೪. Ec. VII SK 267

೫. ಅದೇ. S.K. 118.

೬. ಅದೇ. S.K. 267

೭. Castes and Trikes of Southern India (Newyork 1965), Vol VI. p. 128

೮. T. Burrow and M. B. Emeneau : A Dravidian Etymological Dictionary, entry No. 768

೯. Imperial Gazetteer of India, XI (1908), p. 27

ಆದ್ದರಿಂದ, 'ಭಗವತಿಯೋಱು' ಎಂದರೆ ಭಗವತಿ ಉತ್ಸವದ ಸಮಯದಲ್ಲಿ ನಡೆಯುವ ಅನುಕರಣೆಯ ವಿನೋದದ ಯುದ್ಧವೆಂದು ಅರ್ಥಮಾಡಬೇಕೆಂದು ತೋರುತ್ತದೆ. 'ಇನ್ನುಂ' ಎಂಬುದಕ್ಕೆ ಹೀಗೆ ಅರ್ಥ ಹೇಳಬಹುದು—"ಇವರ (ಭೀಷ್ಮ) ಯುದ್ಧ ಭಗವತಿಯ ಯುದ್ಧದಂತೆ ಯುದ್ಧಾಭಾಸವೇ ಸರಿ ಎಂಬುದು ಕತೆಯಾಗಿಬಿಟ್ಟಿದೆ. ಹಿಂದಿನ ಅವರ ಯುದ್ಧಗಳಲ್ಲಿಯೂ ಹಾಗೆಯೇ. ಇದನ್ನು ನೀನು ತಿಳಿದೂ, ಅವರು ಯುದ್ಧಮಾಡುವರೆಂದು ಇನ್ನೂ ಭ್ರಾಂತಿಪಟ್ಟು (ವೀರಪಟ್ಟವನ್ನು ಕಟ್ಟಿದೆ)" ಎಂದು ಕರ್ಣ ದುರ್ಯೋಧನನಿಗೆ ಹೇಳುತ್ತಿದ್ದಾನೆ; **ಶೌಚಗುಣಂ ಅತ್ತಿಯ ಪಣ್** : ಅವರ ಶೌಚಗುಣ (moral character) ಅತ್ತಿಯ ಹಣ್ಣಿನಂತೆ ಹೊರಗೆ ನೋಡಲು ಸುಂದರ, ಆದರೆ ಒಳಗೆಲ್ಲ ಹುಳು. ಈ ರೂಪಕವನ್ನು ಇದೇ ಕವಿ ತನ್ನ 'ಅಜಿತಪುರಾಣ'ದಲ್ಲಿ ಅತ್ತಿಮಬ್ಬೆಯನ್ನು ಹೊಗಳುವಾಗ ಬಳಸಿದ್ದುದನ್ನು ಜ್ಞಾಪಿಸಿಕೊಳ್ಳಬಹುದು. ("ಪೆಱತ್ತು ಪೊಡೆ ಅತ್ತಿಯಪಣ್ ಅತ್ತಿಮಬ್ಬೆಯಲ್ಲದರ ಗುಣಂ"). ಬಸವಣ್ಣನವರು ತಮ್ಮ ವಚನವೊಂದರಲ್ಲಿ ಇದೇ ರೂಪಕವನ್ನು ಬಳಸಿದ್ದಾರೆ ("ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ, ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ"); **ಎನಿಪ** : ಎನ್ನಿಸಿಕೊಳ್ಳುವ; **ಏಳಪುಂಡರಂ:** ಏಳಪುಂಡರನ್ನು. 'ಏಳಪುಂಡ' ಎಂಬ ಮಾತು ಒಂದು ಸಮಸ್ಯೆಯಾಗಿದೆ. ಇದರಲ್ಲಿ ಏಳ+ಪುಂಡ ಎಂಬ ಎರಡು ಮಾತುಗಳಿವೆಯೆಂದು ಭಾವಿಸಿದರೆ. ಮೊದಲ 'ಏಳ' ಎಂಬ ಮಾತು 'ಏಳಿಸು' (=ನಿಂದಿಸು), 'ಏಳಿದ' (=ನಿಂದೆ) ಎಂಬ ಪದಗಳಿಗೆ ಸಂಬಂಧಿಸಿದ್ದಿರಬಹುದು. 'ಏಳಪುಂಡ' ಎಂಬ ಮಾತು ಬಹುಶಃ ಅಂತಹುದೇ ಅರ್ಥದ ಪದವಾದ 'ಏಟವೀಟ'ವನ್ನು ಜ್ಞಾಪಕಕ್ಕೆ ತರುತ್ತದೆ. ಈ ಪದ ಬರುವ ದೇಕಬ್ಬೆ ಶಾಸನದ ಪದ್ಯ.[೧೦] ಹೀಗಿದೆ:

ಕುಡಿಯರ ಪಳ್ಳಿಭಂ ಕುಡಿಯರಾಭರಣಂ ನೆಗೞ್ದಾತ ರಾಜನಂ ।
ದಡೆ ಕಲಿ ಕಾಲ ಕರ್ಣನ ವಿನೋದದ ಚಾಗದ ಬೀರದಾರ್ಪಿನಾ- ।
ಗಡಿನ ನಿ ಕೃಷ್ಣ ನಿಗರ್ಣಿ ನಿಕೃತ್ಯ ನಿರಾಚರಣೇಟವಿಟರಂ ।
ಕಡು ಜವರೆನ್ನು ಪೋಲಿಪರೆ ಧನ್ಯನೆನಿಪ್ಪ ಚೋಗ್ರಗಣ್ಯನಾ ॥

ತೆಲುಗಿನಲ್ಲಿ 'ವಿಟಾಕೂಟಮು' (ವಿಟಾಕೋಟಮು, ವಿಟಾಗೋಟಮು) ಎಂಬ ಪದವಿದೆ. ಇದಕ್ಕೆ Contradiction, ವಿರುದ್ಧವು ಎಂಬ ಅರ್ಥಗಳಿವೆ.[೧೧] ಅದೇ ತೆಲುಗಿನಲ್ಲಿ 'ವಿಟ ಮಾಕುಡು' ಎಂದರೆ ಮೋಸಗಾರ ಎಂಬರ್ಥವಿದೆ. ಇದಕ್ಕೂ ತೆಲುಗಿನ 'ಪಿಟ್ಟ' ಗೂ (a fool, a cheat) ಸಂಬಂಧವಿದೆ. ತಮಿಳಿನಲ್ಲಿಯೂ 'ವಿಟಾಗೊಟಮ್' ಎಂದರೆ ವಿರೋಧ ಎಂಬರ್ಥವಿದೆ.[೧೨] ವಿಟಾಕೂಟಮು, ವಿಟಾ

---

೧೦. Ec. IV. Hg. 18, 1057 A. D.

೧೧. Brown : Telugu - English Dictio ary, p. 122; ಬಿ. ಸೀತಾರಾಮ ಚಾರ್ಯುಲು : ಶಬ್ದರತ್ನಾಕರಮು : ೧೧೬.

೧೨. Tamil Lexicon vol. I. p. 556.

ಗೂಡಪರ್ ಎಂಬ ಪದಗಳಿಗೆ ಮೂಲ ಬಹುಶಃ ತೆಲುಗಿನ ಎಡ್ಡೆ, ತಮಿಳಿನ ಎಟ್ಟನ್. ಕನ್ನಡದ ಎಡ್ಡ. ಇವುಗಳಿಗೆ ಸುಳ್ಳುಗಾರ, ಮೋಸಗಾರ ಎಂಬರ್ಥಗಳಿವೆ. ಕನ್ನಡದ ‘ಏಳಪ್ರಂಡೆ’, ‘ಏಟವೀಟ’ ಪದಗಳ ಪೂರ್ವಾರ್ಧದಲ್ಲಿ ‘ಎಡ್ಡ’ ಪದವಿದ್ದರೂ ಆಶ್ಚರ್ಯವಿಲ್ಲ. ಲಕ್ಕುಂಡಿ ಶಾಸನದ ‘ಏಳಪ್ರಂಡ’ ಎನ್ನುವ ಮಾತಿಗೆ ವಿರೋಧ ಸ್ವಭಾವದವ, ಮೋಸಗಾರ ಎಂಬರ್ಥವನ್ನು ಹೇಳಬಹುದು. ಅದರ ನಿಜವಾದ ಪಾಠ ಅದೇ ಆಗಿದ್ದು. ಏಳ+ಪ್ರಂಡ ಎಂದು ಬಿಡಿಸಬೇಕಾಗಿದ್ದಲ್ಲಿ ‘ಪ್ರಂಡ’ ಎಂಬ ಮಾತಿಗೆ ‘ದುಷ್ಟ’ ಎನ್ನುವ ಅರ್ಥವನ್ನು ಹೇಳುವುದು ಕಷ್ಟಸಾಗುವುದಿಲ್ಲ; **ಪಡೆವಳ್ಳ ತೈಲನ ಉದಾರ ಚಾರುಚರಿತ ಪ್ರಭೆಯಿಂ ತೆಗಳ್ವುದು:** ಇಲ್ಲಿ ನಿಂದಿಸು ಎಂಬರ್ಥದ ಪದವಿರಬೇಕಾದ್ದಲ್ಲಿ ‘ತೆಗಳ್ವುದು’ ಎಂದಿರಬೇಕಿತ್ತು. ಈ ಪಾಠವನ್ನಿಟ್ಟುಕೊಂಡರೆ ‘ಪಡೆವಳ್ಳ ತೈಲನ ಉದಾರಚರಿತದ ಪ್ರಭೆಯಿಂದ ಆ ವಂಚಕರನ್ನು ನಿಂದಿಸಬೇಕು’ ಎಂದು ಅರ್ಥ ಹೇಳಬೇಕಾಗುತ್ತದೆ. ಮೂಲದಲ್ಲಿ ಕುಳದೇ ಇದ್ದಿತು ಎಂಬ ಪಕ್ಷದಲ್ಲಿ ಅದನ್ನು ‘ತಗುಳ್ವುದು’ ಎಂದು ತಿದ್ದಿಕೊಳ್ಳಬೇಕು. (ಡಿ. ಎಲ್. ಎನ್. ಅವರು ತಮ್ಮ ‘ಭಗವತಿಯೋಱು’ ಲೇಖನದಲ್ಲಿ ಹಾಗೆ ತಿದ್ದಿ ಕೊಂಡಿದ್ದಾರೆ.) ಆ ಪಕ್ಷದಲ್ಲಿ ಆ ವಾಕ್ಯಕ್ಕೆ “ಪಡೆವಳ್ಳ ತೈಲನ ಉದಾರ ಚರಿತದ ಪ್ರಭೆಯಿಂದ ಆ ವಂಚಕರನ್ನು ಓಡಿಸಬೇಕು” ಎಂದು ಅರ್ಥ ಹೇಳಬೇಕಾಗುತ್ತದೆ.

‘ಪಗರಣ’. ‘ಕುಪ್ಪಕುಱಿ’. ‘ಭಗವತಿಯೋಱು’ ‘ಅತ್ತಿಯುಪಣ್’, ‘ಏಳಪ್ರಂಡ’ ಎಂಬ ಸ್ವಾರಸ್ಯವಾದ ಉಕ್ತಿಗಳಿರುವ ಈ ಪದ್ಯ ವ್ಯಾಖ್ಯಾನಾರ್ಹವೆಂದು ಭಾವಿಸಿ, ಈ ಲೇಖನದಲ್ಲಿ ಅದಕ್ಕೆ ಪದಾನುಕ್ರಮವಾಗಿ ಅರ್ಥವನ್ನು ಬರೆಯುವ ಪ್ರಯತ್ನವನ್ನು ಮಾಡಲಾಗಿದೆ. ಈ ಲೇಖನದಲ್ಲಿ ಅರ್ಥದ ದೃಷ್ಟಿಯಿಂದ ಸಮಸ್ಯೆಗಳಾಗಿರುವ ಕೆಲವನ್ನು ಎತ್ತಿ ತೋರಿಸಿದೆ. ಅವುಗಳ ಮೇಲೆ ಹೆಚ್ಚಿನ ಬೆಳಕನ್ನು ಯಾರಾದರೂ ಬೀರಿದರೆ ಅದು ಸ್ವಾಗತಾರ್ಹ.

★ **ಡಾ. ಎಂ. ಚಿದಾನಂದಮೂರ್ತಿ**

ಗ್ರಂಥಾವಲೋಕನ

ಜೇಂಗೊಡ : ಸಂಪಾದಕರು ಮತ್ತು ಪ್ರಕಾಶಕರು: ಪ್ರೊ. ಎನ್. ಆರ್. ನಾಯಕ, ಕನ್ನಡ ವಿಭಾಗ, ಆರ್ಟ್ಸ ಮತ್ತು ಸಾಯನ್ಸ ಕಾಲೇಜ, ಹೊನ್ನಾವರ (ಉ. ಕನ್ನಡ); ಪ್ರಥಮ ಮುದ್ರಣ: ಜೂನ ೧೯೭೧. ಪುಟಗಳು: XVI + ೧೧೮; ಬೆಲೆ : ರೂ. ೩

ಕನ್ನಡ ಜಾನಪದ ಕ್ಷೇತ್ರದಲ್ಲಿ ಇತ್ತೀಚೆಗೆ ಹೊಸ ಶಕ್ತಿ ಸಂಚಾರವಾಗಿದೆ. ಜಾನಪದವನ್ನು ಕುರಿತು ವ್ಯವಸ್ಥಿತವಾದ ಅಭ್ಯಾಸ ನಡೆದಿದೆ. ಕನ್ನಡ ಜಾನಪದ ಮುಖ್ಯ ವಿಭಾಗಗಳಾದ ಜನಪದ ವಾಙ್ಮಯ, ಜನಪದ ಕ್ರಿಯೆ, ಜನಪದ ಧರ್ಮ, ಜನಪದ ವಿಜ್ಞಾನ ಮತ್ತು ಜನಪದ ಸಂಪ್ರದಾಯ ಇವುಗಳಲ್ಲಿ ಜನಪದ ವಾಙ್ಮಯ ವಿಭಾಗಕ್ಕೆ ಸಂಬಂಧಿಸಿದಂತೆ ನಡೆವ ಕಾರ್ಯ ಚುರುಕುಗೊಂಡಿದೆ. ಅನೇಕ ಹೊಸಬರು ಈ ಕ್ಷೇತ್ರದಲ್ಲಿ ಸುಗ್ಗಿ ಉಪಯುಕ್ತ ಕೆಲಸ ಮಾಡುತ್ತಲಿದ್ದಾರೆ. ಅಂಥವರಲ್ಲಿ ಪ್ರೊ. ಎನ್. ಆರ್. ನಾಯಕ ಒಬ್ಬರು. ಅವರು 'ಜೇಂಗೊಡ'ವನ್ನು ಕನ್ನಡಿಗರ ಕೈಗೆ ಕೊಡುವ ಮೂಲಕ ಜನಪದ ವಾಙ್ಮಯ ವಿಭಾಗಕ್ಕೆ ಮಹತ್ವದ ಕಾಣಿಕೆ ಸಲಿಸಿದ್ದಾರೆ.

ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಪ್ರಮುಖ ಜನಾಂಗಗಳಲ್ಲಿ ಒಂದಾದ ನಾಮಧಾರಿಗಳಲ್ಲಿ ಪ್ರಚಲಿತವಿರುವ ಬಿಡಿಬಿಡಿಯಾದ ತ್ರಿಪದಿಗಳನ್ನು ಶ್ರೀ ಎನ್. ಆರ್. ನಾಯಕ ಅವರು 'ಜೇಂಗೊಡ'ದಲ್ಲಿ ಸಂಗ್ರಹಿಸಿದ್ದಾರೆ. ಸಂಗ್ರಹಿಸುವಾಗ ನಾಮಧಾರಿ ಜನಾಂಗದ ಆಡುನುಡಿಯನ್ನು ಲಿಪಿಬದ್ಧಗೊಳಿಸಲು ಅವರು ವಿಶೇಷ ಶ್ರಮ ವಹಿಸಿದ್ದಾರೆ. ಆಡುನುಡಿಯನ್ನು ಲಿಪಿಬದ್ಧಗೊಳಿಸಲು ಕನ್ನಡ ಲಿಪಿಗಿರುವ ಅಸಾಮರ್ಥ್ಯವನ್ನು ಎತ್ತಿ ತೋರಿಸಿ, ಅದರ ನಿವಾರಣೆಗಾಗಿ ತಾವೊಂದು ಉಪಾಯ ಹುಡುಕಿ ಇಲ್ಲಿ ಪ್ರಯೋಗಿಸಿದ್ದಾರೆ. ಮತ್ತು ಹಲವು ಹಾಡುಗಳಿಗೆ ಅಡಿಯಲ್ಲಿ ಪಾಠಾಂತರ ಕೊಟ್ಟಿದ್ದಾರೆ. ಹೀಗೆ ಒಂದು ಜನಾಂಗದಲ್ಲಿಯ ಹಾಡುಗಳ ಸಂಗ್ರಹ, ಕನ್ನಡ ಧ್ವನಿಮಾ ವ್ಯವಸ್ಥೆಯಲ್ಲಿಯ ಕೊರತೆ ನಿವಾರಣೆಯ ಪ್ರಯತ್ನ ಮತ್ತು ಪಾಠಾಂತರಗಳನ್ನು ಕೊಡುವ ಪರಿಪಾಠಗಳ ಮೂಲಕ ಶ್ರೀಯುತ ನಾಯಕ ಅವರು ಪ್ರಸ್ತುತ ಗ್ರಂಥದ ಸಂಪಾದನೆಯಲ್ಲಿ ಹೊಸತನ ತೋರಿಸಿದ್ದಾರೆ. ಈ ಹೊಸತನ ಪೂರ್ಣರೂಪದಲ್ಲಿ ಫಲಕಾರಿಯಾಗಿಲ್ಲ. ಆದರೂ ಸಂಪಾದಕರ ಹೊಸ ಪ್ರಜ್ಞೆ ಪ್ರಶಂಸಾರ್ಹ. ಕನ್ನಡ ಜಾನಪದ ಕ್ಷೇತ್ರದಲ್ಲಿ ದುಡಿಯುವವರಿಗೆ ಈ ನಿಟ್ಟಿನಲ್ಲಿ ವಿಚಾರ ಮಾಡಲು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಈ ಹೊಸ ಪ್ರಜ್ಞೆ ಪ್ರಚೋದನೆ ನೀಡುತ್ತದೆಂಬಲ್ಲಿ ಸಂಶಯವಿಲ್ಲ.

ಕಾರವಾರ ಜಿಲ್ಲೆಯ ಹೊನ್ನಾವರ, ಕುಮಟಾ ಮತ್ತು ಭಟಕಳ ತಾಲೂಕಗಳಲ್ಲಿಯ ನಾಮಧಾರಿ ಜನಾಂಗದಲ್ಲಿಯ ಹಾಡುಗಳನ್ನು ಶ್ರೀ ನಾಯಕ ಅವರು 'ಜೇಂಗೊಡ'

ದಲ್ಲಿ ಸಂಗ್ರಹಿಸಿ, ಸಂಯೋಜಿಸಿದ್ದಾರೆ. ಹಾಡು, ಕೌಟುಂಬಿಕ ಚಿತ್ರಗಳು, ಶೃಂಗಾರ ಸನ್ನಿವೇಶಗಳು, ಹಾಸ್ಯ, ಬಯ್ಗುಳ, ಶಕುನ, ಹಿತವಚನಗಳು, ಬತ್ತ ಕುಟ್ಟುವ ಹಾಡು, ದೇವರು, ಭಕ್ತಿ ಮತ್ತು ಬಿಡಿಮುತ್ತುಗಳು ಎಂಬ ಹನ್ನೊಂದು ಮುಖ್ಯ ಭಾಗಗಳಲ್ಲಿ ಪದ್ಯಗಳನ್ನು ವಿಭಜಿಸಿದ್ದಾರೆ. ಮತ್ತೆ ಈ ಪ್ರತಿಯೊಂದು ಭಾಗದಲ್ಲಿ ಮತ್ತೆ ಹಲವು ಉಪಭಾಗಗಳನ್ನು ಮಾಡಿ ಹಳ್ಳಿಗರ ಸೊಲ್ಲಿನಿಂದಲೇ ಹೆಸರಿಸಿದ್ದಾರೆ. ಕೌಟುಂಬಿಕ ಚಿತ್ರಗಳು ಮತ್ತು ಶೃಂಗಾರ ಸನ್ನಿವೇಶಗಳು ಎಂಬ ಭಾಗಗಳಲ್ಲಿ ಕಲ್ಪಿಸಿರುವ ಉಪಭಾಗ ಗಳು ಕ್ರಮವಾಗಿ ೪೪ ಮತ್ತು ೧೬ ಇವು ಹೆಚ್ಚೆನಿಸುತ್ತವೆ. ಹಲಕೆಲವು ಅನವಶ್ಯಕ ಭಾಗಗಳಾಗಿವೆ. ಹೆಚ್ಚು ಸಂಖ್ಯೆಯ ಈ ಚಿಕ್ಕ ಚಿಕ್ಕ ಉಪಭಾಗಗಳು ಯಾವುದೇ ಒಂದು ನಿರ್ದಿಷ್ಟ ಭಾವ ಮೂಡಿಸದೆ ಬೇಸರವನ್ನುಂಟು ಮಾಡುತ್ತವೆ. ಅಲ್ಲದೆ ಈ ಹಾಡು ಇಲ್ಲಿರದೆ ಅಲ್ಲಿರಬೇಕಾಗಿತ್ತೆಂದೂ ಅನಿಸುವುದು. 'ದೇವರಾಯಿಸವೇ ಹೆರುದಾಲಿ' (ಪುಟ. ೫೫) ಮತ್ತು 'ಪುರಿಸರಿಲ್ಲದ ಬಾಳಿ ಎಟ್ಟೂ ಇದ್ದರೇನು' (ಪುಟ ೬೪) ಎಂಬ ಉಪಭಾಗಗಳ ಮೊದಲ ಹಾಡು ಒಂದೇಯಾಗಿರುವುದನ್ನು ಇಲ್ಲಿ ಗಮನಿಸಬಹುದು. ಇಂಥ ಪುನರುಕ್ತಿ ದೋಷಕ್ಕೆ ಹೆಚ್ಚು ಸಂಖ್ಯೆಯ ಉಪಭಾಗಗಳೇ ಕಾರಣಗಳಾಗಿವೆಯೆನ್ನಬಹುದು. ಹಾಡುಗಳಲ್ಲಿಯ ವಿಷಯ ಆಧರಿಸಿ ಪರಿಣಾಮಕಾರಿಯಾದ ರೀತಿಯಲ್ಲಿ ವಿಭಜನೆ ಮಾಡಿ ಕೇವಲ ೧೫-೨೦ ಭಾಗಗಳನ್ನು ಮಾಡಿದ್ದರೆ ಕೃತಿಗೆ ಹೆಚ್ಚಿನ ಕಳೆ ಬರುತ್ತಿತ್ತು.

ಹಳ್ಳಿಗರ ಜೀವನದ ವಿವಿಧ ಮುಖಗಳ ಪರಿಚಯ ಮಾಡಿಕೊಡುವ ಪದ್ಯಗಳ ಸಂಗ್ರಹವಾದ 'ಜೇಂಗೊಡ' ದಲ್ಲಿ ಹೊಸತನ ತರಲು ಸಂಪಾದಕರು ಹವಣಿಸಿದ್ದಾರೆ. ಆ ಕಾರಣಕ್ಕಾಗಿ ಈ ಕೃತಿಯನ್ನು ಹಾರ್ದಿಕವಾಗಿ ಸ್ವಾಗತಿಸುವೆ. ಹೊಸತನದ ಹುಮ್ಮಸ್ಸಿನೊಂದಿಗೆ ನುಸುಳಿ ಬಂದಿರುವ ಒಂದೆರಡು ಅರಕೆಗಳನ್ನೂ ತೋರಿಸಬಹುದು.

ಆಡುನುಡಿಯನ್ನು ಗ್ರಂಥಸ್ಥಗೊಳಿಸುವಲ್ಲಿ ಕೆಲವು ತೊಡಕುಗಳಿವೆ. ಧ್ವನಿಮಾಕ್ಕೆ ಸಂಬಂಧಿಸಿದ ತೊಡಕನ್ನು ಬಿಡಿಸಲು ಶ್ರೀಯುತ ನಾಯಕ ಅವರು ಇಲ್ಲಿ ಯತ್ನಿಸಿದ್ದಾರೆ. "ಈ ಜನಾಂಗದ ಆಡುನುಡಿಯಲ್ಲಿ ...ಮೂರು ಧ್ವನಿಮಾಗಳು (Phonemes) ಹೆಚ್ಚಿಗೆ ಬಂದು ಸೇರಿಕೊಂಡಿವೆ. ಅವು ಯಾವುವೆಂದರೆ ದೀರ್ಘ ಅ, ಎ ಹಾಗೂ ಒ. ಇವುಗಳನ್ನು ಬರೆಯಲು ಕನ್ನಡದಲ್ಲಿ ಲಿಪಿ ಸೌಕರ್ಯವಿಲ್ಲ. ಆದುದರಿಂದ ಆಯಾ ಅಕ್ಷರಗಳ ಮೇಲೆ ಕೇವಲ '—' ಚಿಹ್ನವೊಂದನ್ನೇ ಹಾಕಿ (ಅತ್ತೆ—ಅ̅ತ್ತೆ, ಮರಿ--ಮ̅ರಿ. ಎಳಿ—ಎ̅ಳಿ, ಬೆಡ—ಬೆ̅ಡ, ಕೊಡ—ಕೊ̅ಡ, ಕೊರಿ—ಕೊ̅ರಿ, ಒಲಿ—ಒ̅ಲಿ ಇತ್ಯಾದಿ) ತಿಳಿಸಿದೆ. ಅವುಗಳನ್ನು ವಾಚಕರು ಗಮನದಲ್ಲಿಟ್ಟುಕೊಂಡು ಓದಬೇಕಾಗಿ ವಿನಂತಿ" (ಪೀಠಿಕೆ ಪು. XI) ಇದು ಸಂಪಾದಕರು ಸೂಚಿಸಿದ ಪರಿಹಾರ. ದೀರ್ಘ ಅ ಧ್ವನಿಮಾವ ವಿಷಯ ಚರ್ಚಾಸ್ಪದ. ಆದರೆ ದೀರ್ಘ ಎ ಮತ್ತು ಒ ಬರೆಯಲು ಕನ್ನಡದಲ್ಲಿ ಲಿಪಿ ಸೌಕರ್ಯವಿಲ್ಲವೆನ್ನುವುದು ಯೋಗ್ಯವೆ ? ಎ (ಹ್ರಸ್ವ) ಏ (ದೀರ್ಘ) ಇದರಂತೆ (ಒ ಹ್ರಸ್ವ) ಓ (ದೀರ್ಘ) ಲಿಪಿಗಳಿರುವಾಗ ಹ್ರಸ್ವ ಎ ಮತ್ತು ಒ ಗಳನ್ನು

ದೀರ್ಘವಾಗಿಸಲು '—' ಚಿಹ್ನೆ ಹಾಕುವುದರ ಔಚಿತ್ಯವಾದರೂ ಏನು ? ಎ̄ಳಿ, ಬೆ̄ಡ, ಕೊ̄ರಿ, ಒ̄ಲಿ, ಇವುಗಳನ್ನು ಏಳಿ. ಬೇಡ. ಕೋರಿ, ಓಲಿ, ಎಂಬುದಾಗಿ ಬರೆದರೆ ತಪ್ಪೇನು? 'ಜೇಂಗೊಡ' ದಲ್ಲಿ ಇಂಥ ಬರವಣಿಗೆಯೂ ಸಾಕಷ್ಟಿದೆ. ಅಂದಾಗ ಸಂಪಾದಕರು ದೀರ್ಘ ಎ ಮತ್ತು ಒ ಧ್ವನಿಮಾಗಳ ಸಲುವಾಗಿ ಮಾನಸಿಕ ಗೊಂದಲಕ್ಕೀಡಾಗಿದ್ದಾರೆಂಬುದು ಸ್ಪಷ್ಟ.

ಜನಪದ ಸಾಹಿತ್ಯ ಗ್ರಂಥಸ್ಥವಾಗದೆ ಒಬ್ಬನ ಬಾಯಿಯಿಂದ ಇನ್ನೊಬ್ಬನ ಕಿವಿಗೆ ಸಾಗಿ, ಹಲವು ಮಾರ್ಪಾಡುಗಳಿಗೆ ಈಡಾಗಿ ಉಳಿದು ಬಂದಿದೆ. ಆದುದರಿಂದ ಒಂದು ಹಾಡಿಗೆ ಹಲವಾರು ಪಾಠಾಂತರಗಳು ದೊರೆಯುತ್ತವೆ. ಇಂಥ ಹಾಡುಗಳನ್ನು ಸಂಗ್ರಹಿಸುವಾಗ ಎಲ್ಲ ಪಾಠಾಂತರಗಳನ್ನು ಸಂಗ್ರಹಿಸುವುದು ಸಾಧ್ಯವಿಲ್ಲ. ದೊರಕಿದ ಪಾಠಾಂತರಗಳಲ್ಲಿ ಹೆಚ್ಚು ಒಳ್ಳೆಯ ಪಾಠ ಆಯ್ದುಕೊಳ್ಳುವುದು ಮಹತ್ವದ ಕೆಲಸ. ಉಳಿಯುವ ಪಾಠಾಂತರಗಳಲ್ಲಿ ಎಲ್ಲವೂ ಅಷ್ಟೇ ಪ್ರಮುಖವಿದ್ದು, ಒಂದು ಅಮೂಲ್ಯ ಭಾವ ಇಲ್ಲವೆ ಜೀವನಾನುಭವ ಕಳೆದು ಹೋಗುವಂತಿದ್ದರೆ ಮಾತ್ರ ಪಾಠಾಂತರ ಕೊಡಬಹುದು. ಇಲ್ಲಿ ಕೊಟ್ಟಿರುವ ಕೆಲವು ಪಾಠಾಂತರಗಳು ಶ್ರೇಷ್ಠವಾಗಿವೆ; ಕೆಲವು ಪಾಠಾಂತರಗಳನ್ನು ಕೊಡದಿದ್ದರೂ ನಡೆಯುತ್ತಿತ್ತೆನ್ನಿಸುತ್ತದೆ.

ನಾಮಧಾರಿ ಜನಾಂಗದ ಆಡುನುಡಿಗೂ ಕರ್ನಾಟಕದ ಉಳಿದೆಡೆಯ ಆಡುನುಡಿಗೂ ಸ್ಪಷ್ಟ ವ್ಯತ್ಯಾಸವಿದೆಯೆಂಬ ಅಂಶವನ್ನು "ಜೇಂಗೊಡ" ಎತ್ತಿ ತೋರಿಸುತ್ತದೆ. ಪ್ರಾದೇಶಿಕ ಮತ್ತು ಜನಾಂಗಿಕ ವೈಶಿಷ್ಟ್ಯ ಹೊಂದಿದ ಪದ ಮತ್ತು ಪ್ರಯೋಗಗಳ ವಿಪುಲ ಬಳಕೆ ಈ ಕೃತಿಯ ಮೈತುಂಬ ಆಗಿದೆ. ಆದ್ದರಿಂದ ಇಲ್ಲಿಯ ಹಾಡುಗಳ ಅರ್ಥ ಅರಿಯಲು, ಸೊಗಸನ್ನು ಸವಿಯಲು ಅನ್ಯ ಪ್ರದೇಶದವರಿಗೆ ಕಷ್ಟವಾಗುತ್ತದೆ. ಸಂಪಾದಕರು ಪೀಠಿಕೆಯಲ್ಲಿ ಕೊಟ್ಟ ವಿವರಣೆ ಮತ್ತು ಗ್ರಂಥಾಂತ್ಯದಲ್ಲಿ ಕೊಟ್ಟ ಕಠಿಣ ಶಬ್ದಾರ್ಥ ಈ ದಿಶೆಯಲ್ಲಿ ಪೂರ್ಣ ಸಹಾಯ ನೀಡವು. ಪ್ರಾದೇಶಿಕ ಮತ್ತು ಜನಾಂಗಿಕವಾದ ಇಂಥ ಜನಪದ ಸಂಗ್ರಹಗಳಿಗೆ ಇದಕ್ಕೂ ಹೆಚ್ಚಿನ ವಿವರಣೆ ಮತ್ತು ಅರ್ಥಕೋಶ ಅವಶ್ಯವೆಂಬುದನ್ನು ಆ ಕ್ಷೇತ್ರದಲ್ಲಿ ದುಡಿಯುವವರು ಅರಿಯಬೇಕಾಗಿದೆ.

ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಜನಪದ ಹಾಡುಗಳ ಹಲವು ಸಂಗ್ರಹಗಳು ಈಗಾಗಲೇ ಪ್ರಕಟವಾಗಿವೆ. ಅವುಗಳಲ್ಲಿಯ ಹಾಡುಗಳ ವಿಷಯ ಮತ್ತು ಭಾವಕ್ಕೂ ಪ್ರಸ್ತುತ ಸಂಗ್ರಹದಲ್ಲಿಯ ಹಾಡುಗಳ ವಿಷಯ ಮತ್ತು ಭಾವಕ್ಕೂ ಅಭಿವ್ಯಕ್ತಿಯ ರೀತಿಯೊಂದನ್ನುಳಿದು ವಿಶೇಷವಾದ ಅಂತರವೇನೂ ಕಾಣದು. ಆದರೆ ಭಾಷೆಯಲ್ಲಿ ಮಾತ್ರ ಮಹದಂತರವಿದೆ. ಹೀಗಾಗಿ ಭಾಷಾಶಾಸ್ತ್ರ ದೃಷ್ಟಿಯಿಂದ 'ಜೇಂಗೊಡ'ಕ್ಕೆ ವಿಶಿಷ್ಟಸ್ಥಾನ ಕಾದಿದೆ.

"....ಈ ಜಿಲ್ಲೆಯ ಪ್ರತಿಯೊಂದು ಜಾತಿಗೂ ಅವರದೇ ಆದ ಆಡುನುಡಿಯಿದೆ; ಸಾಂಸ್ಕೃತಿಕ ಪರಂಪರೆಯಿದೆ. ಬೇರೆ ಬೇರೆ ಜಾತಿಗೆ ಸೇರಿದ ಜನತೆಯ ವಿವಿಧ ಬಗೆಯ

ಆಡುಭಾಷೆ ಹಾಗೂ ಸಂಸ್ಕೃತಿಯನ್ನು ಅಭ್ಯಾಸಮಾಡುವವರಿಗೆ ಅನುಕೂಲವಾಗಲೆಂದು ಜಾತಿಯ ತಳಹದಿಯ ಮೇಲೆ ಹಾಡುಗಳನ್ನು ವಿಭಜಿಸಿದ್ದೇನೆಯೇ ವಿನಃ ಬೇರೆ ಉದ್ದೇಶದಿಂದಲ್ಲ." (ಪೀಠಿಕೆ ಪುಟVII) ಎಂದು ಸಂಪಾದಕರು ಹೇಳಿದ್ದಾರೆ. ಶ್ರೀಯುತ ನಾಯಕರ ಬಯಕೆಯಂತೆ—ಆಡುನುಡಿ ಅಭ್ಯಾಸ ಮಾಡುವವರಿಗೆ ಈ ಕೃತಿ ಅನುಕೂಲತೆ ಒದಗಿಸುತ್ತದೆಂಬ ವಿಷಯವನ್ನು ಮೇಲೆಯೇ ಹೇಳಿದೆ. ಆದರೆ ಜನಾಂಗಿಕವಾದ ಸಂಸ್ಕೃತಿಯನ್ನು (ನಾಮಧಾರಿ ಜನಾಂಗದ ಸಂಸ್ಕೃತಿಯನ್ನು) ಅಭ್ಯಾಸ ಮಾಡುವವರಿಗೂ ಕೂಡ ಈ ಕೃತಿ ಅನುಕೂಲತೆ ಒದಗಿಸುತ್ತದೆಂಬ ಸಂಪಾದಕರ ಉದ್ದೇಶ ಈಡೇರಿಲ್ಲ. ಏಕೆಂದರೆ "ಜೇಂಗೊಡ"ದಲ್ಲಿಯ ಹಾಡುಗಳನ್ನೆಲ್ಲ ಅವಲೋಕಿಸಿದಾಗ ನಾಮಧಾರಿ ಜನಾಂಗಕ್ಕೆ ಮಾತ್ರ ಮೀಸಲಾದ ವಿಶಿಷ್ಟ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ಹಾಡುಗಳು ಅದರಲ್ಲಿ ಇಲ್ಲವೆಂದೇ ಹೇಳಬೇಕಾಗುವುದು. ಅಲ್ಲಿರುವ ಹಾಡುಗಳಲ್ಲೆಲ್ಲ ಇಡಿಯಾದ ಜನಪದ ಸಂಸ್ಕೃತಿ ಒಡಮೂಡಿದೆಯೇ ಹೊರತು ಜನಾಂಗಿಕವಾದ ನಿರ್ದಿಷ್ಟ ಸಂಸ್ಕೃತಿ ಮಾತ್ರ ಸ್ಫುಟಗೊಂಡಿಲ್ಲ. ಅಂಥ ಸಂಗ್ರಹಗಳು ಶ್ರೀಯುತರಿಂದ ಬೇಗನೇ ಪ್ರಕಟವಾಗಲೆಂದು ಹಾರೈಸುವೆ.

ಜನಪದ ಸಾಹಿತ್ಯದ ಅಭ್ಯಾಸ ಇತ್ತೀಚೆಗೆ ಕ್ರಮಬದ್ಧವಾಗುತ್ತಲಿದೆ. ಶಾಸ್ತ್ರೀಯ ಅಭ್ಯಾಸಕ್ಕೆ ನೆರವಾಗಲು ಹೊರಬರುವ ಸಂಗ್ರಹಗಳೂ ಪೂರ್ಣದೃಷ್ಟಿ ಹೊಂದಿದವುಗಳಾಗಿರಬೇಕು. ಜನಪದ ಹಾಡುಗಳ ಅಭ್ಯಾಸಮಾಡುವಾಗ ಅವುಗಳನ್ನು ಹಾಡುವ ಪ್ರಸಂಗಗಳ ಪರಿಚಯ ಅತಿಮುಖ್ಯ. ಹಾಡುಗಾರರು ಗಂಡಸರೋ? ಹೆಂಗಸರೋ? ಎಷ್ಟುಜನ? ಇತ್ಯಾದಿ ಮಾಹಿತಿಯೂ ಬೇಕು. ಇಂಥ ವಿವರ ಕೊಟ್ಟಿದ್ದರೆ ಅಭ್ಯಾಸಿಗಳಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು.

"ಪ್ರೊ. ನಾಯಕ ಅವರ ಜನಪದ ಸಂಗ್ರಹ ದೊಡ್ಡದಿದೆ." ಅದೆಲ್ಲ ಪ್ರಕಟ ಮಾಡುವಾಗ ಅವರು ಸಂಯೋಜನೆ ಮತ್ತು ಸಂಪಾದನೆಯಲ್ಲಿ ಇನ್ನಷ್ಟು ಶಾಸ್ತ್ರೀಯತೆಯೆಡೆಗೆ ಗಮನ ಕೊಟ್ಟರೆ ನಿಜವಾಗಿಯೂ ಕನ್ನಡದ ಉದ್ಧಾರ ಆಗಬಲ್ಲುದು.

ಒಂದು ನಿರ್ದಿಷ್ಟ ಪ್ರದೇಶದಲ್ಲಿಯ ವಿಶಿಷ್ಟ ಜನಾಂಗವೊಂದರ ಪರಂಪರಾಗತ ಜನಪದ ಹಾಡುಗಳನ್ನು ಸಂಗ್ರಹಿಸಿ ಕೊಡುವ ಹೊಸತನ ಇಲ್ಲಿದೆ. ಪಾಠಾಂತರಗಳನ್ನು ಕೊಡುವ ಮತ್ತು ಆಡುನುಡಿಯನ್ನು ಲಿಪಿಬದ್ಧಗೊಳಿಸುವ ರೀತಿಯಲ್ಲೂ ಹೊಸತನ ತರುವ ಪ್ರಯತ್ನ ನಡೆದಿದೆ. ಹೊಸತನದ ಈ ಪ್ರಜ್ಞೆಗಾಗಿ ಪ್ರಯತ್ನಗಳಿಗಾಗಿ "ಜೇಂಗೊಡ"ವನ್ನು ತುಂಬು ಹೃದಯದಿಂದ ಸ್ವಾಗತಿಸಬೇಕಾಗಿದೆ. ಸಂಪಾದಕರಾದ ಶ್ರೀ ಎನ್.ಆರ್, ನಾಯಕ ಅವರನ್ನು ಅಭಿನಂದಿಸಬೇಕಾಗಿದೆ.

★ **ಜ್ಯೋತಿ ಹೊಸೂರ.**

ಜೀವನ ಸಿದ್ಧಾಂತ : ಲೇ : ಡಾ. ಜಚನಿ (೧೯೬೬) ಪ್ರಕಾಶಕರು : ಶ್ರೀಶೈಲಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ—ನಂ. ೪೯, ಹ. ಬ. ಸಮಾಜರಸ್ತೆ, ಬೆಂಗಳೂರು – ೪.

ಡಾ. ಜಚನಿ ಅವರು ವೀರಶೈವ ಸಿದ್ಧಾಂತವನ್ನು ಕುರಿತು ಅಪಾರ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ: ಭಾಷ್ಯರೂಪದಲ್ಲಿ, ವಚನರೂಪದಲ್ಲಿ, ಚರಿತ್ರೆ ರೂಪದಲ್ಲಿ, ಕಾವ್ಯ ರೂಪದಲ್ಲಿ. ಜೀವನ ಸಿದ್ಧಾಂತವೆಂಬುದು ಅವರ ಕೃತಿಶ್ರೇಣಿ. ಇದರಲ್ಲಿ ಆರು ಸಂಪುಟಗಳಿರುತ್ತವೆ. ಇವುಗಳ ಒಟ್ಟು ಪುಟಸಂಖ್ಯೆ ನಾಲ್ಕುಸಾವಿರಕ್ಕೂ ಮಿಕ್ಕಿದೆ. ಈ ಕೃತಿಗಳಲ್ಲಿ ಅವರ ಕೆಲವು ನವೀನ ವಿಚಾರಗಳನ್ನು ಕಾಣುವಂತೆ ದಾರ್ಶನಿಕ ಸಾಹಿತ್ಯ ಮೀಮಾಂಸೀಕರಣದಲ್ಲಿ ಸೃಜನ ಸಾಮರ್ಥ್ಯವನ್ನೂ ಕಾಣುತ್ತೇವೆ. ಈ ಗ್ರಂಥಶ್ರೇಣಿಗೆ 'ಜೀವನ ಸಿದ್ಧಾಂತ'ವೆಂದು ಕರೆದುದು ಸ್ವವಿವರಣಾತ್ಮಕವಾಗಿದೆ. ಯಾಕೆಂದರೆ 'ಜೀವ' ವೆಂಬ ಪದವು 'ಷಟ್‌ಸ್ಥಲ'ವೆಂಬ ಪದದ ಅರ್ಥವನ್ನೇ ಕೊಡುತ್ತದೆ. ಅದೇ ರೀತಿ 'ಸಂಪುಟ'ವೆಂಬ ಪದವು 'ಸ್ಥಲ'ವೆಂಬ ಪರ್ಯಾಯಾರ್ಥವನ್ನು ಕೊಡುವುದು. ಕಾರಣ 'ಜೀವನ ಸಿದ್ಧಾಂತ'ವೆಂದರೆ 'ಷಟ್‌ಸ್ಥಲ ಸಿದ್ಧಾಂತ.' ಇದೇ ರೀತಿ 'ಭಕ್ತ ಸಂಪುಟ'ವೆಂಬುದು 'ಭಕ್ತಸ್ಥಲ'ವೆಂಬ ಅರ್ಥವನ್ನೇ ಕೊಡುತ್ತದೆ. ಆದುದರಿಂದ ಆರು ಸಂಪುಟಗಳು ಆರು ಸ್ಥಲಗಳು.

ಷಟ್‌ಸ್ಥಲ ಶಾಸ್ತ್ರವನ್ನು ಮೀಮಾಂಸೀಕರಿಸುವುದು ಎರಡು ವಿಧವಾಗಿರುತ್ತದೆ ಪರಂಪರಾ ರೀತಿಯಿಂದ ಅವುಗಳು ಅನುಕ್ರಮವಾಗಿ ಕ್ರಮ ಸಮುಚ್ಚಯ ಮತ್ತು ಸಮ ಸಮುಚ್ಚಯಗಳು. ಕ್ರಮಸಮುಚ್ಚಯ ಪ್ರಕಾರವಾಗಿ ಷಟ್‌ಸ್ಥಲವನ್ನು ನೂರೊಂದರಲ್ಲಿ ಮತ್ತು ಸಮಸಮುಚ್ಚಯದ ಪ್ರಕಾರವಾಗಿ ಮೂವತ್ತಾರು ಇಲ್ಲವೆ ಇನ್ನೂರು ಹದಿನಾರರಲ್ಲಿ ವಿವರಿಸುತ್ತಾರೆ. ಕ್ರಮ ಸಮುಚ್ಚಯದಲ್ಲಿಯೇ ಆಗಲಿ ಸಮಸಮುಚ್ಚಯದಲ್ಲಿಯೇ ಆಗಲಿ 'ಅಂಗಸ್ಥಲ' ಹಾಗೂ 'ಲಿಂಗಸ್ಥಲ' ಗಳೆಂಬುಭಯಸ್ಥಲಗಳು ಇದ್ದಿರಲೇಬೇಕು.

ಈ ಸಂಪುಟಗಳಲ್ಲಿ 'ಅಂಗಸ್ಥಲ' 'ಲಿಂಗಸ್ಥಲ'ಗಳ ಬದಲು 'ಪೂರ್ವಭಾಗ' ಹಾಗೂ 'ಉತ್ತರ ಭಾಗ'ಗಳೆಂದು ಎರಡುವಿಧ ವಿಭಾಗಗಳನ್ನು ಮಾಡಲಾಗಿದೆ. ಇಲ್ಲಿ ಕೇವಲ ಕ್ರಮಸಮುಚ್ಚಯದ ಕುಲಸ್ಥಲಗಳನ್ನಷ್ಟೇ ನೋಡುವದಿಲ್ಲ ಇದರ ಆಕರ ಗ್ರಂಥ 'ಸಿದ್ಧಾಂತ ಶಿಖಾಮಣಿ' ಎಂದು ತಿಳಿಸಿದಾಗ್ಯೂ. ಇಲ್ಲಿ ಸಮಸಮುಚ್ಚಯದ ಕುಲಸ್ಥಲಗಳನ್ನೂ ನೋಡುತ್ತೇವೆ. ಇದು ಹನ್ನೆರಡನೆಯ ಶತಮಾನದಲ್ಲಿ ಕ್ರಮಸಮುಚ್ಚಯದ ಕುಲಸ್ಥಲಗಳನ್ನು ನಿರಾಕರಿಸಿ ಸಮಸಮುಚ್ಚಯದ ಕುಲಸ್ಥಲಗಳನ್ನು ಸ್ವೀಕರಿಸಲುಂಟಾದುದರ ಪ್ರಭಾವವನ್ನು ಎತ್ತಿ ತೋರಿಸುತ್ತದೆ. ಏಕೋತ್ತರ ಶತಸ್ಥಲವು ಬಸವಪೂರ್ವಯುಗದ ಪರಂಪರೆಯೆಂಬುದಕ್ಕೆ ಈ ಕ್ರಾಂತಿ ಸಾಕ್ಷಿ. ಹೀಗೆ ಎರಡೂ ಪರಂಪರೆಗಳನ್ನಿಲ್ಲಿ ನೋಡುವುದರ ಜೊತೆಗೆ ಅನೇಕ ಹೊಸ ಕುಲಸ್ಥಲಗಳು ಸೃಷ್ಟಿಯಾಗಿ

ರುವುದನ್ನೂ ಇಲ್ಲಿ ನೋಡುತ್ತೇವೆ. ಈ ಎಲ್ಲ ಅಂಶಗಳು ಮೀಮಾಂಸಾ ಜಿಜ್ಞಾಸುಗಳ ದೃಷ್ಟಿಯಿಂದ ಬಹುಮಹತ್ವದವುಗಳಾಗಿರುತ್ತವೆ.

ಅಂಗಸ್ಥಲ ಹಾಗೂ ಲಿಂಗಸ್ಥಲಗಳ ಕುಲಸ್ಥಲಗಳ ವಿಶ್ಲೇಷಣೆಯನ್ನು ಮಾಡುವಾಗ ಅವಶ್ಯವಿದ್ದಲ್ಲಿ ನವೀನ ಕುಲಸ್ಥಲಗಳ ಸೃಷ್ಟಿಯನ್ನು ನಾವು ನೋಡುತ್ತೇವೆ. ಉದಾಹರಣೆಗೆ 'ಭಕ್ತ ಸಂಪುಟ'ವನ್ನು ತೆಗೆದುಕೊಳ್ಳೋಣ. ಅದರಲ್ಲಿಯ ಪೂರ್ವಭಾಗದಲ್ಲಿ 'ಪಿಂಡಸ್ಥಲ' ಹಾಗೂ 'ಪಿಂಡ ಜ್ಞಾನಸ್ಥಲ'ಗಳ ಮಧ್ಯದಲ್ಲಿ 'ಶಿವಶಕ್ತಿ ಮತ್ತು ವಸ್ತುತ್ರಯ'ವೆಂಬ ನವೀನ ಕುಲಸ್ಥಲವನ್ನು ನಾವು ಕಾಣುತ್ತೇವೆ. ಇನ್ನು 'ಮಾಹೇಶ್ವರ ಸಂಪುಟ'ದಲ್ಲಿಯೂ ಕೂಡ ಇಂಥ ಹೊಸ ಕುಲಸ್ಥಲವನ್ನು ಕಾಣುತ್ತೇವೆ. 'ಪರಕಾಯ ಸ್ಥಲ' ಹಾಗೂ 'ಧರ್ಮಾಚಾರ ಸ್ಥಲ'ಗಳ ಮಧ್ಯದಲ್ಲಿ 'ಪರಾಪ್ರಕೃತಿ–ಪರಕಾಯ'ವೆಂಬುದನ್ನು ನೋಡುತ್ತೇವೆ. ಕೊನೆಗೆ ಅನುಬಂಧದ ಬಂಧವೂ ಉಂಟು. ಅನುಬಂಧದಲ್ಲಿ ಪೂರ್ವದ ಕುಲಸ್ಥಲಗಳಲ್ಲಿ ಬರುವ ದಾರ್ಶನಿಕ ದೃಷ್ಟಿಯಿಂದ ಕೆಲವು ಮಹತ್ವದ ವಿಚಾರಗಳನ್ನು ವಿವರಿಸಲಾಗಿರುತ್ತದೆ. ಇದಲ್ಲದೆ ಅನ್ಯದರ್ಶನಗಳ ಕೂಡ ತುಲನೆ ಮಾಡಲಾಗಿರುವುದು. 'ಭಕ್ತ ಸಂಪುಟ'ದಲ್ಲಿ ಬರುವ 'ದಾನ' ಇಲ್ಲವೆ 'ಮಾಟ'ದ ವಿಚಾರವನ್ನು ಭಗವದ್ಗೀತೆಯಲ್ಲಿಯ ಕರ್ಮಯೋಗದೊಡನೆ ತುಲನೆ ಮಾಡಲಾಗಿದೆ. ಗೀತೆಯ 'ಕರ್ಮ ಸಮರ್ಪಣ'ವು ಭಾರತೀಯ ವೇದಯೋಗದ ಪರಮ ಫಲವೆಂದು ತಿಳಿಯಲಾಗಿದೆ. ಅದು ಅದ್ವೈತಯೋಗ ವಿಚಾರವನ್ನು ತೋರಿಸುವುದೆಂಬುದನ್ನು ತೋರಿಸಿ ಭಕ್ತಸ್ಥಲದಲ್ಲಿ 'ಮಾಟ'ದ ವಿಚಾರವು ಒಂದು ಹೆಜ್ಜೆ, ಮುಂದೆ ಹೋಗಿದೆ ಯೆಂಬುದನ್ನು ತೋರಿಸಿದ್ದಾರೆ. ಅದರ ಹೆಸರು 'ಸಹಜ ದಾನ'. ಈ ವಿಚಾರವನ್ನು ಪಂ. ವೈ. ನಾಗೇಶ ಶಾಸ್ತ್ರಿಯವರು ಶಿವಯೋಗವೆಂಬ ಗ್ರಂಥದಲ್ಲಿ ಮನೋಹರವಾಗಿ ವಿವರಿಸಿದ್ದಾರೆ ಇವರಕಿಂತ ಪೂರ್ವದಲ್ಲಿ. ಹೀಗೆ ಜೀವನ ಸಿದ್ಧಾಂತವು ಒಂದು ಮಹತ್ವದ ಗ್ರಂಥಶ್ರೇಣಿ.

ಭಕ್ತ ಸಂಪುಟ: ಪುಟಗಳು ೮೭೨. ಬೆಲೆ ರೂ. ೧೦–೫೦

ಶಾಸ್ತ್ರ ವಿವರಣಾ ಪದ್ಧತಿಯನ್ನು ಕುರಿತು ವಿಚಾರವೊಂದನ್ನು ಪ್ರಾಜ್ಞರ ಮುಂದಿಟ್ಟಿದ್ದಾರೆ ಗ್ರಂಥಕರ್ತರು. ಅದನ್ನವರು ಬ್ರಹ್ಮಸೂತ್ರ ಭಾಷ್ಯ ಹಾಗೂ ಷಟಸ್ಥಲ ಸಿದ್ಧಾಂತಗಳಲ್ಲಿರುವುದನ್ನು ಎತ್ತಿ ತೋರಿಸಲು ಆರಂಭದಲ್ಲಿ ಕೈಗೆತ್ತಿಕೊಂಡು ಹೀಗೆ ಹೇಳುತ್ತಾರೆ: "ಮುಮ್ಮೊದಲು ಬ್ರಹ್ಮಜಿಜ್ಞಾಸೆ ವೇದಾಂತ"ದ ವಿಧಾನವಾಗಿದೆ. ಆದರೆ ಷಟ್‌ಸ್ಥಲವನ್ನು ನೋಡಿದರೆ "ಪಿಂಡಸ್ಥಲ"ದಿಂದದು ಪ್ರಾರಂಭವಾಗುತ್ತದೆ. ಅದೇ "ಜೀವ ಜಿಜ್ಞಾಸೆ". ಇವೆರಡನ್ನೂ ಅರಿತು ವಿಶ್ಲೇಷಿಸಿ ತೋರಿಸುವುದರಿಂದ ತತ್ತ್ವ ಶಾಸ್ತ್ರವು ವಿಮರ್ಶಾತ್ಮಕ (reflective) ಸಾಮರ್ಥ್ಯವುಳ್ಳದೆಂದು ಗೊತ್ತಾಗುತ್ತದೆ.

ಇದೇ ವಿಚಾರವನ್ನು ಪಂ. ಬಸವರಾಜ ಶಾಸ್ತ್ರಿಯವರು ಹತ್ತಾರು ವರುಷಗಳ ಹಿಂದೆ ಮನಂಬುಗುವ ರೀತಿಯಲ್ಲಿ ಹೇಳಿರುವುದನ್ನು ನಾನಿಲ್ಲಿ ಜ್ಞಾಪಿಸಿಕೊಳ್ಳುತ್ತೇನೆ.

ಭಕ್ತ ಸಂಪುಟದಲ್ಲಿ 'ಪಿಂಡ'ದ ವಿಚಾರವು ಬರುವಂತೆ 'ಸರ್ವಶೂನ್ಯ ನಿರಾಲಂಬ' ವಸ್ತುವಿನ ವಿಚಾರವೂ ಬರುತ್ತದೆ. 'ಪಿಂಡ' ಸ್ಥಲ ವಿವರಣೆಯು ಸಿದ್ಧಾಂತ ಶಿಖಾಮಣಿ ಮತ್ತು ವಚನಶಾಸ್ತ್ರಗಳಲ್ಲಿ ಭಿನ್ನಭಿನ್ನವಾದ ಸೈದ್ಧಾಂತಿಕ ನಿಲುವನ್ನು ತೋರಿಸುತ್ತದೆ. ಮೊದಲನೆಯ ಗ್ರಂಥದ ಪ್ರಕಾರ ಪರಶಿವನು 'ಪ್ರಪ್ರಥಮ ಕಾರಣ'ವಾಗಿದ್ದರೆ, ಎರಡನೆಯದರ ಪ್ರಕಾರ ಪರಶಿವವೆಂಬುದು 'ಅಂತರ್ಯಾಮಿ ವಸ್ತು' ವಾಗಿದೆ. ಮೊದಲನೆಯದು ತತ್ವಸಿದ್ಧಾಂತ ದೃಷ್ಟಿಯುಳ್ಳುದಾಗಿದ್ದರೆ ಎರಡನೆಯದು ಅನುಭಾವ ದೃಷ್ಟಿಯುಳ್ಳುದಾಗಿದೆ. ಹೀಗೆ ದ್ವಿವಿಧ ಪದ್ಧತಿಗಳಿಲ್ಲಿ ಕಂಡುಬರುತ್ತವೆ. ಹೀಗೆ ವಿಚಾರ ಮಾಡಲು ಈ ಸಂಪುಟವು ಎರಡೂ ಬಗೆಯ ಸಮುಚ್ಚಯ ಬಳಸಿಕೊಂಡ ಕಾರಣ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತದೆ.

ಲೇಖಕರು ಸಿದ್ಧಾಂತ ಶಿಖಾಮಣಿಯನ್ನು ಅನುಸರಿಸಿದ್ದರಿಂದ ಇಲ್ಲಿ ಪ್ರಾಣನ ಅನುಭಾವ ಮಾರ್ಗವನ್ನು ನಿರೂಪಿಸಲಾಗಿದೆ. ಅದಕ್ಕೆಂತಲೇ ಗುರು, ಲಿಂಗ, ರುದ್ರಾಕ್ಷ, ಭಸ್ಮ ಮತ್ತು ಮಂತ್ರಗಳ ವಿಚಾರದ ನಂತರ ಪುರುಷಾರ್ಥಗಳಾದ ಚತುರ್ವಿಧ ಸಾರಾಯದ ಪ್ರತಿಪಾದನೆ. ಕೊನೆಗೆ "ಪರಮಸಾಧನ-ಸಾಧ್ಯ"ವೆಂಬ ಸ್ಥಲವು ವಿವರಿಸಲ್ಪಟ್ಟಿದೆ. ಹೀಗೆ ಅಂಗಸ್ಥಲದ ಕುಲಸ್ಥಲಗಳ ವಿವರಣಾತ್ಮಕವಾದ ಸಂಪತ್ತು ಇಲ್ಲಿದೆ. ಆಚಾರ್ಯರ ಆಳವಾದ ಹಾಗೂ ವಿಶಾಲವಾದ ಶೈವಶಾಸ್ತ್ರ ಹಾಗೂ ಉಪನಿಷತ್ ಸಾಹಿತ್ಯ ಕೃಷಿಯನ್ನಿಲ್ಲಿ ಕಾಣುತ್ತೇವೆ.

ಉತ್ತರಭಾಗದಲ್ಲಿ "ತತ್ ಪದವಾಚ್ಯವಾದ ಲಿಂಗಸ್ಥಲದ ವಿಚಾರವನ್ನು ಮಾಡಲಾಗುವುದು" ಎಂದು ಆಚಾರ್ಯರು ಪ್ರಾರಂಭಿಸುತ್ತಾರೆ. ಏಕೋತ್ತರ ಶತಸ್ಥಲವೆಂಬ ವಚನಾಗಮ ಗ್ರಂಥವಾಗಲಿ, ಸಿದ್ಧಾಂತ ಶಿಖಾಮಣಿಯೆಂಬ ಆಗಮಸಾರವಾಗಲಿ ಲಿಂಗಸ್ಥಲದಲ್ಲಿ ಒಟ್ಟಿಗೆ ಒಂಭತ್ತು ಸ್ಥಲಗಳನ್ನು ತಿಳಿಸುತ್ತದೆ. ಅಲ್ಲಿ ವಿವರಣೆ ಕೂಡ ಒಂದೇ ಬಗೆಯಾಗಿರುತ್ತದೆ. ಆದರೆ ಆಚಾರ್ಯ ಜಚನಿ ಅವರು ಇಲ್ಲಿ ಅಂದರೆ "ಉತ್ತರ ಭಾಗ"ದಲ್ಲಿ "ಸರ್ವಶೂನ್ಯ ನಿರಾಲಂಬ" ತತ್ವದ ವಿಚಾರದಿಂದ ಲಿಂಗಸ್ಥಲದ ವಿಚಾರವನ್ನು ಪ್ರಾರಂಭಿಸಿರುವುದು ಗಮನಾರ್ಹವಾದ ಅಂಶವಾಗಿರುತ್ತದೆ. ದರ್ಶನದ ದೃಷ್ಟಿಯಿಂದ ಅತಿ ಮಹತ್ವದ ವಿಚಾರವಾಗಿರುತ್ತದೆ. ಇದು ವಿಶ್ಲೇಷಣಾತ್ಮಕ ಶಕ್ತಿಯ ದ್ಯೋತಕವಾಗಿದೆ. ಈ ಗುರುತರ ಕಾರ್ಯವನ್ನು ಮರಿತೋಂಟದಾರ್ಯರಂಥ ಭಾಷ್ಯಕಾರರೂ ಸಹಿತ ಮಾಡಿರುವುದಿಲ್ಲ. ಸಗುಣಬ್ರಹ್ಮ ಲಿಂಗವೆಂದು ಹೇಳುವವರ ಜೊತೆಗೆ ನಿರ್ಗುಣಬ್ರಹ್ಮಲಿಂಗವೆಂದು ಹೇಳುವುದು ಹೊಸಬೆಳಕನ್ನು ಚೆಲ್ಲಿದಂತಾಗಿದೆ. ಯಾಕೆಂದರೆ ಈ ಅಂಶವು ರಾಮಾನುಜರ ವಿಶಿಷ್ಟಾದ್ವೈತದಿಂದ ಶಕ್ತಿ ವಿಶಿಷ್ಟಾದ್ವೈತವು ಭಿನ್ನವಾಗಿರುವುದಿಲ್ಲ. ಹಾಗೂ ಇದು ಕೇವಲ ಅದರ ಪ್ರತಿಕೃತಿ ಎಂಬ ವಾದಸರಣಿ ಸಾಧುವಲ್ಲವೆಂಬುದನ್ನು ಸಿದ್ಧಗೊಳಿಸುತ್ತದೆ. ಅದೇ ರೀತಿ ಶಿವಾದ್ವೈತದಲ್ಲಿಯ ನಿರ್ಗುಣಬ್ರಹ್ಮವು ಶಂಕರರ ನಿರ್ಗುಣ

ಬ್ರಹ್ಮವಲ್ಲವೆಂದೂ ಸಿದ್ಧಿಸುತ್ತದೆ. ಹೀಗೆ ಈ ನವೀನ ಸ್ಥಲವು ದರ್ಶನದ ಅನೇಕ ತೌಲನಿಕ ಅಂಶಗಳಿಗೆ ಅವಕಾಶವನ್ನೊದಗಿಸಿ ಕೊಡುತ್ತದೆ.

ಶೂನ್ಯವು ಕಾರಣತತ್ತ್ವವಾಗಿ ಜಂಗಮವೂ, ಸೂಕ್ಷ್ಮತತ್ತ್ವವಾಗಿ ಲಿಂಗವೂ, ಸ್ಥೂಲ ತತ್ತ್ವವಾಗಿ ಗುರುವೂ ಆಗಿ ಜಗದುದ್ಧಾರವನ್ನು ಎರಡು ಅರ್ಥದಲ್ಲಿ ಮಾಡುವ ವಿಚಾರ ವನ್ನಿಲ್ಲಿ ಮುಂದಿಟ್ಟಿರುವುದನ್ನು ನೋಡುತ್ತೇವೆ:

೧. ಸಮಾಜ ಸಮಯ (Social religion)

೨. ವ್ಯಕ್ತಿಸಮಯ (Individual religion)

ಇದು ಸುಂದರ ಸಮನ್ವಯವು. ಹೀಗೆ ಭಕ್ತಸಂಪುಟವು ಕೆಲವು ಅತಿಮಹತ್ವದ ವಿಚಾರ ಗಳಿಗೆ ಎಡೆಕೊಟ್ಟಿರುವುದನ್ನು ಮರೆಯುವಂತಿಲ್ಲ. ಇಷ್ಟು ಸಮೃದ್ಧ ರೀತಿಯಿಂದ ಮತ್ತು ಆಳವಾದ ರೀತಿಯಿಂದ ಎರಡೂ ಬಗೆಯ ಸಮುಚ್ಚಯ ಶಾಸ್ತ್ರ ಪದ್ಧತಿಗಳನ್ನು ಬಳಸಿ ಜನತೆಯ ಮುಂದಿಟ್ಟ ಪ್ರಪ್ರಥಮ ಗ್ರಂಥವಿದಾಗಿದೆ.

ಇನ್ನೊಂದು ವಿಚಾರವನ್ನು ನಾನಿಲ್ಲಿ ಅಪೇಕ್ಷಿಸಿದರೆ ಅಪ್ರಸ್ತುತವಾಗಲಾರದು. ಭಕ್ತಸಂಪುಟವು ಪ್ರಥಮಸ್ಥಲ ಇಲ್ಲವೆ ಆಶ್ರಮವಾಗಿರುವುದನ್ನೂ,ಷಡಂಗಯೋಗದಲ್ಲಿಯ ಪ್ರಥಮಾಂಗವಾಗಿರುವುದನ್ನೂ, ಪದಾರ್ಥವೃಷ್ಟಿಯಿಂದ ಪೃಥ್ವೀತತ್ತ್ವ ವಿವರಣಾಶಾಸ್ತ್ರ ವಾಗಿರುವುದನ್ನೂ, ಷಡ್ವಿಧ ಭಕ್ತಿಯಲ್ಲಿ ಶ್ರದ್ಧಾಭಕ್ತಿ ಶಾಸ್ತ್ರವಾದುದನ್ನೂ, ಷಡ್ವಿಧ ಜ್ಞಾನಗಳಲ್ಲಿ ಇದು ಮತಿಜ್ಞಾನ ಪ್ರತಿಪಾದಕವಾಗಿರುವುದನ್ನೂ ಸರಿಯಾಗಿ ಅರಿತು ಕೊಳ್ಳುವ ಅವಶ್ಯಕತೆ ನವಯುಗ ಪ್ರಜ್ಞೆಗೆ ಅವಶ್ಯವಾಗಿರುವದರಿಂದ ಆ ಕೊರತೆಯನ್ನು ಹೋಗಲಾಡಿಸುವ ಅವಶ್ಯಕತೆ ಹೆಚ್ಚುತ್ತಿರುವ ಈ ಕಾಲದಲ್ಲಿ ಇಂಥ ಒಂದು ವಿವರಣಾ-ವಕಾಶವು ಇಲ್ಲಿ ಇರುತ್ತದೆಯೆಂದು ಕಂಡುಬರುತ್ತದೆ.

ಮಾಹೇಶ್ವರ ಸಂಪುಟ : ಪುಟಗಳು ೭೫೨, ಬೆಲೆ ರೂ. ೧೨–೦೦

ಘಟಸ್ಥಲಗಳ ಪುನರ್ವಿಮರ್ಶೆ, ಪೂರ್ಣವಿಮರ್ಶೆಗಳ ಅವಶ್ಯಕತೆಯನ್ನರಿತು ಹಳೆಯಕಾಲದ ಬರವಣಿಗೆಗಳಲ್ಲಿರುವ ಕೊರತೆಯನ್ನು ಹೋಗಲಾಡಿಸುವದಕ್ಕೋಸುಗ ಮತ್ತು ಹೊಸದೃಷ್ಟಿಯನ್ನು ಕೊಡುವದಕ್ಕೋಸುಗೆ (ಪ್ರ. ೯) ಈ ಗ್ರಂಥಗಳ ರಚನೆ-ಯಾಗಿರುವುದೆಂದು ಬರವಣಿಗೆಯ ಉದ್ದೇಶವನ್ನು ಗ್ರಂಥಕರ್ತರು ವಿವರಿಸಿದ್ದಾರೆ ಅದ್ದ ರಿಂದ ಇಲ್ಲಿ ನವೀನ ದೃಷ್ಟಿ ಹಾಗೂ ಅದಕ್ಕೆ ತಕ್ಕಂತೆ ಸೃಷ್ಟಿಯನ್ನು ನೋಡಬಯಸು ವುದು ಸ್ವಾಭಾವಿಕವೇ ಆಗಿರುತ್ತದೆ. ಯಾಕಂದರೆ ಆಗಮದ ಶಾಸನವು ದೃಷ್ಟಿಯಂತೆ ಸೃಷ್ಟಿ ಎಂದಿದೆ.

ಈ ಸಂಪುಟವು ದ್ವಿತಿಯ ಸ್ಥಲವನ್ನು ವಿವರಿಸುವ ಶಾಸ್ತ್ರವಾಗಿರುತ್ತದೆ. ಈ ಗ್ರಂಥದ ಪರಿವಿಡಿಯನ್ನು ತೆರೆದು ನೋಡಿದಾಗ ಪರಂಪರಾಗತವಾದ ಅಂಗಸ್ಥಲ

ಹಾಗೂ ಲಿಂಗಸ್ಥಲಗಳನ್ನು ಬಿಟ್ಟು ಹದಿನೆಂಟು ಸ್ಥಲಗಳಿರುವವಲ್ಲದೆ ಒಂದು ಸ್ಥಲ ಹೆಚ್ಚಿಗುಂಟು. ಸ್ಥಲವೆಂದರೆ ಪ್ರಕರಣ, ಸಂಧಿ ಎಂಬ ಅರ್ಥವಲ್ಲಿ ವೀರಶೈವರು ಬಳಸುವರು. ಅಂಗಸ್ಥಲ ಮತ್ತು ಲಿಂಗಸ್ಥಲಗಳಲ್ಲಿ ಬಂದ ಅತಿ ಮಹತ್ವದ ಕೆಲವು ವಿಷಯಗಳನ್ನು ವಿವರಿಸಲಾಗಿದೆ. ಇವರಿಂದ ಎರಡೂ ವಿಧದ ಷಟ್‌ಸ್ಥಲ ವಿಚಾರಗಳನ್ನು ಅರಿತುಕೊಳ್ಳಲು ಸಾಕಷ್ಟು ನೆರವಾಗುವುದು. ಷಟ್‌ಸ್ಥಲದಲ್ಲಿ ಬರುವ ವಿಚಾರಗಳು ಅದೆಷ್ಟು ಪುರಾತನವಾದವು ಗಳೆಂಬುದನ್ನು ಹಾಗೂ ಅವುಗಳ ಮಹತಿಯನ್ನು ಇಲ್ಲಿ ಕಂಡುಕೊಳ್ಳಬೇಕಾಗಿದೆ.

ಸಿದ್ಧಾಂತ ಶಿಖಾಮಣಿ, ಏಕೋತ್ತರ ಶತಸ್ಥಲ, ಕೈವಲ್ಯಸಾರಗಳು 'ಮಾಹೇಶ್ವರ ಪ್ರಶಂಗಸ್ಥಲ' ಎಂಬುದನ್ನು ವಿವರಿಸುವಲ್ಲಿ ಒಂದೇ ನಿಲವನ್ನು ತಳೆದಿರುತ್ತವೆ. ಆದರೆ ಜೀವನ ಸಿದ್ಧಾಂತವು ಈ ಪರಂಪರಾಗತ ವಿಚಾರವನ್ನು ಪ್ರತಿಪಾದಿಸುವದರ ಜೊತೆಗೆ ವಿಶಿಷ್ಟವಾದ ಅರ್ಥವನ್ನು ಒದಗಿಸುತ್ತದೆಯೆಂಬುದು ಗಮನಾರ್ಹ ಸಂಗತಿಯಾಗಿರು–ತ್ತದೆ. ಮಹೇಶ್ವರನ ಆರಾಧಕ ಇಲ್ಲವೆ ಅನುಯಾಯಿ ಮಾಹೇಶ್ವರ ಎಂಬುವನ್ನು ತಿಳಿಸಿ ಅವರಲ್ಲಿ ಭಿನ್ನಭಾವವಿಲ್ಲವೆಂಬುದನ್ನು ಸಿದ್ಧಿಸಿದ್ದಾರೆ. ಅವುಗಳು ಸಮಾನಾರ್ಥ ಕೊಡುವಂಥವುಗಳಾಗಿರುತ್ತವೆಯೆಂದು ತೋರಿಸಿದ್ದಾರೆ. ಇದು ವೀರಶೈವ ಶಾಸ್ತ್ರಸಮ್ಮತ ವಿಚಾರವೇ ಆಗಿರುತ್ತದೆ. ಇದಕ್ಕೆ ಅನುಗುಣವಾಗಿ ಮಹೇಶ್ವರನ ಲಕ್ಷಣಗಳನ್ನು ಹೇಳಿ ಮಾಹೇಶ್ವರನ ಆಚರಣೆಯ ವಿವರಣೆ ಕೊಡಲಾಗಿದೆ.

'ಮಹಾದೇವ'ನೆಂಬ ಶಬ್ದದಿಂದ ಮೇಲೆ ಬೇರೆ ಶಬ್ದವಿಲ್ಲವೆಂಬ ಬಸವಣ್ಣನವರ ವಿಚಾರವೂ, 'ಸರ್ವಾಧಿಕ ರುದ್ರ'ನೆಂಬ ಶ್ವೇತಾಶ್ವತರೋಪನಿಷದ್ ವಿಚಾರವೂ ಈ ಸ್ಥಲದ ಪ್ರಥಮ ಲಕ್ಷಣವಾಗಿರುತ್ತದೆ. ಇದು ಅದ್ವೈತ ಬೋಧಕ ಶಾಸ್ತ್ರವು. ಇಲ್ಲಿಯ ಭಾವವು ಗಣಾಚಾರದ ವೀರಭಾವವಾಗಿರುತ್ತದೆ. ಆದ್ದರಿಂದಲೇ ಇದಕ್ಕೆ ವೀರಭದ್ರಾಚಾರವೆಂದು ಕರೆದಂತೆ ತೋರುತ್ತದೆ. ಮಾಹೇಶ್ವರನೇ ಪರಾಪರ ಮುಕ್ತಿದಾಯಕ. ಈ ಎಲ್ಲ ವಿಚಾರಗಳಲ್ಲಿ ಪ್ರೀತಿಯುಳ್ಳವನೇ ಮಾಹೇಶ್ವರ. ಸಿದ್ಧಾಂತ ಶಿಖಾಮಣಿ, ಏಕೋತ್ತರ ಶತಸ್ಥಲ, ಕೈವಲ್ಯ ಸಾರಗಳು ಮೇಲಿನ ವಿಚಾರಗಳನ್ನು ಬೋಧಿಸುವಂತೆ ಜೀವನ ಸಿದ್ಧಾಂತವೂ ಬೋಧಿಸುತ್ತದೆ. ಇದರ ವೈಶಿಷ್ಟ್ಯವೆಂದರೆ 'ಪ್ರಸಂಶ' ಪದದಲ್ಲಿ ಸ್ತೋತ್ರ ಹಾಗೂ ಜಪಗಳವಿತಿದ್ದು ಅವುಗಳ ಮನೋವೈಜ್ಞಾನಿಕಾಂಶವನ್ನು ಎತ್ತಿ ತೋರಿಸಿದ್ದಾಗಿರುತ್ತದೆ.

'ಪ್ರಶಂಸೆ'ಯೇ ನಿಷ್ಠೆಯಾಗಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮಗಳ ರೂಪ ತಾಳುವುದರಲ್ಲಿ ಪರ್ಯವಸಾನವಾಗುವುದರಲ್ಲಿ ಸಾರ್ಥಕ್ಯವನ್ನು ಪಡೆದುದನ್ನೇ ನೋಡುತ್ತೇವೆ. ಇದು ಈ ಲಿಂಗಾಂಗಸ್ಥಲಗಳ ಸಕೀಲ. ನಿಷ್ಠೆಯ ಇನ್ನೊಂದು ಪರಿಣಾಮವೇನಂದರೆ ನಿಷ್ಠವಸ್ತುವಿಗನ್ಯವಾದ ಆಚಾರ, ವಿಚಾರ, ಕ್ರೀಗಳ 'ನಿರಸನ'. ಒಂದು ಎರಡು ಮುಖಗಳಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ಈ ಕೃತಿಯು ತೋರಿಸುತ್ತದೆ: ಒಂದೆಡೆ ಕೆಲವು ಭಾವಗಳ ಅಭಾವ ಸಂಭವಿಸಿದರೆ ಆ ತೆರವಾದ ಸ್ಥಲದಲ್ಲಿ ನವ್ಯ, ಭವ್ಯ ಭಾವಗಳ ಆವಿರ್ಭಾವವಾಗುವುದು. ಇದನ್ನು ಎತ್ತಿ ತೋರಿಸುವಲ್ಲಿ ಆಚಾರ್ಯರು ಸುದೀರ್ಘವಾದ ನಿರೂ

ಪಣೆಯನ್ನು ಮಾಡಿದ್ದಾರೆ. 'ತ್ಯಾಗಾಂಗ' ಪದಪ್ರಯೋಗದಲ್ಲಿಯ ಕ್ಲಿಷ್ಟವಾದ ಈ ಶಾಸ್ತ್ರ ವಿವರಣೆಯನ್ನು ಸುಲಭಗೊಳಿಸಿ ಪ್ರಪಂಚದ ಮುಂದೆ ಇಟ್ಟಿದ್ದಾರೆ. ಈ ಕೃತಿಗಳಿಂದ ಏಕೋತ್ತರ ಶತಸ್ಥಲವು ಬಹುಸೂತ್ರ ರೂಪದಲ್ಲಿರುವುದು ತಿಳಿದು ಬರುತ್ತದೆ.

ಕ್ರಿಯಾಗಮ, ಭಾವಾಗಮ ಮತ್ತು ಜ್ಞಾನಾಗಮಗಳು ಇಲ್ಲಿ ಬರುವ ಬಹು ಮಹತ್ವದ ಪ್ರಮಾಣಶಾಸ್ತ್ರ ಪದಗಳಾಗಿರುತ್ತವೆ. ನಿಗಮಾಗಮಗಳಲ್ಲಿ ಬೋಧವಾದ ಈ ಪುರಾತನ ಪ್ರಮಾಣಶಾಸ್ತ್ರದ ಉಪಯೋಗವನ್ನು ಏಕೋತ್ತರ ಶತಸ್ಥಲವೂ, ಅದರಂತೆ ವಚನಾಗಮವೂ ಮಾಡಿಕೊಂಡಿವೆ. 'ಪರಂಪರೆ'ಯ ದ್ವಿವಿಧ ರೂಪಗಳ ಸರ್ವೋತ್ಕೃಷ್ಟ-ವಾದ ಬಳಕೆಯಿಂದ ಅವರ ಅರ್ಥದಲ್ಲಿ ನವೀನವಾದ ಅರ್ಥವು ಉಂಟಾಗಿರುತ್ತದೆ. ನವ್ಯ ನ್ಯಾಯಕ್ಕೆ ಬುನಾದಿಯಿರುವುದನ್ನು ಗುರುತಿಸಬಹುದಾಗಿದೆ ಇಲ್ಲಿಯ ವಿವರಣೆಯಿಂದ. ಇದನ್ನು ೩೪೧ ರಿಂದ ೩೯೮ ಪುಟಗಳಲ್ಲಿ ನೋಡಬಹುದಾಗಿದೆ. ಈ ಮೂರು ಪದಗಳಲ್ಲಿ ಬರುವ ಕ್ರೀ, ಭಾವ ಹಾಗೂ ಜ್ಞಾನಗಳ ವಿಶ್ಲೇಷಣಾತ್ಮಕ ವಿವರಣೆಯನ್ನೂ ಒದಗಿಸಿದ್ದಾರೆ ಗ್ರಂಥಕರ್ತರು.

ಇಂದ್ರಿಯ ಹಸುಗೆ ಮತ್ತು ಕಾಯದ ಹಸುಗೆಯನ್ನು ಇಲ್ಲಿ ಚೆನ್ನಾಗಿ ಮಾಡಿದ್ದಾರೆ. ವೀರಶೈವರ ವೈಶಿಷ್ಟ್ಯವು ಇಂದ್ರಿಯಗಳು ಪ್ರಾಣಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆಯೆಂಬುದನ್ನು ತಿಳಿಸುವುದರಲ್ಲಿ ಕಂಡು ಬರುತ್ತದೆ. ಇಂಥದೇ ವಿಚಾರವನ್ನು ನಾವು ನ್ಯಾಯವೈಶೇಷಿಕ ದರ್ಶನದಲ್ಲಿ ನೋಡಬಹುದಾಗಿದೆ. ಇದಕ್ಕೂ ಪೂರ್ವದಲ್ಲಿ ಶತಪಥ ಬ್ರಾಹ್ಮಣದ ರುದ್ರಶೈವದಲ್ಲಿ ನೋಡುತ್ತೇವೆ. ಅಲ್ಲಿ ಏಕಾದಶ ರುದ್ರರೇ ಏಕಾದಶ ವಾಯುಗಳು. ವಾಯುವಿನ ಈ ಹಸುಗೆಯು ವೀರಶೈವ ಶಾಸ್ತ್ರಜಿಜ್ಞಾಸುಗಳಿಗೆ ಉತ್ತಮವಾದ ಮಾರ್ಗದರ್ಶನವಾಗಿರುತ್ತದೆ. ಇದೇ ರೀತಿ ಕಾಯದ ಹಸುಗೆ ಇಲ್ಲಿದೆ. ಇದನ್ನು ೪೬೮ ರಿಂದ ೪೭೭ ಪುಟಗಳಲ್ಲಿ ಮಾಡಲಾಗಿದೆ. ಈ ಕಾಯದ ಹಸುಗೆಯನ್ನು 'ತಿಪಿಟಕ' ಗಳಲ್ಲಿಯ ಕಾಯದ ಹಸುಗೆಯೊಡನೆ ಹೋಲಿಸಿ ನೋಡಬಹುದಾಗಿದೆ. ಈ ಎಲ್ಲ ಕಾರ್ಯಕ್ಕೆ ಈ ಗ್ರಂಥವು ಮಾರ್ಗದರ್ಶಕವಾಗಿ ಅದಕ್ಕೆ ಸಾಮಗ್ರಿಯನ್ನು ಒದಗಿಸಿದೆ.

ಆಸ್ತಿಕ ದರ್ಶನಗಳು ಬಳಸುವ ಅಂತಃಕರಣ ಪ್ರಕೃತಿ. ಮಾಯೆ ಮುಂತಾದ ಪಾರಿಭಾಷಿಕ ಪದಗಳನ್ನು ಹೇಗೆ ವೀರಶೈವರು ಬಳಸಿದ್ದಾರೆಂಬುದನ್ನು ಇಲ್ಲಿ ನೋಡಬಹುದಾಗಿದೆ. ಪಾರಿಭಾಷಿಕ ಪದಗಳ ಬಳಕೆಯು ಕೂಡ ಒಂದು ಮೋಹವಿದ್ದಂತೆ. ಆದ್ದರಿಂದ ಈ ಬಳಕೆಯಿಂದ ತೊಂದರೆ ಸಂಭವಿಸಬಾರದಿದ್ದರೆ ಇಂಥ ಪ್ರಬುದ್ಧಕೃತಿ-ಗಳನ್ನೋದಬೇಕು. ಚಿನ್ನಿರೂಪಣವೆಂಬ ಸ್ಥಲದಲ್ಲಿ 'ಚಿತ್'ವೆಂಬ ಪದವನ್ನು ವಿವರಿಸುತ್ತ : ಪರಮಾತ್ಮ – ಪರಾಶಕ್ತಿ – ಪರಂಜ್ಯೋತಿ – ಈ ಮೂರರ ಒಬ್ಬುಳಿಯೇ ಚಿತ್. ಅದು ನಿತ್ಯ ಪರಿಪೂರ್ಣಾಖಂಡ ವಸ್ತು...ಎಂದು ಹೇಳಿರುವುದು ಗಂಭೀರವಾದ ಆಲೋಚನೆಗೆ ಎಡೆಮಾಡಿಕೊಟ್ಟಿರುತ್ತದೆ. ಈ ಗ್ರಂಥದಲ್ಲಿ ಇನ್ನೊಂದು ಮಹತ್ವದ ನವೀನ ವಿಧಾನವನ್ನು ನೋಡುತ್ತೇವೆ. ಮಾಹೇಶ್ವರನು ಜಲಾಂಗನು. ಕಾರಣ 'ಜಲಾಂಗ'ದ ಹಸುಗೆಯನ್ನು ಆಯುರ್ವೇದ ಶಾಸ್ತ್ರದ ಬೆಳಕಿನಲ್ಲಿ ಮಾಡಿದ್ದು ಕಂಡು

ಬರುತ್ತದೆ. ಇದು ಆಧುನಿಕ ತತ್ವಜ್ಞಾನಿಗಳ ರೀತಿಯು ಮಾದರಿಯಾಗಿರುತ್ತದೆಯೆಂದು ಹೇಳಬಹುದು. ಹೀಗೆ ನವೀನವಾದ ಗಮನಾರ್ಹ ಹಾಗೂ ಸ್ವಾಗತಾರ್ಹ ಪ್ರಯೋಗಗಳನ್ನು ಸಿದ್ಧಹಸ್ತಶಾಸ್ತ್ರಜ್ಞರಾದ ಡಾ. ಜಚನಿ ಅವರಲ್ಲಿ ಕಾಣಬಹುದಾಗಿದೆ.

ಆಚಾರ್ಯರು ಜ್ಞಾನವು ದ್ವಿವಿಧವೆಂದು ವಿವರಿಸುತ್ತ: ಒಂದು ವೃತ್ತಿಜ್ಞಾನ, ಇನ್ನೊಂದು ತತ್ವಜ್ಞಾನವೆಂದು ತಿಳಿಸಿದ್ದಾರೆ. ಇದು ಸಾರ್ಥಕವಾದ ಮಾತಾಗಿದೆ. ಆದರೆ ಇದರಿಂದ ಇನ್ನೊಂದು ಪ್ರಶ್ನೆಯು ಉದ್ಭವಿಸುವುದು. ಅದೇನೆಂದರೆ ವೃತ್ತಿ-ಜ್ಞಾನ ಮತ್ತು ಶಬ್ದಜ್ಞಾನಗಳು ಭಾರತೀಯ ದರ್ಶನಗಳಲ್ಲಿ ವಿವರಿಸಿರುವುದಕ್ಕೂ ಏಕೋತ್ತರ ಶತಸ್ಥಲದಲ್ಲಿ ವಿವರಿಸಿರುವುದಕ್ಕೂ ಇರುವ ಅಂತರವೇನು ? ಈ ವಿಚಾರ ಭಾರತೀಯ ಆಸ್ತಿಕ ಮತ್ತು ನಾಸ್ತಿಕ ದರ್ಶನಗಳೆರಡರಲ್ಲಿ ಅನೇಕ ಶತಮಾನಗಳವರೆಗೆ ಚರ್ಚೆಗೆ ಎಡೆಕೊಟ್ಟುದನ್ನು ನೋಡುವಾಗ ವೀರಶೈವರ ನಿಲುವು ಏನೆಂಬುದರ ಆಲೋಚನೆ ಬರುತ್ತದೆ. ಈ ಪ್ರಮಾಣಗಳು ದಾರ್ಶನಿಕ ಮೂಲಭೂತ ತತ್ವವನ್ನು ಹೇಗೆ ಆಧರಿಸಿ ಜನ್ಮವೆತ್ತಿವೆಯೆಂಬುದನ್ನು ಆಚಾರ್ಯರು ಯುವ ಜನಾಂಗಕ್ಕೆ ಗುರುತಿಸಲು ಬಿಟ್ಟುಕೊಟ್ಟಂತಿದೆ. ಈ ಎರಡು ಪ್ರಮಾಣಗಳ ವಿಚಾರವನ್ನು ಮಾಡುವದಕ್ಕೆ ಇಲ್ಲಿ ಹೇರಳವಾದ ಸಾಧನ ಸಲಕರಣೆಗಳುಂಟು. ಹೀಗೆ ಮಾಹೇಶ್ವರ ಸಂಪುಟವು ವಿಷಯಗಳ ಸಮೃದ್ಧವಾದ ಖಣಿಯಾಗಿದೆ.

ಗಾತ್ರದಲ್ಲಿ ಈ ಎರಡು ಕೃತಿಗಳು ಈ ಶ್ರೇಣಿಯಲ್ಲಿ ಬಹುದೊಡ್ಡವಾದವುಗಳು. ಅಂತೆಯೇ ಗುಣದಲ್ಲಿಯೂ ಹಿರಿದಾಗಿರುತ್ತವೆ. ವೀರಶೈವಶಾಸ್ತ್ರವಾದ ಷಟ್‌ಸ್ಥಲದ ಜಿಜ್ಞಾಸುಗಳಿಗೆ ನೂತನ ಹಾಗೂ ಪುರಾತನ ಆಧಾರಗ್ರಂಥಗಳ ಹೇರಳವಾದ ಉಲ್ಲೇಖದಿಂದ ಒಂದು ರೀತಿಯಿಂದ ಮಹದುಪಕಾರ ಈ ಗ್ರಂಥಕರ್ತರಿಂದ ಆಗಿದೆಯೆಂದು ಹೇಳಬೇಕಾಗಿದೆ. ನೂರೊಂದು ಸ್ಥಲಗಳ ಮೇಲೆ ಇಷ್ಟೊಂದು ವಿವರಣಾತ್ಮಕವಾದ ಬೇರೊಂದು ಗ್ರಂಥ ನಮಗೆ ಲಭ್ಯವಿಲ್ಲ. ಈ ಮಹಾನ್ ಕೃತಿಗಳನ್ನು ಕೃತಿಕಾರರು ಕನ್ನಡ ಜನಾಂಗದ ಮುಂದಿಟ್ಟು ಉಪಕಾರ ಮಾಡಿದ್ದಾರೆ. ಈ ಗ್ರಂಥಗಳಲ್ಲಿ ಬರುವ ಅಚ್ಚಿನ ದೋಷಗಳು ಮುಂದಿನ ಮುದ್ರಣದಲ್ಲಿ ಇಲ್ಲವಾದಲ್ಲಿ ಅವುಗಳ ಮೌಲ್ಯ ಇನ್ನೂ ಹೆಚ್ಚುತ್ತದೆ. ವೀರಶೈವ ವಿಶ್ವಕೋಶರೂಪದಲ್ಲಿ ಮೈದಾಳಿನಿಂತ ಇವುಗಳನ್ನು ನಾವೆಲ್ಲ ಹೃತ್ಪೂರ್ವಕ ಸ್ವಾಗತಿಸುತ್ತೇವೆ.

★ ವಿ. ಎಸ್. ಕಂಬಿ

ಸಾಧನೆ : (ಬೆಂಗಳೂರು ವಿಶ್ವವಿದ್ಯಾಲಯದ ತ್ರೈಮಾಸಿಕ). ಪ್ರಧಾನ ಸಂಪಾದಕರು : ಡಾ. ಜಿ. ಎಸ್. ಶಿವರುದ್ರಪ್ಪ; ಪ್ರಕಾಶಕರು : ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ.

ಬೆಂಗಳೂರು ವಿಶ್ವವಿದ್ಯಾಲಯವು ಸ್ಥಾಪಿತವಾಗಿ ಎಂಟು ವರುಷಗಳು ಸಂದಿವೆ. ಇದೀಗ ಮೇಲಿನ ನಿಯತಕಾಲಿಕೆಯನ್ನು ಅದು ಪ್ರಕಟಿಸಲು ಪ್ರಾರಂಭಿಸಿದೆ. ಇದೇ

ಜನವರಿ ತಿಂಗಳು ಹೊರಬಂದಿರುವ ಅದರ ಪ್ರಥಮ ಸಂಚಿಕೆಯ ಸ್ಥೂಲಾವಲೋಕನವನ್ನು ಇಲ್ಲಿ ಕೊಡಲಾಗಿದೆ.

ಒಟ್ಟಿನ ಸುಮಾರು ೨೧೫ ಪುಟಗಳ ಗಾತ್ರದಲ್ಲಿ, ಈ ಸಂಚಿಕೆ ೭ ಕವನಗಳನ್ನೂ, ಸಾಹಿತ್ಯ, ಮಾನವೀಯಕ, ವಿಜ್ಞಾನ ಈ ಮೂರೂ ವಿಭಾಗಗಳಿಗೆ ಸಂಬಂಧಪಟ್ಟ ೧೯ ಲೇಖನಗಳನ್ನೂ, ೨ ಸಾಹಿತ್ಯಕ ಟಿಪ್ಪಣಿಗಳನ್ನೊಳಗೊಂಡ 'ಮಂಥನ' ವಿಭಾಗವನ್ನೂ ಅಳವಡಿಸಿಕೊಂಡಿದೆ. ಮೊದಲ ಪ್ರಕಟಣೆಯಾದದ್ದರಿಂದ ಇಲ್ಲಿಯ ಲೇಖನಗಳನ್ನು ಒಂದು ಯೋಜನೆಗನುಸಾರವಾಗಿಯೇ ಆಯ್ಕೆ ಮಾಡಿದ್ದರೆ ಸಹಜ. ವಿವಿಧ ಅಧ್ಯಯ–ನಾಂಗಗಳ ವ್ಯಾಪಕ-ಪ್ರಾತಿನಿಧ್ಯಕ್ಕೆ ಇಲ್ಲಿ ವಿಶೇಷ ಲಕ್ಷ್ಯ ಪೂರೈಸಿರುವದು ಸ್ಪಷ್ಟವಾಗಿದೆ. ಸಾಹಿತ್ಯ ವಿಭಾಗದಲ್ಲಿ–ಕವನಗಳಲ್ಲದೆ ವಿವರಣಾತ್ಮಕ ವಿಮರ್ಶಾತ್ಮಕ. ಗ್ರಂಥ ಸಮೀಕ್ಷೆ. ಭಾಷಾ ವಿಜ್ಞಾನ ; ಮಾನವೀಯಕದಲ್ಲಿ–ಕಲಾಸಾಂಸ್ಕೃತಿಕ ವಿಜ್ಞಾನ, ಮನೋವಿಜ್ಞಾನ, ಅರ್ಥಶಾಸ್ತ್ರ, ನ್ಯಾಯಶಾಸ್ತ್ರ ; ವೈಜ್ಞಾನಿಕದಲ್ಲಿ–ಭೌತ, ರಸಾಯನ, ಜೀವ ವಿಜ್ಞಾನಗಳು, ವೈದ್ಯ ವಿಜ್ಞಾನ, ಕೃಷಿ ಭೂಗರ್ಭ ವಿಜ್ಞಾನಗಳೂ ಪಾಲುಪಡೆದಿವೆ. ಅನುವಾದಿತ, ಸಂಗ್ರಹಿತ, ಸಂಯುಕ್ತ ಕರ್ತೃತ್ವದ ಲೇಖನಗಳಿಗೂ ವಿಶೇಷವಾದ ಎಡೆ ಇಲ್ಲಿ ದೊರ–ಕಿದೆ. ವಿಷಯಗಳ ಅಳವಡಿಕೆಯಲ್ಲಿ ಸಾಧ್ಯವಾದಷ್ಟು ಹೆಚ್ಚು ಅದ್ಯತನವನ್ನು ಸಾಧಿಸುವ ಗುರಿ ಇಟ್ಟುಕೊಂಡಿರುವದು ಶ್ಲಾಘ್ಯವಾಗಿದೆ.

ಇದರಲ್ಲಿಯ ೭ ಕವನಗಳಲ್ಲಿ ೫ ರ ಸೊಗಸಿಗೆ ಅವುಗಳ ನವ್ಯಶೈಲಿಯ ಸ್ವಾಗತಾರ್ಹ ಮುಖವೇ ಕಾರಣ. ಪ್ರಕೃತಿ ಲೀಲೆಯಲ್ಲಿ ಮುಗ್ಧಮಗುವಿನ ಲೀಲೆಯನ್ನು ಕಾಣುವ ಡಾ|| ಶಿವರುದ್ರಪ್ಪನವರ 'ಒಂದಿರುಳು', ಹೊರಗೆ ಪುಣ್ಯಾಶ್ರಮ, ಒಳಗೆ ಪಾಪಧಾಮವಾದ ಸಂಸ್ಥೆಯೊಂದರ ಸತ್ವಪೂರ್ಣ ವಿಡಂಬನೆಯಾದ ನಿಸ್ಸಾರ ಅಹಮ್ಮದರ 'ಪರ್ಣಾಶ್ರಮ' ಗಳು ಪ್ರಧಾನವಾಗಿ ನಿರೂಪಣೆಯಲ್ಲಿ ನವ್ಯವಾಗಿವೆ. ಜೀವನವು ಮೋಜಿನಂತೆ ಗಾಜೂ ಆಗಿರುವದನ್ನು ಕಣ್ಣು ತೆರೆದು ನೋಡಿ ವಿವೇಕವನ್ನು ಪಡೆಯಬೇಕೆಂಬುದನ್ನು ಚಮತ್ಕಾರವಾಗಿ ಬೋಧಿಸುವ ಬೇಂದ್ರೆಯವರ 'ಕಣ್ಣುಮುಚ್ಚಾಣಿಕೆ', ಅನುಭವಗಳ ಮಾನಸಿಕ ದೂರನೋಟದಿಂದ ಸಾಧ್ಯವಾಗುವ ಸಮಗ್ರ, ಸಮತೋಲ ಗ್ರಹಣವನ್ನು ಸ್ವಾರಸ್ಯಕರವಾಗಿ ಸೂಚಿಸುವ ಲಕ್ಷ್ಮೀನಾರಾಯಣಭಟ್ಟರ 'ಮೆರವಣಿಗೆ' ಗಳು ಮೂಲತಃ ಅನುಭವವನ್ನೇ ನವ್ಯದೃಷ್ಟಿಯಿಂದ ಬಗೆದವು. ಜಿ. ಎಸ್. ಸಿದ್ಧಲಿಂಗ–ಯ್ಯನವರ 'ಬಯಲು' ಅನುಭವ, ನಿರೂಪಣೆ, ರಚನೆಗಳೆಲ್ಲದರಲ್ಲಿಯೂ ನವ್ಯಲಕ್ಷಣವನ್ನೊಳಗೊಂಡು ಆದರ್ಶ, ಆಲಸ್ಯ, ಆವೇಗ, ಆಲ್ಹಾದ ಮುಂತಾದ ಜೀವನದ ಗತಿ ವಿಲಾಸವನ್ನೂ, ಭೋಗ–ಪ್ರತಿಷ್ಠೆ-ಅಧಿಕಾರಗಳಿಗಾಗಿ ಹೋರಾಟದ ಕಣವಾದಂತೆ ಸಂತರ ನೆಲೆಯೂ ಕೂಡ ಆಗಿರುವ ಪ್ರಪಂಚದ ಸ್ವರೂಪವನ್ನೂ ಪ್ರತಿಮಿಸುತ್ತದೆ. ಕೆ. ಎಸ್. ನರಸಿಂಹಸ್ವಾಮಿಯವರ 'ಸಂಧ್ಯಾರಾಗ' ನಿವೃತ್ತಿಯ ತರುವಾಯ ಜೀವನದ ಸಂಜೆಯಲ್ಲಿ ಮರುಕಳಿಸುವ ಸಂಸಾರದೊಲವಿನ ಸರಸವಿನೋದಮಯ ನಿರೂಪಣೆಯಾಗಿದೆ. ಕಣವಿಯವರು ಮಾತ್ರ ತತ್ಕರಿಸುವ ಇಂದಿನ ವಿದ್ಯಮಾನಗಳನ್ನು ಗಮನಿಸುವಾಗ ಅವು

ತರಲಿರುವ 'ಆಚೆ'ಯ ಭವಿಷ್ಯದ ಬಗೆಗೆ ಗಂಭೀರವಾದ ಆತಂಕ. ಆಶಂಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿನ ಮತ್ತು ಇಂದಿನ ಉಪಕುಲಪತಿಗಳಿಬ್ಬರಿಂದಲೂ ಲೇಖನಗಳನ್ನು ಪಡೆದುದೂ, ಅವೆರಡನ್ನೂ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುವದೂ ಒಂದು ವಿಶೇಷ. ಡಾ. ಗೋಕಾಕರು ಸಮಕಾಲೀನ ಭಾರತೀಯ ಸಾಹಿತ್ಯಿಯ ಲಕ್ಷಣ ನಿರೂಪಣೆಗೆ ತೊಡಗಿ, ಭಾರತದ ಚತುರ್ಮುಖ ವಿರೋಧಾಭಾಸಗಳ ಜ್ವಲಂತೆ ಸಂವೇದನೆಯ ಅಗತ್ಯವನ್ನು ಪ್ರತಿಪಾದಿಸುತ್ತಾರೆ. ಆದರೆ ಆ ವಿರೋಧಾಭಾಸಗಳ ವಿವರಣೆ ಬಹು ದೀರ್ಘವೂ, ಭಾರಯುತವೂ ಆಗಿ, ನಿರುಕುಚರುಕುಗಳೆರಡನ್ನೂ ಕಳೆದುಕೊಳ್ಳುತ್ತದೆ. ಈ ಅಸುಖವನ್ನು ಹೆಚ್ಚಿಸುವದಕ್ಕೆ ಅಸಮರ್ಪಕ ಅನುವಾದದ ಭಾಷೆಯೂ ಕೈಕೂಡಿಸಿದೆ. "ಆತನ ಆದರ್ಶದೃಷ್ಟಿ ವೈಯುಕ್ತಿಕವೇ ಇರಬಹುದು; ಆತನ ಶಿಕ್ಷಣ ಮತ್ತು ಚಂಚಲಶೀಲ ಆಯ್ಕೆಗಳಿಂದ ಅದು ಅನಿವಾರ್ಯವಾಗಿ ನಿಯಮಾಧೀನವಾಗಿರುತ್ತದೆ." "ವೈವಿಧ್ಯತೆಯ ನಡುವೆ ಹೊಂದಿಕೆಯಲ್ಲಿ ನಂಬಿಕೆ ಇಟ್ಟುಕೊಂಡಿರುವ ದೇಶದಲ್ಲಿ ನಾವು ಬದುಕುತ್ತಿದ್ದೇವೆ. ಆದರೆ ವಾಸ್ತವವಾಗಿ ಅದರ ವಕ್ರತೆಯಲ್ಲಿ ನಾಮ್ಯವಿಲ್ಲ" "ಮತ್ತೊಂದು ಮೂಡಿನಲ್ಲಿ. ತನ್ನ ಬೀಗದ ಕೈ ಬದಲಾಯಿಸಿ ವಿಚಾರ ಮತ್ತು ಬುದ್ಧಿವಂತಿಕೆಯ ಅಗತ್ಯ ಹಾಗೂ ಧರ್ಮಾತೀತ ಭಾವೈಕ್ಯಗಳನ್ನು ನಿರ್ಭಾವಪ್ರಕ ಉತ್ಸಾಹದಿಂದ ಹಿಡಿಯುತ್ತಾನೆ" —ಶ್ರೀ ಕೆ. ಮರುಳಸಿದ್ದಪ್ಪನವರು ನೀಡಿರುವ ಈ ವಾಕ್ಯಗಳ ಅರ್ಥವೇನು? ಇವರೊಡನೆ ಹೋಲಿಸಿದಾಗ, ಮಾನ್ಯ ಶ್ರೀ ತುಕೋಳರ "ನ್ಯಾಯಶಾಸ್ತ್ರ ಮತ್ತು ಸಾಮಾಜಿಕ ವಿಜ್ಞಾನಗಳು" ಎಂಬ ಲೇಖನವನ್ನು ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಅನುವಾದಿಸಿದ ಶೈಲಿಯ ಸಹಜತೆ, ಸ್ಫುಟತೆ, ಸೊಗಸು ಮಿಗಿಲಾಗಿ ತೋರುತ್ತದೆ. ಮೇಲಿನ ಶ್ರೀಯುತರಿಬ್ಬರೂ ಕನ್ನಡದ ಸ್ವಂತ ಶೈಲಿಯ ಸಮರ್ಥ ಲೇಖಕರೇ ಆಗಿರುವಾಗ ಅನುವಾದಕ್ಕೆ ಮೊರೆ ಹೋದುದರ ಅವಶ್ಯಕತೆ ಅರ್ಥವಾಗುವದಿಲ್ಲ.

ಕನ್ನಡಕ್ಕೆ ಪ್ರಶಸ್ತ ಕೊಡುಗೆಯಾದ ಡಿ. ವಿ. ಜಿ. ಯವರ "ಶೃಂಗಾರ ಮಂಗಳಂ" ಕಾವ್ಯದ ಕುರಿತು ಡಾ. ಜಿ. ವರದರಾಜರಾವ್ ಅವರು ಬಹು ವಿಸ್ತಾರವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಆ ಕೃತಿಯ ಪದ್ಯಗಳ ಸೊಗಸನ್ನು ತೆರೆತೆರೆದು ತೋರುವ ಉದ್ದೇಶ ಅವರದು. ಕಾವ್ಯದ ತಾತ್ತ್ವಿಕ ನಿಲವನ್ನೂ, ನಿರೂಪಣೆಯ ಕ್ರಮವನ್ನೂ ಕೈವಾರಿಸಿ ಹೇಳುವ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಸಲ "ಅಪ್ರಬುದ್ಧ ನವ್ಯಕವಿ"ಗಳನ್ನು ಪ್ರಸ್ತಾಪಿಸಿದ್ದು ಮಾತ್ರ ತುಸು ಹೆಚ್ಚೇ ಆಯಿತೆನ್ನಬೇಕಾಗುತ್ತದೆ. ಇದರ ಅರ್ಥ–ಆ ಕುರಿತು ಅವರು ವ್ಯಕ್ತಪಡಿಸಿದ ಅಭಿಪ್ರಾಯ ಅಸತ್ಯವೆಂದಲ್ಲ: ಅಸಗತ್ಯವೆಂದು ಅಷ್ಟೇ. ಲೇಖನದ ಬರವಣಿಗೆಯ ಅಚ್ಚುಕಟ್ಟು, ಮೂಲಕಾವ್ಯದಿಂದ "ಹರಳಿನಂತಹ ಹೇಳಿಕೆ"ಗಳ ಹೇರಳವಾದ ಉದಾಹರಣೆಗಳು ಮೆಚ್ಚಿಕೆಯನ್ನುಂಟುಮಾಡಿದರೂ, ಸಾಲು ಸಾಲನ್ನೂ ಪ್ರಶಂಸಿಸಿ ಸಮರ್ಥಿಸಬೇಕೆಂಬ ಸ್ಪಷ್ಟವಾದ ಒಲವು ಪರಿಣಾಮ ತೀವ್ರ

ತೆಯನ್ನು ಇಳಿಸಿದುದು ಮಾತ್ರ ಖಂಡಿತ. ನಿಜವಾಗಿ ನೋಡಿದರೆ, ಆ ಕೃತಿಯು ಕುರಿತಾದ ವಿಮರ್ಶಾತ್ಮಕ ಅಭಿಪ್ರಾಯವು ಲೇಖನದ ಕೊನೆಯ ಪರಿಚ್ಛೇದ ಒಂದ ರಲ್ಲಿಯೇ ಪೂರ್ತಿಯಾಗಿ ಪೂರೈಸಿದೆಯೆಂದರೂ ತಪ್ಪಲ್ಲ. ಇದಕ್ಕೆ ಪ್ರತಿಯಾಗಿ ಶ್ರೀ ಭೈರಪ್ಪ ಅವರ "ಶ್ರೀರಂಗರ ಪ್ರಕೃತಿ-ಪುರುಷ" ವಿಮರ್ಶೆ, ವಿಪುಲ ವಸ್ತುನಿಷ್ಠವಾಗಿ ಮಾದರಿಯ ಮಟ್ಟಕ್ಕೇರಿದೆ. ಶ್ರೀರಂಗರ ಆ ಕಾದಂಬರಿಗಳ ವಿಶಿಷ್ಟ ಯೋಗ್ಯತೆ ಅವುಗಳ ಬೌದ್ಧಿಕ ಗುಣದಿಂದ ಬಂದುದನ್ನು ಗುರುತಿಸಿ—ಅವುಗಳ ರಚನೆ, ಕಥನ ವಿಧಾನ, ವಸ್ತುದ್ರವ್ಯಗಳನ್ನೆಲ್ಲ ವಿಶ್ಲೇಷಿಸಿ ಸಮರ್ಥಿಸುವಲ್ಲಿ ಬಹು ಸೂಕ್ಷ್ಮವೂ, ಆಳವೂ ಆದ ವಿಮರ್ಶಕ ಪ್ರಜ್ಞೆಯನ್ನು ಅವರು ವ್ಯಕ್ತಪಡಿಸಿದ್ದಾರೆ. "ಪ್ರಕೃತಿ-ಪುರುಷ" ತತ್ವದ ವಿವೇಚನೆ; ಆ ಕಥಾ ತತ್ವದ ವಿಶಿಷ್ಟ ಭಾಗಗಳಾಗಿಯೇ ಮೂಡಿಬಂದ ಪಾತ್ರವೈವಿಧ್ಯ, ಸಮಸ್ಯೆ, ಘಟನೆಗಳ ಅನಿವಾರ್ಯತೆಯ ಪ್ರತಿಪಾದನೆಯನ್ನೂ ಮನವರಿಕೆಯಾಗುವಂತೆ ಮಾಡಿದ್ದಾರೆ. ಶ್ರೀರಂಗರ ಗದ್ಯದ ಸತ್ವ, ತಾತ್ವಿಕ ಸಿದ್ಧಾಂತ ಗಳನ್ನು ಕಥೆಯಾಗಿ ನಿರೂಪಿಸುವಲ್ಲಿಯ ಅಪಾಯಗಳನ್ನು ತಪ್ಪಿಸಿಕೊಂಡಿರುವ ಸಾಮರ್ಥ್ಯಗಳನ್ನು ಮುಂಬೆಳಕಿನಲ್ಲಿರಿಸುವಾಗಲೇ, ನುಸುಳಿ ಬಂದಿರುವ ಅತಿ ಸಂಕ್ಷೇಪ, ವಾಚ್ಯತೆ, ಭಾವವಿಮುಖತೆಗಳನ್ನೂ ಮರೆಯದೆ ಸೂಚಿಸಿದ್ದಾರೆ. ಇವುಗಳಿಂದಾಗಿ ಸುಸ್ಪಷ್ಟ ನಿಲವು, ನಿರೂಪಣೆಗಳು ಫಲಿಸಿರುವದು ಪ್ರಶಂಸನೀಯವಾಗಿದೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ಅಲಂಕಾರ ಗ್ರಂಥಗಳ ಸಂಪಾದನೆ, ಸಮೀಕ್ಷೆ ಗಳಲ್ಲಿ ಪರಿಣತರೆನಿಸಿದ ಶ್ರೀ ಎಂ. ವಿ. ಸೀತಾರಾಮಯ್ಯನವರ "ಅನುಭೂತ್ಯಾಭಾಸ : ಒಂದು ಅಲಂಕಾರ" ಇಡಿಯ ಪತ್ರಿಕೆಗೆ ಭೂಷಣಪ್ರಾಯವಾದ ಲೇಖನ. ವಿದ್ವತ್ತಿನ ಹರಹು, ವಿಶ್ಲೇಷಣೆಯ ನಿರುಕು, ಪ್ರತಿಪಾದನೆಯ ಮೊನಚು – ಕಲ್ಪಕತೆಯ ವೈಖರಿ ಗಳೆಲ್ಲವನ್ನೂ ಸಮುಚ್ಚಯದಲ್ಲಿ ಇಲ್ಲಿ ಕಾಣಬಹುದು. ಆಂಗ್ಲ ಕಲಾವಿಮರ್ಶಕ ಜಾನ್ ರಸ್ಕಿನ್ ಪಾಶ್ಚಾತ್ಯ ಕವಿತೆಯಲ್ಲಿ ಗುರುತಿಸಿದ Pathetic Fallacy ಯ ಪ್ರಸ್ತಾಪ ದಿಂದ ಪ್ರಾರಂಭವಾಗುವ ಈ ಲೇಖನ ಕಾವ್ಯಸತ್ಯದ ಸ್ವರೂಪವನ್ನೂ, ಭಾರತೀಯ ಕವಿಸಮಯ ಪರಂಪರೆಯನ್ನೂ ವಿವರಿಸಿ, ಕನ್ನಡ ಅಲಂಕಾರಿಕ ನಾಗವರ್ಮನಿಂದ ಆ ಮುಂಚೆಯೇ ಆಗಿದ್ದ ಚೇತನಾರೋಪಣಕ್ರಮದ ಉಲ್ಲೇಖವನ್ನು ಮುನ್ನೆಲೆಗೆ ತಂದು, ಈರ್ವರಿಂದಲೂ ಉಕ್ತವಾದ ಲಕ್ಷಣಗಳನ್ನು ವಿವರವಾಗಿ ವಿಶ್ಲೇಷಿಸಿ ಹಳ-ಗನ್ನಡ – ಹೊಸಗನ್ನಡ ಕಾವ್ಯಲಕ್ಷಣಗಳನ್ನು ಉದಾಹರಿಸಿ, ಅಲ್ಲಿಯ ಉಕ್ತಿವೈಚಿತ್ರ್ಯವು ಅಲಂಕಾರದ ಮಟ್ಟವನ್ನೂ, ಪಟ್ಟವನ್ನೂ ಪಡೆಯಲು ಅರ್ಹವಾದ ಬಗೆಯನ್ನು ಸಮರ್ಥಿಸಿ, ಅದಕ್ಕೊಂದು ಸೂಕ್ತ ಹೆಸರನ್ನೂ ಸೂಚಿಸಿ ಕೊನೆಗೊಳ್ಳುತ್ತದೆ. ಹೀಗೆ ಕಾವ್ಯಸೌಂದರ್ಯ ಮೀಮಾಂಸೆಗೆ ಒಂದು ಮೌಲಿಕ ಕೊಡುಗೆಯಾಗಿದೆ.

ತೀ. ನಂ. ಶಂಕರನಾರಾಯಣ ಅವರ "ಕೆಟ್ಟಕಣ್ಣು" ಕೂಡ ವ್ಯಾಸಂಗದ ಒಂದು ಹೊಸ ಮುಖವನ್ನು ಪ್ರತಿನಿಧಿಸುತ್ತದೆ. ಪ್ರಪಂಚದಲ್ಲೆಲ್ಲ ಪ್ರಚಲಿತವಾದ ನಂಬಿಕೆಯ ಪ್ರಕಾರ ಕೆಟ್ಟಕಣ್ಣುಗಳ ಪ್ರಭಾವ, ಪರಿಣಾಮ, ಪರಿಹಾರಗಳ ಕುರಿತಾದ ವಿವರಣಾತ್ಮಕ

ಅಧ್ಯಯನವನ್ನು ಮಾತ್ರ ಇಲ್ಲಿ ನೀಡಿ, ಅವುಗಳ ವಿಶ್ಲೇಷಣಾತ್ಮಕ ಅಧ್ಯಯನವನ್ನು ಮುಂದಿನ ಪ್ರಕಟಣೆಗೆ ಉಳಿಸಿಕೊಳ್ಳಲಾಗಿದೆ. ವಿಷಯಕ್ಕೆ ಸಂಬಂಧಪಟ್ಟ ಇಲ್ಲಿಯ ವಿವರಗಳನ್ನು ಅನೇಕ ವಿದ್ವತ್ಪತ್ರಿಕೆ, ಗ್ರಂಥ, ವಿಶ್ವಕೋಶಗಳಿಂದ ಪರಿಶ್ರಮಪೂರ್ವಕವಾಗಿ ಕಲೆಹಾಕಿರುವದು ಕಂಡುಬರುತ್ತದೆ.

ಕನ್ನಡದ ಘನವಿದ್ವಾಂಸರೂ, ಭಾಷಾವಿಜ್ಞಾನ ತಜ್ಞರೂ ಆಗಿದ್ದ ದಿವಂಗತ ತೀ. ನಂ. ಶ್ರೀ. ಅವರ ಸ್ವನವಿವೇಚನೆಯನ್ನು ಕುರಿತಾದ ಉಪನ್ಯಾಸವೊಂದನ್ನು ಡಾ॥ ಚಿದಾನಂದಮೂರ್ತಿಯವರು ಸಂಗ್ರಹಿಸಿಕೊಟ್ಟಿದ್ದಾರೆ. ಮೈಸೂರು ಪ್ರಾಂತದ ಪದಾದಿಯ ಅಕಾರಕ್ಕೆ ಸಂಬಂಧಪಟ್ಟ ಉಚ್ಚಾರ, ಬರಹರೂಪಗಳ ವರ್ಣನೆ, ಪ್ರಕಾರಗಳು, ಪ್ರಸಾರಗಳನ್ನೆಲ್ಲ ಸೋದಾಹರಣವಾಗಿ ವೈಜ್ಞಾನಿಕವಾಗಿ ವಿವೇಚಿಸುವ ಈ ಲೇಖನ ಸ್ವನಗಳ ವರ್ಣನಾತ್ಮಕ ವಿಶ್ಲೇಷಣಕ್ರಮದ ಉತ್ತಮ ಮಾದರಿಯೊಂದನ್ನು ಮಂಡಿಸಿದೆ. ಡಾ॥ ಮೂರ್ತಿಯವರು, ತೀ. ನಂ. ಅವರ ಅಭಿಪ್ರಾಯ ಖಚಿತತೆ, ಪ್ರತಿಪಾದನೆಯ ಸುಸ್ಪಷ್ಟತೆ, ನಿರೂಪಣೆಯ ಸಂಗ್ರಾಹಕತೆಗಳನ್ನೆಲ್ಲ ಸರಿಯಾಗಿ ಸೆರೆಹಿಡಿದುಕೊಟ್ಟು ಉಪಕರಿಸಿದ್ದಾರೆ.

ಇತರ ಲೇಖನಗಳಲ್ಲಿ ಎಂ. ಬಸವಣ್ಣನವರ "ದುಃಖ-ಒಂದು ಮನೋವೈಜ್ಞಾನಿಕ ವಿಶ್ಲೇಷಣೆ", ಎನ್. ಪ್ರಭುಸ್ವಾಮಿಯವರ "ನೋಬೆಲ್ ಪ್ರಶಸ್ತಿ ವಿಜೇತ ಜಾನ್-ಟಿನ್ ಬರ್ಗನ್,' ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ ಅವರ 'ಲೂನಖೋಡ್ -೧', ಎಂ. ಷಡಕ್ಷರ ಸ್ವಾಮಿಯವರ "ಇಂಟರ್ ಫೆರಾನ್", ಹೊಸವೂ, ಅದ್ಯತನವೂ ಆದ ವಿಷಯಗಳನ್ನು ಸಮರ್ಥವಾಗಿ ವಿವರಿಸುತ್ತದೆ. ಭಾರತದ ಭೂ ಸಂಪತ್ತಿಗೆ ಸಂಬಂಧಪಟ್ಟ ಎರಡು ಲೇಖನಗಳಲ್ಲಿ ಪುನರುಕ್ತಿ ಎದ್ದು ಕಾಣುವಂತಿದ್ದು, ಇದನ್ನು ತಪ್ಪಿಸಬಹುದಿತ್ತೆಂದೆನಿಸುತ್ತದೆ. ಇವುಗಳೆಲ್ಲದರ ಅವಲೋಕನದಿಂದ ಎರಡು ಮಾತುಗಳನ್ನು ಗ್ರಹಿಸುವದು ಸಾಧ್ಯವಾಗುತ್ತದೆ : ಸಾಮಾಜಿಕ ವಿಜ್ಞಾನಗಳ ವ್ಯಾಸಂಗದಲ್ಲಿ ಸಮನ್ವಯ ದೃಷ್ಟಿ ಹೆಚ್ಚು ಹೆಚ್ಚಿನ ಪ್ರಾಧಾನ್ಯವನ್ನು ಪಡೆಯುತ್ತಿದೆ; ಸುವಾಚ್ಯವೂ, ಅರ್ಥಗಮ್ಯವೂ ಆಗುವಂತೆ ಸೂಕ್ತಪಾರಿಭಾಷಿಕ ಪದಗಳನ್ನೂ ಶೈಲಿಯನ್ನೂ ಬಳಸಿ ವಿಜ್ಞಾನ ವಿಷಯಕ ಲೇಖನಗಳನ್ನೂ ಕನ್ನಡದಲ್ಲಿ ಸಲೀಸಾಗಿ ಬರೆಯಬಹುದು. ಡಾ. ಡಿ. ಎಸ್. ಶಿವಪ್ಪ ಅವರ "ಹೆಂಗಸರ ರೋಗಗಳು" ಎಂಬ ಲೇಖನ ಈ ವಿಷಯದಲ್ಲಿ ಪದನಿರ್ಮಾಣ ಸೂಕ್ತತೆಗೆ ಅನೇಕ ನಿದರ್ಶನಗಳನ್ನೊದಗಿಸುತ್ತದೆ. ಸಂಗೀತಕ್ಕೆ ಸಂಬಂಧಪಟ್ಟ 'ಆಧಾರ ಶ್ರುತಿ'ಯ ಕುರಿತಾದ ಶ್ರೀಮತಿ ನಾಗರತ್ನಮ್ಮನವರ ಲೇಖನವು ಮಾತ್ರ ಬಹಳ ತಾಂತ್ರಿಕವಾಗಿ, ಬರಹದಲ್ಲಿ ಸುವಾಚ್ಯವಿದ್ದೂ ಅರ್ಥಸಂವಹನೆಯಲ್ಲಿ ಅಯಶಸ್ವಿಯಾಗಿದೆ.

ವಿಶ್ವವಿದ್ಯಾಲಯ ಮಟ್ಟದ ಈ ಪತ್ರಿಕೆ. ಪ್ರಬುದ್ಧ ಕರ್ನಾಟಕದ 'ಕಮ್ಮಟದ ಕಿಡಿ'ಯ ಮಾದರಿಯಲ್ಲಿ 'ಮಂಥನ'ವೆಂಬ ಶೀರ್ಷಿಕೆಯಡಿ ಸಂಶೋಧನಾತ್ಮಕ ಟಿಪ್ಪಣಿಗಳಿಗೆ ಅವಕಾಶ ಕಲ್ಪಿಸಿರುವದು ಸೂಕ್ತವೂ, ಪ್ರಸ್ತುತ ಪ್ರಥಮ ಸಂಚಿಕೆಯಲ್ಲೇ ಫಲಪ್ರದವೂ

ಆಗಿದೆ. ಕನ್ನಡದ ಸಂಶೋಧಕ ವಿದ್ವಾಂಸರಲ್ಲಿ ಪ್ರಸಿದ್ಧರಾದ ಸುರತಕಲ್ಲಿನ ಶ್ರೀವೆಂಕಟರಾಯಾಚಾರ್ಯರು ಇದೀಗ ಪ್ರಕಟವಾದ **‘ಕನ್ನಡ ವಿಶ್ವಕೋಶ’**ದಲ್ಲಿ **‘ಶುಕಸಪ್ತತಿ’** ವಿಷಯದಡಿಗೆ ಬಂದ ವಿವರಗಳ ವಿಕ್ಷಿಪ್ತತೆ, ಅದೇ ಹೆಸರಿನ ಕನ್ನಡ ಪದ್ಯಕಾವ್ಯದ ಪ್ರಸ್ತಾಪವೇ ಇಲ್ಲವ ಗಂಭೀರ ಲೋಪಗಳ ಕಡೆ ಗಮನ ಸೆಳೆದಿದ್ದಾರೆ. ಕನ್ನಡ ‘ಶುಕಸಪ್ತತಿ’ಯ ಕರ್ತೃತ್ವ ನಿಷ್ಕರ್ಷೆ, ಕಾವ್ಯ ಸಂಪಾದನೆ ಪ್ರಕಟನೆಗಳಿಗಾಗಿ ಕೆಲವರ್ಷಗಳಿಂದಲೂ ದುಡಿಯುತ್ತಿರುವ ಅವರ ಅಭಿಪ್ರಾಯ ಅಭಿಮಾನಪೂರ್ವಕವಾದಷ್ಟೇ ಅಧಿಕೃತವೂ ಆಗಿರುವುದರಿಂದ ಅಲಕ್ಷ್ಯಕ್ಕೆ ಗುರಿಯಾಗಸಲ್ಲದು. ಶ್ರೀಹಂಪನಾ ಅವರು **‘ಕೆಲವು ವಸ್ತ್ರನಾಮ ವಿಶೇಷಗಳು’** ಎಂಬ ದೀರ್ಘ ಟಿಪ್ಪಣಿಯಲ್ಲಿ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಪ್ರಯುಕ್ತವಾದರೂ,ಪ್ರಶ್ನಾರ್ಥಕ ಚಿಹ್ನೆಗಳನ್ನಿರಿಸಿಕೊಂಡಿದ್ದ ಪದಗಳಾದ **ಸುಯ್ಯತಾಣ, ಸುಯ್ಯಾಣ, ಸಕಲವಟ್ಟೆ, ನಾರಂಗದವಟ್ಟೆ** ಮುಂತಾದವುಗಳ ನಿರುಕ್ತ ಅರ್ಥ ನಿರ್ಧಾರಕ್ಕೆ ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಪಾಠಾಂತರ, ರೂಪಾಂತರ. ಅನ್ಯಪ್ರಯೋಗಗಳ ಅನ್ವೇಷಣೆಯಲ್ಲಿ **‘ಧರ್ಮಪರೀಕ್ಷೆ’**ಯಂಥ ಅಪ್ರಕಟಿತ ಕಾವ್ಯದ ಓಲೆಗರಿಯ ಮೂಲದಿಂದ ಹಿಡಿದು ಅನೇಕ ಕೃತಿಗಳಲ್ಲಿ ಎಡೆಯಾಡಿ ಕೊಟ್ಟ ನಿದರ್ಶನಗಳು ಸಂಶೋಧಕರ ಪರಿಶ್ರಮ, ಪರಮಾನಂದಗಳೆರಡಕ್ಕೂ ಸಾಕ್ಷಿಯಾಗುವಂತಿವೆ. ಊಹೆಯ ಕೆಲಸವೂ. ಸೂಚನೆಯ ಕೆಲಸವೂ, ಸಾಕಷ್ಟು ಸಮಂಜಸವಾಗಿ ನಡೆದಿದೆ. ‘ ಸಕಲಾತಿ ’ ರೂಪಸಿದ್ಧಿಯ ವಿವರಣೆ ಅವಶ್ಯವಾಗಿತ್ತು. ನಾಗರಂಗ–ನಾರಂಗ ರೂಪಸಿದ್ಧಿಯಲ್ಲಿ ಕಂಡುಬರುವ ಪರಿವರ್ತನೆ ವರ್ಣಪಲ್ಲಟದಲ್ಲ, ಲೋಪದ್ದು ಎಂಬುದನ್ನು ಗಮನಿಸಬೇಕು.

ಹೊಸ ಹೊಸ ವಿಷಯುಗಳ ಕುರಿತಾದ ಲೇಖನಗಳನ್ನೇ ಸಂಗ್ರಹಿಸಿರುವದೂ, ಯಾವ ಕ್ಷೇತ್ರದ ಮಟ್ಟದ ವಿಷಯುಗಳ ಕುರಿತೂ ಕನ್ನಡದಲ್ಲಿ ತೊಡಕಿಲ್ಲದೆ ನಿರೂಪಿಸಬಹುದೆಂಬ ಭರವಸೆಯನ್ನೂ ಹುಟ್ಟಿಸಿರುವದೂ, ಈ “ಸಾಧನೆ”ಯ ಸಾಧನೆಗಳೆಂದು ನಿಸ್ಸಂಶಯವಾಗಿ ಹೇಳಬಹುದು. ಇನ್ನಾದರೂ ಸಾಧ್ಯವಾದಷ್ಟು ಮೂಲ ಕನ್ನಡ ಲೇಖನಗಳೇ ಬರುವಂತಾಗಲಿ ಎಂದು ಹಾರೈಸಬಹುದಾಗಿದೆ.

★ ಕೆ. ಜಿ. ಶಾಸ್ತ್ರಿ.

ಸಾದರ ಸ್ವೀಕಾರ

೧. ಗುರು (ಕಾದಂಬರಿ) :

ಲೇಖಕರು : ಆರ್ಯ. ಪ್ರಕಾಶಕರು : ವಿಕಾಸ ಪ್ರಕಾಶನ, ಯಾದವಗಿರಿ ಮೈಸೂರು-೨; ಪುಟ : ೧೧೧+iv; ಬೆಲೆ : ನಾಲ್ಕು ರೂಪಾಯಿ ; ೧೯೭೨.

೨. ದೇವ ಕರುಣೆ (ಕವನ ಸಂಕಲನ) :

ಲೇಖಕರು : ಸಿಂಗಣ್ಣ ಸಣ್ಣಕ್ಕಿ; ಪ್ರ: ಉದಯ ಪ್ರಕಾಶನ, ಗೋಕಾಕ; ಪುಟ : ೫೦+viii, ಬೆಲೆ : ೧-೫೦. ೧೯೭೨.

೩. ಜಾನಪದ ಸಾಹಿತ್ಯ (ಸಂಗ್ರಹ) :

ಸಂ : ಕೆ. ವಿರೂಪಾಕ್ಷಗೌಡ, ಕಲ್ಲೇಶ ಇಟ್ಟಿಗಿ, ಪಾಟೀಲ ಕರಿವೀರನಗೌಡ; ಪ್ರ : ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿ ಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ); ಪುಟ: ೪೨; ಬೆಲೆ : ರೂ. ೧; ೧೯೭೨.

೪. ಚಂದ್ರ ಮಾವು (ಕವನ ಸಂಕಲನ) :

ಲೇ : ವಸಂತರಾವ ಕಟ್ಟಿ; ಪ್ರ : 'ಮಧು ಪ್ರಕಾಶನ', ಒಂದನೆಯ N ಬ್ಲಾಕ್, ರಾಜಾಜಿನಗರ ಬೆಂಗಳೂರು-೧೦; ಪುಟ : ೪೮+೧೬; ಬೆಲೆ: ಉತ್ತಮ ಪ್ರತಿ : ೩-೦೦; ಸಾದಾ ಪ್ರತಿ ರೂ. ೨-೦೦ ೧೯೭೧.

೫. ಅಧ್ಯಾತ್ಮ ರಾಮಾಯಣ ಕಾವ್ಯ ಸಾರ (ಒಂದು ಲೋಕ ಗೀತೆ) :

ಸಂಗ್ರಹಕಾರ : ಡಾ. ಎ. ಎಸ್. ಚಂದ್ರಶೇಖರರಾವ್: ಪ್ರ. ಅಧ್ಯಾತ್ಮ ಯೋಗ ಸಾಧನ ಸಂಘ, ಬೆಂಗಳೂರು-೨೦; ಪುಟ : ೧೨೮+xi; ಬೆಲೆ : ೨-೦೦, ೧೯೭೧.

೬. ಸಾಹಿತಿ ಕಂಡ ಸಮಾಜ (ಪ್ರಬಂಧಗಳ ಸಂಗ್ರಹ) :

ಸಂ : ಬಾಳೇಶ ಲಕ್ಷೆಟ್ಟಿ; ಪ್ರ. ಉದಯ ಪ್ರಕಾಶನ, ಗೋಕಾಕ; ಪುಟ: ೪೨+೧೨; ಬೆಲೆ : ೦-೭೫ ಪೈಸೆ. ೧೯೭೧.

೭. ಪಂಪಾ ಸಂಪದ-೨ :

ಸಂ. ಜಯತೀರ್ಥ ರಾಜಪುರೋಹಿತ, ಕೆ. ವಿರೂಪಾಕ್ಷಗೌಡ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ, ಹಗರಿಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ): ಪುಟ: ೧೫೦, ಬೆಲೆ : ೧-೦೦; ೧೯೭೧.

ಸಂಪಾದಕೀಯ

ಕರ್ನಾಟಕ ಭಾರತಿ ನಾಲ್ಕು ವರ್ಷಗಳನ್ನು ಮುಗಿಸಿ ಈ ಸಂಚಿಕೆಯ ಮೂಲಕ ಐದನೆಯ ವರುಷದಲ್ಲಿ ಕಾಲಿಡುತ್ತಲಿದೆ. ನಾಲ್ಕು ವರ್ಷಗಳ ಸಾಧನೆಯನ್ನು ವಿದ್ವಾಂಸರು, ವಾಚಕರು ಮೆಚ್ಚಿಕೊಂಡಿದ್ದಾರೆ. ಇದು 'ಭಾರತಿ'ಗೆ ಸಂತೋಷದ ವಿಷಯ. ಐದನೆಯ ವರ್ಷ ಪೂರ್ಣಗೊಂಡುದರ ನೆನಪಿಗಾಗಿ ಈ ವರ್ಷದ ಕೊನೆಯ ಸಂಚಿಕೆಯನ್ನು 'ವಿಶೇಷ ಸಂಚಿಕೆ' ಯನ್ನಾಗಿ ಹೊರತರುವ ಯೋಜನೆಯಿದೆ. ಈ ಕಾರ್ಯಕ್ಕೆ 'ಭಾರತಿ' ವಿದ್ವಾಂಸರ ಸಹಕಾರವನ್ನು ಬಯಸುತ್ತದೆ.

ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬ

ಈ ವರುಷ ಭಾರತಸ್ವಾತಂತ್ರ್ಯದ ಬೆಳ್ಳಿಹಬ್ಬ. ನಾವು ಸ್ವಾತಂತ್ರ್ಯ ಗಳಿಸಿ ಇಂದಿಗೆ ೨೫ ವರ್ಷ ಪೂರ್ಣಗೊಂಡವು. ಈ ಅವಧಿಯಲ್ಲಿ ಭಾರತ, ಗಾಂಧೀಜಿ ಪ್ರಣೀತಪಥದಲ್ಲಿ ಜವಾಹರಲಾಲ ನೆಹರೂ, ಲಾಲಬಹಾದ್ದೂರ ಶಾಸ್ತ್ರಿ, ಇಂದಿರಾ ಗಾಂಧಿಯವರ ಕರ್ಣಧಾರಿತ್ವದಲ್ಲಿ ಸಮರ್ಥವಾಗಿ ಮುನ್ನಡೆದಿದೆ. ಶಿಕ್ಷಣ, ವಸತಿ, ಆಹಾರ, ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಪ್ರಜಾ-ಪ್ರಯೋಜನಕಾರಿಯಾದ ಹೊಸಹೊಸ ಯೋಜನೆಗಳನ್ನು ಹಮ್ಮಿಕೊಂಡು ಯಶಸ್ಸು ಗಳಿಸಿದೆ. ಇಂಥ ಇನ್ನೂ ಹಲವು ಶ್ರೇಯಸ್ಸುಗಳನ್ನು ಸಾಧಿಸಲಿ ಎಂದು ಭರತವರ್ಷಕ್ಕೆ 'ಭಾರತಿ' ಶುಭವನ್ನು ಹಾರೈಸುತ್ತದೆ.

ರಾಜ್ಯದ ಹೆಸರು ಕರ್ನಾಟಕ

೧೯೫೬ ನವ್ಹಂಬರ ೧ ರಂದು ರಚನೆಗೊಂಡ ನಮ್ಮ ರಾಜ್ಯ, 'ಕರ್ನಾಟಕ'ಕ್ಕೆ ಬದಲು 'ಮೈಸೂರು' ಎಂಬ ಹೆಸರು ಹೊತ್ತುದು ಒಂದು ಆಕಸ್ಮಿಕ ಘಟನೆ. ಅಂದಿನಿಂದ ರಾಜ್ಯದ ಹೆಸರು 'ಕರ್ನಾಟಕ' ಎಂದಾಗಲಿಯೆಂದು ಸಮಸ್ತ ಪ್ರಜೆಗಳೂ, ಕೆಲವು ರಾಜಕೀಯ ಧುರೀಣರೂ ಹಂಬಲಿಸುತ್ತಿದ್ದರು. ಪ್ರಜಾಪ್ರಿಯವಾದ 'ಕರ್ನಾಟಕ' ಎಂಬ ಹೆಸರನ್ನಿಡಲು ನಮ್ಮ ರಾಜ್ಯಸರಕಾರ ಒಮ್ಮತದಿಂದ ಒಪ್ಪಿದುದು ಈ ನಾಡಿನ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಘಟನೆ. ಈ ಪ್ರಸಂಗದಲ್ಲಿ 'ಭಾರತಿ' ತನ್ನ ಸಂತೋಷವನ್ನು ವ್ಯಕ್ತಪಡಿಸಿ ನಮ್ಮ ರಾಜ್ಯ ಸರಕಾರವನ್ನು ಅಭಿವಂದಿಸುತ್ತದೆ.

ಶ್ರೀ. ಅರವಿಂದ ಶತಮಾನೋತ್ಸವ

ಭಾರತದ ಸ್ವಾತಂತ್ರ್ಯಾಂದೋಲನ ಸಮುದ್ರಮಥನದಲ್ಲಿ ಉದ್ಭವಿಸಿದ ಕರ್ಮಯೋಗಿ ಗಾಂಧೀಜಿ, ಸೌಂದರ್ಯಯೋಗಿ ರವೀಂದ್ರನಾಥ ಠಾಕೂರರ ಸಾಲಿನಲ್ಲಿ ನಿಲ್ಲುವ ಇನ್ನೊಬ್ಬರು ಅಧ್ಯಾತ್ಮಯೋಗಿ ಶ್ರೀ. ಅರವಿಂದ. ರಾಜಕೀಯದ ಮುಖಾಂತರ

ಅಧ್ಯಾತ್ಮವಲಯವನ್ನು ಪ್ರವೇಶಿಸಿದ ಅರವಿಂದರು ಈ ಯುಗದ ಮಹಾಪುರುಷರು. ಅವರ ವಿಶ್ವವಿನೂತನ ಪೂರ್ಣಯೋಗ 'ಆಧ್ಯಾತ್ಮಿಕ ಕೊಡುಗೆ'ಯಾಗಿದ್ದರೆ, ಮಹಾಕಾವ್ಯ 'ಸಾವಿತ್ರಿ' ಸಾಹಿತ್ಯಿಕ ಕೊಡುಗೆಯಾಗಿದೆ. ಈ ಕಾರಣಪುರುಷನ ಶತಮಾನೋತ್ಸವವನ್ನು ನಮ್ಮ ದೇಶ ವೈಭವದಿಂದ ಆಚರಿಸುತ್ತಲಿದೆ. ಶ್ರೀ. ಅರವಿಂದರ ದಿವ್ಯಸಂದೇಶ ನಮ್ಮೆಲ್ಲರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಇನ್ನೂ ಮುನ್ನಡೆಸಲಿ ಎಂದು 'ಭಾರತಿ' ಹಾರೈಸುತ್ತದೆ.

ಲೇಖಕರ ಪರಿಚಯ

೧. ಡಾ. ಬುದ್ದಣ್ಣ ಹಿಂಗಮಿರೆ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೨. ಶ್ರೀ ಕೆ. ವೆಂಕಟರಾಯಾಚಾರ್ಯ :
ವಿದ್ವಾಂಸರು, ಸುರತ್ಕಲ್ಲು. (ದ. ಕ.)

೩. ಶ್ರೀ ದೇವೇಂದ್ರಕುಮಾರ ಹಕಾರಿ :
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ., ಧಾರವಾಡ.

೪. ಶ್ರೀ ಬಿ. ವ್ಹಿ. ಗುಂಜೆಟ್ಟಿ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೫. ಶ್ರೀ ವಿಲ್ಯಮ್ ಮಾಡ್ತಾ :
ಭಾಷಾಶಾಸ್ತ್ರ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೬. ಶ್ರೀ ಉಮೇಶ ಅಂಗಡಿ :
ಜಯಬಸವ ಪುಸ್ತಕಾಲಯ, ಗದಗ.

೭. ಶ್ರೀ ಶ್ರೀನಾಥರಾಯಸಂ :
C/o ಎಸ್. ಮೋಹನರಾವ್, ಮ. ನಂ. Z-೨-೨೭, ಗಜಗಾರ ಪೇಟೆ, ರಾಯಚೂರು.

೮. ಶ್ರೀ ಎಸ್. ರಾಜಶೇಖರ :
ಇತಿಹಾಸ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೯. ಶ್ರೀ ಕೃಷ್ಣಮೂರ್ತಿ ಕಿತ್ತೂರ :
ಕನ್ನಡ ಅಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಗುಲಬರ್ಗಾ.

೧೦. ಡಾ. ವಿ. ಶಿವಾನಂದ :
ಕನ್ನಡ ಅಧ್ಯಾಪಕರು, ಜೆ. ಟಿ. ಕಾಲೇಜ, ಗದಗ.

೧೧. ಶ್ರೀ ಎಚ್. ಎಂ. ಮರುಳಸಿದ್ದಯ್ಯ :
ಮಾನವಶಾಸ್ತ್ರದ ಅಧ್ಯಾಪಕರು, ಕ. ವಿ. ವಿ., ಧಾರವಾಡ.

೧೨. ಶ್ರೀ ಎಚ್. ಎ. ಕುಲಕರ್ಣಿ :
ರೀಡರ್, ಕನ್ನಡ ವಿಭಾಗ, ಎಂ. ಎಂ. ಕಾಲೇಜ, ಶಿರಸಿ. (ಉ.ಕ.)

೧೩. ಶ್ರೀ ದೊಡ್ಡರಂಗೇಗೌಡ :
೩೪, ಬಸವಣ್ಣನ ಗಲ್ಲಿ, ಕೆ. ಆರ್. ಶೆಟ್ಟಿ ಪೇಟೆ, ಬೆಂಗಳೂರು – ೨.

೧೪. ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನ ಪೀಠ, ಕ. ವಿ. ವಿ., ಧಾರವಾಡ.

೧೫. ಶ್ರೀ ಟಿ. ಆರ್. ನಾಗಪ್ಪ :
ನಿರ್ದೇಶಕರು, ರೈಟರ್ಸ್ ವರ್ಕಶಾಪ್, ಕೆಂಗೇರಿ ವಿದ್ಯಾಪೀಠ, ಕೆಂಗೇರಿ.

೧೬. ಪ್ರೊ. ಎಂ. ವಿ. ಜಂಬುನಾಥನ್ :
ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರು, ಮಾನಸ ಗಂಗೋತ್ರಿ, ಮೈಸೂರು.

೧೭. ಡಾ. ಎಸ್. ಎಲ್. ಶಾಂತಕುಮಾರಿ :
ಸಹಾಯಕ ಸಂಶೋಧಕರು, ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ., ಧಾರವಾಡ.

೧೮. ಶ್ರೀ ಸಂಗಮೇಶ ಬಿರಾದಾರ :
ಕನ್ನಡ ಅಧ್ಯಾಪಕರು, ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ.

೧೯. ಶ್ರೀ ಮೈಲಾರಗೌಡ ಪಾಟೀಲ :
ಧಾರವಾಡ ಜಿಲ್ಲೆಯ ಕುರ್ತಕೋಟಿ ಗ್ರಾಮದ ಒಬ್ಬ ವಿದ್ವಾಂಸರು.

೨೦. ಶ್ರೀ ಎಸ್. ಶಿವಣ್ಣ :
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೧. ಡಾ. ಎಂ. ಚಿದಾನಂದಮೂರ್ತಿ :
ರೀಡರ್, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೨. ಶ್ರೀ ಜ್ಯೋತಿ ಹೊಸೂರ :
ಪ್ರಿನ್ಸಿಪಾಲ, ಜ್ಯೂನಿಯರ ಕಾಲೇಜ, ರಾಯಬಾಗ.

೨೩. ಶ್ರೀ ವ್ಹಿ. ಎಸ್. ಕಂಬಿ :
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ., ಧಾರವಾಡ.

೨೪. ಡಾ. ಕೆ. ಜಿ. ಶಾಸ್ತ್ರಿ :
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ., ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	संस्कृत सौदामिनी	2·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
5	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
6	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
7	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
8	ಕಾವ್ಯಮಂಜರಿ : ಭಾಗ ೧, ಸಂಪುಟ ೩	2·00
9	ಕಾವ್ಯವಿಲಾಸ	1·50
10	ಕಾವ್ಯಕುಂಜ	1·50
11	ಗದ್ಯವಿಲಾಸ	2·50
12	ಗದ್ಯಮಂಜರಿ	2·00

II. Research Publications Series (ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	*—R. V. Joshi*		15·00
2	The Karnatak Theatre *—H. K. Ranganath*		Ord. binding	3·00
			Half calico	5·00
3	Some Problems in Jaina Psychology *—T. G. Kalghatgi*		Full cal.	7·00
			Half calico	6·00
4	The Concept of Comedy	*—G. S. Amur*		7·00 $ 2 or Sh. 13
5	Local Self-Government in Mediaeval Karnatak	*—G. S. Dikshit*		7·00 $ 2 or Sh. 13
6	Basic Syllabus in Practice	*—N. R. Hiremath*		10·00 $ 3 or £. 1
7	The Later Phase in the Development of W. B. Yeats	*—S. R. Mokashi*		10·00 $ 3 or £. 1
8	Some Studies in Boolean Algebra	*—E. Sampathkumarachar*		7·00 $ 2 or Sh. 14
9	A History of South Kanara	*—K. V. Ramesh*		30.00

10 A Critical Study of the Hindu Astronomy in the Light and Language of the Modern 12·00
—*D. A. Somayaji* $ 4 or Sh. 25

11 The Havyaka Dialect of North Kanara 12·00
—*K. G. Shastri* $ 4 or Sh. 25

12 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

13 ಕನ್ನಡ ಜಾನಪದ ಗೀತಗಳು —ಜಿ. ಎಸ್. ಗದ್ದಗಿಮಠ 10·00

14 ಕನ್ನಡ ಸಾಹಿತ್ಯದಲ್ಲಿ ಹಾಸ್ಯ —ಎಂ. ಎಸ್. ಸುಂಕಾಪುರ 8·00

III. Extension Lectures Publications Series
(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.50
—*R. D. Ranade* Cents 50 or Sh.4

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa (2nd Edn.) —*R. D. Karmarkar* (In Press)

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 Śaṅkara's Advaita —*R. D. Karmarkar* 3·00

10 ಮಹಾಕವಿ ಷಡಕ್ಷರದೇವ —ಜಿ. ಶಿವಮೂರ್ತಿಶಾಸ್ತ್ರೀ } 3.00 / 4·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ
—ವಿ. ಸೀತಾರಾಮಯ್ಯ 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರ ಸಾಹಿತ್ಯ ನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ
—ಆದ್ಯ ರಂಗಾಚಾರ್ಯ 2·50

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

16 From Traditionalism to Democratic Socialism
—*R. V. Bidap* 2·00

17 ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು 4·00
—ಎಲ್. ಬಸವರಾಜು

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the Underdeveloped Region in Italy —*T. K. Meti* 10·00
$ 5 or Sh. 30

10 Rural Industrialisation: An Integrated Approach —*V. S. Vyas* 3·00
$ 1 or Sh. 7

11 Economic Development and Social Change in Mysore State —*Ed. T. K. Meti* 15·00
$ 5 or Sh. 30

12 Resale Price Maintenance in a Developing Economy —*D. M. Nanjundappa* Cal 5·00
$ 1·50 or Sh. 10
Ord. 3·50
$ 1 or Sh. 7

V. ಕನ್ನಡ ಕಾವ್ಯಮಾಲೆ (Kannada Classical Series)

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥ ಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 The Structure of Kannada — *R. C. Hiremath* 5·00

4 Studies in State Administration 15·00
—Ed. *G. S. Halappa*

5 Yashodhara Charita 5·00
Ed. *K. Krishnamoorthy* $ 1·50 or Sh. 10

6 Essays in Sanskrit Criticism 5·00
—*K. Krishnamoorthy*

7 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

8 Sunyasampadane—Vol. I (*English version of a Kannada work with Commentary & Notes*) 12·00 $ 4 or Sh· 20
—Ed. *S. C. Nandimath, Menezes and R. C. Hiremath*

9 Sunyasampadane—Vol. II 20·00
—Ed. *S. S. Bhoosnurmath & Armando Menezes* $ 5 or Sh· 30

10 Sunyasampadane – Vol. III 20·00
—*Ed. S. S. Bhoosnurmath & Armando Menezes* $ 5 or Sh· 30

11 Sunyasampadane – Vol. IV. 20.00
-*Ed. S.S. Bhoosnurmath & Armando Menezes* $ 5 or Sh. 30

12 Kavi Kaumudi —Ed. *K. Krishnamoorthy* 1·50

13 Critical Essays on Indian Writing in English 20·00
—Ed. *M. K. Naik, S. K. Desai and G. S. Amur* $ 4 or Sh. 30

14 Sāyaṇa's Subhāsita-Sudhānidhi 10·00
—Ed. *K. Krishnamoorthy*

15 Urban Studies : An Aid to Research 30·00
—*B. N. Sinha & T. N. Achut Rao* $ 10

16 Old People of Makunti 10·00
—*H. M. Marulasiddaiah*

○○

17 Sirsi: An Urban Study in Application of Research Models — *B. N. Sinha* 20·00 $ 7

18 Konkarni, a Language — *Jose Pereira* 10.00 $ 3 or Sh. 20

19 Analytical Survey of Iśāvāsyopanisad — *V. V. Mudholkar* 7·00 $ 2 or Sh. 14

20 * The Image of India in the Western Creative Writing 30·00
(Joint Publication with Macmillan & Co. India)
—*Ed. M. K. Naik, S. K. Desai & S. T. Kallapur*

21 Essays in Criminal Law — *V. R. Bhat* 15·00

22 Songs from the Saranas and other poems — *Armando Menezes* 3·00 $ 1 or Sh. 7

23 **ಕನ್ನಡ ಪರಮಾರ್ಥಸೋಪಾನ** — ಸಂ. ಎಂ. ಎಸ್. ದೇಶಪಾಂಡೆ 2·50

24 **ಚನ್ನಬಸವಣ್ಣನವರ ವಚನಗಳು** (ದ್ವಿ.ಮು.) — ಸಂ. ಆರ್. ಸಿ. ಹಿರೇಮಠ 20·00

25 **ಸಸ್ಯಶಾಸ್ತ್ರ** — ಪಿ. ಎಸ್. ಚಿಕ್ಕಣ್ಣಯ್ಯ 1·50

26 **ರಸಾಯನಶಾಸ್ತ್ರ** — ಆರ್. ಎಸ್. ಹನುಸಾಗರ 4·00

27 **ಪ್ರಾಯೋಗಿಕ ರಸಾಯನಶಾಸ್ತ್ರ** — ಆರ್. ಜಿ. ಕಂಠಿ 3·00

28 विवेकचिंतामणि 6·75
(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

29 **ಕನ್ನಡ ಸಂತರ ಪರಮಾರ್ಥಪಥ** — ಆರ್. ಡಿ. ರಾನಡೆ 5·00
—(ಅನು. : ಎಂ. ಎಸ್. ದೇಶಪಾಂಡೆ)

30 **ಷಟ್‌ಸ್ಥಲಪ್ರಭೆ** (ದ್ವಿ.ಮು.) — ಆರ್. ಸಿ. ಹಿರೇಮಠ 10·00

---

* (Sole Distributors : M/s Macmillan & Co. Madras)

31	ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ	20·00
32	ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) —ಸಂ. ಆರ್. ಸಿ. ಹಿರೇಮಠ	20·00
33	ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ	20·00
34	ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ	7·00
35	ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5·00
36	ಇಪ್ಪತ್ತೇಳು ಶಿವಶರಣೆಯರ ವಚನಗಳು —ಸಂ. ಆರ್. ಸಿ. ಹಿರೇಮಠ	5·00
37	ಅಮುಗೆ ರಾಯಮ್ಮನ ವಚನಗಳು ಮತ್ತು ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ	5·00
38	ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ	2·00
39	ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ	6·00
40	ಶೂನ್ಯ ಸಂಪಾದನೆ (ಶಿವಗಣ ಪ್ರಸಾದಿ ಮಹಾದೇವಯ್ಯ ವಿರಚಿತ) —ಸಂ : ಆರ್. ಸಿ. ಹಿರೇಮಠ	12·00
41	ವೀರಶೈವ ಚಿಂತಾಮಣಿ —ಸಂ : ಆರ್. ಸಿ. ಹಿರೇಮಠ	7.00
42	ಶಿಕ್ಷಣ : ಆಧಾರಗಳು ಮತ್ತು ಪ್ರಥಮ ತತ್ತ್ವಗಳು —ಅನು : ವ್ಹಿ. ಕೆ. ಜವಳಿ	10·00
43	ವಿಶೇಷಾನುಭವ ಷಟ್ಸ್ಥಲ —ಸಂ : ಆರ್. ಸಿ. ಹಿರೇಮಠ	14·00

Available for sale :

1	Studies in Education and Culture	(Ord.)	15·00
	—*Ed. G. S. Halappa*	(Calico)	25·00
2	Pathway to god in Kannada Literature		6·00
	—*R. D. Ranade*	Sh.	10·6
		$	2·75

XI. UNIVERSITY JOURNALS

Annuals :

1 Journal of the Karnatak University — Science
2 Journal of the Karnatak University — Humanities
3 The Journal of Karnatak Univerity—Social Sciences

Rate of Annual Subscription for Each Journal :

Rs. 5-00 (In India)

2 Dollars }
14 Shillings } (Foreign)

Quarterly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Biannual ;

ವಿಜ್ಞಾನ ಭಾರತಿ

ವಾರ್ಷಿಕ ಚಂದಾ : ರೂ. 4/- (ಅಂಚೆವೆಚ್ಚ ಸಹಿತ)
ಬಿಡಿ ಪತ್ರಿಕೆಯ ಬೆಲೆ : ರೂ. 2·50 (,, ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Annual : Rs. 6/-
Monthly : 50 paise

XII. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ.			ರೂ. ಪೈಸೆ
1	ರಾಜ್ಯಶಾಸ್ತ್ರ		3-00
2	ಸಂಸ್ಕೃತ ಗದ್ಯಪದ್ಯ (ತೃತೀಯ ಮುದ್ರಣ)		3-50
3	ಉದ್ಯಾನಶಾಸ್ತ್ರ ಪರಿಚಯ		3-75
4	ಅರ್ಥಶಾಸ್ತ್ರ ಪರಿಚಯ		4-00
5	ವಾಣಿಜ್ಯಶಾಸ್ತ್ರ ಪರಿಚಯ		5-00
6	ತರ್ಕಶಾಸ್ತ್ರ ಪರಿಚಯ		3-00
7	ಜಗತ್ತಿನ ಇತಿಹಾಸ		4-50
8	ಬೀಜಗಣಿತ-ಕಲನಶಾಸ್ತ್ರ ಪರಿಚಯ		4-50
9	ಸಮಾಜಶಾಸ್ತ್ರ ಪರಿಚಯ		3-00
10	ಮಾನವಶಾಸ್ತ್ರ ಪರಿಚಯ		3-00
11	ಸಸ್ಯಶಾಸ್ತ್ರ ಪರಿಚಯ		5-50
12	ಪ್ರಾಯೋಗಿಕ ರಸಾಯನಶಾಸ್ತ್ರ		3-50
13	ಗಣನಶಾಸ್ತ್ರ ಪರಿಚಯ		5-00
14	ಭೂಮಂಡಲ ಪರಿಚಯ		8-50
15	ರಸಾಯನಶಾಸ್ತ್ರ		8-50
16	ಸಂಗೀತಶಾಸ್ತ್ರ ಪರಿಚಯ		4-50
17	ಪ್ರಾಣಿಶಾಸ್ತ್ರ ಪರಿಚಯ		7-00
18	ಪ್ರಾಯೋಗಿಕ ಭೌತಶಾಸ್ತ್ರ		6-50
19	ಭೂಮಿತಿ ಹಾಗೂ ತ್ರಿಕೋನಮಿತಿ		7-00
20	ಭೌತಶಾಸ್ತ್ರ	(ಸಾದಾ)	10-50
		(ಕೆಲಿಕೊ)	12-50
21	ಸಂಖ್ಯಾಶಾಸ್ತ್ರ		6·50

ಬಿ.ಎ., ಬಿ.ಎಸ್‌ಸಿ., ಬಿ.ಕಾಂ. — ಭಾಗ ೧

22	ಸಂಸ್ಕೃತ ಗದ್ಯಪದ್ಯ (ದ್ವಿತೀಯ ಮುದ್ರಣ)	3-00
23	ರಾಜ್ಯಶಾಸ್ತ್ರ	4-00
24	ಮಾರಾಟ ಹಾಗೂ ವಿಕ್ರಯಶಾಸ್ತ್ರ	4-50

25	ಕಾರ್ಯನಿರ್ವಹಣ ಶಾಸ್ತ್ರ		6-50
26	ತರ್ಕಶಾಸ್ತ್ರ (ನಿಗಮನ)		4-50
27	ಸಮಾಜಶಾಸ್ತ್ರ		3-00
28	ಅರ್ಥಶಾಸ್ತ್ರದ ಮೂಲತತ್ವಗಳು (ವಾಣಿಜ್ಯ)	(ಸಾದಾ)	10-50
		(ಕೆಲಿಕೊ)	12-50
29	ಸಂಸ್ಕೃತ ಸುಭಾಷಿತ ಸಂಗ್ರಹ		4-00
30	ಅರ್ಥಶಾಸ್ತ್ರ : ತತ್ವನಿರೂಪಣೆ		8·00
31	ಭೌತಿಕ ಭೂಗೋಲ ಶಾಸ್ತ್ರ		8·50
32	ಸಂಖ್ಯಾಶಾಸ್ತ್ರ		6·50
33	ಗಣನಶಾಸ್ತ್ರ	(ಸಾದಾ)	10.00
		(ಕೆಲಿಕೊ)	12·50
34	ಪ್ರಾಚೀನ ಭಾರತ ಚರಿತ್ರೆ		4·50
35	ತರ್ಕಶಾಸ್ತ್ರ	(ಅನುಗಮನ)	,,

ಬಿ. ಎ., ಬಿ. ಎಸ್‌ಸಿ.–ಭಾಗ ೩.

36	ಆಧುನಿಕ ಬೀಜಗಣಿತ ಹಾಗೂ ಗಣಿತ ತರ್ಕಶಾಸ್ತ್ರ	4.50

ಪೂರಕ ಗ್ರಂಥಮಾಲೆ

37	ಆಯುರ್ವೇದ ವಿಜ್ಞಾನ		7-00
38	ರಾಗದರ್ಶನ		4-50
39	ಭಾರತ ಸಂವಿಧಾನದ ಇತಿಹಾಸ		3-00
40	ಫ್ರಾನ್ಸ್ ದೇಶದ ಮಹಾಕ್ರಾಂತಿ	(ಸಾದಾ)	4-00
		(ಕೆಲಿಕೊ)	6-00

ಜನಪ್ರಿಯ ಗ್ರಂಥಮಾಲೆ

41	ಹೃದಯ ರೋಗಗಳು	4-00
42	ಹಿಂದೂ ವಿವಾಹ ಕಾಯದೆ	3-00

★